ವಿಜಯನಗರ ಕಾಲದ ಸೈನ್ಯವ್ಯವಸ್ಥೆ
ಮತ್ತು
ಯುದ್ಧನೀತಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ ಮಹಾಪ್ರಬಂಧ

ಸಂಶೋಧನೆ
ಎಸ್. ವೈ. ಸೋಮಶೇಖರ್

ಮಾರ್ಗದರ್ಶನ
ಡಾ. ಕೆ. ಎಂ. ಸುರೇಶ

ಪುರಾತತ್ವ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೦

125B

ವಿಜಯನಗರ ಕಾಲದ ಸೈನ್ಯವ್ಯವಸ್ಥೆ

ಮತ್ತು

ಯುದ್ಧನೀತಿ

ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.) ಪದವಿಗಾಗಿ ಸಿದ್ಧಪಡಿಸಿದ ಮಹಾಪ್ರಬಂಧ

ಸಂಶೋಧನೆ

ಎಸ್. ವೈ. ಸೋಮಶೇಖರ್

ಮಾರ್ಗದರ್ಶಕ

ಡಾ. ಕೆ. ಎಂ. ಸುರೇಶ

ಪುರಾತತ್ತ್ವ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೦

ಪ್ರಮಾಣ ಪತ್ರ

'ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧ ನೀತಿ' ಎಂಬ ಈ ಮಹಾಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಕೆ. ಎಂ. ಸುರೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ಯಾವುದೇ ಭಾಗವನ್ನು ಇದುವರೆಗೆ ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಎಸ್. ವೈ. ಸೋಮಶೇಖರ್)

ದೃಢೀಕರಣ ಪತ್ರ

'ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧ ನೀತಿ' ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಶ್ರೀ ಎಸ್.ವೈ.ಸೋಮಶೇಖರ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ಯಾವುದೇ ಭಾಗವನ್ನು ಇದುವರೆಗೆ ಯಾವುದೇ ಪದವಿಗೆ ಅವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಕೆ. ಎಂ. ಸುರೇಶ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಮುನ್ನಡೆಸಿದ ಹಿಂದಿನ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರ ಹಾಗೂ ಇಂದಿನ ಕುಲಪತಿಗಳಾದ ಡಾ.ಎಂ.ಎಂ.ಕಲಬುರ್ಗಿ ಅವರಿಗೆ, ಕುಲಸಚಿವರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರಿಗೆ, ಅಧ್ಯಯನದುದ್ದಕ್ಕೂ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದ ಡಾ.ಕೆ.ಎಂ.ಸುರೇಶ ಅವರಿಗೆ, ಸಂಶೋಧನ ಪ್ರವೃತ್ತಿ ಬೆಳೆಸಿ, ಅಧ್ಯಯನಕ್ಕೆ ಹಲವು ಉಪಯುಕ್ತ ಮಾಹಿತಿಗಳನ್ನು ನೀಡಿದ ಪ್ರೊ.ಲಕ್ಷ್ಮಣ್ ತೆಲಗಾವಿ ಅವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಮೊದಲಿಗೆ ಅರ್ಪಿಸುವೆನು.


ಸಾಹಿತ್ಯಾಸಕ್ತಿ ಬೆಳೆಸಿದ ಪ್ರಾಧ್ಯಾಪಕರಾದ ಡಾ.ಕೆ.ವಿ.ನಾರಾಯಣ, ಪ್ರೊ.ಓ.ಎಲ್.ನಾಗಭೂಷಣಸ್ವಾಮಿ, ಪ್ರೊ.ಎ.ವಿ.ನಾವಡ, ಡಾ.ಹೆಚ್.ಎಸ್.ರಾಘವೇಂದ್ರರಾವ್, ಡಾ.ಪುರುಷೋತ್ತಮ ಬಿಳಿಮಲೆ, ಡಾ.ಟಿ.ಎಸ್. ಸತ್ಯನಾಥ್ ಅವರು; ಅಧ್ಯಯನ ಅವಧಿಯಲ್ಲಿ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಡಾ.ರಹಮತ್ ತರೀಕೆರೆ, ಟಿ.ಆರ್.ಚಂದ್ರಶೇಖರ್, ಡಾ.ಟಿ.ಪಿ.ವಿಜಯ್, ಡಾ.ಸಿ.ಮಹದೇವ, ಡಾ.ಬಸವರಾಜ ಮಲಶೆಟ್ಟಿ, ಡಾ.ಸಿ.ಎಸ್.ಪಾಟೀಲ್, ಡಾ. ದೇವರಕೊಂಡಾರೆಡ್ಡಿ, ಡಾ.ಡಿ.ವಿ.ಪರಮಶಿವಮೂರ್ತಿ, ಡಾ. ಅಮರೇಶ ನುಗಡೋಣಿ, ಶ್ರೀ ಬಾಲಸುಬ್ರಹ್ಮಣ್ಯ, ಶ್ರೀ ವಾಸುದೇವ ಬಡಿಗೇರ, ಶ್ರೀ ಕೆ.ಎಲ್.ರಾಜಶೇಖರ್ ಅವರು; ಗೆಳೆಯರಾದ ಡಿ.ಎಸ್.ನಾರಾಯಣ, ವಿರೂಪಾಕ್ಷಿ, ಬಸವರಾಜಪ್ಪ ಹಾಗೂ ವೀಣಾ ಅವರಿಗೆ, ವಿಜಯನಗರದ ಬಗೆಗೆ ಅಪಾರ ಆಸ್ಥೆವಹಿಸಿ ಸಲಹೆಗಳನ್ನು ನೀಡಿದ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್.ತಿಪ್ಪಣ್ಣ ಹಾಗೂ ಹೊಸಪೇಟೆಯ ಸಹಾಯಕ ಆಯುಕ್ತರಾದ ಶ್ರೀ ಜಿ.ಎನ್.ಶಿವಮೂರ್ತಿ ಅವರಿಗೆ, ಗ್ರಂಥಗಳನ್ನು ನೀಡಿ ಸಹಕರಿಸಿದ ಗ್ರಂಥಪಾಲಕರಾದ ಶ್ರೀ ಜೆ.ಆರ್.ರಾಮಮೂರ್ತಿ, ಶ್ರೀಮತಿ ಎಚ್.ನಾಗವೇಣಿ, ಶ್ರೀ ಯು.ಮಲ್ಲಿಕಾರ್ಜುನ ಅವರಿಗೆ, ವಸ್ತುಸಂಗ್ರಹಾಲಯದ ಗೆಳೆಯರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದ ವಿಶ್ವವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಹಾಗೂ ಪ್ರಬಂಧವನ್ನು ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್, ಕಮಲಾಪುರ, ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.


ಅಧ್ಯಯನ ಸಮಯದಲ್ಲಿ ನನ್ನ ತೊಂದರೆಗಳನ್ನು ತಾಳ್ಮೆಯಿಂದ ಸಹಿಸಿ, ಸಹಕರಿಸಿದ ಅಣ್ಣ ಎಸ್.ವೈ. ತಿಮ್ಮಾರೆಡ್ಡಿ ಹಾಗೂ ಅತ್ತಿಗೆಗೆ, ಪ್ರೀತಿಯಿಂದ ಬೆಳೆಸಿದ ಅಪ್ಪ-ಅಮ್ಮಗೆ, ನನ್ನಲ್ಲಿ ಉತ್ಸಾಹ ತುಂಬಿದ ಅಣ್ಣಂದಿರಾದ ಎಸ್.ವೈ.ಹನುಮಪ್ಪ, ಎಸ್.ವೈ.ತಿಪ್ಪೇಸ್ವಾಮಿ ಮತ್ತು ಎಸ್.ವೈ.ರಾಜಣ್ಣ ಹಾಗೂ ಅತ್ತಿಗೆಯರಿಗೆ ಮನದುಂಬಿದ ನಮನಗಳು

ದಿನಾಂಕ : ೨೪-೧೦-೨೦೦೦ — ಎಸ್. ವೈ. ಸೋಮಶೇಖರ್

ಸ್ಥಳ : ವಿದ್ಯಾರಣ್ಯ

ಪರಿವಿಡಿ


ವಿಜಯನಗರ ಸಾಮ್ರಾಜ್ಯ:
ಯುದ್ಧ ಸ್ಥಳಗಳು
ಅಹಮದ್‌ನಗರ
ಕಲ್ಯಾಣ
ವರಂಗಲ್ಲು
ವಿಜಾಪುರ
ಕಲ್ಬುರ್ಗಿ
ರಾಜಮಹೇಂದ್ರಿ
ಕೊಂಡಪಲ್ಲಿ
ಪಾನಗಲ್
ಜಮಖಂಡಿ
ತಂಗಡಗಿ
ರಕ್ಕಸಗಿ
ಮುದಗಲ್ಲು
ಬೆಳಗಾವಿ
ಸಿರುಗುಪ್ಪ
ರಾಯಚೂರು
ಆದವಾನಿ
ಗೋವಾ
ಕೊಂಡವೀಡು
ವಿಜಯನಗರ
ಕೇತವರ
ಉದಯಗಿರಿ
ಶ್ರೀರಂಗಪಟ್ಟಣ
ಉಮ್ಮತ್ತೂರು
ಮಧುರ
ಸಿಂಹಳ



1. ವಿಜಯನಗರ	2. ಆನೆಗೊಂದಿ	3. ಶ್ರೀರಂಗಪಟ್ಟಣ	4. ಕೆಳದಿ	5. ಬೆಂಗಳೂರು
6. ಮಂಗಳೂರು	7. ಬಾರಕೂರು	8. ಮಾಗಡಿ	9. ಸಾವನದುರ್ಗ	10. ಮುದಗಲ್ಲು
11. ಉಮ್ಮತ್ತೂರು	12. ಬೆಳಗಾವಿ	13. ಭಟ್ಕಳ	14. ರಾಯಚೂರು	15. ದೇವದುರ್ಗ
16. ಕೊಪ್ಪಳ	17. ಕುಮ್ಮಟದುರ್ಗ	18. ಚಿತ್ರದುರ್ಗ	19. ಬಾದಾಮಿ	20. ಉಚ್ಚಂಗಿದುರ್ಗ
21. ಪೆನುಕೊಂಡ	22. ಅನಂತಪುರ	23. ರಾಯದುರ್ಗ	24. ಗುತ್ತಿ	25. ಬೆಲ್ಲಮಕೊಂಡ
26. ಧರಣಿಕೋಟೆ	27. ದೇವರಕೊಂಡ	28. ನಾಗಾರ್ಜುನಕೊಂಡ	29. ಕೊಂಡವೀಡು	30. ಪನಗಲ್
31. ಗಂಡಿಕೋಟೆ	32. ಕರ್ನೂಲು	33. ನಂದ್ಯಾಲ	34 ಆದವಾನಿ	35. ಕಂಪಕೂರು
36. ವಿನುಕೊಂಡ	37. ಅದ್ದಂಕಿ	38. ನೆಲ್ಲೂರು	39. ಉದಯಗಿರಿ	40. ವೆಂಕಟಗಿರಿ
41. ರಾಜಮಹೇಂದ್ರಿ	42. ವಿಜಯನಗರಂ	43. ಚಂದ್ರಗಿರಿ	44. ಕೊಂಡಪಲ್ಲಿ	45. ಕೇತವರ
50. ಕನಕಗಿರಿ	47. ತಂಜಾವೂರು	48. ವೆಲ್ಲೂರು	49. ಮಧುರೈ	50. ಶ್ರೀರಂಗಂ

ಅಧ್ಯಾಯ ೧

ಪ್ರಸ್ತಾವನೆ

‘ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ’ ಎಂಬ ಶೀರ್ಷಿಕೆ ಹೊತ್ತ ಪ್ರಸ್ತುತ ಅಧ್ಯಯನವು ದಕ್ಷಿಣ ಭಾರತದ ಮಧ್ಯಯುಗೀನ ಚರಿತ್ರೆಯಲ್ಲಿ ಪರಿಣಾಮಕಾರಿ ಆಳ್ವಿಕೆ ನಡೆಸಿದ ಸಾಮ್ರಾಜ್ಯ ವಿಜಯನಗರವನ್ನು ಕುರಿತದ್ದು. ವಿಜಯನಗರ ಸಾಮ್ರಾಜ್ಯದ ಮೇಲೆ ನಡೆದಷ್ಟು ಅಧ್ಯಯನಗಳು ಮತ್ತಾವ ಅರಸುಮನೆತನದ ಮೇಲೂ ನಡೆದಿಲ್ಲವೆನ್ನಬಹುದು. ಈ ಸಾಮ್ರಾಜ್ಯದ ವಿವಿಧ ಮುಖಗಳನ್ನು ಪರಿಚಯಿಸುವ ಹತ್ತಾರು ಗ್ರಂಥಗಳು, ನೂರಾರು ಲೇಖನಗಳು ಹೊರಬಂದಿವೆ. ಆದರೂ ಇನ್ನೂ ಹಲವು ಮಜಲುಗಳು ಮರೆಯಾಗಿವೆಯೆಂದೇ ಹೇಳಬಹುದು. ಕ್ರಿ.ಶ.೧೩೩೬ರಲ್ಲಿ ಸ್ಥಾಪನೆಗೊಂಡ ಇದು ತನ್ನ ಸ್ವತಂತ್ರ ಆಳ್ವಿಕೆ ನಡೆಸಿದುದು ೧೩೫೬ರಲ್ಲಿ. ಅಂದಿನಿಂದ ಹಿಡಿದು ೧೫೬೫ರವರೆಗೆ ಸಾಮ್ರಾಜ್ಯವು ವಿಸ್ತಾರಗೊಳುತ್ತಾ ಹೋಯಿತು. ರಜಾಕ್ ಹೇಳುವಂತೆ, ಶ್ರೀಲಂಕಾದ ಗಡಿಯಿಂದ ಗುಲ್ಬರ್ಗಾದವರೆಗೆ ಮತ್ತು ಬಂಗಾಳದಿಂದ ಮಲಬಾರ್ ತೀರದವರೆಗೆ ಸಾವಿರ ಪರಸಾಂಗು(ಪರ್ಲಾಂಗು)ಗಳಷ್ಟು ವಿಸ್ತಾರವಾಗಿ ಹರಡಿದ್ದಿತು.

(ವಿಶಾಲ ಸಾಮ್ರಾಜ್ಯ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸುವಂಥದ್ದು ಸೈನ್ಯ. ಸೈನ್ಯವು ಯಾವುದೇ ರಾಜ್ಯದ ಅವಿಭಾಜ್ಯ ಅಂಗ. ಆದುದರಿಂದಲೇ ಸೈನ್ಯವಿಲ್ಲದೆ ರಾಜ್ಯವಿಲ್ಲವೆಂದು ಹೇಳಿರುವುದು. ರಾಜ್ಯದ ಸಪ್ತಾಂಗಗಳಲ್ಲಿ ಸೈನ್ಯವೂ ಸ್ಥಾನ ಪಡೆದಿರುವುದು ಅದರ ಅನಿವಾರ್ಯತೆಯಿಂದ ಎನ್ನಬಹುದು. ಇದರ ಸ್ಥಾನ ತುಂಬ ಮಹತ್ವದ್ದು. ವಿಸ್ತಾರ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಎರಡು ಸಂಪನ್ಮೂಲಗಳು ಅತ್ಯವಶ್ಯಕ. ಒಂದು ಸೈನಿಕ ಸಂಪನ್ಮೂಲವಾದರೆ, ಇನ್ನೊಂದು ಧನ ಸಂಪನ್ಮೂಲ. ರಾಜ್ಯದ ಆಡಳಿತವನ್ನು ಬಲಪಡಿಸಿ ಶಾಂತಿ-ಸುವ್ಯವಸ್ಥೆಗಳನ್ನು

ಸ್ಥಾಪಿಸುವಲ್ಲಿಯೂ ರಾಜನಿಗೆ ನೆರವಾಗುವಂಥದ್ದು ಸೈನ್ಯ. ವಿಜಯನಗರ ಅರಸರು ಕೇಂದ್ರದಲ್ಲಿ ತಮಗೆ ಸಾಮರ್ಥ್ಯವಿರುವಷ್ಟು ಸೈನ್ಯವನ್ನು ಮಾತ್ರ ಕಾಪಾಡಿಕೊಂಡಿದ್ದರು. ಉಳಿದಂತೆ ವ್ಯವಸ್ಥಿತ ಸೇನಾಪಡೆಗಳನ್ನು ಕಟ್ಟುವ ಕೆಲಸ ಪ್ರಾಂತೀಯ ರಾಜ್ಯಗಳಿಗೆ ಸೇರಿದ್ದಿತು. ರಾಜ್ಯವನ್ನು ಪ್ರಾಂತ್ಯಗಳಾಗಿ ವಿಭಾಗಿಸಲಾಗಿದ್ದು, ಅವುಗಳ ಆಡಳಿತವನ್ನು ನೋಡಿಕೊಳ್ಳಲೆಂದು ಅಮರನಾಯಕರೆಂಬ ಅಧಿಕಾರಿಗಳನ್ನು ನೇಮಿಸಿದ್ದರು. ಇವರ ಮೂಲಕ ಆಡಳಿತವನ್ನು ಕೇಂದ್ರದ ನೇರ ಹತೋಟಿಯಲ್ಲಿಡಲು ವಿಜಯನಗರ ಕಾಲದಲ್ಲಿ ವ್ಯವಸ್ಥೆಗೊಳಿಸಲಾಗಿದ್ದಿತು. ಅಮರನಾಯಕ ವ್ಯವಸ್ಥೆಯು ವಿಜಯನಗರದ ಅವಧಿಯಲ್ಲಿ ಅಭಿವೃದ್ಧಿಗೊಂಡ ವಿಶೇಷ ಬಗೆಯ ಆಡಳಿತ ಕ್ರಮ. ಇದು ಹಿಂದಿನ ಅರಸುಮನೆತನಗಳಲ್ಲಿದ್ದರೂ ವಿಜಯನಗರ ಅವಧಿಯಲ್ಲಿ ಸುಪುಷ್ಟವಾಗಿ ಬೆಳೆಯಿತೆನ್ನಬಹುದು. ಅಮರನಾಯಕ ವ್ಯವಸ್ಥೆಯನ್ನು ಯೂರೋಪಿನಲ್ಲಿ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ಪದ್ಧತಿಗೆ ಹೋಲಿಸಬಹುದು. ಅದು ಜಮೀನ್ದಾರಿ ವ್ಯವಸ್ಥೆಯ ಪ್ರತೀಕವೂ ಹೌದು. ಈ ವ್ಯವಸ್ಥೆಯಲ್ಲಿ ಅರಸರು ನಿರ್ದಿಷ್ಟ ಗ್ರಾಮಗಳು ಮತ್ತು ಅವುಗಳ ಭೂಮಿಯನ್ನು ಅಮರನಾಯಕರಿಗೆ ಹಂಚುತ್ತಿದ್ದರು. ಉಂಬಳಿ ನೀಡಿದ ಭೂಮಿಗೆ ಅನುಗುಣವಾಗಿ ಸೈನ್ಯವನ್ನು ಕಾಪಾಡುವ ಹಾಗೂ ಆದಾಯದ ನಿರ್ದಿಷ್ಟ ಭಾಗವನ್ನು ಅರಸನಿಗೆ ನೀಡಬೇಕೆಂಬ ಒಪ್ಪಂದವಿದ್ದಿತು.

ಈ ಕರಾರಿನ ಅನ್ವಯ ವಿಜಯನಗರ ಕಾಲದಲ್ಲಿ ಅನೇಕ ಜನ ಅಮರನಾಯಕರು ಕಾರ್ಯ ನಿರ್ವಹಿಸುತ್ತಿದ್ದರು. ನ್ಯೂನಿಜ್‌ನ ಪ್ರಕಾರ ವಿಜಯನಗರ ಸಾಮ್ರಾಜ್ಯದಲ್ಲಿ ಸುಮಾರು ಇನ್ನೂರು ಜನ ಅಮರನಾಯಕರಿದ್ದರು. ಇವರಲ್ಲದೆ ಐದು ಜನ ಪ್ರಮುಖ ಸಾಮಂತ ಅರಸರು ಇದ್ದುದಾಗಿಯೂ ಹೇಳುತ್ತಾನೆ. ಹೀಗೆ ಅರಸನ ಅಧೀನದಲ್ಲಿದ್ದ ಎಲ್ಲ ಅಮರನಾಯಕರು, ಸಾಮಂತ ಅರಸರು ನಿರ್ದಿಷ್ಟಪಡಿಸಿದ ಸೈನ್ಯವನ್ನು ಕಾಯ್ದಿಟ್ಟುಕೊಂಡು ರಾಜನಿಗೆ ಬೇಕಾದಾಗ ಕಳುಹಿಸಬೇಕಾಗಿತ್ತು. ವಿಜಯನಗರ ಕಾಲದಲ್ಲಿ ಅನುಸರಿಸಿದ್ದ ಈ ಪದ್ಧತಿಯಿಂದಲೇ ಮೂಲ ದಾಖಲೆಗಳು ವರ್ಣಿಸುವ ಅಪಾರ ಸಂಖ್ಯೆಯ ಸೈನ್ಯವನ್ನು ಯುದ್ಧ ಸಮಯದಲ್ಲಿ ಸಂಘಟಿಸಲು ಸಾಧ್ಯವಾಗಿದ್ದುದು. ವಿಜಯನಗರವು ಹೊಂದಿದಷ್ಟು ಬೃಹತ್ ಪ್ರಮಾಣದ ಸೇನೆಯನ್ನು ದಕ್ಷಿಣ ಭಾರತದ ಯಾವ ಅರಸು ಮನೆತನವೂ ಹೊಂದಿರಲಿಲ್ಲವೆನ್ನಬಹುದು. ಅರಸರು ರಾಜ್ಯದ ಅಭಿವೃದ್ಧಿಗಿಂತ ಹೆಚ್ಚು ಪ್ರಮಾಣದ ಧನವನ್ನು ಸೈನ್ಯ ಸಂಘಟನೆ ಮತ್ತು ಯುದ್ಧಗಳಿಗಾಗಿ ವ್ಯಯಿಸಿದರೆಂದರೆ ತಪ್ಪಾಗಲಾರದು. ಆಮುಕ್ತಮಾಲ್ಯದಲ್ಲಿ ಹೇಳಿರುವಂತೆ, ರಾಜ್ಯ ಆದಾಯದ ಅರ್ಧಭಾಗವನ್ನು ಸೈನ್ಯಕ್ಕೆ ಮೀಸಲಿಡಬೇಕೆಂದಿರುವುದು ಅಂದಿನ ಸೈನ್ಯದ ಅನಿವಾರ್ಯತೆಯನ್ನು ಅಭಿವ್ಯಕ್ತಿಸುತ್ತದೆ. ವಿಜಯನಗರವು ಅಪಾರ ಸೈನ್ಯವನ್ನು ಕಟ್ಟಲು ಕಾರಣಗಳಿಗೇನೂ ಕೊರತೆಯಿರಲಿಲ್ಲ. ಆರಂಭದಲ್ಲಿ ಉತ್ತರ ಭಾರತದ ಮಹಮ್ಮದೀಯರ ದಾಳಿ; ವಿಜಯನಗರ ಸ್ಥಾಪನೆಯ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ ಬಹಮನಿ ಮನೆತನವು ನೀಡಿದ ಪ್ರಬಲ ಸ್ಪರ್ಧೆ; ಪೂರ್ವ ಪ್ರಾಂತ್ಯದಲ್ಲಿ ಒರಿಸ್ಸಾ ಗಜಪತಿ ಮನೆತನದವರ ಆಕ್ರಮಣ ಹಾಗೂ ದಕ್ಷಿಣದ ಕೆಲವು ಅರಸುಮನೆತನಗಳು ನೀಡುತ್ತಿದ್ದ ಕಿರುಕುಳಗಳು ಕಾರಣವಾಗಿವೆ. ಬಹಮನಿ ಮನೆತನವಂತೂ ವಿಜಯನಗರದ ಮೇಲೆ ಆರಂಭದಿಂದ ಹಿಡಿದು ಅವನತಿಯವರೆಗೂ ಕಾದಾಡುತ್ತಲೇ

ಹೋಯಿತು. ಕೊನೆಗೆ ವಿಜಯನಗರದ ಪತನಕ್ಕೂ ಕಾರಣವಾಯಿತು. ಬಹಮನಿ ಸುಲ್ತಾನರು ನೀಡುತ್ತಿದ್ದ ಪ್ರಬಲ ಸ್ಪರ್ಧೆಯು ಸೈನ್ಯವನ್ನು ಅಭಿವೃದ್ಧಿ ಪಡಿಸುವ ಅನಿವಾರ್ಯತೆಯನ್ನು ಉಂಟುಮಾಡಿತೆನ್ನಬಹುದು. ಅಂತೆಯೇ ಸೇನೆಯಲ್ಲಿ ಹೊಸ ಹೊಸ ಮಾರ್ಪಾಡುಗಳನ್ನು ಕೈಗೊಳ್ಳಲಾಯಿತು. ಬಹಮನಿಯವರ ಸೈನ್ಯದ ಬಲಿಷ್ಠತೆಗೆ ಕಾರಣವಾದ ಯುದ್ಧದ ಅಶ್ವಗಳನ್ನು ವಿಜಯನಗರವೂ ಹೊರ ದೇಶಗಳಿಂದ ಆಮದು ಮಾಡಿಕೊಂಡದ್ದು; ಸೈನಿಕರಿಗೆ ವಿವಿಧ ಶಸ್ತ್ರಾಸ್ತ್ರಗಳಲ್ಲಿ ತರಬೇತಿ ನೀಡಿದುದು; ಮುಸ್ಲಿಂ ಸೈನಿಕರ ಸೇರ್ಪಡೆ; ಮದ್ದುಗುಂಡುಗಳನ್ನು ಒಳಗೊಂಡ ಬಂದೂಕು ಮತ್ತು ಫಿರಂಗಿಗಳ ಬಳಕೆ- ಇವೆಲ್ಲವೂ ವಿಜಯನಗರ ತನ್ನ ಸೇನೆಯಲ್ಲಿ ಮಾರ್ಪಾಟು ಮಾಡಿಕೊಂಡ ಸಂಗತಿಗಳಾಗಿವೆ. ಯುದ್ಧ ತಂತ್ರಗಳಲ್ಲೂ ಹಲವು ಬದಲಾವಣೆಗಳನ್ನು ಈ ಕಾಲಘಟ್ಟದಲ್ಲಿ ಕಾಣಬಹುದು. ವಿಜಯನಗರ ಪೂರ್ವದಲ್ಲಿದ್ದ ಆನೆಗೆ-ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳು ಎಂಬಂತಹ ಮುಖಾಮುಖಿ ಯುದ್ಧದ ಜೊತೆಗೆ ಪರಿಣಾಮಕಾರಿಯಾದ ಹಾಗೂ ಕೆಲವಾರು ಪರ್ಲಾಂಗುಗಳಷ್ಟು ಅಂತರದಲ್ಲಿ ನಿಂತು ಶತ್ರು ಸೈನ್ಯವನ್ನು ಧ್ವಂಸಮಾಡುವ ಸಾಮರ್ಥ್ಯ ಹೊಂದಿದ ಫಿರಂಗಿ ಪಡೆಯ ಬಳಕೆಯು ವಿಜಯನಗರ ಪೂರ್ವಕಾಲದ ಯುದ್ಧದ ಗತಿಯನ್ನು ಬುಡಮೇಲು ಮಾಡಿತು. ಹಿಂದಿನಿಂದ ಬಂದಂತಹ ಧರ್ಮಯುದ್ಧದ ಬದಲಿಗೆ ಕೂಟಯುದ್ಧಗಳು ಹೆಚ್ಚಾಗಿ ಬೇರು ಬಿಟ್ಟವು. ಆಕ್ರಮಣಶೀಲ, ವಿಸ್ತರಣಾವಾದದಂತಹ ಕ್ರಮಗಳೇ ಯುದ್ಧ ನೀತಿಗಳಾದವು.

ಹೀಗೆ ವಿಜಯನಗರ ಕಾಲದ ಸೈನ್ಯದಲ್ಲಿ ಅನುಸರಿಸಲಾಗಿದ್ದ ಪದ್ಧತಿ ಮತ್ತು ಕ್ರಮಗಳು, ಯುದ್ಧದಲ್ಲಿ ಬಳಕೆಗೊಂಡ ತಂತ್ರ ಹಾಗೂ ನೀತಿಗಳು, ಸಾಮ್ರಾಜ್ಯವು ದಕ್ಷಿಣ ಭಾರತದಾದ್ಯಂತ ವಿಸ್ತಾರವಾಗಿ ಬೆಳೆಯುವಲ್ಲಿ ಅಂದಿನ ಸೈನ್ಯದ ಪಾತ್ರ ಮತ್ತು ಮಹತ್ವಗಳು - ಇವೇ ಮುಂತಾದ ಅಂಶಗಳನ್ನು ಆಕರಗಳ ಹಿನ್ನೆಲೆಯಲ್ಲಿ ಚರ್ಚಿಸುವುದರ ಜೊತೆಗೆ ಪರಿಣಾಮಗಳನ್ನು ಅರಿಯುವುದು ಕೂಡ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ರಚನೆಗೆ ಚೌಕಟ್ಟು ಅಗತ್ಯ. ಪ್ರಸ್ತುತ ಪ್ರಬಂಧವನ್ನು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಅವಧಿಯೆಂದು ಗುರುತಿಸಲಾದ ಕ್ರಿ.ಶ. ೧೩೩೬ರಿಂದ ೧೫೬೫ರವರೆಗಿನ ಕಾಲಘಟ್ಟಕ್ಕೆ ಸೀಮಿತಗೊಳಿಸಲಾಗಿದೆ. ಹಾಗಿದ್ದೂ ಅಧ್ಯಯನದ ಅವಶ್ಯಕತೆಗೆ ಅನುಗುಣವಾಗಿ ವಿಜಯನಗರ ಪೂರ್ವ ಮತ್ತು ಉತ್ತರ ಕಾಲದ ಸಂಗತಿಗಳು ಮತ್ತು ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಸಂಶೋಧನೆಗೆ ಆಕರಗಳು ತುಂಬಾ ಮುಖ್ಯ. ಅಧ್ಯಯನದಲ್ಲಿ ವಿಜಯನಗರ ಕಾಲದ ಸಾಹಿತ್ಯ ಕೃತಿಗಳು, ಪ್ರವಾಸಿಗರ ವರದಿಗಳು, ಶಾಸನಗಳು, ಶಿಲ್ಪಗಳು, ವೀರಗಲ್ಲುಗಳು ಉತ್ಖನನ-ಇನ್ನು ಮುಂತಾದ ಪ್ರಾಥಮಿಕ ಆಕರಗಳು ನೆರವಾಗಿವೆ. ಕಾವ್ಯಗಳಲ್ಲಿ ಗಂಗಾದೇವಿಯ ಮಧುರಾವಿಜಯಂ, ಕಂಪಣನ ದಕ್ಷಿಣದ ದಿಗ್ವಿಜಯವನ್ನು ಕುರಿತಿದ್ದರೆ, ಕೃಷ್ಣದೇವರಾಯನ ಆಮುಕ್ತಮಾಲ್ಯದವು ಸೈನ್ಯ ಮತ್ತು ಯುದ್ಧದ ಕ್ರಮಗಳನ್ನು ತಿಳಿಸುತ್ತದೆ.

ನಂಜುಂಡ ಕವಿಯ ರಾಮನಾಥಚರಿತದ ವಿಷಯ ಕಂಪಿಲರಾಯ ಮತ್ತು ಅವನ ಮಗ ಕುಮಾರರಾಮನಿಗೆ ಸಂಬಂಧಿಸಿದ್ದರೂ, ಅದರಲ್ಲಿ ವ್ಯಕ್ತವಾಗಿರುವ ಸೈನ್ಯ ಸಿದ್ಧತೆ, ಯುದ್ಧ, ಕೋಟೆಕಾಳಗ, ಹೋರಾಟದ ಬಗೆ, ಯುದ್ಧಾನಂತರದ ಸಾವು-ನೋವುಗಳ ಚಿತ್ರಣಗಳು ವಿಜಯನಗರ ಕಾಲದ ಘಟನೆಗಳೇ ಆಗಿವೆ. ನಂಜುಂಡನು ವಿಜಯನಗರ ಕಾಲಾವಧಿಯಲ್ಲಿ ಜೀವಿಸಿದ್ದ ಕವಿಯಾಗಿದ್ದುದರಿಂದ ಅಂದು ನಡೆದ ಘಟನೆಗಳನ್ನು ತನ್ನ ಕೃತಿಯಲ್ಲಿ ಯಥಾವತ್ತಾಗಿ ಪ್ರತಿಬಿಂಬಿಸಿರುವುದನ್ನು ಕಾಣಬಹುದು. ಈ ಮೇಲಿನ ಕಾವ್ಯಗಳಂತೆಯೇ ತೆರಕಣಾಂಬಿ ಬೊಮ್ಮರಸನ ಸನತ್ಕುಮಾರ ಚರಿತೆ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಭೀಮಕವಿಯ ಬಸವಪುರಾಣ ಮತ್ತು ಮೂರನೆಯ ಮಂಗರಸನ ಸಮ್ಯಕ್ತ್ವ ಕೌಮುದಿಗಳಲ್ಲಿ ವ್ಯಕ್ತಗೊಂಡಿರುವ ಕೋಟೆಕಾಳಗಗಳು ವಿಜಯನಗರ ಅರಸರ ಕಾಳಗಗಳೇ ಆಗಿವೆ. ಇವುಗಳಲ್ಲದೆ, ಕನಕದಾಸರ ಮೋಹನ ತರಂಗಿಣಿ, ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಇನ್ನು ಮುಂತಾದ ಕೃತಿಗಳು ವಿಜಯನಗರ ಕಾಲದ ಸೈನ್ಯ ಮತ್ತು ಯುದ್ಧ ವ್ಯವಸ್ಥೆಗಳನ್ನು ಅರಿಯುವಲ್ಲಿ ಸಹಕಾರಿಯಾಗಿವೆ.

ಸಾಹಿತ್ಯ ಕೃತಿಗಳಲ್ಲದೆ, ವಿದೇಶಿಯರ ಬರವಣಿಗೆಗಳು ವಿಜಯನಗರ ಚರಿತ್ರೆಗೆ ಇಂಬು ಕೊಡುವಂತಹ ಆಕರ ಸಾಮಗ್ರಿಗಳಾಗಿವೆ. ಸ್ವತಃ ವಿಜಯನಗರ ಕಾಲದಲ್ಲಿ ಭೇಟಿ ನೀಡಿ ಅಲ್ಲಿನ ನಗರ, ಜನಜೀವನ, ಆಡಳಿತ, ವ್ಯಾಪಾರ ಆಚರಣೆ - ಇನ್ನು ಮುಂತಾದವುಗಳನ್ನು ಕಂಡು ಪ್ರವಾಸಿಗರು ಮನದಣಿಯ ವರ್ಣಿಸಿದ್ದಾರೆ. ಅಂತಹ ಪ್ರವಾಸಿಗರಲ್ಲಿ ಅಥನೇಷಿಯಸ್ ನಿಕಿಟಿನ್, ನಿಕೊಲೊಕೊಂತಿ, ಅಬ್ದುಲ್ ರಜಾಕ್, ಡೊಮಿಂಗೋ ಪಾಯೇಸ್, ಬಾರ್ಬೋಸಾ, ನ್ಯೂನಿಜ್ ಪ್ರಮುಖರು. ಇವರ ವರದಿಗಳಲ್ಲಿ ಅಂದಿನ ಸೈನ್ಯ ಮತ್ತು ಯುದ್ಧದ ಕ್ರಮಗಳು, ನೀತಿಗಳು ಹಾಗೂ ಸೈನಿಕ ಪರಿಕರಗಳು ವ್ಯಕ್ತಗೊಂಡಿವೆ.

ಅಧ್ಯಯನಕ್ಕೆ ಚಾಲನೆಯನ್ನು ನೀಡಿ ಸಾಹಿತ್ಯದಲ್ಲಿ ಉಲ್ಲೇಖವಾದ ಘಟನೆಗಳನ್ನು ಸಮರ್ಥಿಸುವಲ್ಲಿ ಪ್ರಾಕ್ತನ ಆಕರಗಳು ಮಹತ್ತರ ಪಾತ್ರವಹಿಸುತ್ತವೆ. ಇವು ಮುಖ್ಯ ಪ್ರಾಥಮಿಕ ಆಕರಗಳೂ ಹೌದು. ಅವುಗಳಲ್ಲಿ ಶಾಸನಗಳು, ಸ್ಮಾರಕಗಳು, ಶಿಲ್ಪ-ಚಿತ್ರಕಲೆ, ವೀರಗಲ್ಲು, ಉತ್ಖನನ ವರದಿಗಳು ಮುಖ್ಯವಾಗಿವೆ. ಶಾಸನಗಳು ಸೈನಿಕ ದಿಗ್ವಿಜಯ, ಬಿರುದಾವಳಿಗಳು, ಯುದ್ಧದ ಕಾಲ-ಇವೇ ಮುಂತಾದ ವಿಷಯಗಳನ್ನು ಒಳಗೊಂಡಿರುತ್ತವೆ. ಶ್ರೀಶೈಲ ಮತ್ತು ತಿರುಪತಿ ದೇವಾಲಯಗಳಲ್ಲಿರುವ ಶಾಸನಗಳು ಕೃಷ್ಣದೇವರಾಯನು ಕಳಿಂಗ ದಂಡೆಯಾತ್ರೆಯಲ್ಲಿ ಸಾಧಿಸಿದ ಕೋಟೆಗಳ ವಿವರಗಳನ್ನು ಕೊಡುತ್ತವೆ. ಹಾಗೆಯೇ ಕೃಷ್ಣದೇವರಾಯನು ಉದಯಗಿರಿಯ ವಿಜಯದ ನೆನಪಿಗಾಗಿ ತಂದ ಬಾಲಕೃಷ್ಣ ಪ್ರತಿಮೆಗೆಂದು ಬೃಹತ್ ದೇವಾಲಯವೊಂದನ್ನು ತನ್ನ ರಾಜಧಾನಿಯಲ್ಲಿ ಕಟ್ಟಿಸಿದ್ದುದನ್ನು ಶಾಸನದಲ್ಲಿ ಹೇಳಲಾಗಿದೆ. ಆ ದೇಗುಲವೇ ಇಂದಿನ ಬಾಲಕೃಷ್ಣ ದೇವಾಲಯ(ಚಿತ್ರ-೨೨). ಶಾಸನಗಳು ಅರಸರ ಬಿರುದಾವಳಿಗಳನ್ನು ಉಲ್ಲೇಖಿಸುವುದು ಸಾಮಾನ್ಯವಾಗಿದೆ. ಈ ಬಿರುದುಗಳಿಂದ ಆಯಾಯ ಅರಸರು ಗಳಿಸಿದ

ದಿಗ್ವಿಜಯಗಳು, ಸೈನಿಕ ಕಾರ್ಯಾಚರಣೆಗಳನ್ನೂ ಗುರುತಿಸಬಹುದು. ಇವು ಶಾಸನಗಳಲ್ಲಿ ವ್ಯಕ್ತಗೊಳ್ಳುವ ಸಂಗತಿಗಳಾದರೆ, ಸ್ಮಾರಕಗಳ ಮೇಲಿನ ಉಬ್ಬುಶಿಲ್ಪಗಳು ಅಂದಿನ ಸೈನ್ಯದ ನೈಜ ಚಿತ್ರಣಗಳಾಗಿವೆ. ಶಿಲ್ಪಗಳಲ್ಲಿ ಆನೆ-ಕುದುರೆ-ಕಾಲಾಳುಗಳು, ಉಡುಗೆ-ತೊಡಿಗೆಗಳು, ಆಯುಧ ಮತ್ತಿತರ ಪರಿಕರಗಳು ಸಮಕಾಲೀನ ಸ್ಥಿತಿಯ ಪ್ರತಿಬಿಂಬಗಳಾಗಿರುವುದರಲ್ಲಿ ಸಂಶಯವಿಲ್ಲ. ಇಂತಹ ಕೆತ್ತನೆಗಳನ್ನು ಹಜಾರ ರಾಮಚಂದ್ರ ದೇವಾಲಯ, ಮಹಾನವಮಿ ದಿಬ್ಬ, ಬಾಲಕೃಷ್ಣದೇವಾಲಯ-ಇನ್ನು ಮುಂತಾದ ಸ್ಮಾರಕಗಳಲ್ಲಿ ಕಾಣಬಹುದು. ಅಂತೆಯೇ ವಿರಗಲ್ಲು ಕೂಡ ವಿಜಯನಗರ ಕಾಲದ ವೀರತ್ವ ಪರಂಪರೆಯ ಪ್ರತೀಕವಾಗಿ ನಿರ್ಮಾಣವಾಗಿವೆ. ವೀರಗಲ್ಲುಗಳಿಂದ ಅಂದು ಸೈನಿಕ ಯೋಧರು ಧರಿಸುತ್ತಿದ್ದ ಉಡುಪು, ಬಳಸಿದ್ದ ಶಸ್ತ್ರಾಸ್ತ್ರಗಳು, ಹೋರಾಟದ ತಂತ್ರ ಇನ್ನು ಮುಂತಾದ ವಿಷಯಗಳನ್ನು ಅರಿಯಬಹುದಾಗಿದೆ. ಇವುಗಳಲ್ಲಿರುವ ಮೂರು ಹಂತಗಳಲ್ಲಿ ಹೋರಾಟದ ಹಂತವು ವೀರನು ಯಾವ ಬಗೆಯ ಹೋರಾಟದಲ್ಲಿ ನಿರತನಾಗಿದ್ದನು, ಹೋರಾಟದ ಉದ್ದೇಶ, ನಡೆದ ಯುದ್ಧ ಅಥವಾ ಘಟನೆಯನ್ನು ಬಿಂಬಿಸುತ್ತದೆ. ಕ್ರಿ.ಶ.೧೪ನೆಯ ಶತಮಾನಕ್ಕಿಂತ ಪೂರ್ವದ ವೀರಗಲ್ಲುಗಳಲ್ಲಿ ವೀರ ಯೋಧರು ಹೋರಾಟದಲ್ಲಿ ಶಸ್ತ್ರಾಸ್ತ್ರಗಳಾದ ಕತ್ತಿ-ಗುರಾಣಿ, ಬಿಲ್ಲು-ಬಾಣ ಇವೇ ಮೊದಲಾದ ಪ್ರಾಚೀನ ಆಯುಧಗಳನ್ನು ಕಾಣಬಹುದು. ಆದರೆ ವಿಜಯನಗರ ಮತ್ತು ನಂತರದಲ್ಲಿ ಕಡೆದ ವೀರಗಲ್ಲುಗಳಲ್ಲಿ ಶಸ್ತ್ರಾಸ್ತ್ರಗಳಲ್ಲಾದ ಬದಲಾವಣೆಯನ್ನು ಗುರುತಿಸಬಹುದು. ಅವುಗಳಲ್ಲಿ ನಿಟ್ಟಾಲಿ(ಕೊಪ್ಪಳ ತಾ.), ಇಂಗಳಗಿ(ಹೊಸಪೇಟೆ ತಾ.), ರಾಯಚೂರಿನ ವೀರಗಲ್ಲುಗಳು ವಿಜಯನಗರ ಕಾಲಕ್ಕೆ ಸಂಬಂಧಿಸಿವೆ(ಚಿತ್ರ ೧೭,೨೪). ಇವುಗಳಲ್ಲಿ ವೀರರು ಬಂದೂಕಗಳನ್ನು ತಮ್ಮ ಕೈಗಳಲ್ಲಿ ಹಿಡಿದಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಬಂದೂಕಿನ ಜೊತೆಗೆ ಕತ್ತಿಗಳನ್ನು ತಮ್ಮ ಸೊಂಟದಲ್ಲಿ ಸಿಕ್ಕಿಸಿಕೊಂಡಿರುವರು. ಇದರಿಂದ ವಿಜಯನಗರ ಕಾಲದ ಮಹತ್ತರ ಬದಲಾವಣೆಗಳಲ್ಲಿ ಒಂದಾದ ಸಿಡಿಮದ್ದಿನ ಬಳಕೆಯನ್ನು ಬಂದೂಕು ದೃಢಪಡಿಸುತ್ತದೆ.

ಇವುಗಳಲ್ಲದೆ ಇನ್ನೂ ಅನೇಕ ಅಂಶಗಳು ಹಂಪೆಯ ಗರ್ಭದಲ್ಲಿ ಹೂತು ಹೋಗಿವೆಯೆಂದರೆ ತಪ್ಪಾಗಲಾರದು. ಇದನ್ನು ಗಮನಿಸಿ ಸರ್ಕಾರವು ಉತ್ಖನನ ಕಾರ್ಯವನ್ನು ಕೈಗೊಳ್ಳುತ್ತಾ ಬಂದಿದೆ. ಉತ್ಖನನ ನಡೆದಾಗಲೆಲ್ಲಾ ಹೊಸ ಹೊಸ ಸಂಗತಿಗಳು ಹೊರಬರುತ್ತಲಿವೆ. ಅಂತಹವುಗಳಲ್ಲಿ ಆನೆ-ಕುದುರೆಗಳ ಪಳೆಯುಳಿಕೆಗಳು, ಆಯುಧ ಪರಿಕರಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ. ಹೀಗೆ ಎಲ್ಲ ಬಗೆಯ ಪ್ರಾಥಮಿಕ ಆಕರಗಳಿಂದ ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿಯನ್ನು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನ ಸಮೀಕ್ಷೆ

ಸೈನ್ಯ ಮತ್ತು ಯುದ್ಧಗಳನ್ನು ಕುರಿತು ಭಾರತದ ಮಟ್ಟಿಗೆ ಸಾಕಷ್ಟು ಕೆಲಸ ನಡೆದಿರುವುದನ್ನು ಕಾಣಬಹುದು. ಅದರಲ್ಲೂ ಪ್ರಾಚೀನ ಭಾರತದ ಸೈನ್ಯ ಮತ್ತು ಯುದ್ಧವ್ಯವಸ್ಥೆಗಳನ್ನು ಕುರಿತು ನಡೆದ ಅಧ್ಯಯನಗಳೇ ಹೆಚ್ಚು. ಅಂತಹ ಕೃತಿಗಳಲ್ಲಿ ಪಿ.ಸಿ.ಚಕ್ರವರ್ತಿಯ 'ದಿ ಆರ್ಟ್ ಆಫ್ ವಾರ್ ಇನ್ ಏನ್ಸಿಯಂಟ್ ಇಂಡಿಯಾ', ಜಿ.ಟಿ.ಡೇಟ್‌ರ 'ದಿ ಆರ್ಟ್ ಆಫ್ ವಾರ್ ಇನ್ ಏನ್ಸಿಯಂಟ್ ಇಂಡಿಯಾ', ದೀಕ್ಷಿತರ್‌ರ 'ವಾರ್ ಇನ್ ಏನ್ಸಿಯಂಟ್ ಇಂಡಿಯಾ' ಮತ್ತು ಜಗನ್ನಾಥ ಸ್ವಾಮಿಯವರ 'ವಾರ್‌ಫೇರ್ ಇನ್ ಏನ್ಸಿಯಂಟ್ ಇಂಡಿಯಾ', ಬಿ.ಪಿ.ಸಿನ್ಹರ 'ದಿ ಆರ್ಟ್ ಆಫ್ ವಾರ್ ಇನ್ ಏನ್ಸಿಯಂಟ್ ಇಂಡಿಯಾ', ಎಸ್.ಡಿ. ಸಿಂಗ್‌ರವರ 'ಏನ್ಸಿಯಂಟ್ ಇಂಡಿಯನ್ ವಾರ್‌ಫೇರ', ಬಿ.ಕೆ.ಮುಜುಂದಾರರ 'ಮಿಲಿಟರಿ ಸಿಸ್ಟಂ ಇನ್ ಏನ್ಸಿಯಂಟ್ ಇಂಡಿಯಾ' ಕೃತಿಗಳು ಮುಖ್ಯವಾಗಿವೆ. ಇವುಗಳಲ್ಲದೆ ಮಧ್ಯಯುಗೀನ ಭಾರತದ ಸೈನ್ಯ ವ್ಯವಸ್ಥೆಯನ್ನು ಕುರಿತು ಜೆ.ಎನ್.ಸರ್ಕಾರ್‌ರ 'ದಿ ಆರ್ಟ್ ಆಫ್ ವಾರ್ ಇನ್ ಮಿಡಿವಲ್ ಇಂಡಿಯಾ', ಜಿ.ಎಸ್.ಸಾಧು ಅವರ 'ದಿ ಇಂಡಿಯನ್ ಕ್ಯಾವಲ್ರಿ', ಸುರೇಂದ್ರನಾಥ ಸೇನ್‌ರ 'ದಿ ಮಿಲಿಟರಿ ಸಿಸ್ಟಮ್ ಆಫ್ ದಿ ಮರಾಠಾಸ್'- ಇನ್ನು ಮುಂತಾದ ಅಧ್ಯಯನ ಕೃತಿಗಳು ಹೊರಬಂದಿವೆ. ಅವುಗಳಲ್ಲಿ ಕೆಲವು ಅರಸು ಮನೆತನಗಳನ್ನು ಕುರಿತವುಗಳಾದರೆ, ಇನ್ನು ಕೆಲವು ಕಾಲಘಟ್ಟದ ಚೌಕಟ್ಟಿನಲ್ಲಿ ನಡೆದ ಅಧ್ಯಯನಗಳಾಗಿವೆ. ಈ ಮೇಲಿನ ಕೃತಿಗಳು ಪ್ರಾಚೀನ ಭಾರತದ ಸೈನ್ಯ ಮತ್ತು ಯುದ್ಧ ಕ್ರಮಗಳಿಗೆ ಸಂಬಂಧಿಸಿದಂಥವು.

ಕರ್ನಾಟಕದಲ್ಲಿ ಈ ಮೇಲಿನಂತೆ ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದು. ಆದರೆ ಅಧ್ಯಯನಗಳ ಒಂದು ಭಾಗವಾಗಿ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಅಭ್ಯಸಿಸಿರುವರು. ಅವರಲ್ಲಿ ಬೆಟಗೇರಿ ಕೃಷ್ಣಶರ್ಮರು ಮುಖ್ಯರು. ಅವರ 'ಕನ್ನಡಿಗರ-ಕೋಟೆ ಕಾಳಗ' (ಕರ್ನಾಟಕ ಜನಜೀವನದಲ್ಲಿ ಪ್ರಕಟವಾಗಿದೆ) ಕುರಿತ ಅಧ್ಯಾಯ ಮಹತ್ವದ್ದು. ಅದರಲ್ಲಿ ಕೃಷ್ಣಶರ್ಮರು ಮಧ್ಯಯುಗದ ಕಾವ್ಯಗಳಲ್ಲಿ ಉಲ್ಲೇಖವಾದ ಕೋಟೆ ಮತ್ತು ಅದರ ಭಾಗಗಳು, ಕೋಟೆಕಾಳಗ, ಆಯುಧ-ಇವೇ ಮುಂತಾದವುಗಳನ್ನು ವಿಶಿಷ್ಟವಾಗಿ ವಿಶ್ಲೇಷಿಸಿದ್ದಾರೆ. ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕನ್ನಡದ ಮೇರು ಕೃತಿಗಳಲ್ಲೊಂದು. ಶಾಸನಗಳನ್ನಾಧರಿಸಿ ರಚಿಸಲಾದ ಈ ಕೃತಿಯಲ್ಲಿ 'ಯುದ್ಧಕಲೆ'ಗಾಗಿ ಪ್ರತ್ಯೇಕ ಅಧ್ಯಾಯವನ್ನು ಮೀಸಲಿಸಿರುವರು. ಇದರಲ್ಲಿ ಪ್ರಾಚೀನ ಶಾಸನಗಳಲ್ಲಿ ವ್ಯಕ್ತಗೊಳ್ಳುವ ಸೈನ್ಯ, ಅದರ ಪರಿಕರಗಳು, ಕ್ರಮಗಳು, ಯುದ್ಧನಿಯಮಗಳು- ಇನ್ನು ಮುಂತಾದ ಅಂಶಗಳ ಉಪಯುಕ್ತ ಚರ್ಚೆ ನಡೆಸಿದ್ದಾರೆ. ಚಿದಾನಂದಮೂರ್ತಿಯವರದು ಶಾಸನಗಳನ್ನಾಧರಿಸಿದ ಕೃತಿಯಾದರೆ, ಆರ್.ಶೇಷಾಶಾಸ್ತ್ರಿಗಳದು ವೀರಗಲ್ಲುಗಳ ಅಧ್ಯಯನವಾಗಿದೆ. 'ಕರ್ನಾಟಕದ ವೀರಗಲ್ಲುಗಳು' ಶೀರ್ಷಿಕೆ ಹೊತ್ತ ಈ ಕೃತಿಯಲ್ಲಿ ವೀರಗಲ್ಲುಗಳಲ್ಲಿ ಕಾಣಬರುವ ಶಾಸನ ಮತ್ತು ಶಿಲ್ಪಗಳಿಂದ ವೀರಗಲ್ಲುಗಳ

ಹುಟ್ಟು, ಬೆಳವಣಿಗೆಗಳು, ಅವುಗಳನ್ನು ನೆಡಲು ಕಾರಣಗಳು-ಇವೇ ಮುಂತಾದ ಅಂಶಗಳನ್ನು ಚರ್ಚಿಸಿದ್ದಾರೆ. ಸೈನ್ಯದ ಪರಿಕರಗಳು, ಧಾರ್ಮಿಕ ನಂಬಿಕೆಗಳು, ಯುದ್ಧದ ಸಂದರ್ಭದಲ್ಲಿ ಕೈಗೊಳ್ಳಲಾಗಿದ್ದ ಕ್ರಮಗಳು, ಅನುಸರಿಸಿದ್ದ ನೀತಿ-ನಿಯಮಗಳನ್ನು ಕುರಿತು ಒಂದು ಅಧ್ಯಾಯದಲ್ಲಿ ಅವರು ವಿಶ್ಲೇಷಿಸಿರುವರು. ಈ ಮೇಲಿನ ಕೃತಿಗಳು ಸ್ವಲ್ಪ ಹಳೆಯ ತಲೆಮಾರಿನವಾದರೆ, ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಕನ್ನಡ ಶಾಸನ ಶಿಲ್ಪ'ವು ನೂತನ ಕೃತಿಯಾಗಿದೆ. ಡಿ.ವಿ.ಪರಮಶಿವಮೂರ್ತಿಯವರು ಕರ್ನಾಟಕದ ವಿವಿಧ ಭಾಗಗಳಲ್ಲಿ ಹರಡಿದ ಸಾವಿರಾರು ಶಾಸನ ಶಿಲ್ಪಗಳನ್ನಾಧರಿಸಿ ವಿಶಿಷ್ಟ ಬಗೆಯ ಅಧ್ಯಯನ ಕೈಗೊಂಡಿದ್ದಾರೆ. ಇದರಲ್ಲೂ ಸ್ವಲ್ಪಮಟ್ಟಿಗೆ ಕರ್ನಾಟಕದ ಸೈನಿಕ ಚರಿತ್ರೆಯ ಚಿತ್ರಣವನ್ನು ಕಾಣಬಹುದು. ಕರ್ನಾಟಕದ ಪ್ರಾಚೀನ ಸೈನಿಕ ಚರಿತ್ರೆಯನ್ನು ಬಿಂಬಿಸುವ ಮಹತ್ವದ ಅಪ್ರಕಟಿತ ಮಹಾಪ್ರಬಂಧವೆಂದರೆ ಸುರೇಂದ್ರ ಮಂಜೇಶ್ವರರ 'ಸ್ಟಡೀಸ್ ಇನ್ ದಿ ಮಿಲಿಟರಿ ಹಿಸ್ಟರಿ ಆಫ್ ಕರ್ನಾಟಕ'. ಇದು ಪ್ರಾಚೀನ ಕರ್ನಾಟಕ ಅಂದರೆ ಕ್ರಿ.ಶ.೧೪ನೆಯ ಶತಮಾನದ ಪೂರ್ವದಲ್ಲಿ ಅಸ್ತಿತ್ವವಿದ್ದ ಸೈನಿಕ ಚರಿತ್ರೆಯ ಚಿತ್ರಣವನ್ನು ಹೊಂದಿದೆ. ಇದರಲ್ಲಿ ವಿವಿಧ ಅರಸು ಮನೆತನಗಳ ಆಳ್ವಿಕೆಯ ಅಡಿಯಲ್ಲಿ ಬೆಳೆದು ಬಂದ ಸೈನಿಕ ಬೆಳವಣಿಗೆಯನ್ನು ಗುರುತಿಸಲಾಗಿದೆ. ಅಲ್ಲದೆ ಅಂದಿನ ವೀರ ಸಿದ್ಧಾಂತ, ವೀರಗಲ್ಲುಗಳು: ಅವುಗಳ ಹಿಂದಿನ ಮಹತ್ವ, ಸೈನ್ಯ ಸಂಘಟನೆ, ಶಸ್ತ್ರಾಸ್ತ್ರಗಳು, ಕೋಟೆ-ಕೊತ್ತಲ ಹೀಗೆ ವಿವಿಧ ಅಂಶಗಳನ್ನು ಕುರಿತು ಅಭ್ಯಸಿಸಿರುವರು. ಪ್ರಾಚೀನ ಕರ್ನಾಟಕದ ಸೈನಿಕ ಚರಿತ್ರೆಗೆ ಇದೊಂದು ಮಹತ್ವದ ಕೊಡುಗೆ ಎಂಬುದರಲ್ಲಿ ಸಂಶಯವಿಲ್ಲ.

ವಿಜಯನಗರ ಸಾಮ್ರಾಜ್ಯವನ್ನು ಕುರಿತು ಹತ್ತು ಹಲವು ಅಧ್ಯಯನಗಳು ನಡೆದಿವೆ. ಅಂದಿನ ಸಾಮಾಜಿಕ, ಆಡಳಿತ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಜನಜೀವನ-ಇನ್ನು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ವಿದ್ವಾಂಸರಿಂದ ಅಧ್ಯಯನ ಕೃತಿಗಳು ಹೊರಬಂದಿವೆ. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆಯನ್ನು ಕುರಿತೂ ಸ್ವಲ್ಪಮಟ್ಟಿಗೆ ಕೆಲಸ ನಡೆದಿದೆಯೆಂದು ಹೇಳಬಹುದು. ಇಂತಹ ಅಧ್ಯಯನ ನಡೆಸಿದವರಲ್ಲಿ ಬಿ.ಎ.ಸಾಲೆತೊರೆ, ಟಿ.ವಿ.ಮಹಾಲಿಂಗಂ ಮತ್ತು ಶ್ರೀಕಂಠಯ್ಯ ಪ್ರಮುಖರು. ಇವರು ತಮ್ಮ ಸಂಶೋಧನ ಕೃತಿಗಳಲ್ಲಿ ಒಂದು ಅಧ್ಯಾಯವಾಗಿ ಸೈನ್ಯ ವ್ಯವಸ್ಥೆ ಕುರಿತ ಅಧ್ಯಯನ ನಡೆಸಿದ್ದಾರೆ. ಬಿ.ಎ.ಸಾಲೆತೊರೆಯವರು 'ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪಾಯಿರ್' ಕೃತಿಯಲ್ಲಿ ವಿಜಯನಗರದ ಸೈನ್ಯ, ಬಲ, ವಿಭಾಗಗಳು, ಆಡಳಿತ - ಇನ್ನು ಮುಂತಾದ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಟಿ.ವಿ.ಮಹಾಲಿಂಗಂ ಕೂಡ ತಮ್ಮ ಗ್ರಂಥ 'ಅಡ್ಮಿನಿಸ್ಟ್ರೇಶನ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ'ದಲ್ಲಿ ಸೈನ್ಯ, ಅದರ ಸಂಘಟನೆಯನ್ನು ಕುರಿತ ಅಧ್ಯಾಯದಲ್ಲಿ ಹಲವು ಮಾಹಿತಿಗಳನ್ನು ವಿಶ್ಲೇಷಿಸಿರುವರು. ಇವು ಆಂಗ್ಲ ಮಾಧ್ಯಮದ ಕೃತಿಗಳಾದರೆ, ಕನ್ನಡದಲ್ಲಿ ಸೈನಿಕ ಆಡಳಿತ ಮತ್ತು ಸಮರವನ್ನು ಒಳಗೊಂಡ ಏಕೈಕ ಕೃತಿ ಕೆ.ಶ್ರೀಕಂಠಯ್ಯ ಅವರ 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ

ಜನಜೀವನ ಚಿತ್ರ'. ಇದರಲ್ಲೂ ಒಂದು ಅಧ್ಯಾಯವಾಗಿ ಸೈನ್ಯ ವ್ಯವಸ್ಥೆಯ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದು ಉಪಯುಕ್ತವಾದ ಮಾಹಿತಿಗಳನ್ನು ಒಳಗೊಂಡ ಗ್ರಂಥ. ಆದರೆ ಇಲ್ಲಿ ಬಳಸಿಕೊಂಡ ಆಕರಗಳು ಹೆಚ್ಚಾಗಿ ಕಾವ್ಯಗಳೇ ಆಗಿವೆ. ಕಾವ್ಯಗಳನ್ನಾಧರಿಸಿ ತಮ್ಮ ಇಡೀ ಅಧ್ಯಯನವನ್ನು ಕೈಗೊಂಡಿರುವುದರಿಂದ ಸೈನ್ಯವನ್ನು ಕಟ್ಟುವಲ್ಲಿ ಕಾವ್ಯಗಳೇ ಅವರ ಪ್ರಮುಖ ವಸ್ತುಗಳಾಗಿವೆ. ಇವರದೇ ಇನ್ನೊಂದು ಕೃತಿ 'ಕನ್ನಡ ಕಾವ್ಯಗಳಲ್ಲಿ ಸಮರಚಿತ್ರಗಳು'. ಇದು ತಮ್ಮ ಸಂಶೋಧನ ಪ್ರಬಂಧದ ಪ್ರತ್ಯೇಕ ರೂಪವೆನ್ನಬಹುದು. ಇವುಗಳಲ್ಲಿ ಸೇನಾಬಲ, ವಿಂಗಡನೆ, ವಿಭಾಗ, ಆಯುಧಗಳು, ಸಮರ ಚಿತ್ರಣಗಳನ್ನು ಕಾವ್ಯಗಳ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ವಿಜಯನಗರ ಕಾಲದ ಸೈನ್ಯ ಮತ್ತು ಯುದ್ಧ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಲು ಈ ಮೇಲಿನ ಸಂಶೋಧನ ಕೃತಿಗಳು ಅಧ್ಯಯನದುದ್ದಕ್ಕೂ ಮಾರ್ಗದರ್ಶಿಯಾಗಿ ಮುನ್ನಡೆಸಿವೆ. ಈ ಮೇಲಿನ ಅಧ್ಯಯನಗಳ ಸಮೀಕ್ಷೆಯ ಹಿನ್ನೆಲೆಯಲ್ಲಿ ''ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ''ಎಂಬ ವಿಷಯದ ಮೇಲೆ ಪ್ರತ್ಯೇಕವಾದ ಅಧ್ಯಯನದ ಅಗತ್ಯವನ್ನು ಅರಿತು ಆಯ್ದುಕೊಳ್ಳಲಾಗಿದೆ.

ಸಂಶೋಧನೆಗೆ ಅಧ್ಯಯನ ಕ್ರಮವು ಅತಿಮುಖ್ಯ. ಅಧ್ಯಯನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಉಪಯುಕ್ತವಾದ ಅಧ್ಯಯನ ಕ್ರಮವಿರಬೇಕಾಗುತ್ತದೆ. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಆರಂಭಿಸುವ ಮುನ್ನ ವಿಜಯನಗರ ಸಾಮ್ರಾಜ್ಯವನ್ನು ಕುರಿತ ಗ್ರಂಥಗಳ ಸೂಚಿಯನ್ನು ತಯಾರಿಸಿ ಅಧ್ಯಯನ ವಿಷಯಗಳ ಸಮೀಕ್ಷೆ ನಡೆಸಲಾಯಿತು. ಇದುವರೆಗೆ ನಡೆದ ಹಾಗೂ ನಡೆಯಬೇಕಾದ ಅಧ್ಯಯನಗಳನ್ನು ಹಲವು ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ಅಧ್ಯಯನ ಯೋಗ್ಯವೆಂದು ತಿಳಿದು ಆಯ್ದುಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತಗೊಂಡ ಬಳಿಕ ಅದರ ಬಗೆಗೆ ನಡೆದ ಅಧ್ಯಯನಗಳತ್ತ ದೃಷ್ಟಿಹರಿಸಿ 'ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ'ಯಲ್ಲಿ ಯಾವ ಯಾವ ಅಂಶಗಳು ಒಳಗೊಳ್ಳಬೇಕೆಂಬುದರ ಪಟ್ಟಿ ತಯಾರಿಸಲಾಯಿತು. ನಂತರ ಕರ್ನಾಟಕ ಮತ್ತು ಭಾರತದಲ್ಲಿ ನಡೆದಿರುವ ಈ ಬಗೆಗಿನ ಅಧ್ಯಯನಗಳನ್ನು ಗಮನಿಸಿ, ಅವುಗಳಲ್ಲಿ ಅಧ್ಯಯನ ಯೋಗ್ಯ ಅಂಶಗಳನ್ನು ಮಾಹಿತಿ ಸಂಗ್ರಹಣಾ ಪಟ್ಟಿಕೆಗಳಲ್ಲಿ ವಿಷಯ ಮತ್ತು ಕಾಲಾನುಕ್ರಮಗಳಿಗೆ ಅನುಗುಣವಾಗಿ ದಾಖಲಿಸಿಕೊಳ್ಳಲಾಯಿತು. ವಿಜಯನಗರ ಕಾಲದ ಪ್ರಾಥಮಿಕ ಆಕರಗಳಾದ ಕಾವ್ಯಗಳು, ಪ್ರವಾಸಿಗರ ವರದಿಗಳು ಮತ್ತು ಶಾಸನಗಳಲ್ಲಿ ಉಲ್ಲೇಖವಾದ ಸೈನ್ಯ ಮತ್ತು ಯುದ್ಧವ್ಯವಸ್ಥೆ, ಯುದ್ಧನೀತಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಯಥಾಪ್ರಕಾರ ಪಟ್ಟಿಕೆಗಳಲ್ಲಿ ವಿಷಯ, ಕಾಲ ಮತ್ತು ಅರಸರಾದಿಯಾಗಿ ದಾಖಲಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಹೀಗೆ ಚರಿತ್ರೆಗೆ ನೆರವಾಗುವ ಎಲ್ಲ ಬಗೆಯ ಆಕರಗಳನ್ನು ಸಂದರ್ಭಾನುಸಾರ ಬಳಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳೂ ಇವೆ. ಇವುಗಳಲ್ಲಿ

ಮೊದಲೆರಡು ಅಧ್ಯಾಯಗಳು ಪ್ರಸ್ತಾವನೆ, ಸೈನ್ಯ ಮತ್ತು ಯುದ್ಧದ ನೆಲೆ, ಸ್ವರೂಪಗಳನ್ನು ಪ್ರತಿನಿಧಿಸುವಂಥವು. ಸೈನ್ಯ ಮತ್ತು ಯುದ್ಧ ಕುರಿತು ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ಇವುಗಳಲ್ಲಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ವಿಜಯನಗರ ಸೈನ್ಯ ವ್ಯವಸ್ಥೆಯನ್ನು ಕುರಿತದ್ದು. ಇಲ್ಲಿ ಪ್ರಾಕೃತಿಕ ಪರಿಸರ, ಸೇನಾಬಲ, ಸೈನಿಕ ವಿಭಾಗಗಳಾದ ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳಗಳನ್ನು ವಿವಿಧ ಆಕರಗಳು ನೀಡುವ ಮಾಹಿತಿಗಳ ಹಿನ್ನೆಲೆಯಲ್ಲಿ ವಿಜಯನಗರ ಸೈನ್ಯದ ನೈಜ ಚಿತ್ರಣವನ್ನು ನೀಡುವಲ್ಲಿ ಯತ್ನಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸೈನ್ಯದ ಆಡಳಿತಕ್ರಮವನ್ನು ಅಭ್ಯಸಿಸಲಾಗಿದೆ. ರಾಜ, ಮಹಾದಂಡನಾಯಕ, ದಂಡನಾಯಕರು ಕೇಂದ್ರದ ಆಡಳಿತದ ರೂವಾರಿಗಳಾದರೆ, ಅಮರನಾಯಕರು ರಾಜನ ಮನ್ನಣೆಯ ಮೇರೆಗೆ ಪ್ರಾಂತೀಯ ಆಡಳಿತದ ಸೂತ್ರಧಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಅಮರನಾಯಕ ವ್ಯವಸ್ಥೆಯು ವಿಜಯನಗರ ಆಡಳಿತ ಕ್ರಮದಲ್ಲಿ ಅನುಸರಿಸಿದ ವಿಶಿಷ್ಟ ಆಡಳಿತ ಘಟಕ. ಇವುಗಳಲ್ಲದೆ ಸೈನಿಕರ ಆಯ್ಕೆ, ವೇತನ, ತರಬೇತಿ ಮುಂತಾದವುಗಳನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಯನದಲ್ಲಿ ಸೈನ್ಯ ಮತ್ತು ಯುದ್ಧ ವ್ಯವಸ್ಥೆಗಳು ಪ್ರತ್ಯೇಕವಾಗಿದ್ದು, ಯುದ್ಧವ್ಯವಸ್ಥೆ ಮತ್ತು ಯುದ್ಧೋಪಕರಣಗಳನ್ನು ಐದನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಯುದ್ಧವ್ಯವಸ್ಥೆಯು ಯುದ್ಧಕ್ಕೆ ಮುನ್ನ ನಡೆಯುತ್ತಿದ್ದ ಸಿದ್ಧತೆ, ಆಚರಣೆಗಳು, ಸೇನಾ ಶಿಬಿರ, ಯುದ್ಧ ಸ್ಥಿತಿ, ಯುದ್ಧದ ಬಗೆಗಳಾದ ಬಯಲು ಯುದ್ಧ, ಕೋಟೆಕಾಳಗ ಮತ್ತು ನೌಕಾಯುದ್ಧಗಳು, ಹೋರಾಟದ ತಂತ್ರಗಳು, ಯುದ್ಧಾನಂತರದ ಸಾವುನೋವುಗಳು, ಲೂಟಿ-ದಾಳಿಗಳು, ಯುದ್ಧ ಪ್ರೇರಣೆ ಮತ್ತು ಬಿರುದಾವಳಿಗಳನ್ನು ಒಳಗೊಂಡಿದೆ. ಯುದ್ಧೋಪಕರಣ ಉಪವಿಭಾಗದಲ್ಲಿ ವಿಜಯನಗರ ಕಾಲದಲ್ಲಿ ಬಳಸುತ್ತಿದ್ದ ಆಯುಧೋಪಕರಣಗಳು, ರಕ್ಷಣಾ ಪರಿಕರಗಳನ್ನು ಚರ್ಚಿಸಲಾಗಿದೆ.

ಯುದ್ಧಕ್ಕೆ ಮುನ್ನ, ಯುದ್ಧ ನಡೆಯುವಾಗ, ಯುದ್ಧನಂತರ ಎರಡೂ ಕಡೆಯ ಪಕ್ಷಗಳು ಅಳವಡಿಸಿಕೊಂಡಿದ್ದ ಕೆಲವು ಕ್ರಮಗಳಿದ್ದವು. ಅವೇ ಯುದ್ಧ ನೀತಿಗಳು. ಯುದ್ಧವನ್ನು ಆರಂಭಿಸುವ, ನಿಲ್ಲಿಸುವ ವಿಧಿ-ವಿಧಾನಗಳು, ಯುದ್ಧದಲ್ಲಿ ಯಾರೊಂದಿಗೆ ಹೋರಾಡಬೇಕು-ಹೋರಾಡಬಾರದು, ಸತ್ತ ಯೋಧರನ್ನು ಕಾಣಬೇಕಾದ ರೀತಿ, ಯುದ್ಧನಂತರದಲ್ಲಿ ಸೋತ ಸೇನೆಯನ್ನು ನಡೆಸಿಕೊಳ್ಳಬೇಕಾದ ಕ್ರಮ - ಇವೇ ಮೊದಲಾದವುಗಳು ಯುದ್ಧ ನಿಯಮಗಳಾಗಿದ್ದವು. ಇವುಗಳಲ್ಲದೆ ಯುದ್ಧದ ಪರಿಣಾಮಗಳು ಒಂದು ಸಾಮ್ರಾಜ್ಯದ ಅಭಿವೃದ್ಧಿ ಅಥವಾ ಅವನತಿಗೆ ಹೇಗೆ ಕಾರಣವಾದವೆಂಬ ಅಂಶಗಳನ್ನು ಆರನೆಯ ಅಧ್ಯಾಯವು ಒಳಗೊಂಡಿರುವುದು. ಏಳನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದ ಸಂಕ್ಷಿಪ್ತ ರೂಪವೆನ್ನಬಹುದು. ಹೀಗೆ ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿಯನ್ನು ದೊರೆತ ಆಕರಗಳ ಹಿನ್ನೆಲೆಯಲ್ಲಿ ಸಿದ್ಧಪಡಿಸಲಾಗಿದೆ.

ಅಧ್ಯಾಯ ೨

ಹಿನ್ನೆಲೆ

೨.೧. ಸೈನ್ಯ ವ್ಯವಸ್ಥೆ ಮತ್ತು ಯುದ್ಧ- ನೆಲೆ, ಸ್ವರೂಪ

೨.೨. ವಿಜಯನಗರ ಪೂರ್ವಕಾಲದ ಸೈನ್ಯವ್ಯವಸ್ಥೆ

೨.೧. ಸೈನ್ಯ ವ್ಯವಸ್ಥೆ ಮತ್ತು ಯುದ್ಧ- ನೆಲೆ, ಸ್ವರೂಪ

(‘ಸೈನ್ಯಾತ್ ವಿನಾ ನೈವ ರಾಜ್ಯಂ ನ ಧನಂ ನ ಪರಾಕ್ರಮಃ’ ಎಂಬ ಸೂಕ್ತಿಯಂತೆ, ಸೈನ್ಯವಿಲ್ಲದೆ ರಾಜ್ಯವಿಲ್ಲ, ಧನವಿಲ್ಲ, ಪರಾಕ್ರಮವಿಲ್ಲವೆಂಬುದು ಪ್ರಾಚೀನ ಕಾಲದಿಂದಲೂ ಸೈನ್ಯವ್ಯವಸ್ಥೆಯಲ್ಲಿ ರೂಢಿಯಲ್ಲಿದ್ದಿತು.[1] ಸೈನ್ಯವು ರಾಜ್ಯವ್ಯವಸ್ಥೆಯ ಮೂಲಭೂತ ಅಂಶಗಳಾದ ಸಪ್ತಾಂಗಗಳಲ್ಲಿ ಒಂದು.) ರಾಜ್ಯದ ಪರಿಕಲ್ಪನೆಯಲ್ಲಿ ರಾಜನ ಅಗತ್ಯ ಎಷ್ಟು ಅವಶ್ಯವೋ ಸೇನೆಯ ಅನಿವಾರ್ಯತೆಯೂ ಅಷ್ಟೇ ಮುಖ್ಯ. ರಾಜ್ಯ ಮತ್ತು ಸಮಾಜ ಸಂರಕ್ಷಣೆಯಲ್ಲಿ ಸೈನ್ಯದ ಪಾತ್ರ ತುಂಬ ಹಿರಿದು. ಪ್ರಬಲ ಹಾಗೂ ಸದೃಢ ಸೈನ್ಯವನ್ನು ಹೊಂದಿದ ಯಾವುದೇ ರಾಜ್ಯವು ಶತ್ರುಗಳ ಭಯ, ಆತಂಕಗಳಿಂದ ಸದಾ ಮುಕ್ತವಾಗಿರುತ್ತದೆ. ಸೈನ್ಯವು ಸುಭದ್ರ ಸಾಮ್ರಾಜ್ಯ ಸ್ಥಾಪನೆಗೆ ಬೇಕಾದ ಅನಿವಾರ್ಯ ಅಂಗ. ಹೋರಾಟ, ಘರ್ಷಣೆಗಳು ಅಧಿಕವಾಗಿದ್ದ ಮಧ್ಯಯುಗೀನ ರಾಜಕೀಯ ಸನ್ನಿವೇಶದಲ್ಲಿ ಸೈನ್ಯವು ಅಗತ್ಯವಾಗಿದ್ದಿತು.

‘ಸೈನ್ಯ’ವೆಂಬುದಕ್ಕೆ ಸೇನೆ, ದಂಡು, ದಳ, ಪಡೆ- ಇನ್ನೂ ಮುಂತಾದ ಅರ್ಥಗಳಿವೆ. ಸೇನಾ ಎಂಬ ಪದದಿಂದ ಸೇನೆ, ಸೈನ್ಯ ಪದಗಳು ಬಳಕೆಗೆ ಬಂದಿವೆ. ಸೇನಾ ಎಂಬುದು ಸಂಸ್ಕೃತರೂಪ. ಇದು ಪಾಳಿ ಮತ್ತು ಸಿಂಹಳೀ ಭಾಷೆಗಳಲ್ಲೂ ಬಳಕೆಗೊಂಡಿದೆ. ‘ಸೈನ್ಯವ್ಯವಸ್ಥೆ’ ಕೆಲವು ನಿಯಮ, ಕಟ್ಟಳೆಗಳಿಂದ ಸಜ್ಜುಗೊಂಡ ಕ್ರಮಬದ್ಧ ಸ್ಥಿತಿ.

ಸೈನ್ಯ ಮತ್ತು ಯುದ್ಧದ ತಾತ್ವಿಕ ಪರಿಕಲ್ಪನೆಗಳು ಅರ್ಥ ಮತ್ತು ವ್ಯಾಪ್ತಿ, ಸೈನ್ಯಪಡೆಗಳು, ಶಸ್ತ್ರಾಸ್ತ್ರಗಳು, ರಕ್ಷಣಾ ಸಾಧನಗಳು, ತಂತ್ರಗಳು ಮತ್ತು ವಿಧಿ-ವಿಧಾನಗಳನ್ನು ಒಳಗೊಂಡಿರುತ್ತವೆ.

ಪ್ರಾಚೀನ ಕಾಲದಿಂದಲೂ ಮಾನವ ತನ್ನ ಹಾಗೂ ಕುಟುಂಬ ಮತ್ತು ಸಮಾಜದ ರಕ್ಷಣೆಗೆ ವಿಕಾಸದೋಪಾದಿಯಲ್ಲಿ ಮಾರ್ಗಗಳನ್ನು ಕಂಡುಕೊಂಡಿರುವುದು ಚರಿತ್ರೆಯಿಂದ ತಿಳಿದುಬರುವ ಸಂಗತಿ. ಪ್ರಾಚೀನ ಕಾಲದ ಸೈನ್ಯ ಮತ್ತು ಯುದ್ಧ ವ್ಯವಸ್ಥೆಗಳನ್ನು ಕುರಿತ ಹಲವು ಕೃತಿಗಳಿವೆ. ಅವುಗಳಲ್ಲಿ ಶುಕ್ರನೀತಿಸಾರ, ಕೌಟಿಲ್ಯನ ಅರ್ಥಶಾಸ್ತ್ರ, ಸೋಮೇಶ್ವರನ ಮಾನಸೋಲ್ಲಾಸ, ಕಾಮಂದಕನ ನೀತಿಸಾರ ಅಗ್ನಿಪುರಾಣ, ಯಾಜ್ಞವಲ್ಕ್ಯಸ್ಮೃತಿ, ಕರ್ಣಾಟ ಭಾರತ ಕಥಾಮಂಜರಿಗಳನ್ನು ಮುಖ್ಯವಾಗಿ ಗಮನಿಸಬಹುದು. ಈ ಕೃತಿಗಳು ಸೈನ್ಯ, ಅದರ ಅಂಗಗಳು, ಅವುಗಳ ಆಡಳಿತ ಮತ್ತು ಬಳಕೆ, ಹಾಗೆಯೇ ಯುದ್ಧ, ಆಯುಧೋಪಕರಣಗಳು, ತಂತ್ರಗಳು, ನೀತಿ-ನಿಯಮಗಳು, ಪರಿಣಾಮಗಳು-ಇನ್ನು ಮುಂತಾದ ಅಂಶಗಳನ್ನು ಒಳಗೊಂಡಿವೆ.

ಸೈನ್ಯ ನಿರ್ವಹಣೆಗೆ ಬೇಕಾದ ಹಣಕಾಸು ಕುರಿತು ಶುಕ್ರನು ಹೀಗೆ ಹೇಳಿದ್ದಾನೆ: "ರಾಜ್ಯದ ಅತ್ಯಂತ ಮುಖ್ಯ ಅಂಗವಾದ ಸೈನ್ಯ ನಿರ್ವಹಣೆಗೆ ಆದಾಯದ ಅರ್ಧ ಭಾಗವನ್ನು ಮೀಸಲಿಡಬೇಕು".[೨] ಈ ಅಂಶವನ್ನು ಕೃಷ್ಣದೇವ ರಾಯನ 'ಆಮುಕ್ತ ಮಾಲ್ಯದ'ದಲ್ಲೂ ಕಾಣಬಹುದು. ಅದರಲ್ಲಿ "ಆನೆ ಕುದುರೆಗಳನ್ನು ಕೊಳ್ಳಲು, ಸಾಕಲು ಮತ್ತು ಕಾಪಾಡಲು ವೆಚ್ಚ ಮಾಡಿದ ಹಣವನ್ನು ಎಂದಿಗೂ ಖರ್ಚೆಂದು ಭಾವಿಸಲಾಗದು"[೩] ಎಂದು ಹೇಳಲಾಗಿದೆ.

ರಾಜ್ಯಕ್ಕೆ ಸೈನ್ಯ ಎಷ್ಟು ಮುಖ್ಯವೋ, ಸೈನ್ಯವನ್ನು ಮುನ್ನಡೆಸುವ, ನಿರ್ವಹಿಸುವ ಮತ್ತು ನಿಯಂತ್ರಿಸಬಲ್ಲ ಯುಕ್ತ ನಾಯಕನೂ ಅವಶ್ಯವಾಗಿ ಬೇಕಾಗುತ್ತದೆ. ಉತ್ತಮ ಸೈನ್ಯದೊಂದಿಗೆ ಸಶಕ್ತ ಮುಖಂಡನಿದ್ದರೆ, ಎಂತಹ ಯುದ್ಧಗಳಲ್ಲೂ ಜಯವನ್ನು ಸಂಪಾದಿಸಬಹುದೆಂಬುದು 'ಮಹಾಭಾರತ'ದಲ್ಲಿ ಕಾಣಬರುವ ಸಾರವಾಗಿದೆ.[೪]

ಸೈನ್ಯವು ರಾಜ್ಯವನ್ನು ಸಂಘಟಿಸುವ, ರಕ್ಷಿಸುವ, ವಿಸ್ತರಿಸುವ ಹೊಣೆಗಾರಿಕೆಯುಳ್ಳ ಸಂಸ್ಥೆ. ಆದಕಾರಣ ಅದರಲ್ಲಿ ಸೇನಾಧಿಪತಿಯಿಂದ ಹಿಡಿದು ಸಾಮಾನ್ಯ ಯೋಧನವರೆಗಿನ ಹುದ್ದೆಗಳಿಗೆ ಜಾತಿ, ಧರ್ಮಗಳು ಅಡ್ಡಿಯಾಗಬಾರದು; ಅಲ್ಲಿ ಅರ್ಹತೆಯೊಂದೇ ಪ್ರಧಾನವಾಗಿರಬೇಕೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುತ್ತದೆ. ಸೈನ್ಯ ಶಕ್ತಿ, ಸಂಪತ್ತು ಮತ್ತು ಪ್ರತಿಷ್ಠೆಗಳ ಸಂಕೇತವೂ ಹೌದು.

ಸೈನ್ಯವ್ಯವಸ್ಥೆಯಲ್ಲಿ ರಾಜ ಅಥವಾ ಚಕ್ರವರ್ತಿ ಮೊದಲು ಯೋಧ; ನಂತರ ಆವನು ಅರಸನಾಗುತ್ತಿದ್ದ. ರಾಜನಿಗೆ ಸೇನೆಯ ಬಲವು ಗುಣವಾದರೆ, ಸೇನೆಯ ದುರ್ಬಲತೆಯೇ ಅವಗುಣವಾಗಿದ್ದಿತು. ರಾಜ್ಯದ ಸುರಕ್ಷತೆಗೆ ಸೈನ್ಯವು ಸದಾ ಸಮರ್ಥವಾಗಿ ಅರ್ಹಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕಾದುದು ಅರಸನ ಕರ್ತವ್ಯವಾಗಿತ್ತು.

ಒಂದು ಕಡೆ ವ್ಯಾಖ್ಯಾನಿಸುವಂತೆ, ''ಸೈನಿಕ ದಿಗ್ವಿಜಯವು ರಾಜಕೀಯ ಪ್ರಾಬಲ್ಯವನ್ನು ನೀಡುತ್ತದೆ. ಅದು ಆರ್ಥಿಕ ಹತೋಟಿಯನ್ನು ತಂದುಕೊಡುತ್ತದೆ; ಇತಿಹಾಸದ ವ್ಯಾಖ್ಯಾನವನ್ನು ದಂಡನಾಯಕರು ಮಾತ್ರ ಬರೆಯಬಲ್ಲರು.''[೫] ಆದುದರಿಂದ ಸೈನ್ಯವು ಅಂತರರಾಷ್ಟ್ರೀಯ ಕಾನೂನು ಮತ್ತು ಭಾವನೆಯ ಪ್ರಕೃತ ಅಭಾವದಲ್ಲಿ ಒಂದು ರಾಷ್ಟ್ರ ಅಥವಾ ರಾಜ್ಯ ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಸದಾ ಸಿದ್ಧವಾಗಿರಬೇಕಾಗುತ್ತದೆ. ಇದು ಇಂದಿನ ಆಧುನಿಕ ಯುಗಕ್ಕೂ ಅನ್ವಯಿಸುತ್ತದೆ.

ಯುದ್ಧ : ಪ್ರಾಚೀನ ಮತ್ತು ಇತಿಹಾಸ ಕಾಲದ ಮಾನವನ ಹೋರಾಟವೆಂದರೆ ನೆನಪಿಗೆ ಬರುವುದು ಯುದ್ಧ. ಯುದ್ಧವೆಂಬುದು ಒಂದು ಸಾಮೂಹಿಕ ಕ್ರಿಯೆಯಾದಾಗಲೇ ಅದಕ್ಕೆ ಯುದ್ಧದ ಗೌರವ ಮತ್ತು ಜಯಾಪಜಯಗಳು ದೊರೆಯುವುದು.[೬] ಪ್ರಾಚೀನ ಮಾನವನು ಬಳಸಿದ ಬೇಟೆಯ ಪರಿಕಲ್ಪನೆಗಳೇ ಮುಂದೆ ಯುದ್ಧದ ಆಕರ, ಶಸ್ತ್ರಾಸ್ತ್ರಗಳಾಗಿ ಮಾರ್ಪಾಟು ಹೊಂದಿರುವುದನ್ನು ಕಾಣಬಹುದು.

ಯುದ್ಧವನ್ನು ಸಮರ, ಕದನ, ಕಾಳಗ, ಹೋರಾಟ ಮತ್ತು ಜಗಳಗಳೆಂದೂ ಕರೆಯಲಾಗಿದೆ. ಯುದ್ಧ ವ್ಯವಸ್ಥೆಯು ಆರಂಭ, ಘಟನೆ, ಅಂತ್ಯ, ಫಲಿತಾಂಶ ಮತ್ತು ಪರಿಣಾಮಗಳ ಜೊತೆಗೆ ಪರಿಹಾರಗಳನ್ನೂ ಒಳಗೊಂಡಿರುತ್ತದೆ. ಯುದ್ಧವು, ''ಬುಡಕಟ್ಟುಗಳ ಸಮಾಜದಲ್ಲಿ ಆಹಾರ ಸಂಪಾದನೆಗೆ ನಡೆಯುತ್ತಿದ್ದ 'ಜಗಳ'ದ ರೂಪದಲ್ಲಿ ಯುದ್ಧದ ಪರಿಕಲ್ಪನೆಯಿದ್ದರೆ, ನಂತರ ಪ್ರಾಚೀನ ಭಾರತದಲ್ಲಿ ವರ್ಣ ಮತ್ತು ವರ್ಗ ಸೃಷ್ಟಿಯ ವಿಸ್ತರಣೆ ಹಾಗೂ ಪ್ರಾಬಲ್ಯದ ಸಂಕೇತವಾಗಿ ಯುದ್ಧ ಕಾಣಿಸಿಕೊಂಡು, ಇದರ ಮುಂದಿನ ಬೆಳವಣಿಗೆಯಾದ ಜಾತಿವ್ಯವಸ್ಥೆಯಲ್ಲಿ ಕ್ಷತ್ರೀಯರ (ರಾಜರ) ಕುಲಕಸುಬು ಹಾಗೂ ವಿಸ್ತರಣಾವಾದದ ಮೂಲಮಂತ್ರವಾಗಿದೆ''[೭] ಪ್ರಾಚೀನ ಕಾಲದಿಂದಲೂ ನಡೆದ ಜಗಳರೂಪದ ಘಟನೆಗಳನ್ನು ಕುರಿತು ಚಿದಾನಂದಮೂರ್ತಿಯವರು ಪ್ರಸ್ತಾಪಿಸುತ್ತಾ, ''ಪ್ರಾಚೀನ ಕರ್ನಾಟಕದಲ್ಲಿ ಅಸಂಖ್ಯಾತ ಯುದ್ಧಗಳು ನಡೆದಿವೆ. ಇವುಗಳಲ್ಲಿ ಸಾಕಷ್ಟು ಸಂಖ್ಯೆಯವು 'ಯುದ್ಧ' ಎಂದು ಅನಿಸಿಕೊಳ್ಳಲಾರವು. ಕೆಲವನ್ನು ದೊಡ್ಡ ಜಗಳಗಳೆಂದು ಕರೆದರೂ ಕರೆಯಬಹುದು. ಆದರೂ ಅವನ್ನು ಸೌಕರ್ಯದ ದೃಷ್ಟಿಯಿಂದ ಯುದ್ಧಗಳೆಂದೇ ಕರೆದಿದ್ದೇವೆ'' ಎಂದಿದ್ದಾರೆ. ಇಲ್ಲಿ ಅವರು ಪ್ರಾಚೀನ ಕಾಲದಲ್ಲಿ ನಡೆದ ಚಿಕ್ಕಪುಟ್ಟ ಜಗಳ, ಸಂಘರ್ಷ, ಮತ್ತು ಹೋರಾಟಗಳನ್ನು ಸಾಮಾನ್ಯವಾಗಿ ಯುದ್ಧಗಳೆಂದು ಕರೆದಿರುವುದು ಅಧ್ಯಯನದ ದೃಷ್ಟಿಯಿಂದ.

ರಾಜಕೀಯದಲ್ಲಿ ಬಹುಮುಖ್ಯ ಕಾರ್ಯತಂತ್ರಗಳೆಂದರೆ ಸಾಮ, ದಾನ, ಭೇದಗಳು. ಇವುಗಳು ವಿಫಲಗೊಂಡಲ್ಲಿ ಅನಿವಾರ್ಯವಾಗಿ ಪ್ರಯೋಗಿಸಬೇಕಾದ ಮಾರ್ಗವೇ ದಂಡ ಅಥವಾ ಯುದ್ಧ. ಇವುಗಳನ್ನು ಚತುರೋಪಾಯಗಳೆಂದೂ ಕರೆಯಲಾಗುತ್ತದೆ. ಯುದ್ಧದ ಬಗೆಗೆ ವಿದ್ವಾಂಸರು ಅನೇಕ ರೀತಿಯ ವ್ಯಾಖ್ಯಾನಗಳನ್ನು ನೀಡಿರುವರು.

ಚಿದಾನಂದಮೂರ್ತಿ, "ಯುದ್ಧವು ದಂಡೋಪಾಯದ ವ್ಯಕ್ತರೂಪ" ವೆಂದು ಕರೆದರೆ. ಬಿ.ಷೇಕ್‌ಅಲಿ, "ಪ್ರಬಲ ಅರಸರಿಗೆ ಯುದ್ಧ ಒಂದು ಬಗೆಯ ಕ್ರೀಡೆ. ಬೇರೊಂದು ರೂಪದ ಬೇಟೆ" ಎನ್ನುತ್ತಾರೆ. ಅವರು ಮುಂದುವರಿದು, "ಯುದ್ಧರಂಗವನ್ನು ಪ್ರವೇಶಿಸಲು ಕಾರಣಗಳಿಗೆ ಕೊರತೆಯಿರಲಿಲ್ಲ. ಎರಡರಲ್ಲಿ ಯಾವುದೇ ಒಂದು ಆಸ್ಥಾನವು ತೆಗೆದುಕೊಳ್ಳುತ್ತಿದ್ದ ಮುಖ್ಯವಾದ ನಿರ್ಣಯ ಇನ್ನೊಬ್ಬನ ಮೇಲೆ ಹೇಗೆ ಯುದ್ಧ ಮಾಡಿ ಎಂಥ ಪೆಟ್ಟು ಕೊಡುವುದು ಎನ್ನುವುದಾಗಿದೆ" ಎನ್ನುತ್ತಾರೆ.[೮] ವಿಲ್-ಡ್ಯುರಾಂಟ್‌ರು, "ಮಾನವ ಸಂತತಿಗಳಲ್ಲಿ ಸ್ಪರ್ಧೆ ಮತ್ತು ನೈಸರ್ಗಿಕ ಆಯ್ಕೆಯ ಅಂತಿಮ ರೂಪ ಯುದ್ಧ; ಯುದ್ಧ ಅಥವಾ ಸ್ಪರ್ಧೆ ಸರ್ವವಸ್ತುಗಳ ಜನಕ; ವಿಚಾರಗಳ, ಸೃಷ್ಟಿಗಳ, ಸಂಸ್ಥೆಗಳ ಹಾಗೂ ರಾಜ್ಯಗಳ ಶಕ್ತಿಯುತ ಮೂಲ. ಶಾಂತಿಯೆನ್ನುವುದು ಅಸ್ಥಿರ ಅಸಮತೋಲ. ಅಂಗೀಕೃತ ಪ್ರಭುತ್ವ ಅಥವಾ ಸಮಾನ ಅಧಿಕಾರದಿಂದ ಮಾತ್ರ ಅದನ್ನು ರಕ್ಷಿಸಲು ಸಾಧ್ಯ. ವ್ಯಕ್ತಿಯ ಜೀವನ ಸ್ಪರ್ಧೆಗಳಿಗೆ ಹೆಚ್ಚಿನ ಹುರುಪನ್ನು ಗರ್ವ ಕೊಡುತ್ತದೆ; ರಾಷ್ಟ್ರದ ವಿಷಯದಲ್ಲಿ ರಾಯಭಾರ ಮತ್ತು ಯುದ್ಧಗಳಲ್ಲಿ ರಾಷ್ಟ್ರೀಯತೆ ಶೌರ್ಯ ನೀಡುತ್ತದೆ" ಎನ್ನುತ್ತಾರೆ.[೯] ಕ್ಲಾಸ್‌ವಿಟ್ಜ್ ಎಂಬ ವಿದ್ವಾಂಸ, "ರಾಜಕೀಯದ ಹಿಂಸಾತ್ಮಕ ಮುಂದುವರಿಕೆಯೇ ಯುದ್ಧ"ವೆಂದರೆ ಬರ್ನ್‌ಹಾರ್ಡ್, "War is a biological neccessity an indispensable regulator in the life of mankind" ಎನ್ನುತ್ತಾರೆ.[೧೦] ಯುದ್ಧ ಎಂಬುದು ಮಾನವ ತನ್ನ ವೈಯಕ್ತಿಕ ಪ್ರತಿಷ್ಠೆ, ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲ. ಇದು ಜನಾಂಗಗಳ ನಡುವೆ ಇದ್ದ, ಇರುವ ಬದ್ಧ ಮತ್ಸರದ ಫಲವಾಗಿ ಮಾನವ ಜನಾಂಗವೇ ತನ್ನ ಅಳಿಲಿಗಾಗಿ ಮಾಡಿಕೊಂಡ ಒಂದು ಸ್ವಯಂಕೃತ ಅಪರಾಧ.[೧೧]

ಯುದ್ಧವು ಸಂಪತ್ತು, ಶಕ್ತಿ ಮತ್ತು ಪ್ರತಿಷ್ಠೆಗಳ ಸಂಕೇತ. ಇದು ಮಾನವನ ಬದಲಾಗದ ಲಕ್ಷಣ; ಶಕ್ತಿಯು ಬಯಸಿ ಬಂದುದಲ್ಲ, ಅದು ಸ್ವಾಭಾವಿಕವಾಗಿ ದೊರೆತದ್ದು. ಅದೇ ರೀತಿ ಸಂಪತ್ತು ಕೂಡ. ಶಕ್ತಿಯ ಅಪೇಕ್ಷೆಯಂತೆ ಸಂಪತ್ತು. ಅಂತೆಯೇ ಸಂಪತ್ತಿನಿಂದ ಶಕ್ತಿಯ ವೃದ್ಧಿ. ಶಕ್ತಿ ಮತ್ತು ಸಂಪತ್ತುಗಳೆರಡರಿಂದ ಪ್ರತಿಷ್ಠೆಯು ಕಾಣಿಸಿಕೊಳ್ಳುವುದು.

ಅರಸರ ಸಾಮ್ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆಯು ಯುದ್ಧಕ್ಕೆ ಮೂಲಭೂತ ಕಾರಣವಾಗಿದೆ. ಅಂತೆಯೇ ಯುದ್ಧದ ಕಾರಣಗಳನ್ನು ಕುರಿತು ಹಲವು ವಿದ್ವಾಂಸರು ಹೀಗೆ ವಿಶ್ಲೇಷಿಸಿದ್ದಾರೆ. ಕ್ಲಾಸ್‌ವಿಟ್ಜ್ "ಯುದ್ಧ ಎನ್ನುವುದು ಹಿಂಸೆಯ ಪ್ರಕಟರೂಪ. ಅದು ಗರ್ವ, ದುರಹಂಕಾರ, ಇನ್ನೊಬ್ಬರನ್ನು ಗುಲಾಮರನ್ನಾಗಿಸುವ ಪಾಳೆಯಗಾರೀ ಮನಸ್ಸಿನ ಅಭಿವ್ಯಕ್ತರೂಪ. ಸ್ಪರ್ಧೆಯಲ್ಲಿ ಇಲ್ಲದ ಹಿಂಸಾತ್ಮಕ ರೂಪ ಯುದ್ಧದಲ್ಲಿ ಕಾಣಿಸಿಕೊಳ್ಳುತ್ತದೆ. ಸಂಪಾದನೆ, ಜಗಳಗಂಟತನ, ಗರ್ವ, ಆಹಾರ, ಜಮೀನು, ಸರಕುಗಳು ಮತ್ತು ಯಜಮಾನ್ಯದ ಆಸೆಯಿಂದ ಯುದ್ಧಗಳು ಘಟಿಸುತ್ತವೆ" ಎಂದಿದ್ದಾರೆ.[೧೨] ಎ.ಆರ್.ಆರ್. ದೀಕ್ಷಿತ್‌ರು ಕೊಡುವ ಯುದ್ಧದ ಕಾರಣಗಳಿವು:

೧) ಸಮುದಾಯವು ಜಾತಿ ಸಮಾಜವಾಗಿರುವ ಮಾನಸಿಕ ವಾತಾವರಣ, ೨) ಶಾಂತಿಯ ಮನೋವೈಜ್ಞಾನಿಕ ಬಂಜೆತನ ೩) ಶೌರ್ಯ ಮತ್ತು ಸಾಹಸ, ೪) ಮನುಷ್ಯರೊಳಗಿನ ಮುಷ್ಠಿ ಕಾಳಗ ೫) ರಕ್ಷಣಾ ಮನೋಭಾವ, ೬) ಸಿಟ್ಟಿನ ನಡತೆ ಮತ್ತು ಅಸೂಯಾಭಾವ ಮತ್ತು ೭) ಎಲ್ಲರ ಒಡೆಯನಾಗಬೇಕೆಂಬ ಬಯಕೆ- ಇವು ಯುದ್ಧದತ್ತ ಕರೆದೊಯ್ಯುವ ಮನೋವೈಜ್ಞಾನಿಕ ಅಂಶಗಳಾಗಿವೆ.[೧೩] ಒಟ್ಟಿನಲ್ಲಿ ಯುದ್ಧಗಳಿಗೆ ಮೂಲಕಾರಣ ರಾಜ್ಯವ್ಯವಸ್ಥೆಯೇ ಆಗಿದೆ. ಎಡ್ಮಂಡ್ ಬರ್ಕ್ ಈ ಬಗೆಗೆ, "ರಾಜಕೀಯದಲ್ಲಿ ಔದಾರ್ಯ ಅಪರೂಪವಾಗಿಯೂ ಸದ್‌ವಿವೇಕವಲ್ಲ; ದೊಡ್ಡ ಚಕ್ರಾಧಿಪತ್ಯ ಮತ್ತು ಸಣ್ಣ ಮನಸುಗಳು ಒಟ್ಟಿಗಿರುವುದು ಕಷ್ಟವಾಗುತ್ತದೆ" ಎಂದಿರುವರು.

ಈ ಮೇಲಿನವು ಯುದ್ಧದ ಕಾರಣಗಳಾದರೆ ಯುದ್ಧದ ಬಗೆಗಳಾವುವು ಎಂಬುದನ್ನು ಮುಂದೆ ಗಮನಿಸಲಾಗಿದೆ. ಸಾಮಾನ್ಯವಾಗಿ ಹಿಂದಿನಿಂದಲೂ ನಡೆದು ಬಂದ ಯುದ್ಧಗಳನ್ನಾಧರಿಸಿ ಎರಡು ಬಗೆಯ ಯುದ್ಧಗಳನ್ನು ನೋಡಬಹುದು. ೧) ನ್ಯಾಯಯುತ ಅಥವಾ ಧರ್ಮಯುದ್ಧ ೨) ಅನ್ಯಾಯಯುತ ಅಥವಾ ಕೂಟ ಯುದ್ಧ.

ನ್ಯಾಯಯುತ ಯುದ್ಧವು ರಕ್ಷಣಾತ್ಮಕವಾದದ್ದು. ಇದು ಯುದ್ಧವನ್ನು ಸಮರ್ಥಿಸಿಕೊಳ್ಳುವ ಹಾಗೂ ಆತ್ಮರಕ್ಷಣೆ ಮಾಡಿಕೊಳ್ಳುವ ಮನೋಭಾವವುಳ್ಳದ್ದು. ಅನ್ಯಾಯಯುತ ಯುದ್ಧವು ಆಕ್ರಮಣಕಾರಿಯಾದುದು. ಇದು ಕೊಳ್ಳೆ ಹೊಡೆಯುವ, ಹಿಡಿತ ಬಲಪಡಿಸುವ, ಆಧಿಪತ್ಯ ಸ್ಥಾಪಿಸುವ ಉದ್ದೇಶಗಳನ್ನು ಹೊಂದಿದೆ. ಕಾವ್ಯಗಳಲ್ಲಿ ಇದನು 'ಸಂಕುಲ ಸಮರ', 'ತುಮುಲ ಯುದ್ಧ'ಗಳೆಂಬುದಾಗಿಯೂ ಕರೆಯಲಾಗಿದೆ. ಇದು ಪ್ರಾಚೀನ ಮತ್ತು ಮಧ್ಯಕಾಲೀನ ಅವಧಿಯದ್ದಾದರೆ, ಆಧುನಿಕ ಯುಗದ ಯುದ್ಧದ ಬಗೆ ಬೇರೆ ರೀತಿಯದು. ಇಂದು ಅಣುಬಾಂಬು ಅಥವಾ ನ್ಯೂಕ್ಲಿಯರ್ ಬಾಂಬುಗಳು ಯುದ್ಧದ ಸ್ವರೂಪವನ್ನು ಬದಲಾಯಿಸಿವೆಯೆಂದೇ ಹೇಳಬಹುದು. ಇಡೀ ವಿಶ್ವವನ್ನು ದಮನ ಮಾಡಬಲ್ಲ ಶಕ್ತಿಯನ್ನು ಈ ಅಸ್ತ್ರಗಳು ಹೊಂದಿರುವುದರಿಂದ ಮತ್ತೊಂದು ಯುದ್ಧದ ಅಗತ್ಯವೇ ಬರುವುದಿಲ್ಲ. ಆದ ಕಾರಣ ಇಂತಹ ಯುದ್ಧವನ್ನು ಅಖಂಡ ಯುದ್ಧ ಅಥವಾ ಸಂಪೂರ್ಣ ಯುದ್ಧವೆಂತಲೂ ಕರೆಯಲಾಗಿದೆ.

ಯುದ್ಧದ ಬಗೆಗಳಂತೆ ಜನರನ್ನು ಯುದ್ಧದತ್ತ ಆಕರ್ಷಿಸಲು ಪ್ರಭುವರ್ಗವು ಯುದ್ಧ ಪ್ರೇರಣೆಗಳನ್ನು ಸಾಮಾಜಿಕ ನಂಬಿಕೆಗಳಲ್ಲಿ ಮೂಡಿಸಿದ್ದುದನ್ನು ಕಾಣಬಹುದು. "ಯುದ್ಧ ಮಾಡುವುದು ವೀರರಲಕ್ಷಣ; ಯುದ್ಧಕ್ಕೆ ಹೆದರುವವರು ಹೇಡಿಗಳು; ಯುದ್ಧಕ್ಕೆ ಹೋಗಿ ಅಲ್ಲಿ ಯುದ್ಧ ಮಾಡಲು ಆಗದೆ ಹೆದರಿ ಓಡಿ ಬಂದರೆ ಅಂತಹವರಿಗೆ ಸಾಮಾಜಿಕ ಅವಮಾನ, ಸ್ತ್ರೀಯರಿಂದ ತಿರಸ್ಕಾರ-ಇವೆಲ್ಲ ಇದ್ದು, ಅವನು ನೆಮ್ಮದಿಯಿಂದ ಬದುಕಲು ಆಗದಂತಹ ಪರಿಸರ ಸೃಷ್ಟಿಸಲ್ಪಡುತ್ತಿತ್ತು."[೧೪] ಅರಸರು ತಮ್ಮ ಹಾಗೂ ರಾಜ್ಯ ರಕ್ಷಣೆಗೆ ಜನರನ್ನು ಆಕರ್ಷಿಸಲು ಮಾಡಿದ ತಂತ್ರಗಳಿವು.

ಯುದ್ಧ ಸಮಯದಲ್ಲಿ ಎರಡೂ ಕಡೆಯವರು ಅನುಸರಿಸಬೇಕಾದ ನಿಯಮಗಳನ್ನು ಪ್ರಾಚೀನ ಕೃತಿಗಳಲ್ಲಿ ಕಾಣಬಹುದು. ಯುದ್ಧವು ಹಿಂಸಾತ್ಮಕವಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ಬೇಕಾಗುತ್ತದೆ. ಯುದ್ಧಗಳು ತಪ್ಪನ್ನು ಸರಿಪಡಿಸುವುದಕ್ಕೆ ಮತ್ತು ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಂಡು ಅನುಭವಿಸುವುದಕ್ಕೆ ಅಗತ್ಯವಾಗಿ ಬೇಕಾಗುತ್ತವೆ. ಒಂದು ರಾಜ್ಯದ ಅಸ್ತಿತ್ವ, ಅಲ್ಲಿಯ ನಾಗರೀಕತೆಯ ಉಳಿವು ಆ ರಾಜ್ಯ ಸೇನಾಶಕ್ತಿಯನ್ನು ಅವಲಂಬಿಸಿದ್ದುದಂತೂ ಸತ್ಯ. ಅಲ್ಲದೆ ಯುದ್ಧವು ರಾಷ್ಟ್ರೀಯತೆ, ನೈತಿಕ, ಆಧ್ಯಾತ್ಮಿಕ ಮತ್ತು ಸಾಹಸಮಯ ಗುಣಗಳನ್ನು ಬೆಳೆಸುವ ಶಕ್ತಿ ಹೊಂದಿದೆ.

೨.೨. ವಿಜಯನಗರ ಪೂರ್ವಕಾಲದ ಸೈನ್ಯವ್ಯವಸ್ಥೆ

ವಿಜಯನಗರ ಕಾಲದ ಸೈನ್ಯವ್ಯವಸ್ಥೆಯನ್ನು ಅರಿಯುವ ಮುನ್ನ ಪ್ರಾಚೀನ ಕಾಲದ ಸೈನ್ಯ ವ್ಯವಸ್ಥೆಯನ್ನು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ಪ್ರಸ್ತುತ ಉಪ ಅಧ್ಯಾಯವು ಪ್ರಾಚೀನ ಸೈನ್ಯ ವ್ಯವಸ್ಥೆಯ ಸಂಕ್ಷಿಪ್ತ ನೋಟವೆನ್ನಬಹುದು.

ಪ್ರಾಚೀನ ಭಾರತದ ಸೈನ್ಯ ಮತ್ತು ಯುದ್ಧವನ್ನು ಕುರಿತು ಅಂದಿನ ಸಾಹಿತ್ಯ ಮತ್ತು ಪ್ರಾಕ್ತನ ಆಕರಗಳು ವಿಪುಲ ಮಾಹಿತಿಯನ್ನು ಒದಗಿಸುತ್ತವೆ. ಕ್ರಿ.ಪೂ.೨೫೦೦ ವರ್ಷಗಳ ಹಿಂದೆ ಭಾರತದಲ್ಲಿ ಸೈನ್ಯವು ಅಸ್ತಿತ್ವದಲ್ಲಿದ್ದುದು ಸಿಂಧೂನದಿ ಬಯಲಿನ ನಾಗರೀಕತೆಯಿಂದ ತಿಳಿದುಬರುತ್ತದೆ. ಸಿಂಧೂ ನದಿಯ ದಡದ ಹರಪ್ಪಾ-ಮೊಹೆಂಜೋದಾರೋ ಹಾಗೂ ಸ್ವಾತಂತ್ರ್ಯೋತರ ಭಾರತದ ಲೋಥಲ್, ಕಾಲಿಬಂಗಾನ್, ದೋಲವೀರ ಮತ್ತಿತರ ಸ್ಥಳಗಳಲ್ಲಿ ನಡೆಸಲಾದ ಉತ್ಖನನದಲ್ಲಿ ಅಂದು ಬಳಸಿದ್ದ ಶಸ್ತ್ರಾಸ್ತ್ರ ಮತ್ತು ಸೈನಿಕ ಪರಿಕರಗಳು ದೊರೆತಿವೆ. ಅವುಗಳಲ್ಲಿ ಖಡ್ಗ, ಕೊಡಲಿ, ಈಟಿ, ಕಠಾರಿ, ಗದೆ, ಕವಣೆಕಲ್ಲು ಮತ್ತು ಗುರಾಣಿ ಮೊದಲಾದ ರಕ್ಷಣಾ ಪರಿಕರಗಳು, ಕೋಟೆ ಅವಶೇಷಗಳು ಸೇರಿವೆ. ಈ ಆಯುಧಗಳನ್ನು ತಾಮ್ರ, ಹಿತ್ತಾಳೆ ಮತ್ತು ಕಲ್ಲುಗಳನ್ನು ಬಳಸಿ ಮಾಡಲಾಗಿದೆ.[೧೫] ಇವುಗಳಿಂದ ಅಂದಿನ ಸೈನ್ಯವ್ಯವಸ್ಥೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಪ್ರಾಚೀನ ಸೈನ್ಯಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಗ್ರಂಥಗಳೂ ಅಂದಿನ ಸೈನ್ಯ, ಆಯುಧ, ಸೇನಾ ವಿಭಾಗ ಮೊದಲಾದವುಗಳನ್ನು ಸಂದರ್ಭಾನುಸಾರವಾಗಿ ವರ್ಣಿಸಿವೆ. ಇಂತಹ ಸಾಹಿತ್ಯಗಳಲ್ಲಿ ವೇದಗಳು ಮುಖ್ಯವಾಗಿವೆ. ಋಗ್ವೇದವು ವೇದಕಾಲದ ಸೈನ್ಯ ಪದ್ಧತಿಯನ್ನು ಕುರಿತಿರುವುದಲ್ಲದೆ, ಇಂದ್ರನನ್ನು ಯುದ್ಧದೇವತೆಯೆಂದಿದ್ದು, ಅವನನ್ನು 'ಪುರಂಧರ'ಎಂಬುದಾಗಿಯೂ ವರ್ಣಿಸಿದೆ.[೧೬] ಇದರರ್ಥ ಕೋಟೆಯನ್ನು ನಾಶಪಡಿಸುವವ ಎಂದಾಗಿದೆ. ಅಲ್ಲದೆ ಇಂದ್ರನು ನೂರು ಕೋಟೆಗಳನ್ನು ಗೆದ್ದ ವೀರನೆಂಬುದಾಗಿಯೂ ಹೇಳಲಾಗಿದೆ. ಪ್ರಾಚೀನ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು ಸೈನ್ಯ ಮತ್ತು ಯುದ್ಧಗಳ ಪ್ರತೀಕಗಳೇ ಆಗಿವೆ. ಕ್ರಿಸ್ತಪೂರ್ವ ಕಾಲದ ಸೈನ್ಯ, ಯುದ್ಧ, ಕೋಟೆ ಮೊದಲಾದವುಗಳನ್ನು

ಅರಿಯಲು ಕೌಟಿಲ್ಯನು ಅರ್ಥಶಾಸ್ತ್ರವು ತುಂಬ ಸಹಕಾರಿಯಾಗಿದೆ. ಇದು ಪ್ರಾಚೀನ ಕಾಲವನ್ನು ಪ್ರತಿನಿಧಿಸುವ ಕೋಶವೇ ಆಗಿದೆ. ಕೌಟಿಲ್ಯನು ಚತುರಂಗ ಬಲ ಹಾಗೂ ಅವುಗಳ ಕಾರ್ಯ ಮತ್ತು ಮಹತ್ವಗಳನ್ನು ಇದರಲ್ಲಿ ವಿಸ್ತಾರವಾಗಿ ಹೇಳಿದ್ದಾನೆ. ಕೌಟಿಲ್ಯನು ಚಂದ್ರಗುಪ್ತಮೌರ್ಯನ ಪ್ರಧಾನಮಂತ್ರಿಯಾಗಿದ್ದು, ಇವನ ಸಲಹೆಯ ಮೇರೆಗೆ ವ್ಯವಸ್ಥಿತ ಸೈನ್ಯವನ್ನು ಅಂದು ಕಟ್ಟಲಾಗಿತ್ತೆನ್ನುವುದರಲ್ಲಿ ಸಂಶಯವಿಲ್ಲ. ಪ್ಲೀನಿ ಮತ್ತು ಪ್ಲೂಟಾರ್ಕ್‌ರು ಚಂದ್ರಗುಪ್ತ ಮೌರ್ಯನ ಸೈನ್ಯದಲ್ಲಿ ೬೦,೦೦೦ ಸೈನಿಕರು, ೩೦,೦೦೦ ಕುದುರೆಗಳು, ೯,೦೦೦ ಆನೆಗಳು ಮತ್ತು ರಥಗಳಿದ್ದವೆಂದು ಹೇಳುತ್ತಾರೆ.[೧೭] ಕ್ರಿಸ್ತಪೂರ್ವ ಕಾಲದ ಸೈನ್ಯಾಡಳಿತದಲ್ಲಿ ಚತುರಂಗಬಲವು ಪ್ರಬಲವಾಗಿದ್ದುದನ್ನು ಕಾಣುತ್ತೇವೆ. ಈ ಬಲಗಳಲ್ಲಿ ಕಾಲ್ದಳ, ಅಶ್ವದಳ, ಗಜದಳ ಮತ್ತು ರಥದಳಗಳಿದ್ದವು. ಕ್ರಿ.ಶ.ಆರಂಭದ ಹೊತ್ತಿಗೆ ಚತುರಂಗ ಬಲಗಳಲ್ಲೊಂದಾದ ರಥದಳವು ಕಣ್ಮರೆಯಾದುದನ್ನು ವಿವಿಧ ಆಕರಗಳಲ್ಲಿ ಕಾಣಬಹುದು. ಬಾಣನ ಹರ್ಷಚರಿತೆಯಲ್ಲಿ ಸೈನ್ಯದ ಮೂರು ಅಂಗಗಳನ್ನು ಪ್ರಸ್ತಾಪಿಸಲಾಗಿದ್ದು, ರಥದಳವನ್ನು ಎಲ್ಲೂ ಉಲ್ಲೇಖಿಸಿರುವುದಿಲ್ಲ. ಹಾಗೆಯೇ ಕ್ರಿ.ಶ.೬೫೦ರ ಕುರಮ್ ಪಲ್ಲವ ದತ್ತಿ ಶಾಸನದಲ್ಲಿ[೧೮] ಪೆರವಾಳ ನಲ್ಲೂರು ಯುದ್ಧವನ್ನು ಹೇಳಲಾಗಿದ್ದು, ಪಲ್ಲವ ಅರಸನು ಆನೆ, ಕುದುರೆ ಮತ್ತು ಕಾಲಾಳುಗಳನ್ನು ಹೊಂದಿದ್ದನೆಂದು ತಿಳಿಸುತ್ತದೆ. ಇದರಲ್ಲಿ ರಥದಳವನ್ನು ಪ್ರಸ್ತಾಪಿಸಿಲ್ಲ. ವಿವಿಧ ಆಕರಗಳ ಹಿನ್ನೆಲೆಯಲ್ಲಿ ಕೆಲವು ವಿದ್ವಾಂಸರು ರಥದಳವು ಗುಪ್ತರ ಆಳ್ವಿಕೆಯ ಹೊತ್ತಿಗೆ ಕಣ್ಮರೆಯಾಯಿತೆಂದೂ ಅಭಿಪ್ರಾಯಪಟ್ಟಿದ್ದಾರೆ.[೧೯]

ಪ್ರಾಚೀನ ಭಾರತದಂತೆ, ಕರ್ನಾಟಕದಲ್ಲಿ ಕದಂಬರ ಕಾಲದಿಂದಲೂ ಸೈನ್ಯವನ್ನು ಕಟ್ಟಿ ಆಳ್ವಿಕೆ ನಡೆಸಿದ್ದುದು ತಿಳಿದುಬರುತ್ತದೆ. ಕದಂಬ ಸಾಮ್ರಾಜ್ಯ ಸ್ಥಾಪಕ ಮಯೂರವರ್ಮನು ಪಲ್ಲವರಿಂದ ಅವಮಾನಿತನಾಗಿ, ಅವರ ವಿರುದ್ಧ ಸೈನ್ಯವನ್ನು ಕಟ್ಟಿ ರಾಜ್ಯವಾಳಿದುದು ಚಾರಿತ್ರಿಕ ಸಂಗತಿ. ಚಂದ್ರವಳ್ಳಿಯ ಶಾಸನವು ಮಯೂರ ವರ್ಮನು ತ್ರೈಕೂಟಕ, ಅಭೀರ, ಪಲ್ಲವ, ಪಾರಿಯಾತ್ರಕ, ಪುನ್ನಾಟ ಮೊದಲಾದವರ ಮೇಲೆ ಜಯ ಸಾಧಿಸಿದ್ದನು ಹೇಳಿದೆ. ಅಂತೆಯೇ ಮೃಗೇಶವರ್ಮ ಮತ್ತು ರವಿವರ್ಮರ ಕಾಲದಲ್ಲಿ ವ್ಯವಸ್ಥಿತವಾದ ಸೈನ್ಯವಿದ್ದು, ಪಲ್ಲವರ ವಿರುದ್ಧ ಯುದ್ಧಮಾಡಿ ಜಯ ಸಾಧಿಸಿದುದು ಬನವಾಸಿ ಮತ್ತು ಗುಡ್ನಾಪುರ ಶಾಸನಗಳಿಂದ ದೃಢಪಡುತ್ತದೆ.

ಪ್ರಾಚೀನ ಕರ್ನಾಟಕದ ಪ್ರಸಿದ್ಧ ಅರಸುಮನೆತನಗಳಲ್ಲಿ ಬಾದಾಮಿ ಚಾಲುಕ್ಯರು ಪ್ರಮುಖ ಸ್ಥಾನ ಪಡೆದಿದ್ದಾರೆ. ಈ ಮನೆತನದ ಅರಸರು ದಕ್ಷಿಣ ಭಾರತದಾದ್ಯಂತ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರು. ಇಮ್ಮಡಿ ಪುಲಕೇಶಿಯು ಉತ್ತರದ ಹರ್ಷವರ್ಧನನನ್ನು ಸೋಲಿಸಿ 'ದಕ್ಷಿಣ ಪಥೇಶ್ವರ'ನೆಂಬ ಬಿರುದನ್ನು ಧರಿಸಿದ್ದನು. ಅಲ್ಲದೆ ಪುಲಕೇಶಿ ಮತ್ತು ಮಂಗಳೇಶ ದಿಗ್ವಿಜಯ, ಸಾಧನೆಗಳು ಅಪ್ರತಿಮವಾದವುಗಳೆಂಬುದು ಐಹೊಳೆ ಶಾಸನದಿಂದ ತಿಳಿದುಬರುತ್ತದೆ.[೨೦] ಇವರು ಪ್ರಬಲ ಸೈನ್ಯವನ್ನು ಕಟ್ಟಿದ್ದುದು ಅವರ ಸಾಮ್ರಾಜ್ಯ ವಿಸ್ತರಣೆಯಿಂದ ತಿಳಿದುಬರುತ್ತದೆ. ಇವರು ನೌಕಾಪಡೆಯನ್ನು ಹೊಂದಿದ್ದು, ರೇವತಿ ಮತ್ತು ಪುರಿ ದ್ವೀಪಗಳ ಮೇಲೆ ಯುದ್ಧ ಕೈಗೊಂಡಿದ್ದುದಾಗಿ ಶಾಸನಗಳಲ್ಲಿ

ಹೇಳಲಾಗಿದೆ.[೩೧] ಹೂಯೆನ್ ತ್ಸಾಂಗನು ಪುಲಕೇಶಿಯ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ್ದು, ಅಲ್ಲಿನ ಕರ್ನಾಟಕದ ಯೋಧರನ್ನು ಕುರಿತು ಹೀಗೆ ಹೇಳುತ್ತಾನೆ : "ಇಲ್ಲಿಯ ನಿವಾಸಿಗಳು ಕೆಚ್ಚೆದೆಯವರು ಹಾಗೂ ಯುದ್ಧಪ್ರಿಯರು; ಉಪಕಾರ ಮಾಡಿದವರನ್ನು ಸ್ಮರಿಸುತ್ತಾರೆ; ದೀನರಲ್ಲಿ ಕರುಣೆಯುಳ್ಳವರಾಗಿರುತ್ತಾರೆ; ತಮಗೆ ಅವಮಾನವಾದರೆ, ಸಾವಿಗೂ ಹೆದರದೆ ಹೋರಾಡುತ್ತಾರೆ... ..ಶರಣಾಗತರಾದವರನ್ನು ಕೊಲ್ಲುವುದಿಲ್ಲ".[೩೨] ಹೂಯನ್ ತ್ಸಾಂಗ್‌ನ ಈ ಮಾತು ಪ್ರಾಚೀನ ಯುದ್ಧನೀತಿಗಳ ಲ್ಲೊಂದಾದ ಯುದ್ಧಸ್ಥಿತಿಯಲ್ಲಿ ಇಲ್ಲದ ಯಾವುದೇ ವ್ಯಕ್ತಿಯನ್ನು ಕೊಲ್ಲಬಾರದೆಂಬುದರ ಸಮರ್ಥನೆಯಾಗಿದೆ. ಚಾಲುಕ್ಯರು ಯುದ್ಧದಲ್ಲಿ ಆನೆಗಳನ್ನು ಹೊಂದಿದ್ದುದಾಗಿ ಹೇಳುವ ಹೂಯನ್ ತ್ಸಾಂಗ್ ಪುಲಕೇಶಿಯ ಕಲಿತನವನ್ನೂ ವರ್ಣಿಸಿದ್ದಾನೆ.[೩೩] ಚಾಲುಕ್ಯರು ಸೈನ್ಯವನ್ನು ವ್ಯವಸ್ಥೆಗೊಳಿಸಿರುವಂತೆ ಕೋಟೆಗಳನ್ನು ಕಟ್ಟುವ ಪದ್ಧತಿಯನ್ನೂ ರೂಢಿಸಿಕೊಂಡಿದ್ದರು. ಒಂದನೆಯ ಪುಲಕೇಶಿಯು ಬಾದಾಮಿಯಲ್ಲಿ ಕೋಟೆ ನಿರ್ಮಾಣ ಮಾಡಿದ್ದುದನ್ನು ಅಲ್ಲಿನ ಕೋಡುಗಲ್ಲು ಶಾಸನವು ಪ್ರಕಟಪಡಿಸುತ್ತದೆ. ಚಿದಾನಂದಮೂರ್ತಿಯವರು ಈ ಕೋಟೆಯನ್ನು ಕರ್ನಾಟಕದ ಪ್ರಾಚೀನ ಕೋಟೆಯೆಂದು ಗುರುತಿಸಿದ್ದಾರೆ. ಇದು ಬಾದಾಮಿ ಚಾಲುಕ್ಯರ ಸೈನ್ಯಕ್ಕೆ ಸಂಬಂಧಿಸಿದುದಾದರೆ, ಇವರ ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಕೂಡ ಪರಿಣತಿ ಹೊಂದಿದ ಸೈನ್ಯವನ್ನು ಹೊಂದಿದ್ದುದು ಆಕರಗಳಲ್ಲಿ ಕಾಣಬರುವ ಸಂಗತಿಯಾಗಿದೆ. ರಾಷ್ಟ್ರಕೂಟ ಕಾಲದ ಸಾಹಿತ್ಯ ಗ್ರಂಥವಾದ ಕವಿರಾಜಮಾರ್ಗವು ಅವರ ರಾಜ್ಯವಿಸ್ತಾರವನ್ನು ಕುರಿತಿದೆ. ರಾಷ್ಟ್ರಕೂಟ ರಾಜ್ಯವು ದಕ್ಷಿಣದಲ್ಲಿ ಕಾವೇರಿ ನದಿಯಿಂದ ಉತ್ತರದಲ್ಲಿ ಗೋದಾವರಿ ನದಿಯವರೆಗೂ ಹಬ್ಬಿದುದಾಗಿ ವರ್ಣಿಸಿದೆ. ಈ ಕಾಲದಲ್ಲಿ ಸೈನ್ಯದ ಮುಖಂಡತ್ವವನ್ನು ರಾಜರೇ ವಹಿಸಿಕೊಳ್ಳುತ್ತಿದ್ದರು. ಅರಸರ ಅಧೀನದಲ್ಲಿ ಸೇನಾಧಿಪತಿಗಳು ಮತ್ತು ಸಾಮಂತರಿದ್ದು, ಅವರು ತಮ್ಮದೇ ಆದ ವಸ್ತ್ರ ಹಾಗೂ ಧ್ವಜಗಳನ್ನು ಧರಿಸಿದ್ದುದು ತಿಳಿದುಬರುತ್ತದೆ.[೩೪] ಕರ್ನಾಟಕದಲ್ಲಿ ಈ ಹಿಂದೆ ಅಶ್ವದಳ ಅಸ್ತಿತ್ವದಲ್ಲಿದ್ದರೂ ಅದರ ದಕ್ಷತೆಯನ್ನು ಹೆಚ್ಚಿಸಲು ಪ್ರಾರಂಭಿಸಿದುದು ರಾಷ್ಟ್ರಕೂಟ ಕಾಲದಲ್ಲಿ ಎಂದು ಹೇಳಬಹುದು. ಇವರು ಕುದುರೆಗಳನ್ನು ಅರೇಬಿಯಾದಿಂದ ಯುದ್ಧಕ್ಕೆಂದೇ ಆಮದು ಮಾಡಿಕೊಳ್ಳುತ್ತಿದ್ದರು. ಈ ಮನೆತನದ ಅರಸ ೩ನೆಯ ಗೋವಿಂದನು ಉತ್ತಮ ಅಶ್ವಾರೋಹಿದ್ದನೆಂದು ಹೇಳಲಾಗಿದೆ.[೩೫] ಈ ಕಾಲದ ಸೈನ್ಯವನ್ನು 'ಕವಿರಾಜಮಾರ್ಗ'ದ ಹಲವು ಭಾಗಗಳಲ್ಲಿ ವರ್ಣಿಸಿರುವುದನ್ನು ಕಾಣಬಹುದು. ಅದರಲ್ಲಿ ಯುದ್ಧಕ್ಕೆ ಸಿದ್ಧಗೊಂಡ ಸೇನೆಯನ್ನು,

"ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದ ವೃಂದದ ವೋಲಿರೆ ಹಸ್ತಿಗಳ್
ಗಳಿತ ಧಾರೆಗಳಂತಿರೆ ಪತ್ತಿಗಳ್
ಬಳಸಿ ಕಾರ್ಗಣೆಯಾಯ್ತು ಮಾಹಾಹವಂ"ಎಂದಿದೆ.[೩೬]

ಯುದ್ಧದಲ್ಲಿ ಉಪಯೋಗಿಸಿದ್ದ ಧ್ವಜ, ಆನೆ, ಕುದುರೆ, ಕಾಲಾಳುಗಳ ಈ ವರ್ಣನೆಯು ಅಂದಿನ ಸೇನಾ ವಿಭಾಗಗಳನ್ನು ಗುರುತಿಸುವಲ್ಲಿ ನೆರವಾಗಿದೆ.

ರಾಷ್ಟ್ರಕೂಟರ ಬಳಿಕ ಬಂದ ಕಲ್ಯಾಣ ಚಾಲುಕ್ಯರ ಸೈನ್ಯವನ್ನು ಕುರಿತು ಮೂರನೆಯ ಸೋಮೇಶ್ವರನ 'ಮಾನಸೋಲ್ಲಾಸ' ಕೃತಿಯು ಸಾಕಷ್ಟು ಮಾಹಿತಿಗಳನ್ನು ಒದಗಿಸುತ್ತದೆ. ಇದು ಅಂದಿನ ಸೈನ್ಯವ್ಯವಸ್ಥೆಯ ಕ್ರಮಗಳು, ವಿಭಾಗಗಳು, ಕೋಟೆ ಮತ್ತು ಅದರ ಭಾಗಗಳು- ಹೀಗೆ ಹಲವು ಅಂಶಗಳನ್ನು ಒಳಗೊಂಡಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆರು ವಿಧದ ಸೈನ್ಯಗಳಿದ್ದುದನ್ನು ಈ ಕೃತಿಯಲ್ಲಿ ಹೇಳಿದೆ. ಅವುಗಳನ್ನು ಮೂಲಬಲ, ಭೃತ್ಯಬಲ, ಶ್ರೇಣಿಬಲ, ಮಿತ್ರಬಲ, ಅಮಿತ್ರಬಲ ಮತ್ತು ಅಟವಿಕ ಬಲಗಳೆಂಬುದಾಗಿ ಕರೆದಿದೆ.[೨೭] ಇದರಿಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೂಲಬಲವು ರಾಜನ ನೇರ ಅಧೀನಕ್ಕೆ ಒಳಪಟ್ಟಿದ್ದ ಸೈನ್ಯವಾದರೆ, ಉಳಿದ ಐದು ಬಲಗಳು ಯುದ್ಧ ಸಮಯದಲ್ಲಿ ಅರಸನ ಆಜ್ಞೆಯ ಮೇರೆಗೆ ಸಿದ್ಧಗೊಳ್ಳುತ್ತಿದ್ದವು.

ವಿಜಯನಗರ ಪೂರ್ವದಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳರು ಮತ್ತು ಸೇವುಣರು ಉತ್ತಮ ಸೇನಾ ಪಡೆಗಳನ್ನು ಹೊಂದಿದ್ದುದು ಶಾಸನಗಳಿಂದ ವ್ಯಕ್ತಗೊಳ್ಳುತ್ತದೆ. ಇವೆರಡು ಮನೆತನಗಳ ನಡುವೆ ಆಗಾಗ್ಗೆ ಕದನಗಳು ಜರುಗುತ್ತಿದ್ದವು. ಈ ಅವಧಿಯ ಸೈನ್ಯಾಡಳಿತದಲ್ಲಿ ಬಳಕೆಯಿದ್ದ ಸಂಗತಿಯೆಂದರೆ, ಆಡಳಿತದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಅಧಿಕಾರಿಯೂ ಯುದ್ಧ ಕುಶಲತೆಯನ್ನು ಕಡ್ಡಾಯವಾಗಿ ಹೊಂದಿರಬೇಕೆಂಬುದು. ಈ ಕಾಲದ ಆಡಳಿತದಲ್ಲಿ ಅರಸನಲ್ಲದೆ ಮಹಾದಂಡನಾಯಕ, ಮಹಾಪ್ರಧಾನ, ಸಂಧಿವಿಗ್ರಹಿಗಳ ಪಾತ್ರ ಮುಖ್ಯವಾದುದಾಗಿತ್ತು.

ಹೊಯ್ಸಳರು ಅಶ್ವದಳಕ್ಕೆ ಪ್ರಾಧಾನ್ಯತೆ ನೀಡಿದ್ದರು. ಅರಸರು ಅಶ್ವಾರೋಹಿಗಳನ್ನು ತರಬೇತಿಗೊಳಿಸಲು ಶಿಕ್ಷಕರನ್ನು ನೇಮಿಸಿದ್ದು, ಇವರನ್ನು ಅಶ್ವಸಾಹಣಿಗಳೆಂದು ಶಾಸನದಲ್ಲಿ ಕರೆಯಲಾಗಿದೆ.[೨೮] ಸೇವುಣರು ಕೂಡ ಅಶ್ವದಳಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದ್ದರು. ಐದನೆಯ ಭಿಲ್ಲಮನು ಹೊಯ್ಸಳರ ವಿರುದ್ಧ ಕೈಗೊಂಡ ಸೊರಟೂರು ಕದನದಲ್ಲಿ ಹನ್ನೆರಡು ಸಾವಿರ ಅಶ್ವಗಳನ್ನು ಬಳಸಿದ್ದುದಾಗಿ ಶಾಸನದಲ್ಲಿ ಹೇಳಲಾಗಿದೆ.[೨೯] ಅಶ್ವದಳವಲ್ಲದೆ ಎರಡು ಲಕ್ಷ ಕಾಲಾಳುಗಳನ್ನು ಈ ಮೇಲಿನ ಕದನದಲ್ಲಿ ಭಿಲ್ಲಮನು ಬಳಸಿದ್ದುದು ತಿಳಿದುಬರುತ್ತದೆ. ಅಂತೆಯೇ ಸಿಂಘಣನು ಕೂಡ ಕದಂಬರನ್ನು ಸೋಲಿಸಲು ಮೂವತ್ತು ಸಾವಿರ ಕುದುರೆಗಳನ್ನು ಕೊಂಡೊಯ್ದಿದ್ದನೆಂಬುದು ಗೊತ್ತಾಗುತ್ತದೆ.[೩೦] ಇದು ಸೇನಾ ಪಡೆಯ ವಿವರವಾದರೆ, ಅಂದು ಬಳಸಿದ ಶಸ್ತ್ರಾಸ್ತ್ರಗಳನ್ನು ಶಾಸನವೊಂದರಲ್ಲಿ ಕಾಣಬಹುದು. ಅವುಗಳೆಂದರೆ ಶಕ್ತಿ, ಖಡ್ಗ, ತೋಮರ, ಚಾಪ, ಕ್ಷುರಿಕಾ, ಕಂಪಣ, ಭಿಂಡಿವಾಳ, ಕಣಯ ಮತ್ತು ಚಕ್ರಗಳು.[೩೧]

ಹೀಗೆ ವಿಜಯನಗರ ಪೂರ್ವ ಕಾಲದ ಕರ್ನಾಟಕದಲ್ಲಿ ವಿವಿಧ ಅರಸು ಮನೆತನಗಳು ಸೈನ್ಯವನ್ನು ವ್ಯವಸ್ಥಿತವಾಗಿ ರೂಪುಗೊಳಿಸಿ ಆಳ್ವಿಕೆ ನಡೆಸಿರುವುದನ್ನು ಕಾಣಬಹುದು. ವಿಜಯನಗರದಲ್ಲಿ ಪ್ರಾಚೀನ ಕರ್ನಾಟಕದ ಸೈನ್ಯ ಆಡಳಿತ ಮತ್ತು ಯುದ್ಧದ ಕ್ರಮಗಳನ್ನು ಅಳವಡಿಸಿಕೊಂಡಿದ್ದರೂ, ಕೆಲವು ನೂತನ ಬೆಳವಣಿಗೆಯನ್ನು ಈ ಕಾಲದಲ್ಲಿ ಕಾಣಬಹುದು. ಪ್ರಾಚೀನ ಕರ್ನಾಟಕದಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿದ್ದ ಕತ್ತಿ-ಗುರಾಣಿ, ಬಿಲ್ಲು-ಬಾಣ,

ಈಟಿ, ಕಠಾರಿಗಳಂತಹ ಆಯುಧಗಳನ್ನು ಬಳಸಿದ್ದರು. ೧೪ನೆಯ ಶತಮಾನದವರೆಗೂ ಈ ಮೇಲಿನ ಶಸ್ತ್ರಾಸ್ತ್ರಗಳು ಬಳಕೆಯಲ್ಲಿದ್ದವು. ಅಂದಿನ ಯುದ್ಧಗಳೂ ಹಿಂದಿನಿಂದ ಬಂದಂತಹ ಮುಖಾಮುಖಿಯಾಗಿ ನಿಂತು ಹೋರಾಡುವ ಕಾಳಗಗಳೇ ಆಗಿದ್ದವು. ಆದರೆ ವಿಜಯನಗರವು ಕಂಡುಕೊಂಡ ಸಿಡಿಮದ್ದಿನ ಉಪಕರಣಗಳು ಪರಿಣಾಮಕಾರಿ ಬದಲಾವಣೆಗಳನ್ನು ಉಂಟು ಮಾಡಿವೆ.

ಟಿಪ್ಪಣಿಗಳು

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಂ.ಚಿದಾನಂದಮೂರ್ತಿ ಪು.೨೪೬

೨. War in Ancient India, P. 212; Social and Political life in the Vijaynagar Empire, P.420

೩. Amuktamalyada-canto IV, V, 262; ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ ಪು. ೧೨೧

೪. Mahabharatha, I, Sec 42, P.86; Quoted : ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು, ಪು. ೩೩೯

೫. ಇತಿಹಾಸದ ಪಾಠಗಳು, ಪು.೯೬

೬. ಕರ್ನಾಟಕದ ವೀರಗಲ್ಲುಗಳು, ಆರ್.ಶೇಷಾಶಾಸ್ತ್ರಿ, ಪು.೨೬

೭. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಲೇಖನ: ರಂಗಾರೆಡ್ಡಿ ಕೋಡಿರಾಂಪುರ, ಪು.೬೨

೮. ಕರ್ನಾಟಕ ಚರಿತ್ರೆ, ಸಂ-೪

೯. ಇತಿಹಾಸದ ಪಾಠಗಳು, ಪು.೯೫

೧೦. ವಿಜಯನಗರದ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೧೦೨

೧೧. ಕರ್ನಾಟಕದ ವೀರಗಲ್ಲುಗಳು, ಪು. ೧೬೨

೧೨. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಲೇ.ರಂಗಾರೆಡ್ಡಿ ಕೋಡಿರಾಂಪುರ, ಪು.೬೧

೧೩. War in Ancient India, V.R.R.Dikshitar, P.8

೧೪. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಲೇ.ರಂಗರೆಡ್ಡಿ ಕೋಡಿರಾಂಪುರ, ಪು.೬೪

೧೫. Military History of India, H.C.Kar P.12 ; ಲೋಥಲ್ ಮತ್ತು ಸಿಂಧೂ ನಾಗರಿಕತೆ, ಪು.೯-೨೬

೧೬. ಅದೇ

೧೭. War in Ancient India, V.R.R.Dikshitar, P.190

೧೮. ಅದೇ

೧೯. Indian Cavalry, Vol-I, P. 50

೨೦. Indian Antiquary, Vol-IX, P.125

೨೧. EC., XXVII, P.9; EI., Vol-VI, P.10

೨೨. ಪ್ರ.ಕಂ.ಇಂ., ಸಂ-೧, ಹೂಯೆನ್ ತ್ಸಾಂಗ್, ಪು.೨೫೨-೨೫೩

೨೩. ಅದೇ

೨೪. EI., Vol-XIII, P.334

೨೫. ಅದೇ, ಪು.೩೪೦

೨೬. ಕವಿರಾಜಮಾರ್ಗ, ಪು.೧೪೪

೨೭. ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು, ಪು.೭೧

೨೮. EC., Vol-V, H-36

೨೯. EC., Vol-XI, Dg.25

೩೦. EC., Vol-VIII, Sb.319

೩೧. ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು, ಪು.೩೭೪

ಅಧ್ಯಾಯ ೩

ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ

೩.೧ ಪ್ರಾಕೃತಿಕ ಪರಿಸರ

ಪ್ರಾಕೃತಿಕ ಮತ್ತು ಯುದ್ಧತಂತ್ರಗಳಿಗೆ ಅನುಗುಣವಾಗಿ ಸೈನ್ಯ ಮತ್ತು ಅದರ ಆಡಳಿತ ಕ್ರಮಗಳು ಪ್ರಾಚೀನ ಕಾಲದಿಂದಲೂ ಬದಲಾವಣೆಗೊಂಡಿರುವುದನ್ನು ಚಾರಿತ್ರಿಕ ಸಂಗತಿಗಳಲ್ಲಿ ಕಾಣಬಹುದು. ಯಾವುದೇ ಒಂದು ರಾಜ್ಯ ಅಥವಾ ಪ್ರದೇಶದ ಚರಿತ್ರೆಯು ಹೆಚ್ಚು ಅವಲಂಬಿತವಾಗಿರುವುದು ಅಲ್ಲಿನ ಭೌಗೋಳಿಕ ಪರಿಸರದ ಮೇಲೆ ಎಂಬುದಂತೂ ಸುಸ್ಪಷ್ಟ. ಸೈನ್ಯವ್ಯವಸ್ಥೆ ಮತ್ತು ಯುದ್ಧಗಳಿಗೆ ಭೂಭಾಗವು ಬಹಳ ಮುಖ್ಯವೆಂಬುದನ್ನು ಹಲವು ವಿದ್ವಾಂಸರು ಒಪ್ಪುತ್ತಾರೆ. ಕ್ಲಾಸ್ ವಿಟ್ಜ್ , "ಭೂಭಾಗದ ಲಕ್ಷಣ, ಮಣ್ಣಿನ ಗುಣ, ನೆಲದ ಸ್ವರೂಪ, ಕಾಡು, ನದಿ, ತಗ್ಗುದಿನ್ನೆ, ಅಂಕುಡೊಂಕು ಮಾರ್ಗಗಳು ಹಾಗೂ ರಾಜ್ಯಗಳ ನಡುವಿನ ಅಂತರಗಳು ಸೈನಿಕ ಕಾರ್ಯಾಚರಣೆ ಯನ್ನು ನಿರ್ಧರಿಸುವ ಅಂಶಗಳು" ಎಂದಿದ್ದಾರೆ. ಇದಕ್ಕೆ ಪೂರಕವಾಗಿ ಮತ್ತೊಬ್ಬ ವಿದ್ವಾಂಸರಾದ ಜೊಮಿನಿಯು "ಭೂಭಾಗದ ಸ್ವರೂಪ ಮತ್ತು ಅನುಕೂಲಕರ ವಾತಾವರಣವು ರಾಷ್ಟ್ರ ರಕ್ಷಣೆಯ ದೃಷ್ಟಿಯಿಂದ ಮುಖ್ಯವಾಗಿದ್ದು, ಬೆಟ್ಟಗುಡ್ಡ ಅಥವಾ ದಟ್ಟವಾದ ಕಾಡುಗಳಿಂದ ಕೂಡಿದ ಸ್ಥಳವು ರಾಜ್ಯರಚನೆಗೆ ಅತ್ಯಂತ ಉಪಯುಕ್ತವಾದದ್ದು" ಎಂದಿರುವರು. ಒಟ್ಟಿನಲ್ಲಿ ಭೂಭಾಗವು ಸೇನಾ ಪಡೆಗಳಾದ ಕಾಲ್ದಳ, ಅಶ್ವದಳ, ಗಜದಳ ಹಾಗೂ ಫಿರಂಗಿದಳಗಳ ಗಾತ್ರ, ನಿರ್ವಹಣೆ ಹಾಗೂ ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರುವುದಂತೂ ಸ್ಪಷ್ಟ.

ಆದಿ ಕಾಲದಿಂದಲೂ ಮಾನವನು ತನ್ನ ವಾಸಕ್ಕೆ ಆಯ್ದುಕೊಂಡದ್ದು ಬೆಟ್ಟ-ಗುಡ್ಡಗಳನ್ನೆ. ಚಾರಿತ್ರಿಕಯುಗ, ಅದರಲ್ಲೂ ವಿಜಯನಗರ ಕಾಲದಲ್ಲಿ ಪ್ರಾಕೃತಿಕವಾಗಿ ಸುರಕ್ಷಿತವಾದ ಬೆಟ್ಟ-ಗುಡ್ಡ ಹಾಗೂ ನದಿಗಳಿಂದ

ಆವೃತವಾದ ಸ್ಥಳಗಳನ್ನು ಆಯ್ದು, ಕೋಟೆಗಳನ್ನು ಕಟ್ಟಿ ರಾಜ್ಯವಾಳಿರುವುದು ಗಮನಿಸಬೇಕಾದ ಸಂಗತಿ. ಇದೇ ರೀತಿ ಬೆಟ್ಟ-ಗುಡ್ಡಗಳನ್ನಾಧರಿಸಿ ಕಟ್ಟಲಾದ ನೂರಾರು ಕೋಟೆ-ಕೊತ್ತಲಗಳೂ ಕರ್ನಾಟಕದಾದ್ಯಂತ ನಿರ್ಮಾಣಗೊಂಡಿರುವುದನ್ನು ಗಮನಿಸಬಹುದು. ಪ್ರಾಕೃತಿಕ ಅಥವಾ ಸ್ವಾಭಾವಿಕ ಪರಿಸರ ಎಷ್ಟು ಮುಖ್ಯವೆಂಬುದು - ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿರುವ ಕೋಟೆಗಳತ್ತ ಗಮನಹರಿಸಿದರೆ, ವಿಜಯನಗರ ಮತ್ತು ಅನಂತರ ಕಾಲದಲ್ಲಿ ಕಟ್ಟಲಾದ ಕೋಟೆಗಳೇ ಹೆಚ್ಚು ಕಂಡುಬರುತ್ತವೆ. ಅಲ್ಲದೆ ಅವು ಕೇಂದ್ರೀಕೃತವಾಗಿರುವುದು ಹೆಚ್ಚಾಗಿ ಬೆಟ್ಟಗುಡ್ಡಗಳಲ್ಲಿ ಎಂಬುದು ಗಮನಿಸಬೇಕಾದ ಸಂಗತಿ.

ವಿಜಯನಗರ ಸಾಮ್ರಾಜ್ಯ ಜನ್ಮ ತಳೆದುದು ಪ್ರಾಕೃತಿಕವಾಗಿ ನದಿ, ಬೆಟ್ಟ-ಗುಡ್ಡಗಳಿಂದ ಕೂಡಿದ ಹಂಪೆ ಪರಿಸರದಲ್ಲಿ ಎಂಬುದು ತಿಳಿದ ವಿಷಯ. ಚಿದಾನಂದಮೂರ್ತಿಯವರು, ''ಕರ್ನಾಟಕ(ವಿಜಯನಗರ) ಸಾಮ್ರಾಜ್ಯ ಸ್ಥಾಪನೆಗೆ ಹಕ್ಕ-ಬುಕ್ಕರು ಹಂಪೆಯ ಪ್ರದೇಶವನ್ನು ಆರಿಸಿಕೊಳ್ಳಲು, ಅದರ ದುರ್ಗಮ ಗುಣವೊಂದು ಮುಖ್ಯ ಕಾರಣವೆಂಬುದರಲ್ಲಿ ಅನುಮಾನವಿಲ್ಲ. ಬೆಟ್ಟ-ಗುಡ್ಡಗಳು, ಕಾಡು, ತುಂಗಭದ್ರಾನದಿ- ಇವು ಆ ಪ್ರದೇಶಕ್ಕೆ ಒಂದು ಬಗೆಯ ಸಹಜ ಪ್ರಾಕೃತಿಕ ರಕ್ಷಣೆಯನ್ನು ಒದಗಿಸಿದ್ದವು''[೧] ಎಂದಿದ್ದಾರೆ. ವಿಜಯನಗರ ಹಾಗೂ ಅದರ ಕೋಟೆ-ಕೊತ್ತಲಗಳನ್ನು ಕಂಡ ಅಂದಿನ ಸಮಕಾಲೀನ ವಿದೇಶಿ ಪ್ರವಾಸಿಗರು ತಮ್ಮ ವರದಿಗಳಲ್ಲಿ ಮನದಣಿಯೆ ವರ್ಣಿಸಿದ್ದಾರೆ. ಕ್ರಿ.ಶ.೧೪೪೨ರಲ್ಲಿ ಎರಡನೆಯ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕ್‌ನು, ''ವಿಜಯನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳೂ, ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ''[೨] ಎಂದಿದ್ದಾನೆ. ನಿಕೊಲೊ ಕೊಂತಿ ವಿಜಯನಗರದ ವಿಸ್ತಾರ ಮತ್ತು ಕೋಟೆಯನ್ನು ಕುರಿತು, ''ನಗರದ ಸುತ್ತಳತೆ ಅರವತ್ತು ಮೈಲಿ. ಸುತ್ತ ಕಟ್ಟಿರುವ ಕೋಟೆ ಪರ್ವತದಷ್ಟು ಎತ್ತರವಾಗಿದ್ದು, ಅವುಗಳ ಬುಡದಲ್ಲಿರುವ ಕಣಿವೆಗಳನ್ನು ಆಕ್ರಮಿಸಿಕೊಂಡಿದೆ''[೩] ಎನ್ನುವನು. ಕೋಟೆಯ ಬಗೆಗೆ ಪಾಯೇಸ್ ನೀಡುವ ವರ್ಣನೆ ''ಬಿಸ್ನಗರದ ಸುತ್ತ ಎಲ್ಲಾ ಭದ್ರಕೋಟೆಗಳನ್ನು ಆವರಿಸಿರುವ ಕಲ್ಲಿನ ಕೋಟೆ ಇದೆ. ....ಕೋಟೆಯ ಮೇಲೆ ಕೊತ್ತಲಗಳಿವೆ. ಕೋಟೆಯ ಸುತ್ತ ಕೆಲವು ಕಡೆ ಕಂದಕದಲ್ಲಿ ನೀರು ತುಂಬಿದೆ''[೪] ಯೆಂದು ಕೋಟೆ, ಕೊತ್ತಲ ಹಾಗೂ ಕಂದಕಗಳಿದ್ದುದನ್ನು ಸ್ಪಷ್ಟಪಡಿಸುತ್ತಾನೆ. ಇದು ನಗರ-ಕೋಟೆಗಳ ವರ್ಣನೆಯಾದರೆ, ಬಾರ್ಬೋಸಾ ಪ್ರಾಕೃತಿಕವಾದ ಅಂಶಗಳನ್ನು ನೀಡುತ್ತಾನೆ. ಅವನು ''ವಿಜಯನಗರದಲ್ಲಿ ಅಸಂಖ್ಯಾತ ಜನ ವಾಸಮಾಡುತ್ತಾರೆ. ಒಂದು ಕಡೆ ಬಹಳ ಒಳ್ಳೆಯ ಕೋಟೆಯೂ, ಇನ್ನೊಂದು ಕಡೆ ನದಿಯೂ, ಮತ್ತೊಂದು ಕಡೆ ಪರ್ವತವೂ ಇವೆ'' ಎಂದು ವಿಜಯನಗರದ ನೈಜ ಚಿತ್ರಣವನ್ನು ನೀಡುತ್ತಾನೆ. ವಿಜಯನಗರವು ಪ್ರಾಕೃತಿಕವಾಗಿ ನದಿ ಹಾಗೂ ಬೆಟ್ಟ-ಗುಡ್ಡಗಳಿಂದ ಕೂಡಿದ್ದುದು ಅರಸರಿಗೆ ಸುರಕ್ಷಿತ ತಾಣವಾಗಿದ್ದುದರಲ್ಲಿ ಸಂಶಯವಿಲ್ಲ. ಶ್ರಮ, ಸಂಪತ್ತು ಮತ್ತು ಜಾಣ್ಮೆಗಳನ್ನು ಹೊಂದಿದ್ದ ಅರಸರು ತಮ್ಮ

ರಾಜ್ಯವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಲು ಹಾಗೂ ರಾಜ್ಯವನ್ನು ಸಂಘಟಿಸಲು ಕೊನೆಯವರೆಗೂ ಶ್ರಮಿಸಿದರು. ಇದಕ್ಕಾಗಿ ಪ್ರಬಲ ಸೈನ್ಯವನ್ನು ಕಟ್ಟಿ, ನೂತನ ಪರಿಕರಗಳನ್ನು ಬಳಸುವತ್ತ ಮುನ್ನಡೆದರು.

ವಿಜಯನಗರ ಅರಸರು ಹಿಂದಿನ ಅರಸು ಮನೆತನಗಳು ಅನುಸರಿಸಿಕೊಂಡು ಬಂದಿದ್ದ ಸೈನಿಕ ನೀತಿ-ನಿಯಮಗಳನ್ನು ಹೆಚ್ಚಾಗಿ ಅಳವಡಿಸಿಕೊಂಡಿದ್ದುದೇನೋ ನಿಜ. ಆದರೆ ಕೆಲವು ಮಹತ್ವದ ಬದಲಾವಣೆಗಳನ್ನು ಈ ಕಾಲಘಟ್ಟವು ಕಂಡುಕೊಂಡಿತು. ಇದಕ್ಕೆ ವಿದೇಶೀಯರ ಆಗಮನ ಮತ್ತು ಮುಸ್ಲಿಮರ ಯುದ್ಧತಂತ್ರಗಳೂ ಮುಖ್ಯವಾಗಿದ್ದವು. ಸೈನ್ಯದಲ್ಲಿ ಕಾಲಾಳುಗಳ ನಿರ್ವಹಣೆ ಮತ್ತು ತರಬೇತಿ, ಕುದುರೆಗಳ ಅನಿವಾರ್ಯತೆಯ ಜೊತೆಗೆ ಆಡಳಿತದಲ್ಲೂ ಕೆಲವು ಮಾರ್ಪಾಟುಗಳಾದವು. ಅಂತೆಯೇ ಶಸ್ತ್ರಾಸ್ತ್ರಗಳಲ್ಲಿ ಮಹತ್ತರ ಬದಲಾವಣೆಗಳನ್ನು ಕಂಡುಕೊಂಡ ಕಾಲವಿದು. ಪ್ರಾಚೀನ ಕಾಲದ ಯುದ್ಧಗಳಲ್ಲಿ ಅನುಸರಿಸುತ್ತಿದ್ದ ಕ್ರಮ ಹಾಗೂ ತಂತ್ರಗಳು ಅಂದು ಬಳಸುತ್ತಿದ್ದ ಶಸ್ತ್ರಾಸ್ತ್ರಗಳನ್ನು ಅವಲಂಬಿಸಿದ್ದುವು. ಅಂದಿನ ಯುದ್ಧಗಳು ಹೆಚ್ಚಾಗಿ ಮುಖಾಮುಖಿಯಾಗಿ ನಿಂತು ಹೋರಾಡಿದಂಥವು. ಅಲ್ಲಿ ಒಂದು ಸೇನೆಗೆ ಎದುರಾಗಿ ಮತ್ತೊಂದು ಶತ್ರುಪಡೆಯು ನೇರವಾಗಿ ನಿಂತು ಹೋರಾಡುವ ಕ್ರಮವಿತ್ತು. ಇದಕ್ಕೆ ಅವರು ಬಳಸಿದ್ದ ಬಿಲ್ಲು-ಬಾಣ, ಕತ್ತಿ-ಗುರಾಣಿ, ಈಟಿ-ಭರ್ಜಿ ಇನ್ನು ಮುಂತಾದ ಆಯುಧಗಳು ಕಾರಣವಾಗಿವೆ. ಆದರೆ ಮಧ್ಯಯುಗದಲ್ಲಾದ ಹೊಸ ಮಾರ್ಪಾಡೆಂದರೆ ಸಿಡಿಮದ್ದಿನ ಪ್ರಯೋಗ. ಇದು ಸೈನ್ಯ ಹಾಗೂ ಯುದ್ಧವ್ಯವಸ್ಥೆಯ ಗತಿಯನ್ನು ಬದಲಿಸಿತೆಂದೇ ಹೇಳಬೇಕು. ಮುಖಾಮುಖಿ ಯುದ್ಧಕ್ಕೆ ಪ್ರತಿಯಾಗಿ ಕೆಲವಾರು ಫರ್ಲಾಂಗುಗಳಷ್ಟು ದೂರದಿಂದ ಶತ್ರು ಪಡೆಯನ್ನು ಧ್ವಂಸ ಮಾಡುವ ಶಕ್ತಿಯನ್ನು ಸಿಡಿಮದ್ದು ಹೊಂದಿದ್ದಿತು. ಈ ಸಿಡಿಮದ್ದನ್ನು ಫಿರಂಗಿ, ಬಂದೂಕು ಅಥವಾ ಕೋವಿ ಮತ್ತಿತರ ಪರಿಕರಗಳ ಮೂಲಕ ಬಳಸಿದುದರಿಂದ ಸೈನ್ಯವ್ಯವಸ್ಥೆಯಲ್ಲಿ ಅನಿವಾರ್ಯವಾಗಿ ಮಾರ್ಪಾಟು ಮಾಡಿಕೊಳ್ಳಬೇಕಾಯಿತು. ಈ ಹಿನ್ನೆಲೆಯಲ್ಲಿ ಮಧ್ಯಯುಗದ ಅದರಲ್ಲೂ ವಿಜಯನಗರ ಕಾಲದ ಸೈನ್ಯವ್ಯವಸ್ಥೆಯನ್ನು ವಿಭಿನ್ನವಾಗಿ ಅಭ್ಯಸಿಸಬೇಕಾದ ಅಗತ್ಯವಿದೆ.

೩.೨ ಸೇನಾಬಲ ವಿಂಗಡನೆ

ವಿಜಯನಗರ ಸಾಮ್ರಾಜ್ಯದ ಸೈನ್ಯವನ್ನು ಅಭ್ಯಸಿಸುವ ಮುನ್ನ ಅದರ ವಿಭಾಗಗಳನ್ನು ಅರಿಯುವುದು ಮುಖ್ಯ. ಪ್ರಾಚೀನ ಕಾಲದಿಂದಲೂ ಸೇನಾಬಲ ವಿಂಗಡನೆಗೆ ಸಂಬಂಧಿಸಿದ ವಿವರಗಳು ದೊರೆಯುತ್ತವೆ. ವೇದಕಾಲ, ರಾಮಾಯಣ-ಮಹಾಭಾರತ ಮತ್ತು ಚಾರಿತ್ರಿಕ ಯುಗಕ್ಕೆ ಸೇರಿದ ಮೌರ್ಯ ಸಾಮ್ರಾಜ್ಯ ಅವಧಿಗಳಲ್ಲಿ ಚತುರಂಗಬಲವು ಸಾಮಾನ್ಯವಾಗಿ ಬಳಕೆಯಲ್ಲಿದ್ದಿತು. ಕೌಟಲ್ಯನು ತನ್ನ ಗ್ರಂಥ 'ಅರ್ಥಶಾಸ್ತ್ರ'ದಲ್ಲಿ ಚತುರಂಗಬಲದ ಕಾರ್ಯವೈಖರಿಗಳ ಪೂರ್ಣ ವಿವರ ನೀಡುತ್ತಾನೆ. ಜೊತೆಗೆ ಚತುರಂಗಬಲದ ಮುಖಂಡರನ್ನು ಅಶ್ವಾಧ್ಯಕ್ಷ, ಹಸ್ತ್ಯಧ್ಯಕ್ಷ, ರಥಾಧ್ಯಕ್ಷ ಮತ್ತು ಪತ್ತ್ಯಧ್ಯಕ್ಷರೆಂದು ಕರೆದಿದ್ದು, ಅವರ ಕಾರ್ಯ ಚಟುವಟಿಕೆಗಳನ್ನು ವಿಸ್ತೃತವಾಗಿ

ಪ್ರತ್ಯೇಕ ಅಧ್ಯಾಯಗಳ ಮೂಲಕ ವಿವರಿಸಿರುವನು. ಇದು ಕ್ರಿಸ್ತಪೂರ್ವ ಕಾಲದ ಸೇನಾ ವಿಭಾಗವಾದರೆ, ಕ್ರಿಸ್ತಶಕ ಆರಂಭದ ಹೊತ್ತಿಗೆ ಚತುರಂಗಬಲದಲ್ಲೊಂದಾದ ರಥದಳವು ಕಣ್ಮರೆಯಾದುದನ್ನು ಹಲವು ವಿದ್ವಾಂಸರು ಆಕರಗಳ ಮೂಲಕ ದೃಢಪಡಿಸಿರುವರು. ಆದರೆ ಸಾಹಿತ್ಯ ಮತ್ತು ಶಿಲ್ಪ ಪಟ್ಟಿಕೆಗಳು ಮಧ್ಯಯುಗದವರೆಗೂ ರಥದಳ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಈ ಅಂಶಗಳು ವೀರಗಲ್ಲುಗಳಲ್ಲಿ ಕಾಣಬರುವುದಿಲ್ಲ. ಅಲ್ಲಿ ಆನೆ, ಕುದುರೆ, ಕಾಲಾಳುಗಳ ಚಿತ್ರಗಳಿರುವಂತೆ ರಥಗಳಿಲ್ಲ. ಭಾರತದಲ್ಲಿ ಗುಪ್ತರ ಕಾಲದ ಹೊತ್ತಿಗೆ ರಥವು ಕಣ್ಮರೆಯಾಗಿದ್ದು, ಅಶ್ವದಳ, ಗಜದಳ ಮತ್ತು ಕಾಲ್ದಳಗಳು ಅಂದಿನ ಮುಖ್ಯ ಸೇನಾ ವಿಭಾಗಗಳಾಗಿದ್ದವೆಂದು ಹೇಳಲಾಗಿದೆ.[೬] ಚಿದಾನಂದಮೂರ್ತಿಯವರು ಪ್ರಾಚೀನ ಕರ್ನಾಟಕದ ಯುದ್ಧಗಳಲ್ಲಿ ಆನೆ, ಕುದುರೆ, ಪದಾತಿಗಳು ಮಾತ್ರವಿದ್ದು ರಥವು ಕಣ್ಮರೆಯಾದುದನ್ನು ಒಪ್ಪುತ್ತಾರೆ. ಆದರೆ ಶಿಬಿರಗಳಿಗೆ ಸಾಮಗ್ರಿಗಳನ್ನು ಸಾಗಿಸುವ ಬಂಡಿಗಳು ಮಾತ್ರ ಬಳಕೆಯಲ್ಲಿದ್ದುವೆಂದು ದೃಢಪಡಿಸುತ್ತಾರೆ.[೭]

ವಿಜಯನಗರ ಮತ್ತು ಅದರ ಪೂರ್ವದಲ್ಲೂ ಸೈನ್ಯದಲ್ಲಿ ಆನೆ, ಕುದುರೆ ಮತ್ತು ಕಾಲಾಳುಗಳಿದ್ದುದನ್ನು ವಿದೇಶಿ ಪ್ರವಾಸಿಗಳು ತಮ್ಮ ವರದಿಗಳಲ್ಲಿ ದಾಖಲಿಸಿದ್ದಾರೆ. ಶಾಸನಗಳು ಕೂಡ ಈ ಮೇಲಿನ ಮೂರು ವಿಭಾಗಗಳನ್ನೆ ಹೇಳುತ್ತವೆ.[೮] ಈ ಮೇಲಿನ ವಿಭಾಗಗಳನ್ನು ವಿಜಯನಗರದ ಆರಂಭದಲ್ಲೂ ಕಾಣಬಹುದು. ಕ್ರಿ.ಶ.೧೪೧೯ರಲ್ಲಿ ವಿಜಯನಗರ ಸೇನೆ ಬಹಮನಿ ಸುಲ್ತಾನನ ಮೇಲೆ ದಂಡೆತ್ತಿ ಹೋದಾಗ ಮೂರು ಭಾಗಗಳಿದ್ದುದಾಗಿ ಸಿವೆಲ್ ಹೇಳುತ್ತಾನೆ.[೯] ರಾಮನಾಥ ಚರಿತದ ಹಲವು ಭಾಗಗಳಲ್ಲಿ, "ಆಳಾಳೊಳು, ಕುದುರೆ ಕುದುರೆಯೊಳು, ದಂತಿ ದಂತಿಯೊಳು ಮೆಯ್ವರ್ಚಿ.... ರಣದೊಳು.... ತಳ್ತಿಗಿದಾಡಿದರು" ಎಂದಿರುವುದು ವಿಜಯನಗರದ ಆರಂಭಿಕ ಸೇನಾ ವಿಭಾಗಗಳಿಗೆ ಸಮರ್ಥನೆ ಒದಗಿಸುತ್ತವೆ. ಆದರೆ ೧೫-೧೬ನೇ ಶತಮಾನಗಳಲ್ಲಿ ಭಾರತಕ್ಕೆ ಬಂದಿದ್ದ ಪ್ರವಾಸಿಗಳಾದ ರಜಾಕ್, ಪಾಯೆಸ್, ಬಾರ್ಬೋಸಾ ಮತ್ತು ನ್ಯೂನಿಜ್‌ರು ರಥದ ಸ್ಥಾನದಲ್ಲಿ ಮತ್ತೊಂದು ಪಡೆಯು ಸೇರ್ಪಡೆಯಾದುದನ್ನು ನಮೂದಿಸುತ್ತಾರೆ. ಅದೆಂದರೆ ಫಿರಂಗಿದಳ. ಫಿರಂಗಿ ಪಡೆಯ ಸೇರ್ಪಡೆಯಿಂದ ಪುನಃ ಪ್ರಾಚೀನ ಕಾಲದಲ್ಲಿ ಬಳಕೆಯಿದ್ದ ಚತುರಂಗಬಲವು ಮುಂದುವರಿದುದಾಗಿ ಹೇಳಬಹುದು. ಈ ಕುರಿತು ಬಿ.ಎ.ಸಾಲೆತೊರೆ, ಟಿ.ವಿ.ಮಹಾಲಿಂಗಂ ಮತ್ತು ಕೆ.ಶ್ರೀಕಂಠಯ್ಯನವರು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಬಿ.ಎ.ಸಾಲೆತೊರೆಯವರು ವಿಜಯನಗರ ಕಾಲದಲ್ಲಿ ಆರು ಸೈನಿಕ ವಿಭಾಗಗಳಿದ್ದವೆಂದು ಹೇಳುತ್ತಾರೆ. ಅವರ ಈ ಹೇಳಿಕೆಗೆ ಆಕರಗಳು ರಾಮರಾಜನ ಬಖೈರು ಮತ್ತು ನೆಲ್ಲೂರಿನ ಶಾಸನಗಳಾಗಿವೆ. ಇವುಗಳನ್ನಾಧರಿಸಿ ಕಾಲ್ದಳ, ಅಶ್ವದಳ, ಗಜದಳ, ರಥ ಅಥವಾ ಬಂಡಿಗಳಿಂದ ಕೂಡಿದ ಯುದ್ಧಾಸ್ತ್ರಗಳು, ಒಂಟೆ ಮತ್ತು ಎತ್ತುಗಳೆಂಬುದಾಗಿ ಹೇಳುತ್ತಾರೆ. ಇವರ ಹೇಳಿಕೆಗೆ ಮಹಾಲಿಂಗಂ ಅವರು ಪ್ರತಿಕ್ರಿಯಿಸುತ್ತಾ, ಈ ಮೇಲಿನ ಆಕರಗಳು ಹೇಳಿರುವುದು ಆರು ವಿಧದ ಸೈನ್ಯವನ್ನೇ ಹೊರತು ಆರು ವಿಭಾಗಗಳನ್ನಲ್ಲ ಎಂದಿದ್ದಾರೆ. ರಾಮರಾಜನ ಬಖೈರು ರಕ್ಕಸಗಿ-

ತಂಗಡಗಿ ಯುದ್ಧದಲ್ಲಿ ನೆರೆದಿದ್ದ ಅಗಾಧವಾದ ಸೈನ್ಯದಲ್ಲಿ ಕುದುರೆ, ಒಂಟೆ, ಆನೆ, ಯುದ್ಧಾಸ್ತ್ರಗಳು, ಎತ್ತು ಮತ್ತು ಪದಾತಿಗಳು ವಿಶೇಷ ಸಂಖ್ಯೆಯಲ್ಲಿದ್ದವೆಂದು ಹೇಳುತ್ತದೆ. ನ್ಯೂನಿಜ್‌ನ ಹೇಳಿಕೆಯನ್ನು ಇದಕ್ಕೆ ಪೂರಕವಾಗಿ ಗಮನಿಸಬಹುದೆಂದೂ ಅಭಿಪ್ರಾಯಪಡುತ್ತಾರೆ. ನ್ಯೂನಿಜ್ ರಾಯಚೂರಿನ ದಂಡಯಾತ್ರೆಯಲ್ಲಿ "ಅನೇಕ ಹೇಸರಗತ್ತೆಗಳು, ಕತ್ತೆಗಳು, ಗೂಳಿಗಳು, ಗುಡಾರ ಮತ್ತು ಇತರ ಸಾಮಾನುಗಳನ್ನು ಹೊತ್ತು ಸಾಗುತ್ತಿದ್ದವು" ಎಂದಿದ್ದಾನೆ. ಇದರಿಂದ ಒಂಟೆ, ಎತ್ತು, ಕತ್ತೆಗಳು-ಮೂಲ ಸೈನ್ಯಕ್ಕೆ ಪೋಷಕವಾದ ಸಹಾಯಕ ಸೈನ್ಯವಾಗಿತ್ತೆಂಬುದಾಗಿ ಮಹಾಲಿಂಗಂ ಒತ್ತಿ ಹೇಳುತ್ತಾರೆ. ಅವರು ಮುಂದುವರೆದು, ನೆಲ್ಲೂರಿನ ಶಾಸನವನ್ನು ಉಲ್ಲೇಖಿಸಿ ವಿಜಯನಗರ ಸೇನೆಯು ಕಾಲ್ದಳ, ಅಶ್ವದಳ ಮತ್ತು ಗಜದಳಗಳಿಂದ ಕೂಡಿದ್ದುದೇನೋ ನಿಜ. ಆದರೆ ಫಿರಂಗಿದಳವು ಸೇನೆಯ ಒಂದು ಭಾಗವಾಗಿ ವಿಜಯನಗರ ಅವಧಿಯಲ್ಲಿ ಕಾಣಿಸಿಕೊಂಡಿರುವುದರಿಂದ ಮತ್ತೆ ನಾಲ್ಕು ಭಾಗಗಳಾಗಿ ಸೈನ್ಯವು ಮಾರ್ಪಾಟಾಯಿತೆಂದೂ ಹೇಳಿದ್ದಾರೆ.[೧೦] ಕೆ. ಶ್ರೀಕಂಠಯ್ಯನವರು ಈ ಬಗೆಗೆ ಸವಿಸ್ತಾರ ಚರ್ಚೆಯನ್ನು ಕೈಗೊಂಡಿದ್ದು, ರಥದಳವು ಕಣ್ಮರೆಯಾದುದನ್ನು ಆಕರಗಳ ಮೂಲಕ ದೃಢಪಡಿಸಿರುವರು.

ಈ ಮೇಲಿನ ಎಲ್ಲ ಅಭಿಪ್ರಾಯಗಳಿಂದ ಪ್ರಾಚೀನ ಕಾಲದಲ್ಲಿ ಬಳಕೆಯಿದ್ದ ಚತುರಂಗ ಬಲದ ಒಂದು ಭಾಗ ಕಣ್ಮರೆಯಾಗಿದ್ದುದೇನೋ ನಿಜ. ಆದರೆ ಅದೇ ಬಗೆಯ ಬಂಡಿಗಳನ್ನು ಒಳಗೊಂಡ ಫಿರಂಗಿಪಡೆಯು ಅಸ್ತಿತ್ವಕ್ಕೆ ಬಂದುದರಿಂದ ಪುನಃ ಚತುರಂಗಬಲವು ಊರ್ಜಿತಗೊಂಡಿತೆನ್ನಬಹುದು. ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನ ದೃಷ್ಟಿಯಿಂದ ವಿಜಯನಗರದ ಸೇನೆಯನ್ನು ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳಗಳೆಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದು, ಉಳಿದ ಪೋಷಕ ಅಥವಾ ಸಹಾಯಕ ಸೈನ್ಯಕ್ಕೆ ಸೇರಿದ ಒಂಟೆ ಮತ್ತು ಎತ್ತುಗಳನ್ನು ಕುರಿತು 'ಇತರೆ' ಎಂಬ ಭಾಗದಲ್ಲಿ ಅಭ್ಯಸಿಸಲಾಗಿದೆ.

೩.೩ ಸೇನಾಬಲ

ವಿಜಯನಗರವು ಬೃಹತ್ ಪ್ರಮಾಣದ ಸೇನೆಯನ್ನು ಹೊಂದಿದ್ದಿತು. ಈ ಕುರಿತು ವಿಪುಲ ಮಾಹಿತಿಯನ್ನು ವಿದೇಶಿ ಪ್ರವಾಸಿಗರ ವರದಿಗಳು ನೀಡುತ್ತವೆ. ಅಲ್ಲದೆ ಇವುಗಳಿಗೆ ಪೂರಕವಾಗಿ ಶಾಸನ, ಸಾಹಿತ್ಯ ಮತ್ತಿತರ ಆಕರಗಳು ನೆರವಾಗಿವೆ.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅಪಾರ ಸೇನೆಯನ್ನು ಅರಸು ಮನೆತನಗಳು ಹೊಂದಿದ್ದವು. ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಭಾರತದ ಮೇಲೆ ದಂಡೆತ್ತಿ ಬಂದ ಗ್ರೀಕ್ ಚಕ್ರವರ್ತಿ ಅಲೆಗ್ಸಾಂಡರನ ಕಾಲದಲ್ಲಿ ಮಗಧ ರಾಜ್ಯದ ಸೈನ್ಯವು ಆರು ಲಕ್ಷ ಕಾಲಾಳು, ಮೂವತ್ತು ಸಾವಿರ ಅಶ್ವದಳ, ಒಂಬತ್ತು ಸಾವಿರ ಗಜಗಳಿಂದ ಕೂಡಿತ್ತೆಂದು ಹೇಳಲಾಗಿದೆ.[೧೧] ಪ್ಲೀನಿ ಮತ್ತು ಪ್ಲೂಟಾರ್ಕ್‌ರು ಮೌರ್ಯವಂಶದ ಸ್ಥಾಪಕ ಚಂದ್ರಗುಪ್ತನ

ಸೈನ್ಯದಲ್ಲಿ ೯,೦೦೦ ಆನೆಗಳು, ೩೦,೦೦೦ ಕುದುರೆಗಳು ಮತ್ತು ೬೦,೦೦೦, ಸೈನಿಕರು ಹಾಗೂ ರಥಗಳಿದ್ದವೆಂದು ಹೇಳುತ್ತಾರೆ.[೧೨] ಕ್ರಿ.ಶ.೭ನೆಯ ಶತಮಾನದಲ್ಲಿ 'ಉತ್ತರ ಪಥೇಶ್ವರ'ನೆನಿಸಿದ್ದ ಹರ್ಷವರ್ಧನನು ಗಜದಳ, ೧,೦೦,೦೦೦ ಅಶ್ವದಳ ಹೊಂದಿದ್ದನೆಂದು ಹೂಯನ್ ತ್ಸಾಂಗ್ ಹೇಳಿದ್ದಾನೆ.[೧೩] ಹಾಗೆಯೇ ಕ್ರಿ.ಶ.೧೩ನೆಯ ಶತಮಾನದಲ್ಲಿ ಆಳ್ವಿಕೆ ನಡೆಸಿದ ಅಲ್ಲಾವುದ್ದೀನ್ ಖಿಲ್ಜಿಯು ೪,೭೫,೦೦೦ ಸೇನೆಯನ್ನು ಮತ್ತು ಫಿರೋಜ್-ಷಹ -ತುಘಲಕ್‌ನು ೨,೦೦,೦೦೦ ಸೈನಿಕರನ್ನು ಹೊಂದಿದ್ದು, ಅವರಲ್ಲಿ ೮೦,೦೦೦ ಅಶ್ವಾರೋಹಿಗಳಿದ್ದರೆಂದು ತಿಳಿದುಬರುತ್ತದೆ. ಕ್ರಿ.ಪೂ.೪ನೆಯ ಶತಮಾನದಿಂದ ಕ್ರಿ.ಶ.೧೩ನೆಯ ಶತಮಾನದವರೆಗೆ ಇಷ್ಟೊಂದು ಪ್ರಮಾಣದ ಸೇನೆಯಿದ್ದುದನ್ನು ಗಮನಿಸಿದಾಗ ವಿಜಯನಗರ ಕಾಲದ ಬೃಹತ್ ಗಾತ್ರದ ಸೈನ್ಯವನ್ನು ಕುರಿತು ಆಕರಗಳು ನೀಡುವ ಮಾಹಿತಿಗಳಲ್ಲಿ ಉತ್ಪ್ರೇಕ್ಷೆಗಳಿದ್ದರೂ ನಿಜಾಂಶವಿದೆಯೆಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ.

ಸೈನ್ಯವನ್ನು ಸಂಖ್ಯಾ ಪ್ರಮಾಣದಲ್ಲಿ ಗುರುತಿಸುವ ಸಲುವಾಗಿ 'ಘಟಕ', 'ಘಟ್ಟಂ', 'ಅಕ್ಷೌಹಿಣಿ'ಗಳೆಂಬುದಾಗಿ ಕರೆಯುತ್ತಿದ್ದರು. ಇಂತಿಷ್ಟು, ಆನೆ, ಕುದುರೆ, ಕಾಲಾಳುಗಳನ್ನು ಹೊಂದಿದ್ದರೆ, ಅವುಗಳನ್ನು ಘಟಕ, ಘಟ್ಟಂ ಅಥವಾ ಅಕ್ಷೌಹಿಣಿಗಳೆಂದು ಕರೆಯಲಾಗುತ್ತಿತ್ತು.

ಶುಕ್ರನೀತಿಯಲ್ಲಿ "ರಾಜನು ಅಶ್ವದಳದ ನಾಲ್ಕು ಪಟ್ಟು ಕಾಲ್ದಳವನ್ನು ಹೊಂದಿರಬೇಕೆಂದೂ, ಅಶ್ವದಳದ ೧/೫ ಭಾಗ ಎತ್ತುಗಳು, ೧/೮ ಭಾಗ ಒಂಟೆಗಳು, ಒಂಟೆಗಳ ೧/೪ರಷ್ಟು ಆನೆಗಳನ್ನು, ಆನೆಗಳ ೧/೨ರಷ್ಟು ರಥಗಳು ಮತ್ತು ರಥಗಳ ಎರಡು ಪಟ್ಟು ಫಿರಂಗಿಗಳಿರಬೇಕು"[೧೪] ಎಂದಿದ್ದಾನೆ. ಪ್ರಾಚೀನ ಕಾಲದಲ್ಲಿದ್ದ ಅಕ್ಷೌಹಿಣಿಯಲ್ಲಿ ೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು ಮತ್ತು ೧,೦೯,೩೫೦ ಕಾಲಾಳುಗಳಿರಬೇಕೆಂದೂ ಹೇಳಲಾಗಿದೆ. ಇದು ಅನುಪಾತದಲ್ಲಿ ೧:೧:೩:೫ ರಷ್ಟಾಗಿದ್ದಿತು.[೧೫] ಶಿವತತ್ತ್ವರತ್ನಾಕರ ಕೃತಿಯಲ್ಲಿ ಪತ್ತಿ, ಸೇನಾಮುಖ, ಗುಲ್ಮ, ಗಣ, ವಾಹಿನೀ, ಪೃತಣ, ಚಮೂ, ಅನೀಕಿನೀ, ದಶಾನೀಕಿನೀ, ಅಕ್ಷೌಹಿಣೀ ಮತ್ತು ಮಹಾ ಅಕ್ಷೌಹಿಣೀ ಎಂಬುದಾಗಿ ವಿಭಾಗಗಳನ್ನು ಹೆಸರಿಸಿದೆ.[೧೬] ಆದರೆ ರಾಮರಾಜಿಯಮು ಕೃತಿಯು ನೀಡುವ ವಿವರ ಬೇರೆ ರೀತಿಯದು. ಇದರಲ್ಲಿ ಒಂದೊಂದು ಘಟಕವು ಹೊಂದಿರುವ ಸಂಖ್ಯೆ: ೧ ಆನೆ, ೨೦ ಕುದುರೆಗಳು, ೬೦ ಬಿಲ್ಲುಗಾರರು, ೬೦ ಕತ್ತಿವರಸೆಗಾರರು ಮತ್ತು ೬೦ ಈಟಿಗಾರರು ಎಂದಿದೆ.[೧೭] ವಿಜಯನಗರ ಸೈನ್ಯವು ಯುದ್ಧ ಒಂದಕ್ಕೆ ಹೊರಟಾಗ ಇಂತಹ ೩, ೫೦೦ ಘಟಗಳಿದ್ದುದು ಇದೇ ದಾಖಲೆಯಿಂದ ತಿಳಿದುಬರುತ್ತದೆ. ಹೀಗೆ ಘಟಕಗಳಾಗಿ ವಿಭಾಗಿಸಲಾದ ಸೇನೆಗೆ ಒಬ್ಬೊಬ್ಬ ಮುಖಂಡನನ್ನು ನೇಮಿಸಲಾಗುತ್ತಿತ್ತು. ಸೈನ್ಯದ ಒಟ್ಟು ಸಂಖ್ಯೆಯನ್ನು ಹೇಳುವಾಗ ಇಷ್ಟು 'ಘಟ್ಟಂ' ಸೈನವಿದೆಯೆಂದು ವಿಜಯನಗರ ಅರಸರು ತಿಳಿಯುತ್ತಿದ್ದರು.

ವಿಜಯನಗರವು ಬೃಹತ್ ಪ್ರಮಾಣದ ಸೇನೆಯನ್ನು ಹೊಂದಿದ್ದಿತು. ವಿಜಯನಗರ ಆರಂಭ ಕಾಲದ ಸೇನಾ ವಿವರವು ನಮಗೆ ದೊರೆಯುವುದು ಫೆರಿಸ್ತಾನಿಂದ. ಅವನು ಕ್ರಿ.ಶ.೧೩೬೬-೬೮ರಲ್ಲಿ ನಡೆದ ಯುದ್ಧದಲ್ಲಿ

ಪಾಲ್ಗೊಂಡಿದ್ದ ಬಹಮನಿ ಮತ್ತು ವಿಜಯನಗರಗಳ ಸೇನೆಯನ್ನು ಹೇಳುತ್ತಾನೆ. ಅದರಂತೆ ಮಹಮ್ಮದಶಹನ ಸೇನೆಯಲ್ಲಿ ೩೦,೦೦೦ ಅಶ್ವಗಳು, ೨,೦೦೦ ಆನೆಗಳು ಮತ್ತು ೧೦,೦೦,೦೦೦ ಕಾಲಾಳುಗಳಿದ್ದವು. ವೈರಿ ಪಡೆಯಾದ ವಿಜಯನಗರವು ೫೦,೦೦,೦೦೦ ಕಾಲಾಳುಗಳು ಮತ್ತು ೪೦,೦೦೦ ಅಶ್ವಗಳನ್ನು ಹೊಂದಿದ್ದಿತ್ತೆಂದು ಹೇಳುತ್ತಾನೆ.[೧೮] ಫೆರಿಸ್ತಾ ನೀಡುವ ಈ ಮೇಲಿನ ಸೇನಾ ವಿವರ ತುಂಬಾ ಉತ್ಪ್ರೇಕ್ಷೆಯಿಂದ ತುಂಬಿದ್ದರೂ, ಅವನೇ ಹೇಳುವಂತೆ "ಬಹುಮನಿ ಮನೆತನದ ರಾಜರು ಮೇಲ್ಮಟ್ಟದ ಕಲಿತನದಿಂದಲೆ ತಮ್ಮ ಸ್ಥಾನ-ಮಾನಗಳನ್ನು ಉಳಿಸಿಕೊಂಡಿದ್ದರು. ಏಕೆಂದರೆ ಬಲ, ಸಂಪತ್ತು ಹಾಗೂ ಪ್ರದೇಶದ ವ್ಯಾಪ್ತಿಯಲ್ಲಿ ಬೀಜನಗರದ ರಾಯರು ಅವರಿಗಿಂತ ಬಹಳ ಮೇಲಾಗಿದ್ದರು" ಎಂದಿದ್ದಾನೆ[೧೯]. ಇದು ಬಹುಮನಿಯವರಿಗಿಂತ ಅಧಿಕ ಸೇನೆಯನ್ನು ವಿಜಯನಗರವು ಹೊಂದಿತ್ತೆನ್ನುವುದಕ್ಕೆ ಸ್ಪಷ್ಟ ಉದಾಹರಣೆ. ಕ್ರಿ.ಶ.೧೪೨೦ರಲ್ಲಿ ಭೇಟಿ ನೀಡಿದ್ದ ನಿಕೊಲೊ ಕೊಂತಿಯು "ಈ ನಗರ (ವಿಜಯನಗರ)ದಲ್ಲಿ ಶಸ್ತ್ರಾಸ್ತ್ರಗಳಲ್ಲಿ ಪ್ರವೀಣರಾದ ತೊಂಬತ್ತು ಸಾವಿರ ಜನರಿದ್ದಾರೆಂದು ಅಂದಾಜು ಹಾಕಲಾಗಿದೆ"[೨೦] ಎಂದು ಕಾಲ್ದಳದ ವಿವರ ನೀಡುತ್ತಾನೆ. ಪರ್ಶಿಯಾದ ಪ್ರವಾಸಿ ರಜಾಕ್‌ನು ಎರಡನೇ ದೇವರಾಯನ ಕಾಲದ ಸೇನೆಯ ಅಗಾಧತೆಯನ್ನು ವರ್ಣಿಸುತ್ತಾ, ಆಕಾರದಲ್ಲಿ ಪರ್ವತ ಹಾಗೂ ರೂಪದಲ್ಲಿ ದೈತ್ಯನಂತಿರುವ ಸಾವಿರಕ್ಕಿಂತ ಅಧಿಕ ಆನೆಗಳು ಅಲ್ಲಿ ನೋಡಸಿಗುತ್ತವೆ. ಸೈನಿಕರ ಸಂಖ್ಯೆ ಹನ್ನೊಂದು ಲಕ್ಷ ವೆನ್ನುತ್ತಾನೆ.[೨೧] ಕ್ರಿ.ಶ.೧೪೬೮-೭೪ರ ಮಧ್ಯೆ ಗುಲ್ಬರ್ಗಾಕ್ಕೆ ಭೇಟಿ ನೀಡಿದ ನಿಕಿಟಿನ್‌ನು ವಿಜಯನಗರ ಸೇನೆಯು ೩೦೦ ಆನೆಗಳು, ೧,೦೦,೦೦೦ ಕಾಲ್ದಳ ಮತ್ತು ೫೦,೦೦೦ ಕುದುರೆಗಳನ್ನು ಹೊಂದಿತ್ತೆಂದು ಹೇಳಿದ್ದಾನೆ.[೨೨] ಇದು ೧೪-೧೫ನೆಯ ಶತಮಾನದ ಸೇನಾಬಲವಾದರೆ, ಕ್ರಿ.ಶ.೧೫೦೨ರ ವೇಳೆಗೆ ಬಂದಿದ್ದ ವಾರ್ಥೆಮಾ, ವಿಜಯನಗರ ಅರಸನು ತುಂಬಾ ಬಲಿಷ್ಠನಾಗಿದ್ದು, ೪೦,೦೦೦ ಅಶ್ವಾರೋಹಿಗಳನ್ನು, ೪೦೦ ಆನೆಗಳನ್ನು ಹೊಂದಿದ್ದನೆಂದು ಹೇಳಿದ್ದಾನೆ. ಇದು ತುಳುವಂಶದ ಆರಂಭದಲ್ಲಿದ್ದ ಸೈನ್ಯವಾದರೆ, ಕೃಷ್ಣದೇವರಾಯನ ಕಾಲದ ಸೇನೆ ಅಗಾಧ ಪ್ರಮಾಣದ್ದು. ಡೊಮಿಂಗೊ ಪಾಯೇಸ್, " ರಾಜನ ಬಳಿ ಯಾವಾಗಲೂ ಕಾದಾಟಕ್ಕೆ ಸಿದ್ಧವಾದ ಒಟ್ಟು ದಶಲಕ್ಷ ಸೈನ್ಯವಿದೆ. ಇದರಲ್ಲಿ ೩೫,೦೦೦ ಶಸ್ತ್ರಸಜ್ಜಿತ ಅಶ್ವದಳವೂ ಸೇರಿದೆ". ಅವನು ಮುಂದುವರಿದು, "ಸಮುದ್ರದಡದ ಒಂದು ಸ್ಥಳಕ್ಕೆ ಸೈನ್ಯವನ್ನು ಕಳುಹಿಸಿದನು. ಆ ಸೈನ್ಯದಲ್ಲಿ ೫೦ ದಳವಾಯಿಗಳು ಒಂದೂವರೆ ಲಕ್ಷ ಸಿಪಾಯಿಗಳು ಇದ್ದರು. ರಾಜನು ನೆರೆಹೊರೆಯ ಶತ್ರುಗಳಿಗೆ ತನ್ನ ಶಕ್ತಿ ಎಷ್ಟೆಂಬುದನ್ನು ತೋರಿಸಲು ಎರಡು ದಹಲಕ್ಷ ಸೈನ್ಯವನ್ನು ಯುದ್ಧರಂಗಕ್ಕೆ ಕಳುಹಿಸುತ್ತಾನೆ. ಈ ಕಾರಣ ಶತ್ರುಗಳು ಇವನಿಗೆ ಬಹಳ ಹೆದರುತ್ತಾರೆ" ಎಂದಿದ್ದಾನೆ.[೨೩] ಇದರಿಂದ ಕೃಷ್ಣದೇವರಾಯನು ಎಷ್ಟು ಬಲಾಢ್ಯನಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಪಾಯೇಸ್‌ನ ಹೇಳಿಕೆಯನ್ನು ಸಮರ್ಥಿಸುವಂತೆ ಬಾರ್ಬೋಸಾ, ನ್ಯೂನಿಜ್‌ರ ಹೇಳಿಕೆಗಳಿವೆ. ಬಾರ್ಬೋಸಾ, ರಾಜನ ಅಶ್ವದಳ ಮತ್ತು ಕಾಲ್ದಳಗಳಲ್ಲಿರುವವರೆಲ್ಲ ಸೇರಿ ೧೦,೦೦,೦೦೦[೨೪] ಜನರಿದ್ದಾರೆ ಎಂದರೆ, ನ್ಯೂನಿಜ್‌ನು ೧೫೧೩ರಲ್ಲಿ ೭,೩೦,೦೦೦ ಕಾಲಾಳು, ೩೨,೬೦೦ ಕುದುರೆ, ೫೫೧ ಆನೆಗಳಿದ್ದುದನ್ನು ಒತ್ತಿ ಹೇಳುತ್ತಾನೆ[೨೫]. ಅಲ್ಲದೆ

ಪ್ರಾಂತೀಯ ಸೈನ್ಯದ ಉಲ್ಲೇಖವನ್ನೂ ನೀಡುವನು. ಅವನು ಹೇಳುವಂತೆ, ವಿಜಯನಗರ ಸಾಮ್ರಾಜ್ಯವು ವಿಂಗಡಣೆಯಾಗಿದ್ದ ಒಟ್ಟು ೨೦೦ ಸಾಮಂತರಲ್ಲಿ ಕಡ್ಡಾಯವಾಗಿ ಸೈನ್ಯವನ್ನು ಕಾಯ್ದಿಟ್ಟುಕೊಳ್ಳಬೇಕಿದ್ದ ಹನ್ನೊಂದು ಜನರ ಪ್ರಾಂತೀಯ ಸೈನ್ಯಗಳ ವಿವರವನ್ನು ನೀಡುತ್ತಾನೆ. ಈ ಹನ್ನೊಂದು ಜನರ ಒಟ್ಟು ಸೈನ್ಯವು ೧೯,೦೦೦ ಅಶ್ವದಳ, ೧,೭೧,೭೦೦ ಕಾಲ್ದಳ ಮತ್ತು ೬೩೩ ಗಜಗಳೆಂದಿದ್ದಾನೆ. ಈ ಹೇಳಿಕೆಗಳಿಂದ ರಾಜರ ಬಳಿಯಿದ್ದ ಮೂಲಸೈನ್ಯದ ಜೊತೆಗೆ ಪ್ರಾಂತೀಯ ಅಧಿಕಾರಿಗಳ ಅಥವಾ ಅರಸರ ಸೇನೆಯು ಸೇರುತ್ತಿದ್ದುದು ಸ್ಪಷ್ಟಗೊಳ್ಳುತ್ತದೆ. ಕೃಷ್ಣದೇವರಾಯನ ಆಳ್ವಿಕೆಯ ಕೊನೆಗೆ ಬಂದಿದ್ದ ಕ್ಯಾಸ್ಟನ್ ಹೆಡಾ ಈ ದೇಶದ ವೈಶಾಲ್ಯತೆ ಮತ್ತು ಸೇನಾಬಲಗಳನ್ನು ವರ್ಣಿಸುತ್ತಾ, "ದೇಶವು ಬಲು ವಿಸ್ತಾರವಾದುದು ಹಾಗೂ ಜನ ನಿಬಿಡವಾಗಿದ್ದು, ರಾಜನು ಬೇಕೆಂದಾಗ ಒಂದು ದಶಲಕ್ಷ ಅದೇಕೆ ಎರಡು ದಶಲಕ್ಷ ಯೋಧರನ್ನು ಕೂಡಿಸಬಹುದಾದುದರಿಂದ ಪದಾತಿ ಸೈನ್ಯ ಅಗಣಿತವಾಗಿತ್ತೆಂದು" ಹೇಳುತ್ತಾನೆ. ಈತ ರಾಜರ ಮೂಲಬಲವನ್ನು ಕುರಿತು, ರಾಜನು ತನ್ನ ಖರ್ಚಿನಿಂದಲೆ ೧,೦೦,೦೦೦ ಅಶ್ವಾಳು ಮತ್ತು ೪೦೦೦ ಗಜಗಳ ಸಿಬ್ಬಂದಿಯನ್ನು ಸಲಹಿದ್ದನೆಂದು ಹೇಳುವನು. ಈ ಪ್ರವಾಸಿ ವರದಿಗಳಿಗೆ ಪುಷ್ಟಿಯೆನ್ನುವಂತೆ, ಸಾಹಿತ್ಯಗಳಲ್ಲೂ ಸೇನೆ ಕುರಿತ ಮಾಹಿತಿಗಳಿವೆ. ರಾಯವಾಚಕಮು ಕೃಷ್ಣದೇವರಾಯನ ಸೇನೆಯಲ್ಲಿ "೧೨೦ ಘಟ್ಟಂ ಆನೆಗಳು, ೬೦,೦೦೦ ಕುದುರೆಗಳು ಮತ್ತು ೫,೦೦,೦೦೦ ಕಾಲಾಳುಗಳಿದ್ದವು" ಎಂದಿದೆ. ಇನ್ನೊಂದು ಸಾಹಿತ್ಯ ಆಕರವಾದ ಕೃಷ್ಣರಾಜವಿಜಯಮು, "೬,೦೦,೦೦೦ ಕಾಲ್ದಳ, ೬೬೦೦ ಕುದುರೆಗಳು ಮತ್ತು ೩೦೦೦ ಆನೆಗಳು" ಕೃಷ್ಣದೇವರಾಯನ ಸೈನ್ಯದಲ್ಲಿದ್ದುದನ್ನು ಹೇಳುತ್ತದೆ.[೨೫] ಇನ್ನು ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ಭಾಗವಹಿಸಿದ ಸೇನೆಯಂತೂ ಅಪರಿಮಿತವಾದುದು. ಫೆರಿಸ್ತಾನು ಈ ಯುದ್ಧದಲ್ಲಿ ವಿಜಯನಗರವು ೯,೦೦,೦೦೦ ಕಾಲ್ದಳ, ೪೫,೦೦೦ ಅಶ್ವದಳ, ೨,೦೦೦ ಆನೆಗಳು ಮತ್ತು ೧೫,೦೦೦ ಪೋಷಕ ಸೈನ್ಯವಿದ್ದುದಾಗಿ[೨೬] ಹೇಳಿದರೆ, ರಾಮರಾಜನ ಬಖೈರು ನೀಡುವ ಸೇನಾ ವಿವರ ಎಣಿಕೆಗೂ ಮೀರಿದುದಾಗಿದೆ. ಈ ಕದನದಲ್ಲಿ ವಿಜಯನಗರ ಪ್ರಾಂತೀಯ ಮಾಂಡಲಿಕರು ಕೂಡಿಸಿದ ಸೇನೆಯೇ ೬,೦೦,೦೦೦ ಕಾಲಾಳು ಮತ್ತು ೧,೦೦,೦೦೦ ಅಶ್ವಾಳುಗಳಷ್ಟಾಗಿದ್ದರೆಂದು ಹೇಳುವ ಕೌಟೋನ ಹೇಳಿಕೆಯನ್ನು ಕೇಳಿದರೆ ಸೈನ್ಯದ ಒಟ್ಟು ಸಂಖ್ಯಾಬಲ ಎಷ್ಟಿತ್ತೆಂಬುದರ ಅರಿವಾಗುತ್ತದೆ.

ವಿಜಯನಗರದ ಬೃಹತ್ ಸೇನೆಯ ಬಗೆಗೆ ನೀಡುವ ಇಂತಹ ಬರವಣಿಗೆಗಳ ಕುರಿತು ರಾಬರ್ಟ್ ಸಿವೆಲ್, "ವಿಜಯನಗರ ಸಾಮ್ರಾಜ್ಯದಲ್ಲಿ ಬೃಹತ್ ಸೇನೆಯಿದ್ದುದೇನೋ ನಿಜ. ಆದರೆ ಅವರೆಲ್ಲಾ ಚೆನ್ನಾಗಿ ತರಬೇತಿ ಪಡೆದ ಹಾಗೂ ಶಿಸ್ತುಳ್ಳವರಾಗಿರಲಿಲ್ಲ"ಎನ್ನುತ್ತಾರೆ. ಒಟ್ಟಿನಲ್ಲಿ ವಿದೇಶಿ ಬರವಣಿಗೆಗಳು, ಸಾಹಿತ್ಯಗಳು, ಶಾಸನ ಮತ್ತಿತರ ಆಕರಗಳು ನೀಡುವ ವಿವರಗಳಲ್ಲಿ ಉತ್ಪ್ರೇಕ್ಷೆಗಳೇನೇ ಇದ್ದರೂ ವಿಜಯನಗರ ಸಾಮ್ರಾಜ್ಯವು ಬೃಹತ್ ಪ್ರಮಾಣದ ಸೈನ್ಯವನ್ನು ಕೇಂದ್ರ ಹಾಗೂ ಪ್ರಾಂತೀಯ ಆಡಳಿತ ವ್ಯವಸ್ಥೆಗಳ ಮೂಲಕ ಕಾಯ್ದುಕೊಂಡಿತ್ತೆನ್ನುವುದಂತೂ ಸ್ಪಷ್ಟ. ವಿಜಯನಗರವು ಬಹಮನಿ ಮತ್ತು ಇತರ ಅರಸು ಮನೆತನಗಳೊಂದಿಗೆ ಕೈಗೊಂಡ ದೀರ್ಘಕಾಲೀನ

ಕದನಗಳನ್ನು ಗಮನಿಸಿದರೆ, ಸೈನ್ಯದ ಅಂದಿನ ಅನಿವಾರ್ಯತೆ ಹಾಗೂ ಅಗತ್ಯತೆ ಎಷ್ಟಿದ್ದಿತೆನ್ನುವುದರ ಅರಿವಾಗುತ್ತದೆ.

೩.೪ ಸೇನಾ ವಿಭಾಗಗಳು

ಸೇನಾ ಬಲದ ವಿಂಗಡನೆಯನ್ವಯ ವಿಜಯನಗರದ ಸೇನೆಯನ್ನು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳಗಳೆಂಬ ನಾಲ್ಕು ಮುಖ್ಯ ವಿಭಾಗಗಳನ್ನು ಹಾಗೂ ಪೋಷಕ ಅಥವಾ ಸಹಾಯಕ ಸೈನ್ಯವಾಗಿರುವ ಒಂಟೆ, ಎತ್ತು, ಕತ್ತೆಗಳನ್ನು ಇತರೆ ಎಂಬ ಉಪಶೀರ್ಷಿಕೆಯಲ್ಲಿ ಅಭ್ಯಸಿಸಲಾಗುವುದು. ಈ ಕೆಳಗೆ ಸೇನಾ ವಿಭಾಗಗಳನ್ನು ಪ್ರತ್ಯೇಕವಾಗಿ ನೋಡಲಾಗಿದೆ.

೩.೪.೧ ಕಾಲ್ದಳ

ಸೈನ್ಯ ವ್ಯವಸ್ಥೆಯಲ್ಲಿ ಕಾಲ್ದಳದ ಪಾತ್ರ ತುಂಬ ಹಿರಿದು. ಸೈನಿಕ ಕಾರ್ಯಾಚರಣೆಗಳಲ್ಲಿ ಕಾಲ್ದಳದ ಪಾತ್ರ ಮಹತ್ವದ್ದು. ಸಂಖ್ಯೆಯಲ್ಲೂ ಸೈನ್ಯದ ಬಹುಭಾಗ ಕಾಲ್ದಳದ್ದೇ ಆಗಿತ್ತು. ಇದು ಸೇನೆಯ ಮುಖ್ಯಭಾಗವೂ ಹೌದು. ಇದು ಯಾವುದೇ ವಾಹನವಿಲ್ಲದೆ ನೆಲದ ಮೇಲೆ ನಿಂತು ಹೋರಾಡುತ್ತಿದ್ದ ಯೋಧರ ಪಡೆಯಾಗಿದ್ದಿತು. ಈ ಸೈನಿಕರನ್ನು 'ಕಾಲಾಳು'ಗಳೆಂದೂ ಕರೆಯಲಾಗಿದೆ. ಅದರಂತೆ ಆನೆ, ಕುದುರೆಗಳ ಮೇಲೆ ಕುಳಿತು ಹೋರಾಡುವ ಸೈನಿಕರನ್ನು 'ಮೇಲಾಳು'ಗಳೆಂದೂ ಶಾಸನಗಳು ಹೆಸರಿಸಿವೆ.[೨೮]

ಕ್ರಿಸ್ತಪೂರ್ವ ಆರನೆಯ ಶತಮಾನದ ಹೊತ್ತಿಗೆ ಭಾರತದಲ್ಲಿ ಕಾಲ್ದಳವು ಸೈನ್ಯದ ಪ್ರಮುಖ ಅಂಗವಾಗಿದ್ದಿತೆಂಬುದು ವಿದ್ವಾಂಸರ ಅಭಿಮತ.[೨೯] ಕಾಲ್ದಳವನ್ನು ಅರಿಯುವ ಮುನ್ನ ಒಂದು ಸೈನ್ಯದಲ್ಲಿ ಎಷ್ಟು ಮಂದಿ ಕಾಲಾಳುಗಳಿರುತ್ತಿದ್ದರು? ಅವರುಗಳನ್ನು ಹೇಗೆ ವಿಂಗಡಿಸಲಾಗುತ್ತಿತ್ತು? ಮತ್ತು ಯುದ್ಧ ಭೂಮಿಯಲ್ಲಿ ಅವರು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದರು? ಅವರ ನಾಯಕರು ಯಾರು ಮತ್ತು ಅವರ ಆಯುಧ ಹಾಗೂ ಉಡುಪುಗಳೇನು? ಎಂಬಿತ್ಯಾದಿ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ.

ವಿಜಯನಗರ ಕಾಲದ ಕಾಲ್ದಳವನ್ನು ಕುರಿತು ಪಾಯೇಸನ ವರ್ಣನೆಯನ್ನು ನೋಡಬಹುದು. ಅವನು ಹೇಳುವಂತೆ, "ಕಾಲ್ದಳದ ಬಗ್ಗೆ ಹೇಳಬೇಕೆಂದರೆ, ಅದು ಎಲ್ಲಾ ಗುಡ್ಡಗಳಲ್ಲಿ ಮತ್ತು ಕಣಿವೆಗಳಲ್ಲಿ ಕಿಕ್ಕಿರಿದು ನೆರೆದ ರೀತಿಗೆ, ಆ ನೋಟಕ್ಕೆ, ಪ್ರಪಂಚದಲ್ಲೇ ಎಣೆಯಿರಲಿಲ್ಲ. ... ಅವರು ಹಿಡಿದಿದ್ದ ಕತ್ತಿ ಗುರಾಣಿಗಳ ಅಲಂಕಾರ ಅದ್ಭುತವಾಗಿತ್ತು"[೩೦] ಇಲ್ಲಿನ ವರ್ಣನೆ ವಿಜಯನಗರದ ಪ್ರಮುಖ ಹಬ್ಬ ವಿಜಯದಶಮಿಯಂದು ಕೈಗೊಂಡ ಅರಸನ ಸೇನಾ ವೀಕ್ಷಣೆಯದು. ಅಂದು ಕೇಂದ್ರ ಮತ್ತು ಪ್ರಾಂತೀಯ ಸೈನ್ಯಗಳೆಲ್ಲವೂ ಸಾಮಾನ್ಯವಾಗಿ

ಮಾಂಡಲಿಕರೊಂದಿಗೆ ರಾಜಧಾನಿಯಲ್ಲಿ ಸೇರುತ್ತಿದ್ದಿರಬೇಕು. ಪಾಯೇಸನ ವರ್ಣನೆಗೆ ತಕ್ಕಂತೆ ಮಧುರಾವಿಜಯಂ ಕೃತಿಯಲ್ಲಿ ಕಾಲ್ದಳವನ್ನು,

> "ಗಗನ ಭಾಗಕ್ಕೆದ್ದ ಸೈನ್ಯ ಪದಹತಿ ರಜದಿ
> ಏಕಕಾಲದಿ ಸೂರ್ಯ ಚಂದ್ರಗ್ರಹಣ
> ವೈರಿನೃಪ ತೇಜಸಿನ ಸೂರ್ಯ, ಕೀರ್ತಿಯ ಇಂದು
> ಮಸುಳಿಸಲಿಕಿಂತಾಯ್ತು ಚೋದ್ಯವಿಲ್ಲವಲ" ಎಂದು ವರ್ಣಿಸಲಾಗಿದೆ.[೩೧]

ಹಾಗೆಯೇ ಸೈನ್ಯದಲ್ಲಿ ಶೌರ್ಯ-ಪರಾಕ್ರಮಗಳನ್ನು ಬಿಂಬಿಸುವ ವೀರಯೋಧರಿದ್ದುದನ್ನು ರಾಮನಾಥ ಚರಿತವು,

> ಭೀತಿಯೆಂಬುದು ಕರಿದೋ ಬಿಳಿದೋ ತಣ್ಪೋ
> ಮಾತೇನುರಿಯೋ ಪೇಳೆಂದು
> ಭೂತಳಾಧಿಪನನಂಜದೆ ಬೆಸಗೊಂಬ ನಿ
> ರ್ಭೀತ ಸುಭಟರಿರುತಿಹರು ಎಂದು ಉಲ್ಲೇಖಿಸಿದೆ.[೩೨]

ಈ ಸಾಮ್ರಾಜ್ಯದ ಕಾಲದಲ್ಲಿ ಬೃಹತ್ ಪ್ರಮಾಣದ ಕಾಲ್ದಳವಿದ್ದಿತು. ಆರಂಭದ ಅರಸರಿಂದ ಹಿಡಿದು ಸದಾಶಿವರಾಯ-ರಾಮರಾಯರವರೆಗೂ ಕಾಲ್ದಳವನ್ನು ಬೃಹತ್ ಸಂಖ್ಯೆಯಲ್ಲಿ ಇಟ್ಟುಕೊಂಡಿದ್ದರು. ಕಾಲ್ಬಲವನ್ನು ಕುರಿತು ಫೆರಿಸ್ತಾನು ೧೩೬೬-೬೮ರಲ್ಲಿ ಒಂದು ಲಕ್ಷವಿದ್ದಿತೆಂದು ಹೇಳಿದ್ದಾನೆ. ಅದೇ ರೀತಿ ೧೪೨೦ರಲ್ಲಿ ಬಂದಿದ್ದ ನಿಕೊಲೊಕೊಂತಿಯು ೯೦,೦೦೦ವೆಂದೂ, ರಜಾಕ್ ಹನ್ನೊಂದು ಲಕ್ಷವೆಂದು ಹೇಳಿರುವರು. ೧೪೪೩ರಲ್ಲಿದ್ದ ಕಾಲ್ದಳವನ್ನು ಫೆರಿಸ್ತಾ ಉಲ್ಲೇಖಿಸುತ್ತಾ ೬೨,೦೦೦ ಬಿಲ್ಗಾರರಿದ್ದು, ಇವರಲ್ಲಿ ೨೦೦೦ ಮುಸ್ಲಿಮರಿದ್ದರೆಂದು ಹೇಳುತ್ತಾ, ಒಟ್ಟು ಕಾಲ್ಬಲ ಎರಡು ಲಕ್ಷವೆನ್ನುತ್ತಾನೆ. ಇದು ಸಂಗಮ, ಸಾಳ್ವವಂಶಗಳ ಕಾಲದ್ದಾದರೆ, ತುಳುವಂಶದ ಕಾಲ್ಬಲವು ಎಣಿಕೆಗೂ ಮೀರಿದುದು. ಕ್ರಿ.ಶ.೧೫೧೪ರಲ್ಲಿ ೧,೦೦,೦೦೦ ಇದ್ದುದನ್ನು ಬಾಬೋಸಾ ಬರೆದರೆ, ೧೫೨೧ರಲ್ಲಿ ೭,೩೩,೦೦೦ ವಿದ್ದುದನ್ನು ಫರಿಯಾ ಸೌಸಾ ದಾಖಲಿಸುತ್ತಾನೆ. ರಾಮರಾಯನ ಅವಧಿಯ ಕಾಲ್ಬಲವಂತೂ ಅಪರಿಮಿತವಾದುದಾಗಿದೆ. ಇವುಗಳಿಂದ ವಿಜಯನಗರದ ಅರಸರು ಸೇನೆಯ ಮುಖ್ಯ ಅಂಗವಾದ ಕಾಲ್ದಳಕ್ಕೆ ಹೆಚ್ಚು ಪ್ರಾಶಸ್ತ್ಯ ಹಾಗೂ ಸ್ಥಾನ-ಮಾನಗಳನ್ನು ನೀಡಿದ್ದುದು ತಿಳಿದುಬರುತ್ತದೆ.

ಈ ಮೇಲಿನದು ಸೈನ್ಯದಲ್ಲಿ ಎಷ್ಟು ಪ್ರಮಾಣದ ಕಾಲ್ದಳವಿತ್ತೆಂಬ ವಿವರವಾದರೆ, ಈ ಕಾಲ್ದಳದ ಯೋಧರ ನೇಮಕ, ಸಂಘಟನೆ, ನಿರ್ವಹಣೆ ಮತ್ತಿತರ ಕ್ರಮಗಳನ್ನು ಅರಿಯುವುದೂ ಮುಖ್ಯ. ಸೈನ್ಯಕ್ಕೆ ಅರ್ಹ ಯೋಧರನ್ನು ಎಲ್ಲ ವರ್ಗಗಳಿಂದಲೂ ನೇಮಕ ಮಾಡುತ್ತಿದ್ದರೆಂಬುದು ಹಿಂದಿನಿಂದಲೂ ತಿಳಿದುಬರುವ ಸಂಗತಿ. ಕೌಟಿಲ್ಯನು ವೈಶ್ಯ ಮತ್ತು ಶೂದ್ರರನ್ನು ನೇಮಕ ಮಾಡಿಕೊಳ್ಳಬೇಕೆನ್ನುತ್ತಾನೆ. ಸೈನಿಕರ ನೇಮಕದಲ್ಲಿ ಪ್ರಾದೇಶಿಕತೆಯೂ ಮುಖ್ಯವಾಗಿದ್ದಿರಬೇಕು. ಕರ್ನಾಟಕದ ಯೋಧರು ಶೌರ್ಯ ಸಾಹಸಗಳಿಗೆ ಹೆಸರಾಗಿದ್ದು, ಇವರನ್ನು ಬೇರೆ ಬೇರೆ ದೇಶ, ರಾಜ್ಯಗಳ ಅರಸರು ತಮ್ಮ ಸೇನೆಗೆ ಸೇರಿಸಿಕೊಳ್ಳುತ್ತಿದ್ದರು. ಹ್ಯೂಯೆನ್ ತ್ಸಾಂಗನು, ಇಮ್ಮಡಿ ಪುಲಕೇಶಿಯ

ಪ್ರಜೆಗಳ ಶೌರ್ಯ ಮತ್ತು ಪ್ರಾಮಾಣಿಕತೆಯನ್ನು ಕೊಂಡಾಡಿದ್ದಾನೆ. ಅಲ್ಲದೆ ಬಂಗಾಳದ ದೊರೆಗಳು ತಮ್ಮ ಸೈನ್ಯಕ್ಕಾಗಿ ಕರ್ನಾಟಕ ಮತ್ತು ಲಾಟ ದೇಶಗಳಿಂದ ಸೈನಿಕರನ್ನು ಬರಮಾಡಿಕೊಳ್ಳುತ್ತಿದ್ದರೆಂದೂ ಹೇಳಿದ್ದಾನೆ.[೩೩] ಇದು ಕರ್ನಾಟಕದ ಪ್ರಾದೇಶಿಕತೆಯ ಪ್ರಭಾವವೂ ಇರಬಹುದು.

ವಿಜಯನಗರ ಸೇನೆಗೆ ಯೋಧರನ್ನು ನೇಮಿಸುವಾಗ ಯಾವುದೇ ನಿರ್ಬಂಧವಿರಲಿಲ್ಲ. ಸಂಗಮ ಸಹೋದರರಾದ ಹರಿಹರ-ಬುಕ್ಕರ ಕಾಲದಿಂದಲೂ ಎಲ್ಲ ವರ್ಗದವರ ಸಹಾಯವನ್ನು ಪಡೆಯಲಾಗುತ್ತಿದ್ದಿತು. ಸೇನೆಯಲ್ಲಿ ವಿವಿಧ ಜಾತಿ-ವರ್ಗಗಳ ಯೋಧರನ್ನು ನೇಮಿಸುತ್ತಿದ್ದುದರ ಜೊತೆಗೆ ಪ್ರಾದೇಶಿಕವಾಗಿ ಪ್ರತ್ಯೇಕವಾದ ಪಡೆಗಳೂ ಇದ್ದುವು. ಬಾರ್ಬೋಸಾ, ''ನಾನಾ ಕಡೆಗಳಿಂದ ಇಲ್ಲಿಗೆ (ವಿಜಯನಗರ) ಬಂದು ಸೈನ್ಯಕ್ಕೆ ಸೇರಿದ ಸರದಾರರಿಗೆ ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ''[೩೪] ಎಂದಿರುವುದನ್ನು ಗಮನಿಸಬಹುದು. ಪಾಯೇಸ್ ಕೂಡ, ''ಈ ಬೀದಿಯ ಕೊನೆಯಲ್ಲಿ ಮೂರರು (ಮುಸಲ್ಮಾನರು) ವಾಸಮಾಡುವ ಮನೆಗಳಿವೆ. ....ಇವರಲ್ಲಿ ಅನೇಕ ಜನ ರಾಜನ ರಕ್ಷಣಾ ಸೈನ್ಯದಲ್ಲಿದ್ದು ಸಂಬಳ ಪಡೆಯುತ್ತಿದ್ದಾರೆ'' ಎಂದಿದ್ದಾನೆ. ಅಲ್ಲದೆ ಬಿಲ್ಲುಗಾರರ ಬಗೆಗೆ ಹೇಳುತ್ತಾ, ''ಇವರಲ್ಲಿ ಮೂರರೂ ತಮ್ಮ ತಮ್ಮ ಆಯುಧಗಳೊಡನೆ ಇದ್ದರೆಂಬುದನ್ನು ಮರೆಯಬಾರದು''ಎನ್ನುವ ಮಾತುಗಳು ಎಲ್ಲ ಜಾತಿ ವರ್ಗಗಳಿಗೆ ಸೈನ್ಯದಲ್ಲಿ ಪ್ರಾತಿನಿಧ್ಯ ನೀಡಿದ್ದುದನ್ನು ದೃಢಗೊಳಿಸುತ್ತವೆ. ರಾಮನಾಥ ಚರಿತವು, ಬೇರೆ ಬೇರೆ ಜಾತಿಯ ಯೋಧರಿದ್ದುದನ್ನು ಹೇಳುತ್ತದೆ. ಅಲ್ಲಿ ಉಲ್ಲೇಖವಾದ ಹೊಲೆಯರ ಹುಳ್ಳ, ಮಾದಿಗರ ಹಂಪ, ಕಾಳಾಂಜಿಯ ಕಂಪ, ಅಕ್ಕಸಾಲಿಯ ಚಿಕ್ಕ, ಕೊಳ್ಳಿಯ ನಾಗ, ದೇವಿಸೆಟ್ಟಿಯ ಲಿಂಗ, ಹಡಪದ ಬಲ್ಲುಗ, ಗಿಂಡಿಯ ಲಕ್ಕ, ಒಕ್ಕಲಿಗರ ನಾಗಣ, ಭಂಡಾರಿ ಸಾವಣ- ಇನ್ನು ಮುಂತಾದ ಜಾತಿ-ವೃತ್ತಿಗಳವರು ಸೈನ್ಯದಲ್ಲಿದ್ದುದನ್ನು ಕಾಣಬಹುದು.[೩೫] ಇವು ಸೈನ್ಯಕ್ಕೆ ಜಾತಿ-ವರ್ಗಗಳಿಗಿಂತ ಅರ್ಹತೆ ಮುಖ್ಯವಾಗಿದ್ದುದನ್ನು ಸಮರ್ಥಿಸುತ್ತವೆ. ಇದು ಜಾತಿ-ವರ್ಗಗಳಿಗೆ ಸಂಬಂಧಿಸಿದುದಾದರೆ, ಪ್ರಾದೇಶಿಕತೆಯನ್ನು ಮೈದಳೆದಿದ್ದ ಪಡೆಗಳೂ ಅಂದು ಇದ್ದವು. ಕ್ರಿ.ಶ.೧೩೫೮ರ ಶಾಸನವೊಂದು ವಿಜಯನಗರದ ಸೈನ್ಯದಲ್ಲಿ ತುರಕದಳ, ಸೇವುಣದಳ, ತೆಲುಗದಳ, ಪಾಂಡ್ಯದಳ ಮತ್ತು ಹೊಯ್ಸಳ ದಳಗಳೆಂಬ ವಿಭಾಗಗಳಿದ್ದುದನ್ನು ಹೇಳಿದೆ.[೩೬] ಇದಕ್ಕೆ ಪೂರಕವೆನ್ನುವಂತೆ, ನಂಜುಂಡಕವಿಯು, ತನ್ನ ಗ್ರಂಥದ ಭಾಗವಾದ 'ಹುಳಿಹೇರು ಕಾಳಗ'ದಲ್ಲಿ ಪ್ರಾದೇಶಿಕ ಸೈನ್ಯವನ್ನು ಉಲ್ಲೇಖಿಸುತ್ತಾನೆ. ಅಲ್ಲಿನ ವರ್ಣನೆಯಲ್ಲಿ ಕನ್ನಡಿಗರು, ತುರುಕರು, ಒರಿಸ್ಸಾದವರು,ಲಾಳ, ಆರೆಯ (ಮಹಾರಾಷ್ಟ್ರ), ಗೌಳ, ಗೂರ್ಜರ, ತೆಲುಗ, ತಿಗುಳ- ಇನ್ನು ಮುಂತಾದ ಪ್ರದೇಶಗಳ ಯೋಧರಿದ್ದುದು ಕಂಡುಬರುತ್ತದೆ.[೩೭] ಒಟ್ಟಿನಲ್ಲಿ ವಿಜಯನಗರದ ಅವಧಿಯಲ್ಲಿ ಸೈನ್ಯಕ್ಕೆ ಜಾತಿ, ವರ್ಗ ಮತ್ತು ಪ್ರಾದೇಶಿಕತೆಗಳನ್ನು ಮೀರಿ ಅರ್ಹತೆಯನ್ನು ಆಧರಿಸಿ ನೇಮಿಸುತ್ತಿದ್ದರೆಂಬುದು ತಿಳಿದುಬರುವ ಸಂಗತಿಯಾಗಿದೆ.

ಕಾಲ್ದಳದ ಬಗೆಗಳು

ಕಾಲ್ದಳದಲ್ಲೂ ವಿವಿಧ ವಿಭಾಗಗಳಿದ್ದವು. ಅವು ಶಸ್ತ್ರಾಸ್ತ್ರಗಳಿಗನುಗುಣವಾಗಿ ವಿಂಗಡಣೆಗೊಂಡಿದ್ದವು. ಕಾಲ್ದಳದಲ್ಲಿ ಸಾಮಾನ್ಯವಾಗಿ ಕತ್ತಿವರಸೆಗಾರರು, ಬಿಲ್ಲುಗಾರರು, ಬಂದೂಕುಧಾರಿಗಳು, ಈಟಿಗಾರರು ಇನ್ನು ಮುಂತಾದ ಯೋಧರಿದ್ದುದು ವಿವಿಧ ಆಕರಗಳಿಂದ ತಿಳಿದುಬರುತ್ತದೆ.

ನಂಜುಂಡಕವಿಯು,

> ''ಹರಿಗೆಕಾರರ ಖಂಡೆಯಕಾರರ ಬಲು
> ಹರಿಗೆಕಾರ ಸಬಳಿಗರ
> ಸುರಿಗೆಕಾರರ ಬಿಲುಗಾರರ ವಾಹಳಿ
> ಪುರದ ಪೊರಗೆ ಕಣ್ಗೆಸೆದವು''ಎಂದಿರುವನು.[೩೮]

ಇವರಲ್ಲದೆ ಪೆಟಲವರು ಇದ್ದುದಾಗಿಯೂ ಹೇಳುತ್ತಾನೆ:

> ಸುತ್ತಬಳಸಿ ಪೆಟಲವರು ಕೋವಿಗಳನು
> ತೆತ್ತಿಸಲವರಾರಭಟೆಯ
> ವೃತ್ತಿಯಿಂ ತಾರಗೆಗಳ ಗೂಳವಿರ
> ದೆತ್ತಿತು ಧ್ರುವಲೋಕದತ್ತ[೩೯]

ಬಾರ್ಬೋಸಾನು, ''ಕಾಲ್ದಳದವರು ಕತ್ತಿ, ಈಟಿ, ಬಿಲ್ಲು-ಬಾಣಗಳನ್ನು ಧರಿಸಿರುತ್ತಾರೆ. ಇವರು ಒಳ್ಳೆಯ ಬಿಲ್ಲುಗಾರರು'' ಎಂದಿದ್ದಾನೆ. ರಾಮರಾಜಿಯಮು ಕೃತಿಯು ಸೇನೆಯ ವಿವಿಧ ಘಟಕಗಳ ಜೊತೆಗೆ ಯಾವ ಯಾವ ದಳವು ಎಷ್ಟೆಷ್ಟಿರಬೇಕೆಂದು ಹೇಳುತ್ತಾ, ಅದರಲ್ಲಿ ಬಿಲ್ಲುಗಾರರು, ಕತ್ತಿವರಸೆಗಾರರು ಮತ್ತು ಈಟಿಗಾರರು ಇದ್ದುದನ್ನು ಉಲ್ಲೇಖಿಸುತ್ತದೆ. ಡೊಮಿಂಗೊ ಪಾಯೇಸನು ಸೈನಿಕರನ್ನು ಕತ್ತಿಗುರಾಣಿಕಾರರು, ಬಿಲ್ಲುಗಾರರು, ಈಟಿಗಾರರು ಮತ್ತು ಬಂದೂಕು(ತುಬಾಕಿ)ಧಾರಿಗಳಾಗಿ ವಿಭಜಿಸುತ್ತಾನೆ. ಜೊತೆಗೆ ಆಯಾಯ ಆಯುಧಧಾರಿಗಳ ಪರಿಕರ, ಉಡುಪು ಹಾಗೂ ಅವರ ಕಾರ್ಯಚಟುವಟಿಕೆಗಳನ್ನು ವಿವರಿಸುತ್ತಾನೆ. ವಿಜಯನಗರ ಕಾಲದ ವೀರಗಲ್ಲು ಮತ್ತು ಉಬ್ಬುಶಿಲ್ಪಗಳಲ್ಲಿ ಕಾಲ್ದಳದ ವಿಭಾಗಗಳನ್ನು ಕಾಣಬಹುದು. ಮಹಾನವಮಿ ದಿಬ್ಬ, ಬಾಲಕೃಷ್ಣ ದೇವಾಲಯ, ಹಜಾರ ರಾಮಚಂದ್ರ ದೇವಾಲಯ ಮೊದಲಾದ ಸ್ಮಾರಕಗಳಲ್ಲಿ ಈ ಬಗೆಯ ಉಬ್ಬು ಶಿಲ್ಪಗಳನ್ನು ಕಾಣಬಹುದು. ಬಿಲ್ಲು ಬಾಣಗಳನ್ನು ಹಿಡಿದು ಹೊರಟ ಬಿಲ್ಲುಗಾರರು(ಚಿತ್ರ-೨), ಕತ್ತಿ- ಗುರಾಣಿಗಳನ್ನು ಹಿಡಿದು ಹೋರಾಡುತ್ತಿರುವ ಕತ್ತಿ ವರಸೆಗಾರರು(ಚಿತ್ರ-೩, ೪, ೭), ಹಾಗೂ ಯುದ್ಧಕ್ಕೆ ಸಿದ್ಧವಾದ ಈಟಿಗಾರರ(ಚಿತ್ರ -೮, ೧೪) ಚಿತ್ರಣ ಸಾಮಾನ್ಯವಾಗಿದೆ. ಅಂತೆಯೇ ವೀರಗಲ್ಲುಗಳಲ್ಲೂ ಇದೇ ಬಗೆಯ ಚಿತ್ರಣಗಳಿವೆ. ಈ ಬಗೆಯ ವೀರಗಲ್ಲುಗಳನ್ನು ಹೂಲಿಕೇರಿ, ಬಾದಾಮಿ, ಕನಕಗಿರಿ, ಚಿಕ್ಕಬೆನಕಲ್ಲು, ಬಾದನಹಟ್ಟಿ, ಕೆಂಚನಗುಡ್ಡ ಮೊದಲಾದಡೆ ಗಳಲ್ಲಿ ಕಾಣಸಿಗುತ್ತವೆ. ಮೇಲಿನ ಎಲ್ಲ ಆಕರಗಳ ಹಿನ್ನೆಲೆಯಲ್ಲಿ ಕಾಲ್ದಳವನ್ನು ಮುಖ್ಯವಾಗಿ ನಾಲ್ಕು ವಿಭಾಗಗಳ

ನ್ನಾಗಿ ವಿಭಾಗಿಸಬಹುದು. ಅವುಗಳೆಂದರೆ ಕತ್ತಿವರಸೆಗಾರರು, ಬಿಲ್ಲುಗಾರರು, ಈಟಿಗಾರರು ಮತ್ತು ಬಂದೂಕು (ತುಪಾಕಿ)ಧಾರಿಗಳು. ಇವರು ಆಯಾಯ ಶಸ್ತ್ರಾಸ್ತ್ರಗಳಲ್ಲಿ ಹೆಚ್ಚು ಪರಿಣತಿ ಸಾಧಿಸಿದ್ದರೆಂಬುದುನ್ನು ಮನಗಾಣಬಹುದು.

ಸೈನಿಕರ ಉಡುಗೆ-ತೊಡಿಗೆಗಳು

ಸೈನಿಕರು ಧರಿಸುತ್ತಿದ್ದ ಉಡುಪುಗಳ ವಿವರ ಒಂದೇ ತೆರನಾಗಿ ದೊರೆಯುವುದಿಲ್ಲ. ಆಯಾಯ ಪಡೆಗಳು ಗುರುತು ಸಿಗುವ ಸಲುವಾಗಿ ಬೇರೆ ಬೇರೆ ಉಡುಪುಗಳನ್ನು ಧರಿಸುತ್ತಿದ್ದವು. ಕೆಲವು ಯುದ್ಧಗಳಲ್ಲಿ ಉಡುಪು ಧರಿಸದೆ ಹೋರಾಡಿದ ವಿವರಗಳೂ ಕಾಣಸಿಗುತ್ತವೆ.

ಫೆರಿಸ್ತಾ ಒಂದೆಡೆ ಹೇಳುವಂತೆ, ಕರ್ನಾಟಕದ ಕಾಲಾಳುಗಳು ಬಂಕಾಪುರದ ಮುತ್ತಿಗೆಯಲ್ಲಿ ತಮ್ಮ ಜೀವವನ್ನು ತೃಣವಾಗಿ ಭಾವಿಸಿ, ನಗ್ನರಾಗಿ ತಮ್ಮನ್ನು ಸುಲಭವಾಗಿ ಹಿಡಿಯದಿರಲೆಂದು ಮೈಗೆಲ್ಲ ಎಣ್ಣೆಯನ್ನು ಲೇಪಿಸಿಕೊಂಡಿದ್ದರು.[೬೦] ನಿಕಿಟಿನ್ ಕೂಡ ಇದೇ ಬಗೆಯ ಧ್ವನಿಯನ್ನು ಹೊರಡಿಸುತ್ತಾನೆ. ಅವನು "ಹಿಂದೂಗಳು.... ಎಲ್ಲ ಬತ್ತಲೆ ಹಾಗೂ ಬರಿಗಾಲಿನವರು. ಅವರು ಒಂದು ಕೈಯಲ್ಲಿ ಡಾಲು, ಇನ್ನೊಂದು ಕೈಯಲ್ಲಿ ಕತ್ತಿಯನ್ನು ಹಿಡಿದಿರುತ್ತಾರೆ. ಕೆಲವು ಸೇವಕರನ್ನು ನೇರವಾದ ಬಿಲ್ಲು-ಬಾಣಗಳಿಂದ ಸಜ್ಜುಗೊಳಿ ಸಲಾಗಿರುತ್ತದೆ"[೬೧] ಎಂದಿದ್ದಾನೆ. ವೀರಗಲ್ಲು ಮತ್ತು ಸ್ಮಾರಕಗಳ ಮೇಲಿನ ಉಬ್ಬುಗೆತ್ತನೆಗಳಲ್ಲಿ ಸೈನಿಕರು ಧರಿಸುತ್ತಿದ್ದ ಉಡುಪುಗಳ ಚಿತ್ರಣವನ್ನು ಕಾಣಬಹುದು(ಚಿತ್ರ-೨, ೩, ೭, ೮). ಶಿಲ್ಪಗಳಲ್ಲಿ ಸಾಮಾನ್ಯವಾಗಿ ವೀರರು ತಮ್ಮ ಕೈಗಳಲ್ಲಿ ಕತ್ತಿ-ಗುರಾಣಿ, ಬಿಲ್ಲು-ಬಾಣ, ಈಟಿಗಳನ್ನು ಹಿಡಿದಿರುವರು. ಅಲ್ಲದೆ ಇವರು ವೀರಗಚ್ಚೆಯನ್ನು ಹಾಕಿ ತಲೆಯಲ್ಲಿ ಮುಂಡಾಸು ಅಥವಾ ಮುಡಿ ಕಟ್ಟಿರುವುದನ್ನು ಕಾಣಬಹುದು. ವೀರಗಚ್ಚೆಯು ಸೊಂಟದ ಕೆಳಗೆ ಹಾಗೂ ಮೊಣಕಾಲಿನ ಮೇಲೆ ಇರುವ ಉಡುಪು. ಇದು ನರಿಗೆಗಳಿಂದ ಕೂಡಿದ್ದು, ಕುಚ್ಚಿನಂತೆ ಇಳಿಬಿದ್ದಿರುತ್ತದೆ. ದೇಹದ ರಕ್ಷಣೆಗೆ ಗುರಾಣಿಯನ್ನು ಬಿಟ್ಟರೆ ಬೇರೆ ಯಾವ ರಕ್ಷ ಕವಚ ಧರಿಸಿರುವುದನ್ನು ಈ ಶಿಲ್ಪಗಳಲ್ಲಿ ಚಿತ್ರಿಸಿಲ್ಲ. ಇದರಿಂದ ಆಯುಧಗಳನ್ನು ಬಿಟ್ಟರೆ ಪ್ರತ್ಯೇಕವೆನ್ನುವ ಹಾಗೂ ಸಂರಕ್ಷಣೆ ನೀಡುವ ಯಾವ ಉಡುಪನ್ನೂ ಧರಿಸಿರಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಆದರೆ ಪಾಯೇಸನು ನೀಡುವ ಮಾಹಿತಿ ವ್ಯತಿರಿಕ್ತವಾದದ್ದು. ಸೈನಿಕರು ಬಣ್ಣ ಬಣ್ಣದಿಂದ ಕೂಡಿದ ಸೊಗಸಾದ ಶ್ರೀಮಂತ ಉಡುಪನ್ನು ಧರಿಸಿದ್ದರೆಂದು ಹೇಳುತ್ತಾನೆ. ರಾವುತರು ಕಿಂಕಾಪು ಹಾಗೂ ಚರ್ಮದ ಮತ್ತು ಮಕಮಲ್ಲಿನಿಂದ ತಯಾರಾದ ಅಂಗಿಗಳನ್ನು ತೊಟ್ಟಿದ್ದರೆಂದು ಹೇಳುವ ಪಾಯೇಸ್‌ನಿಗೆ[೬೨] ಪೂರಕವಾಗಿ ನ್ಯೂನಿಜ್ "ಸವಾರರು ಗಂಡುಡುಪನ್ನು ಧರಿಸಿ ಕೈಯಲ್ಲಿ ಆಯುಧಗಳನ್ನು ಹಿಡಿದು ತಲೆಗೆ ಶಿರಸ್ತ್ರಾಣಗಳನ್ನು ಧರಿಸಿದ್ದರು"[೬೩] ಎನ್ನುತ್ತಾನೆ. ನ್ಯೂನಿಜ್ ಮುಂದುವರಿದು, "ಯೋಧರು ಹಿಡಿದಿದ್ದ ಗುರಾಣಿಯು ಶರೀರವನ್ನೆಲ್ಲಾ ರಕ್ಷಣೆ ಮಾಡುವಷ್ಟು ದೊಡ್ಡದಾಗಿದ್ದಿತೆಂದೂ, ಇದರಿಂದ ಅವರಿಗೆ ರಕ್ಷಾಕವಚದ ಅವಶ್ಯಕತೆಯಿರಲಿಲ್ಲ"ವೆನ್ನುತ್ತಾನೆ.[೬೪]

ಹೂಲಿಕೇರಿ(ಕುಷ್ಟಗಿ ತಾ., ಚಿತ್ರ - ೭) ಮತ್ತು ಬದಾಮಿ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಹಿಡಿದ ಗುರಾಣಿಗಳ ಗಾತ್ರ ಮತ್ತು ವಿಸ್ತಾರಗಳು ನ್ಯೂನಿಜ್‌ನ ಈ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತವೆ. ಚೆನ್ನಬಸವಪುರಾಣವು, ಈಶ್ವರನ ಸೇನೆಯಲ್ಲಿದ್ದ ಸೈನಿಕರು ಹಿಡಿದಿದ್ದ ಆಯುಧಗಳ ವರ್ಣನೆ ಮಾಡುತ್ತ ನಾನಾ ರೀತಿಯ ಕವಚಗಳನ್ನು ಧರಿಸಿದ್ದರೆಂದು ಹೇಳುತ್ತದೆ.[೪೫] ಈ ಎಲ್ಲ ಹೇಳಿಕೆಗಳಿಂದ ತಿಳಿದುಬರುವ ಸಂಗತಿಯೆಂದರೆ, ವಿಜಯನಗರ ಸೈನ್ಯದ ಎಲ್ಲ ಯೋಧರೂ ಉಡುಪು ಮತ್ತು ಕವಚಗಳನ್ನು ಧರಿಸಿರಲಿಲ್ಲವೆಂಬುದು. ಕಾರಣವೆಂದರೆ ಅಂದಿನ ಸೈನಿಕರ ಅಗಾಧ ಸಂಖ್ಯೆಗೆ ಒಂದೇ ಬಗೆಯ ಉಡುಪುಗಳನ್ನು ಒದಗಿಸಲು ಆಗುತ್ತಿರಲಿಲ್ಲ. ಅಲ್ಲದೆ ಕೇಂದ್ರ ಮತ್ತು ಪ್ರಾಂತ್ಯೀಯ ಸೈನ್ಯಗಳು ಒಂದೆಡೆ ಸೇರುತ್ತಿದ್ದುದರಿಂದ ಕೇಂದ್ರ ಸೈನ್ಯಕ್ಕೆ ಪಾಯೇಸ್ ಹೇಳುವಂತೆ, ಸ್ವಲ್ಪ ಉತ್ತಮ ರೀತಿಯ ತರಬೇತಿ ನೀಡಿ ಉಡುಪುಗಳನ್ನು ಒದಗಿಸುತ್ತಿದ್ದರೆಂದು ಹೇಳಬಹುದು. ನ್ಯೂನಿಜ್ ಹೇಳುವಂತೆ, ಸಾಮಾನ್ಯವಾಗಿ ಗುರಾಣಿಯೇ ಸೈನಿಕರಿಗೆ ಮೈಕವಚವಾಗಿದ್ದಿತೆನ್ನುವುದರಲ್ಲಿ ಸಂಶಯವಿಲ್ಲ. ಸೈನಿಕರು ಬಳಸುತ್ತಿದ್ದ ಆಯುಧಗಳನ್ನು ಶಸ್ತ್ರಾಸ್ತ್ರಗಳ ವಿಭಾಗದಲ್ಲಿ ಚರ್ಚಿಸಲಾಗಿದೆ.

ಸೈನ್ಯದಲ್ಲಿ ಮಹಿಳೆಯರು

ವಿಜಯನಗರ ಕಾಲದ ಸೈನ್ಯದಲ್ಲಿ ಮಹಿಳೆಯರ ಪಾತ್ರವನ್ನು ಮರೆಯುವಂತಿಲ್ಲ. ಪೂರಕ ಹಾಗೂ ಪೋಷಕ ಸೈನ್ಯದಲ್ಲಿ ಮಹಿಳೆಯರ ಪಾತ್ರವೂ ಇದೆ. ಮಹಿಳಾ ಯೋಧರು ಸೈನ್ಯದಲ್ಲಿದ್ದುದನ್ನು ಶಿಲ್ಪಗಳು, ವೀರಗಲ್ಲು, ಶಾಸನ ಹಾಗೂ ಪ್ರವಾಸಿಗರ ವರದಿಗಳು ಅಲ್ಲಲ್ಲಿ ಪ್ರಸ್ತಾಪಿಸಿವೆ. ಶಿಲ್ಪಗಳಲ್ಲಿ ವೀರ ಮಹಿಳೆಯರ ಚಿತ್ರಣಗಳನ್ನು ಗುರುತಿಸಬಹುದು. ಹಜಾರರಾಮಚಂದ್ರ ದೇಗುಲದ ಪ್ರಾಕಾರ ಗೋಡೆ ಮೇಲಿನ ಪಟ್ಟಿಕೆಯಲ್ಲಿ ಇಬ್ಬರು ಮಹಿಳಾ ಯೋಧರು(ಚಿತ್ರ- ೫) ಈಟಿಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯವಿದೆ. ಇದಲ್ಲದೆ ಅದೇ ಸ್ಮಾರಕದ ಆನೆಗಳ ಸಾಲುಪಟ್ಟಿಕೆಗಳಲ್ಲಿ ಆನೆಯ ಮೇಲೆ ಸವಾರಿ ಮಾಡುತ್ತಿರುವವರಲ್ಲಿ ಮಹಿಳೆಯರನ್ನು ಕಾಣಬಹುದು(ಚಿತ್ರ-೬). ಇದರಿಂದ ಮಹಿಳೆಯರು ಪುರುಷನೊಂದಿಗೆ ಸೈನಿಕ ಕಾರ್ಯಾಚರಣೆಗಳಲ್ಲಿ ತೊಡಗಿದ್ದುದು ದೃಢವಾಗುತ್ತದೆ. ಆನೆ ಸವಾರಿಯಲ್ಲದೆ ಕುದುರೆ, ಒಂಟೆಗಳ ಸವಾರಿಗಳನ್ನು ಬಲ್ಲವರಾಗಿದ್ದುದು ಇದೇ ಪ್ರಾಕಾರದ ಶಿಲ್ಪ ಪಟ್ಟಿಕೆಯಲ್ಲಿ ಕಂಡುಬರುತ್ತದೆ. ಇದು ಕುದುರೆ ಸವಾರಿ ಮಾಡುತ್ತಿರುವ ಮಹಿಳೆಯದು. ಈ ಕುದುರೆಯ ಮುಂದೆ ಮತ್ತೊಬ್ಬ ಮಹಿಳೆಯು ಉದ್ದವಾದ ಭರ್ಜಿಯನ್ನು ಹಿಡಿದು ನಿಂತಿದ್ದಾಳೆ. ಮಹಿಳೆಯು ಯುದ್ಧರಂಗದಲ್ಲಿ ಪಾಲ್ಗೊಳ್ಳುತ್ತಿದ್ದುದೂ ಉಂಟು. ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿರುವ ಒಂದು ಶಿಲ್ಪದಲ್ಲಿ ಕುದುರೆ ಸವಾರಿಯಲ್ಲಿ ಹೊರಟ ಮಹಿಳೆಯು ಛತ್ರಿ-ಛಾಮರಧಾರೆಯರೊಂದಿಗೆ ರಣರಂಗಕ್ಕೆ ಕಾದಾಡಲು ಹೊರಟಂತಿದೆ. ಈ ಬಗೆಯ ಶಿಲ್ಪಗಳನ್ನು ಹಲವು ಭಾಗಗಳಲ್ಲಿ ಕಾಣಬಹುದು. ವೀರಗಲ್ಲುಗಳಲ್ಲೂ ಮಹಿಳಾ ಹೋರಾಟಗಾರರು ಇದ್ದುದು ತಿಳಿದುಬರುತ್ತದೆ. ಶಿವಮೊಗ್ಗ ತಾಲ್ಲೂಕಿನ ಶಿಕಾರಿಪುರದ ಶಾಸನೋಕ್ತ ವೀರಗಲ್ಲೊಂದು ಕ್ರಿ.ಶ.೧೪೪೬ರ

ಅವಧಿಯದು. ಇದರಲ್ಲಿ ನಾಗನಗೌಡನ ಮಗನಾದ ಮಾದಿಗೌಡನು ಕುಸ್ತಿ ಆಡುವಾಗ ಮರಣ ಹೊಂದುತ್ತಾನೆ. ಅವನ ಮಗಳಾದ ಹರಿಯಕ್ಕ(ಚಿತ್ರ-೨೩) ತನ್ನ ತಂದೆಯನ್ನು ಕೊಂದ ಯೋಧನೊಂದಿಗೆ ಹೋರಾಡಿ ತಾನು ಕೂಡ ಸ್ವರ್ಗ ಸೇರಿದಳೆಂದು ಹೇಳಿದೆ.[೮೭] ಈ ವೀರಗಲ್ಲಿನಲ್ಲಿ ಹಗೆಯು ನಿಂತಿದ್ದು, ಹರಿಯಕ್ಕ ಎಡಗೈಯಲ್ಲಿ ಅವನ ಜುಟ್ಟು ಹಿಡಿದು, ಬಲಗೈಯಲ್ಲಿ ಖಡ್ಗದಿಂದ ಇರಿಯುತ್ತಿರುವುದನ್ನು ಚಿತ್ರಿಸಲಾಗಿದೆ. ಇದು ಮಧ್ಯಯುಗದ ವೀರ ಮಹಿಳೆಯೊಬ್ಬಳು ಶತ್ರುವಿನೊಂದಿಗೆ ಹೋರಾಡಿ ಮಡಿದ ನೈಜ ದಾಖಲೆಯಾಗಿದೆ.

ಇದೇ ರೀತಿ ಮಹಿಳಾ ಹೋರಾಟಗಳನ್ನು ಚಿತ್ರಿಸುವ ಮೂರು ವೀರಗಲ್ಲುಗಳು ಕೊಪ್ಪಳದಲ್ಲಿವೆ. ಕಣಶಿಲೆಯ ಚಪ್ಪಡಿಗಳಲ್ಲಿ ಕಡೆದ ಈ ವೀರಗಲ್ಲುಗಳನ್ನು ವಿಜಯನಗರ ಕಾಲದವೆಂದು ಗುರುತಿಸಲಾಗಿದೆ.[೮೮] ಇವುಗಳಲ್ಲಿ ಒಂದು ಮಹಿಳಾ ಯೋಧಳೊಬ್ಬಳು ತನ್ನ ಎದುರಾಳಿಯನ್ನು ವೀರಾವೇಶದಿಂದ ಎದುರಿಸುತ್ತಿರುವ ದೃಶ್ಯವನ್ನು ಹೊಂದಿದೆ. ಇದರಲ್ಲಿರುವ ಮಹಿಳೆಯು ಮುಡಿಯನ್ನು ಕಟ್ಟಿ, ನೆರಿಗೆಯುಳ್ಳ ಸೀರೆಯನ್ನು ಧರಿಸಿರುವಳು. ಅವಳು ತನ್ನ ಕೈಗಳಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದು ಹೋರಾಡುತ್ತಿದ್ದಾಳೆ. ವೀರಗಲ್ಲಿನ ಕೆಳಭಾಗದಲ್ಲಿ ಕೈಮುಗಿದು ಕುಳಿತು ಲಿಂಗ ಪೂಜೆಯಲ್ಲಿ ನಿರತಳಾಗಿರುವ ಮಹಿಳೆಯನ್ನು ಕಾಣಬಹುದು. ಇದರಿಂದ ಈ ಹೋರಾಟದಲ್ಲಿ ಮಹಿಳೆಯು ಶತ್ರುಗಳೊಂದಿಗೆ ಕಾದು ಮರಣ ಹೊಂದಿರುವುದನ್ನು ಗುರುತಿಸಬಹುದು. ಶಿರಸಪ್ಪಯ್ಯ ಮಠದಲ್ಲಿರುವ ಇನ್ನೊಂದು ವೀರಗಲ್ಲು ಕುದುರೆ ಸವಾರಿ ಮಾಡುತ್ತಿರುವ ವೀರ ಮಹಿಳೆಯದು. ಇದರಲ್ಲಿ ಮಹಿಳಾ ಯೋಧೆ ಶತ್ರುವನ್ನು ಎದುರಿಸಿ ನೆಲಕ್ಕೆ ಉರುಳಿಸುತ್ತಿರುವಳು. ಈ ವೀರಗಲ್ಲಿರುವ ಕಟ್ಟೆಯನ್ನು ಸ್ಥಳೀಯರು ಗಂಗಮ್ಮನದೆಂದೇ ಕರೆಯುತ್ತಿರುವರು. ವೀರಗಲ್ಲಿನಲ್ಲಿರುವ ಮಹಿಳೆಯು ಗಂಗಮ್ಮ ಎಂಬ ಹೆಸರಿನವಳಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಕೊಪ್ಪಳದ ಶಿರಸಪ್ಪಯ್ಯನ ಕೆರೆ ಬಳಿ ದೊರೆತ ಇನ್ನೊಂದು ವೀರಗಲ್ಲು ಕೂಡ ಮಹಿಳಾ ಯೋಧೆಯದೇ ಆಗಿದೆ. ಛತ್ರಿ-ಚಾಮರಧಾರೆಯರ ಜೊತೆ ಯುದ್ಧಕ್ಕೆ ಹೊರಟ ವೀರ ಮಹಿಳೆಯದು. ಇದು ಬೆಂಗಳೂರಿನ ವಸ್ತುಸಂಗ್ರಹಾಲಯದ ವೀರಗಲ್ಲಿನಷ್ಟು ಆಳವಾದ ಶಿಲ್ಪಗಳನ್ನು ಒಳಗೊಂಡಿಲ್ಲ. ಆದರೆ ಈ ವನಿತೆಯು ತನ್ನ ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದು, ಬಲಗೈಯಲ್ಲಿ ಖಡ್ಗವನ್ನು ಶತ್ರುವಿನೆಡೆಗೆ ಬೀಸುತ್ತಿರುವ ಚಿತ್ರಣ ನೈಜನೀಯವಾಗಿದೆ. ಈ ಮೇಲಿನ ಎಲ್ಲ ಅಂಶಗಳು ವಿಜಯನಗರ ಕಾಲದಲ್ಲಿ ಮಹಿಳಾ ಯೋಧರು ಹೋರಾಟಗಾರರು, ಶತ್ರುವಿನೊಂದಿಗೆ ಹೋರಾಟ ನಡೆಸುವ ಸಾಮರ್ಥ್ಯ ಹೊಂದಿದ್ದುದನ್ನು ದೃಢಪಡಿಸುತ್ತವೆ. ರಾಜನ ಆಸ್ಥಾನದಲ್ಲಿ ಅಂಗರಕ್ಷರಾಗಿಯೂ ಮಹಿಳೆ ಸೇವೆ ಸಲ್ಲಿಸುತ್ತಿದ್ದುದು ಮಹಾನವಮಿ ದಿಬ್ಬದ ಮೇಲಿನ ಉಬ್ಬು ಶಿಲ್ಪವೊಂದರಿಂದ ತಿಳಿದುಬರುತ್ತದೆ. ಈ ಶಿಲ್ಪದಲ್ಲಿ ಆಸ್ಥಾನದಲ್ಲಿ ಕುಳಿತ ಅರಸ ಹಾಗೂ ಅವನ ಹಿಂಭಾಗದಲ್ಲಿ ಕತ್ತಿ ಹಿಡಿದು ನಿಂತ ಮಹಿಳೆ ಇರುವಳು. ವಿಜಯನಗರ ಕಾಲದಲ್ಲಿ ಅಂಗರಕ್ಷಕ ಪಡೆಗೆಂದೇ ಪ್ರತ್ಯೇಕ ವಸತಿಗಳನ್ನು ಕಲ್ಪಿಸಿಕೊಡುತ್ತಿದ್ದುದು ಹಂಪೆಯ ರಾಜಾಂಗಣ ಕಟ್ಟಡಗಳಿಂದ ಅರಿಯಬಹುದು.

ಮಹಿಳೆಯು ವೀರಯೋಧೆ, ಅಂಗರಕ್ಷಕಿ, ಹೋರಾಟಗಾರ್ತಿ ಮಾತ್ರವಾಗಿರದೇ ಮಹಾಮಂಡಲೇಶ್ವರಳು ಆಗಿದ್ದಳು. ಎರಡನೆಯ ದೇವರಾಯನ ಸಹೋದರಿಯಾದ ಹರಿಮಾಳು ತಮಿಳು ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳೆನ್ನಲಾಗಿದೆ.[೪೮] ಅಂತೆಯೇ ಕ್ರಿ.ಶ.೧೫೪೨ರಲ್ಲಿ ಚನ್ನ ಭೈರದೇವಿಯು ಮಹಾಮಂಡಲೇಶ್ವರ ಳಾಗಿದ್ದಳು.[೪೯] ಅಲ್ಲದೇ ಕ್ರಿ.ಶ.೧೫೧೬ರಲ್ಲಿ ಕಲಲದೇವಿ ಎಂಬುವಳು ಕಳಸ -ಕಾರ್ಕಳ ರಾಜ್ಯದ ಗೌರ್ನರ್ ಆಗಿದ್ದುದನ್ನು ಕಾಣಬಹುದು.

ವಿಜಯನಗರದಲ್ಲಿ ರಾಣಿಯರು ಅರಸರ ಯುದ್ಧಗಳಲ್ಲಿ ಪಾಲ್ಗೊಂಡು ಅವರಿಗೆ ಹೋರಾಟದಲ್ಲಿ ಪ್ರೋತ್ಸಾಹ ನೀಡುತ್ತಿದ್ದುದು ತಿಳಿದುಬರುವ ಸಂಗತಿ. ಪ್ರಮುಖ ಬರಹಗಾರ್ತಿ, ವೀರಕಂಪಣ್ಣನ ಪತ್ನಿಯೂ ಆದ ಗಂಗಾದೇವಿಯು ಸ್ವತಃ ತನ್ನ ಪತಿಯೊಂದಿಗೆ ಮಧುರೆಯ ದಂಡೆಯಾತ್ರೆಯಲ್ಲಿ ಪಾಲ್ಗೊಂಡು ಯುದ್ಧ ಚಿತ್ರಣವನ್ನು ಕಣ್ಣಾರೆ ಕಂಡು, ಅಲ್ಲಿನ ವೀರಗಾಥೆಗಳನ್ನು ತನ್ನ ಕೃತಿಯಲ್ಲಿ ಚಾಚುತಪ್ಪದೇ ನಮೂದಿಸಿರುವುದನ್ನು ನೋಡಿದರೆ ಈಕೆ ವೀರಮಹಿಳೆಯೆಂಬುದರಲ್ಲಿ ಸಂಶಯವಿಲ್ಲ. ಗಂಗಾದೇವಿಯಂತೆ ಚಿನ್ನಾದೇವಿ ಮತ್ತು ತಿರುಮಲದೇವಿಯರು ಕೃಷ್ಣದೇವರಾಯನೊಂದಿಗೆ ಯುದ್ಧಗಳಿಗೆ ಹೋಗಿದ್ದರು. ಕ್ರಿ.ಶ.೧೫೧೫ರಲ್ಲಿ ನಡೆದ ಕೊಂಡವೀಡು ಮತ್ತಿತರ ಕೋಟೆಗಳನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಇವರು ಜೊತೆಯಲ್ಲಿದ್ದರು. ಕದನದಲ್ಲಿ ಗಳಿಸಿದ ವಿಜಯದ ತರುವಾಯ ರಾಣಿಯರೊಂದಿಗೆ ತಿರುಪತಿಗೆ ಭೇಟಿ ನೀಡಿ ತಿರುವೇಂಗಳನಾಥನಿಗೆ ದಾನದತ್ತಿಗಳನ್ನು ನೀಡಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.[೫೦] ಅಚ್ಯುತರಾಯನ ರಾಣಿ ಓದುವ ತಿರುಮಲದೇವಿಯು ಕೂಡ ಮಧುರ ದಂಡಯಾತ್ರೆಯಲ್ಲಿ ಪಾಲ್ಗೊಂಡಿದ್ದುದಾಗಿ ಹೇಳಲಾಗಿದೆ. ರಾಣಿಯರು ಅರಸರಿಗೆ ದಂಡೆಯಾತ್ರೆ ಸಮಯದಲ್ಲಿ ಅವರ ಜೊತೆಗಿದ್ದು ಹೋರಾಟಕ್ಕೆ ಪ್ರೋತ್ಸಾಹ ನೀಡುವ ಮೂಲಕ ಅದರ ಯಶಸ್ಸಿಗೂ ಕಾರಣರಾಗಿದ್ದರು.

ಈ ಮೇಲಿನ ಎಲ್ಲ ಮಾಹಿತಿಗಳು ವಿಜಯನಗರ ಕಾಲದಲ್ಲಿ ಮಹಿಳೆಯು ವೀರವನಿತೆ, ಹೋರಾಟಗಾರ್ತಿ ಹಾಗೂ ಪ್ರೋತ್ಸಾಹದ ಪ್ರತೀಕವಾಗಿದ್ದಳು. ಆದರೆ ಪ್ರವಾಸಿಗರ ವರದಿ ಹಾಗೂ ಸಾಹಿತ್ಯ ಕೃತಿಗಳು ನೀಡುವ ಚಿತ್ರಣ ಇನ್ನೊಂದು ಬಗೆಯದು. ಇಲ್ಲಿ ಮಹಿಳೆಯು ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದೇನೂ ನಿಜ. ಆದರೆ ಅವರು ಸೈನ್ಯಕ್ಕೆ ಬೇಕಾದ ನೀರು, ಆಹಾರ ಮತ್ತಿತರ ಸಾಮಗ್ರಿಗಳನ್ನು ಒದಗಿಸುವವರು ಮತ್ತು ವೇಶ್ಯೆಯರೂ ಆಗಿದ್ದರು. ವಿಜಯನಗರ ಸೈನ್ಯದಲ್ಲಿ ವೇಶ್ಯೆಯರು ಭಾಗವಹಿಸಿದ್ದ ವಿಚಾರವನ್ನು ಹಲವು ಆಕರಗಳು ತಿಳಿಸುತ್ತವೆ. ಕಾವ್ಯಗಳಲ್ಲೂ ಈ ಅಂಶವನ್ನು ಕಾಣಬಹುದು. ಸಾಲೆತೊರೆಯವರು, ವಿಜಯನಗರ ಕಾಲದಲ್ಲಿ ವೇಶ್ಯೆಯರು ಪಾಳೆಯದ ಒಂದು ಮುಖ್ಯ ಅಂಗವಾಗಿದ್ದರೆಂದು ಹೇಳಿದ್ದಾರೆ.[೫೧] ಪ್ರವಾಸಿ ನ್ಯೂನಿಜ್, ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆಯಲ್ಲಿ ಇಪ್ಪತ್ತು ಸಾವಿರ ವೇಶ್ಯೆಯರು ಇದ್ದರೆಂದು ಹೇಳಿದರೆ, ಬಾರ್ಬೋಸಾ ಯುದ್ಧದಲ್ಲಿದ್ದ ಹುಡುಗಿಯರ ಕುರಿತು, ''ಹೆಚ್ಚಿಗೆ ಸಂಬಳಕ್ಕೆ ಮೊದಲು ಅರ್ಹರು ಯಾರೆಂದರೆ ಮದುವೆಯಾಗದ

ಹುಡುಗಿಯರು. ಇಂಥವರು ಬಹಳ ಜನ ಇರುತ್ತಾರೆ. ಇವರು ಯುದ್ಧ ಮಾಡದಿದ್ದರೂ ಇವರನ್ನು ಮೆಚ್ಚಿದ ಯೋಧರು ವೀರಾವೇಶದಿಂದ ಹೋರಾಡುತ್ತಾರೆ''[೫೨] ಎಂದಿದ್ದಾನೆ. ರಾಮನಾಥ ಚರಿತದಲ್ಲಿ, ''ದಂಡಿನೊಳಗೆ ತೆರಳಿತ್ತು ಹತ್ತು ಸಾವಿರ ಪುಂಡರೀಕಾಕ್ಷಿಯರು'', ''ಕಡೆಗಣ್ಣಳ ನೋಟದಿಂದ ಕಾಮುಕರ ಕಂಗೆಡಿಸುತ ನಡೆಯ ಚೆಲ್ವಿಂದ ನಡೆಗೆಡಿಸುತ ನಡೆದಿತ್ತು ಗಣಿಕೆಯರ ಗಡಣವಾ ಪಾಳೆಯದೊಳಗೆ''[೫೩] ಎನ್ನುವ ವಾಕ್ಯಗಳು ಶಿಬಿರದಲ್ಲಿದ್ದ ವೇಶ್ಯೆಯರನ್ನು ಕುರಿತವುಗಳಾಗಿವೆ. ಹೀಗೆ ಮಹಿಳೆಯರು ವಿಜಯನಗರ ಸೈನ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ನೆರವಾಗಿದ್ದುದನ್ನು ನೋಡಬಹುದಾಗಿದೆ.

೩.೪.೨ ಅಶ್ವದಳ

ಪ್ರಾಚೀನ ಕರ್ನಾಟಕದ ಸೈನ್ಯವ್ಯವಸ್ಥೆಯಲ್ಲಿ ಕುದುರೆಗಿಂತ ಆನೆಯದು ಪ್ರಮುಖ ಸ್ಥಾನವಾಗಿದ್ದಿತು. ಇದು ಹೊಯ್ಸಳರ ಕಾಲದ ಹೊತ್ತಿಗೆ ಬದಲಾಗಿ, ಆನೆಯ ಸ್ಥಾನವನ್ನು ಕುದುರೆಗಳು ಅಲಂಕರಿಸಿದವೆನ್ನಬಹುದು. ಇದಕ್ಕೆ ಮಹಮದ್ -ಬಿನ್ -ತುಘಲಕ್ ಮತ್ತು ಅಲ್ಲಾವುದ್ದೀನ್ ಖಿಲ್ಜಿಯವರ ದಕ್ಷಿಣ ದಂಡಯಾತ್ರೆಗಳು ಕಾರಣವೆಂದೇ ಹೇಳಬೇಕು. ಮುಸ್ಲಿಮರ ಪ್ರಭಾವದಿಂದ ಕರ್ನಾಟಕದ ಸೈನ್ಯದಲ್ಲಿ ಕುದುರೆಯ ಹೆಚ್ಚು ಪರಿಚಯವಾಯಿತು. ಮಧ್ಯಯುಗದ ಯುದ್ಧವ್ಯವಸ್ಥೆಯಲ್ಲಿ ಕುದುರೆ ಅನಿವಾರ್ಯ ಅಂಗವಾಗಿದ್ದಿತು. ಅದು ಕರ್ನಾಟಕದ ಸೈನ್ಯದಲ್ಲಿ ಹೆಚ್ಚು ಹೆಚ್ಚು ಬಳಕೆಗೊಂಡುದು ಹೊಯ್ಸಳರು, ಯಾದವರು ಮತ್ತು ಅನಂತರ ಬಂದ ಬಹಮನಿ ಹಾಗೂ ವಿಜಯನಗರ ಅರಸರ ಕಾಲಗಳಲ್ಲಿ. ಹೊಯ್ಸಳ ಕಾಲದಲ್ಲಿ ವಿದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಅವುಗಳ ಸವಾರಿಯ ಶಿಕ್ಷಣ ನೀಡಲು ವಿಷ್ಣುವರ್ಧನನು ಪ್ರತ್ಯೇಕ ಶಾಲೆಯನ್ನು ತೆರೆದಿದ್ದನು. ಅನ್ತಪಾಲ ಸಾಹಣಿ ಎಂಬುವವನು ಈ ಅಶ್ವಪಡೆಯ ಮುಖ್ಯಸ್ಥ ಹಾಗೂ ತರಬೇತುದಾರನಾಗಿದ್ದುದು ತಿಳಿದುಬರುತ್ತದೆ.[೫೪] ಕುದುರೆಯ ಮೇಲ್ವಿಚಾರಕನಿಗೆ 'ತುರಗ ಸಾಹಣಿ' ಎಂದೂ ಕರೆಯಲಾಗುತ್ತಿತ್ತು. ಕುದುರೆಗಳನ್ನು ಕೊಳ್ಳುವ ಮೊದಲು ಅದರ ಲಕ್ಷಣಗಳನ್ನು ಗುರುತಿಸುವಲ್ಲಿ ತುರಗ ಸಾಹಣಿಗಳ ಪಾತ್ರ ಅತ್ಯಂತ ಮಹತ್ವದ್ದು, ಅಂತೆಯೇ ರಾಜನ ವಾಹನವಾಗಿರಬೇಕಾದ ಕುದುರೆಯು ಯಾವ ಯಾವ ಲಕ್ಷಣಗಳನ್ನು ಹೊಂದಿರಬೇಕೆಂಬುದನ್ನು ಶಿವತತ್ತ್ವರತ್ನಾಕರದಲ್ಲಿ ಹೀಗೆ ಹೇಳಲಾಗಿದೆ : ''ಉದ್ದ ಕತ್ತು, ಸೊಗಸಾದ ಪಕ್ಕೆ, ದೊಡ್ಡಕಣ್ಣು, ಸೊಂಟ, ಹೆಗಲು, ಎದೆ, ಹಣೆ, ಬೆನ್ನು, ವೃಷಣ, ಕಿವಿಗಳು ಚಿಕ್ಕದಾಗಿದ್ದು, ಗಟ್ಟಿಯೂ, ಒತ್ತಾಗಿಯೂ ಇರುವ ಗೊರಸುಗಳ, ಉದ್ದ ಮಾಂಸವಿಲ್ಲದ ಮೊಳಕಾಲುಗಳ, ನಿತಂಬ ಭಾಗದ ಹಾಗೂ ರೋಮಗಳು ತೆಳ್ಳಗಿರುವ ಬಾಲ, ಮೃದುವಾದ ನಾಲಿಗೆ, ಮೂತಿ, ಕಟವಾಯಿ, ತುಟಿ ಹಾಗೂ ಕತ್ತಿನ ಕೂದಲುಗಳ, ಶುದ್ಧವಾದ ಸುಳಿಗಳ, ಒಳ್ಳೆಯ ಬಣ್ಣದ, ಒಂದಕ್ಕೊಂದು ಬಿಗಿಯಾಗಿ ಸೇರಿಕೊಂಡ ಹಲ್ಲುಗಳ - ಈ ಬಗೆಯ ಕುದುರೆಗಳು ರಾಜರಿಗೆ ವಾಹನವಾಗಿರಬೇಕು''.[೫೫] ಯುದ್ಧ ಕುದುರೆಗಳನ್ನು ಆಯ್ಕೆ ಮಾಡುವಾಗಲು ಈ ಬಗೆಯ ಲಕ್ಷಣಗಳನ್ನು ಗುರುತಿಸುತ್ತಿದ್ದುದು ಸಾಮಾನ್ಯವಾಗಿದ್ದಿತು.

ವಿಜಯನಗರ ಕಾಲದಲ್ಲಿ ಕಾಲ್ದಳದ ನಂತರದ ಸ್ಥಾನ ಅಶ್ವದಳದ್ದಾಗಿತ್ತು. ಈ ಅರಸರು ಅಶ್ವಪಡೆಯಲ್ಲಿ ವಿಶೇಷ ಆಸಕ್ತಿವಹಿಸಿದ್ದುದಲ್ಲದೆ, ಪರಿಣತಿಯನ್ನು ಪಡೆದಿದ್ದರು. ಅಶ್ವದಳದಲ್ಲಿ ವಿಶೇಷ ಪರಿಣತಿ ಹೊಂದಿದ್ದುದರಿಂದ ಎರಡನೆಯ ದೇವರಾಯ, ಕೃಷ್ಣದೇವರಾಯ, ಸದಾಶಿವರಾಯರನ್ನು ಅಶ್ವಪತಿಗಳೆಂದೇ ಶಾಸನಗಳಲ್ಲಿ ಕರೆಯಲಾಗಿದೆ.[೫೬] ಆಮುಕ್ತಮಾಲ್ಯದವು ಇವುಗಳ ಆರೈಕೆ ಕುರಿತು, ಗಜಸೈನ್ಯ - ಅಶ್ವಸೈನ್ಯಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಿಕೊಳ್ಳುತ್ತಿರಬೇಕು. ಆನೆ-ಕುದುರೆಗಳನ್ನು ಅವುಗಳ ಹಿತಾಹಿತಗಳನ್ನು ಅರಿತು ಆರೈಕೆ ಮಾಡಬಲ್ಲ ನೆಚ್ಚಿನ ಭಂಟರ ವಶದಲ್ಲಿರಿಸಬೇಕು. ತಮ್ಮ ಸುಖ-ಸಂತೋಷಗಳಿಗಾಗಿ ಆ ಪ್ರಾಣಿಗಳನ್ನು ಹಿಂಸೆಗೀಡು ಮಾಡುವ ಅಧಿಕಾರಿಗಳನ್ನು ನಂಬಬಾರದು ಎಂದಿದೆ.[೫೭]

ಅಶ್ವಬಲ

ಮೌರ್ಯರ ಕಾಲದಿಂದಲೂ ಭಾರತದಲ್ಲಿ ಅಶ್ವದಳವು ಮುಖ್ಯ ಪಾತ್ರ ವಹಿಸಿದ್ದುದು ತಿಳಿದು ಬರುವ ಸಂಗತಿ. ಚಂದ್ರಗುಪ್ತ ಮೌರ್ಯನು ೨೦,೦೦೦ ಅಶ್ವದಳ ಮತ್ತು ೯,೦೦೦ ಗಜಗಳನ್ನು ಹೊಂದಿದ್ದನು. ಕರ್ನಾಟಕದಲ್ಲಿ ಕ್ರಿ.ಶ.ಏಳನೆಯ ಶತಮಾನದಲ್ಲಿ ಅಶ್ವಸೇನೆಯು ಅಸ್ತಿತ್ವದಲ್ಲಿದ್ದಿತು. ಬಾದಾಮಿ ಚಾಲುಕ್ಯರ ಐಹೊಳೆ ಶಾಸನವು ಮಂಗಳೇಶನ ಅಶ್ವಸೇನೆಯನ್ನು ಉಲ್ಲೇಖಿಸಿದೆ.[೫೮] ಸೇವುಣರ ಐದನೆಯ ಬಿಲ್ಲಮನು ಹೊಯ್ಸಳರ ವಿರುದ್ದ ಸೊರಟೂರು ಕದನಕ್ಕೆ ೧೨,೦೦೦ ಅಶ್ವದಳವನ್ನು ತೆಗೆದುಕೊಂಡು ಹೋಗಿದ್ದುದು ಶಾಸನದಿಂದ ತಿಳಿದುಬರುತ್ತದೆ.[೫೯] ಇದೇ ಮನೆತನಕ್ಕೆ ಸೇರಿದ ಸಿಂಘಣನ ಕ್ರಿ.ಶ.೧೨೫೯ರ ಶಾಸನವು ಕದಂಬರ ವಿರುದ್ಧ ಗುತ್ತಿಕೋಟೆಯನ್ನು ವಶಪಡಿಸಿಕೊಳ್ಳಲು ೨೦,೦೦೦ ಅಶ್ವಗಳನ್ನು ಉಪಯೋಗಿಸಿದ್ದನೆಂದು ತಿಳಿಸುತ್ತದೆ.[೬೦] ಇವು ವಿಜಯನಗರ ಪೂರ್ವದ ಅಶ್ವಬಲವನ್ನು ಸಮರ್ಥಿಸುವಂಥವು.

ವಿಜಯನಗರ ಕಾಲದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಸ್ಥಾನ ಹಾಗೂ ಪ್ರಾಶಸ್ತ್ಯ ಕುದುರೆಗಳಿಗೆ ದೊರಕಿತು. ಇದಕ್ಕೆ ಕಾರಣ ಸಮಕಾಲೀನ ಶತ್ರುಪಡೆಗಳ ಬಲಕ್ಕೆ ಪ್ರತಿಯಾಗಿ ಬಲಗೊಳಿಸಬೇಕಾಗಿದ್ದುದು. ಅದರಂತೆ ಆರಂಭದ ಅರಸರಿಂದಲೂ ಕುದುರೆಗಳನ್ನು ಸೈನ್ಯದಲ್ಲಿ ಹೆಚ್ಚು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಕ್ರಿ.ಶ.೧೩೬೬-೬೮ ರಲ್ಲಿ ೪೦,೦೦೦ ಅಶ್ವದಳವಿದ್ದುದನ್ನು ಫೆರಿಸ್ತಾ ಉಲ್ಲೇಖಿಸುತ್ತಾನೆ. ಫೆರಿಸ್ತಾ ಹೇಳುವುದು ಒಂದನೇ ಬುಕ್ಕರಾಯನ ಕಾಲದ ಅಶ್ವದಳವಾಗಿದೆ. ಇದಕ್ಕೆ ಸಮರ್ಥನೀಯವೆನ್ನುವಂತೆ ಶಾಸನವೊಂದು ಬುಕ್ಕರಾಯನನ್ನು "ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ"ನೆಂದು ಕರೆದಿದೆ.[೬೧] ಈ ಬಿರುದನ್ನು ಗಮನಿಸಿದರೆ ಅಂದು ಹೊರದೇಶಗಳಿಂದ ಮಾಂಡಲಿಕರನ್ನೊಳಗೊಂಡಂತೆ ಅರಸರು ಕುದುರೆಗಳನ್ನು ಸೈನ್ಯಕ್ಕಾಗಿ ಆಮದು ಮಾಡಿಕೊಳ್ಳುತ್ತಿದ್ದುದಾಗಿ ತಿಳಿದುಬರುವುದು. ಅಲ್ಲದೆ ಕುದುರೆಗಳಿಗೆ ಪ್ರತಿಯಾಗಿ ಹೊನ್ನನ್ನು ವಿನಿಮಯ

ಸಾಧನವಾಗಿ ಬಳಸಿರುವುದು ಗಮನಿಸಬೇಕಾದ ಅಂಶ. ಎರಡನೇ ದೇವರಾಯನ ಕಾಲದಲ್ಲಿ ಅಂದರೆ ಕ್ರಿ.ಶ.೧೪೪೨ರ ಸುಮಾರಿಗೆ ವಿಜಯನಗರ ಸೇನೆಯು ಕೆಲವು ಯುದ್ಧಗಳಲ್ಲಿ ವಿಫಲತೆ ಹೊಂದಿದ್ದುದನ್ನು ಫೆರಿಸ್ತಾ ಹೇಳುತ್ತಾನೆ. ಆಗ ದೇವರಾಯನು ತನ್ನ ಸೈನ್ಯದ ಹಿನ್ನಡೆಗೆ ಕಾರಣಗಳನ್ನು ತಿಳಿಯಲು ವರಿಷ್ಠ ಅಧಿಕಾರಿಗಳು ಹಾಗೂ ಪ್ರಮುಖ ಬ್ರಾಹ್ಮಣರ ಅಧಿವೇಶನ ಕರೆಯುತ್ತಾನೆ. ಅದರಲ್ಲಿ ತನ್ನ ಕರ್ನಾಟಕ ನಾಡು ಬಹಮನಿ ರಾಜ್ಯಕ್ಕಿಂತ ವಿಸ್ತಾರ, ಜನಸಂಖ್ಯೆ ಮತ್ತು ಆದಾಯಗಳಲ್ಲಿ ಎಷ್ಟೋ ಪಟ್ಟು ಮೇಲಾಗಿದೆ. ಅದೇ ರೀತಿ ತನ್ನ ಸೈನ್ಯವು ಎಷ್ಟೋ ಹೆಚ್ಚಾಗಿರುವುದನ್ನು ವಿವರಿಸಿ, ತಾನು ಕಪ್ಪಕೊಡುವ ಸ್ಥಿತಿಗೆ ಹಾಗೂ ಮುಸಲ್ಮಾನರ ಯಶಸ್ಸುಗಳಿಗೆ ಕಾರಣಗಳನ್ನು ಶೋಧಿಸಬಯಸಿದನೆಂದು ಹೇಳುತ್ತಾನೆ. ಆಗ ಸಭೆಯು ಅರಸನಿಗೆ ಮುಸಲ್ಮಾನರ ಶ್ರೇಷ್ಠತೆ ಎರಡು ಸ್ಥಿತಿಗಳಿಂದ ಉಂಟಾಗಿದೆ. ಒಂದು, ಅವರ ಕುದುರೆಗಳೆಲ್ಲ ಬಲಿಷ್ಟವಾಗಿವೆ ಮತ್ತು ಕರ್ನಾಟಕದ ದುರ್ಬಲ, ತೆಳ್ಳಗಿನ ಕುದುರೆಗಳಿಗಿಂತ ಹೆಚ್ಚು ಶ್ರಮ ಸಹಿಸಬಲ್ಲವು. ಇನ್ನೊಂದು, ಬಹಮನಿ ಮನೆತನದ ಸುಲ್ತಾನರು ಯಾವಾಗಲೂ ತಗ್ಗದಂತೆ ನೋಡಿಕೊಳ್ಳುತ್ತಿದ್ದ ಮತ್ತು ರಾಯನ ಸೈನ್ಯದಲ್ಲಿರದ ಶ್ರೇಷ್ಠ ಬಿಲ್ಲುಗಾರರ ದೊಡ್ಡ ಪಡೆಗಳು ಅವರ ಯಶಸ್ಸಿಗೆ ಕಾರಣ ಎಂಬುದಾಗಿ ಅಭಿಪ್ರಾಯಪಡುತ್ತದೆ.[೬೨]

ಎರಡನೇ ದೇವರಾಯನು ತನ್ನ ಸೈನ್ಯದಲ್ಲಿದ್ದ ದೋಷಗಳನ್ನು ತಿಳಿದು ಸರಿಪಡಿಸುವತ್ತ ಮುನ್ನಡೆದಿರುವುದಂತೂ ನಿಜ. ತನ್ನ ಅವಧಿಯಲ್ಲಿ ಅಶ್ವಸೈನ್ಯ ಹಾಗೂ ಬಿಲ್ಲುಗಾರರ ಪಡೆಯನ್ನು ಬಲಪಡಿಸುವಲ್ಲಿ ಸಾಕಷ್ಟು ಶ್ರಮಿಸಿದನು. ಅಂತೆಯೇ ಇವುಗಳ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಮುಸ್ಲಿಂ ಯೋಧರನ್ನು ಸೇನೆಯಲ್ಲಿ ಸೇರಿಸಿಕೊಂಡ ಅಂಶ ತಿಳಿದುಬರುತ್ತದೆ. ಫೆರಿಸ್ತಾನು ಎರಡನೆಯ ದೇವರಾಯನ ಕಾಲದಲ್ಲಿ ಎರಡು ಸಾವಿರ ಬಿಲ್ಲುಗಾರರಿದ್ದರೆಂದು ತಿಳಿಸಿದರೆ, ಶಾಸನವೊಂದು ಹತ್ತು ಸಾವಿರ ತುರುಕ ರಾವುತರಿದ್ದುದನ್ನು ಸ್ಪಷ್ಟಪಡಿಸುತ್ತದೆ.[೬೩] ದೇವರಾಯ ಮುಸ್ಲಿಮರನ್ನು ಸೈನ್ಯಕ್ಕೆ ಸೇರಿಸಿಕೊಂಡುದು ಮಾತ್ರವಲ್ಲ. ಅವರಿಗೆ ರಾಜಧಾನಿಯಲ್ಲಿ ಪ್ರತ್ಯೇಕ ಸ್ಥಳವನ್ನು ನೀಡಿದ್ದನು. ತನ್ನ ಸಿಂಹಾಸನದ ಮುಂದಿನ ಪೀಠದ ಮೇಲೆ ಕುರಾನನ್ನು ಇಟ್ಟು ಗೌರವಿಸಿದ್ದನು. ಈತನ ಅವಧಿಯಲ್ಲಿ ಅಧಿಕಾರಿಯಾಗಿದ್ದ ಕಟಿಗೆಯ ಅಹಮದಖಾನನು ವಿಜಯನಗರದಲ್ಲಿ ಧರ್ಮಶಾಲೆ ಮತ್ತು ಬಾವಿಯೊಂದನ್ನು ಕಟ್ಟಿಸಿರುವುದನ್ನು ಇಂದಿಗೂ ಕಾಣಬಹುದು.[೬೪] ಅಲ್ಲದೆ ವಿಜಯನಗರ ಪಟ್ಟಣದ ಶೃಂಗಾರದ ಹೆಬ್ಬಾಗಿಲ ಆಚೆಗಿನ ಸ್ಥಳವನ್ನು ಗೋರಿ ಕೆಳಗಣ ಗ್ರಾಮವೆಂದೇ ಶಾಸನಗಳು ಕರೆದಿವೆ.[೬೫] ಅಂತೆಯೇ ಎರಡನೆಯ ದೇವರಾಯನ ಸೈನ್ಯದಲ್ಲಿ ಬಿಲ್ಲುಗಾರಿಕೆಯಲ್ಲಿ ಪರಿಣಿತಿ ಹೊಂದಿದ ೨,೦೦೦ ಮುಸ್ಲಿಂ ಯೋಧರಿದ್ದರು. ಇದರಿಂದ ಮುಸ್ಲಿಮರಿಗೆ ರಾಜ್ಯ ಹಾಗೂ ಸೈನ್ಯದಲ್ಲಿ ಅರಸರು ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದುದು ದೃಢವಾಗುತ್ತದೆ.

ಎರಡನೆಯ ದೇವರಾಯನು ಮುಸ್ಲಿಮರಿಗೆ ಸೈನ್ಯದಲ್ಲಿ ಅವಕಾಶ ಕಲ್ಪಿಸಿಕೊಡುವ ಮೂಲಕ ಬಹಮನಿ ಸೈನ್ಯದ ಸೇನಾರಹಸ್ಯಗಳನ್ನು ತಿಳಿಯಲು ಹಾಗೂ ತಮ್ಮ ಸೈನ್ಯದಲ್ಲಿ ಅಳವಡಿಸಿ ಕಾರ್ಯದಕ್ಷತೆ ಹೆಚ್ಚಿಸಲು ಪ್ರಯತ್ನಿಸಿರುವುದನ್ನು

ಕಾಣಬಹುದು. ೧೪೬೮-೭೪ರ ನಡುವೆ ಭೇಟಿ ನೀಡಿದ್ದ ರಷ್ಯಾದ ವರ್ತಕ ನಿಕಿಟಿನ್, ೫೦,೦೦೦ ಕುದುರೆಗಳು ವಿಜಯನಗರ ಸೈನ್ಯದಲ್ಲಿದ್ದವೆನ್ನುವನು. ಎರಡನೆಯ ದೇವರಾಯನ ಮಹಾಸೇನಾಪತಿ ನಾಗಮನಾಯಕನು ದಕ್ಷಿಣದ ದಿಗ್ವಿಜಯಕ್ಕೆಂದು ೪೦,೦೦೦ ಆಯ್ಕೆ ಮಾಡಿದ ಕುದುರೆಗಳನ್ನು ತೆಗೆದುಕೊಂಡು ಹೋಗಿದ್ದುದಾಗಿಯೂ ತಿಳಿದುಬರುವುದು.[೬೬] ಇವನ ನಂತರ ನಮಗೆ ಅಶ್ವದಳದ ಕುರಿತು ಹೆಚ್ಚಿನ ಮಾಹಿತಿಗಳು ದೊರೆಯುವುದು ಕೃಷ್ಣದೇವರಾಯನ ಕಾಲದಲ್ಲಿ. ಈ ಕಾಲಘಟ್ಟದಲ್ಲಿ ಅಶ್ವಪಡೆಯು ಔನ್ನತ್ಯ ಸ್ಥಿತಿಯನ್ನು ತಲುಪಿದ್ದಿತು. ಕೃಷ್ಣದೇವರಾಯನು ಸ್ವತಃ ಅಶ್ವಾರೋಹಿಯಾಗಿದ್ದನು. ಆಮುಕ್ತಮಾಲ್ಯದಲ್ಲಿ ಅವನು ಸೈನ್ಯಕ್ಕೆ ಅದರಲ್ಲೂ ಆನೆಕುದುರೆಗಳಿಗೆ ಮಾಡಲಾದ ಖರ್ಚು-ವೆಚ್ಚಗಳ ಬಗೆಗೆ ಹೇಳುತ್ತಾ : ಆನೆ-ಕುದುರೆಗಳನ್ನು ಕೊಂಡುಕೊಳ್ಳಲು ವೆಚ್ಚ ಮಾಡುವ ಹಣ ಎಂದೂ ಖರ್ಚೆಂದು ಭಾವಿಸುವಂತಿಲ್ಲ, ರಾಜನಾದವನು ತನ್ನ ಆದಾಯದ ಅರ್ಧಭಾಗವನ್ನು ಸೇನಾವ್ಯವಸ್ಥೆಗೆಂದೇ ಖರ್ಚುಮಾಡಬೇಕು. ಕೃಷ್ಣದೇವರಾಯ ತಾನು ಹೇಳಿದಂತೆ ಮಾಡಿಯೂ ತೋರಿಸಿದ್ದಾನೆ. ಅವನ ಮೂಲ ಸೈನ್ಯದಲ್ಲಿ ೩೫,೦೦೦ ಅಶ್ವದಳವಿದ್ದುದನ್ನು ಪಾಯೇಸ್ ಉಲ್ಲೇಖಿಸಿದರೆ, ಬಾರ್ಬೋಸಾ ೨೦,೦೦೦ವೆಂದೂ, ನ್ಯೂನಿಜ್ ೩೨,೬೦೦ ಎಂದು ಹೇಳಿರುವರು. ರಾಯವಾಚಕಮು ಕೃಷ್ಣರಾಯನ ಜೀವನ - ಸಾಧನೆಗಳಿಗೆ ಸಂಬಂಧಿಸಿದ್ದು ರಾಯನ ಸೈನ್ಯದಲ್ಲಿ ೬೦,೦೦೦ ಕುದುರೆಗಳಿದ್ದುದನ್ನು ಸ್ಪಷ್ಟಪಡಿಸುತ್ತದೆ. ಕೃಷ್ಣದೇವರಾಯ ಅಶ್ವಪಡೆಗೆ ವಿಶೇಷ ಮಹತ್ವ ನೀಡಿದ್ದುದನ್ನು ಇಲ್ಲಿ ಗಮನಿಸಬಹುದು.

ಕರ್ತವ್ಯಗಳು : ಸೈನ್ಯದಲ್ಲಿ ಅಶ್ವದಳದ ಪಾತ್ರ ಮಹತ್ವದ್ದು ಹಾಗೂ ತುಂಬಾ ಚಟುವಟಿಕೆಯುಳ್ಳದ್ದು. ಈ ಪಡೆಯ ಕರ್ತವ್ಯಗಳನ್ನು ಕೌಟಲ್ಯನು ಸುದೀರ್ಘವಾಗಿ ವಿವರಿಸಿದ್ದಾನೆ : "ಕುದುರೆಯ ಸೈನ್ಯವು ಶಿಬಿರವನ್ನು ಏರ್ಪಡಿಸುವ ಭೂಮಿಯಲ್ಲಿ ಗೂಢವಾಗಿರುವ ಶತ್ರು ಸೈನ್ಯವನ್ನು ಓಡಿಸುವ, ಸೈನ್ಯವು ಬಿಡುಬಿಟ್ಟಲ್ಲಿ ಉಪದ್ರವ ಇಲ್ಲದಂತೆ ಮಾಡುವ, ದಾರಿಯಲ್ಲಿ ಸಿಕ್ಕುವ ಕಾಡಿನಲ್ಲಿ ಕಳ್ಳರನ್ನು ಓಡಿಸುವ ಕೆಲಸ ಮಾಡಬೇಕು. ಶಿಬಿರಕ್ಕೆ ಯೋಗ್ಯವಾದ ಪ್ರದೇಶವನ್ನು ಮೊದಲು ಆಕ್ರಮಿಸಿಕೊಳ್ಳುವುದು ಜಲಾಶಯಗಳನ್ನು ತಮಗನುಕೂಲವಾದ ಗಾಳಿಯುಳ್ಳ ಮತ್ತು ಎದುರಿಗೆ ಸೂರ್ಯರಶ್ಮಿ ಬೀಳದ ಪ್ರದೇಶವನ್ನು ಆಕ್ರಮಿಸುವುದು. ಶತ್ರುಸೈನಿಕರು ಪ್ರವೇಶಿಸದಂತೆ ನೋಡಿಕೊಳ್ಳುವುದು, ಶತ್ರುಸೈನ್ಯದಿಂದ ಉಂಟಾಗುವ ಕ್ಷೋಭೆಯನ್ನು ಹೋಗಲಾಡಿಸಿ ಧೈರ್ಯವನ್ನು ಉಂಟುಮಾಡುವುದು. ಶತ್ರು ಸೈನ್ಯದೊಳಗೆ ಹೊಕ್ಕು ಕ್ಷೋಭೆ ಉಂಟುಮಾಡುವುದು. ಆಯಾಸದಿಂದ ಬಳಲಿದ ತನ್ನ ಸೈನ್ಯಕ್ಕೆ ಸಹಾಯ ಮಾಡುವುದು, ಶತ್ರು ಸೈನಿಕರನ್ನು ಹಿಂಬಾಲಿಸಿ ಬಂಧಿಸುವುದು, ಬಂಧಿಸಲ್ಪಟ್ಟ ತನ್ನವರನ್ನು ಬಿಡಿಸುವುದು, ಹಿಂದೆ, ಮುಂದೆ ಮತ್ತು ಪಾರ್ಶ್ವಗಳಿಂದ ಶತ್ರುಗಳಿಗೆ ಹೊಡೆತ ಕೊಡುವುದು, ಸೋತ ಶತ್ರುಸೈನ್ಯವನ್ನು ಬೆನ್ನಟ್ಟುವುದು, ಚದುರಿರುವ ತನ್ನ ಸೈನ್ಯವನ್ನು ಒಂದು ಗೂಡಿಸುವುದು[೬೭]- ಇವುಗಳೆಲ್ಲಾ ಅಶ್ವದಳವು ನಿರ್ವಹಿಸುತ್ತಿದ್ದ ಕಾರ್ಯಗಳಾಗಿವೆ. ಕೌಟಲ್ಯ ಹೇಳುವ ಅಶ್ವದಳದ ಕರ್ತವ್ಯಗಳು ಎಲ್ಲಾ ಕಾಲಗಳಲ್ಲೂ ಪ್ರಸ್ತುತವಾಗಿದ್ದವು.

ನಿರ್ವಹಣೆ : ವಿಜಯನಗರ ಆರಂಭಕಾಲದ ಸೈನ್ಯದಲ್ಲಿ ಅಶ್ವದಳವಿದ್ದರೂ ಅಷ್ಟೊಂದು ಪ್ರಬಲಯುತವಾಗಿರಲಿಲ್ಲ. ಆದರೆ ಬಹಮನಿಯವರಿಗೆ ದೆಹಲಿ ಸುಲ್ತಾನರ ಪ್ರಭಾವವಿದ್ದುದರಿಂದ ಅವರು ಪ್ರಬಲ ಅಂಗವಾಗಿ ರೂಪಿಸಿಕೊಂಡಿದ್ದರು. ಬುಕ್ಕರಾಯನು ಅಶ್ವಪಡೆಗೆ ಕುದುರೆಗಳನ್ನು ಅರಬ್, ಪರ್ಶಿಯಾ ಮುಂತಾದ ದೇಶಗಳಿಂದ ಆಮದು ಮಾಡಿಕೊಳ್ಳುವ ಮೂಲಕ ಅಶ್ವಪಡೆಯತ್ತ ವಿಶೇಷ ಗಮನಹರಿಸಿದ್ದುದನ್ನು ಈ ಹಿಂದೆ ನೋಡಿದ್ದೇವೆ. ಇವನ ನಂತರ ಒಂದನೆಯ ದೇವರಾಯ ಅಶ್ವಗಳನ್ನು ಪರ್ಶಿಯಾ ಮತ್ತು ಅರೇಬಿಯಾಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಅವುಗಳ ನಿರ್ವಹಣೆಗೆ ಯೋಗ್ಯ ಸಿಬ್ಬಂದಿಯನ್ನು ನೇಮಿಸಿದ್ದನು. ಎರಡನೆಯ ದೇವರಾಯನು ತನ್ನ ಕಾಲದಲ್ಲಾದ ಯುದ್ಧಗಳಲ್ಲಿ ವಿಜಯನಗರವು ಅನುಭವಿಸುತ್ತಿದ್ದ ವೈಫಲ್ಯಗಳಿಗೆ ಕಾರಣಗಳನ್ನು ಹುಡುಕುತ್ತಾನೆ. ಅದರಂತೆ ಬಹಮನಿಗಳು ದೆಹಲಿ ಸುಲ್ತಾನರ ಪದ್ಧತಿಯನ್ನು ಅನುಸರಿಸಿ ಅಶ್ವದಳದ ಮೇಲೆ ಹೆಚ್ಚು ನಂಬಿಕೆಯನ್ನು ಇಟ್ಟಿದ್ದುದು. ಕಾರಣ ಅಶ್ವದಳವು ಹೆಚ್ಚು ಕಾರ್ಯಪ್ರವೀಣವಾಗಿದ್ದು ವಿಜಯನಗರದವರಿಗಿಂತ ಚುರುಕಾಗಿದ್ದುದು ಗೊತ್ತಾಗುತ್ತದೆ. ಇದನ್ನು ತಿಳಿದ ವಿಜಯನಗರ ಅರಸನು ಮುಂದೆ ಅಶ್ವಪಡೆಯತ್ತ ಹೆಚ್ಚು ಗಮನ ಹರಿಸಿದನು. ಈ ಅರಸರಿಗೆ ಇದ್ದ ಆಸಕ್ತಿ ಕುರಿತು ನ್ಯೂನಿಜ್ ಒಂದೆಡೆ, ''ವಿಜಯನಗರದ ಅರಸುಗಳಿಗೆ ಕುದುರೆಗಳನ್ನು ಸಾಕುವುದೆಂದರೆ ಬಹು ಆಸೆ. ಯಾವಾಗಲೂ ಇವರ ಲಾಯಗಳಲ್ಲಿ ೮೦೦-೯೦೦ ಕುದುರೆಗಳೂ, ೪೦೦-೫೦೦ ಆನೆಗಳೂ ಇರುತ್ತವೆ'' ಎಂದಿದ್ದಾನೆ. ಅಲ್ಲದೆ ಇವುಗಳ ನಿರ್ವಹಣೆ ಹೇಗೆ ನಡೆಯುತ್ತಿತ್ತೆಂಬುದಕ್ಕೂ ಉತ್ತರ ಕೊಡುತ್ತಾನೆ : ಕುದುರೆಗಳ ನಿರ್ವಹಣೆಗೆ ದಿನಕ್ಕೆ ೨೦೦೦ ಪಾರ್ದಾಂವ್‌ಗಳಷ್ಟು ಖರ್ಚಾಗುತ್ತದೆ. ೬೦೦೦ ಜನ ಕುದುರೆ ಸವಾರರನ್ನು ರಾಜನು ಸಂಬಳ ಕೊಟ್ಟು ಇಟ್ಟುಕೊಂಡಿದ್ದುದಾಗಿಯೂ ಹೇಳುವನು.[೬೮] ವಿದೇಶಗಳಿಂದ ಆಮದಾಗುತ್ತಿದ್ದ ಕುದುರೆಗಳನ್ನು ಹೇಗೆ ಸಾಕುತ್ತಿದ್ದರೆನ್ನುವುದಕ್ಕೆ ನ್ಯೂನಿಜ್, ''ಕುದುರೆ ಸಾಕುವವರಿಗೆ ಒಬ್ಬೊಬ್ಬನಿಗೆ ಆರಾರು ಕುದುರೆಗಳನ್ನು ಸಾಕುವುದಕ್ಕೆ ಕೊಡುತ್ತಾನೆ. ಕುದುರೆಗಳ ಮೇಲೆ ರಾಜನ ಗುರುತು ಹಾಕಿರುತ್ತಾರೆ. ಕುದುರೆ ಸತ್ತರೆ ಗುರುತು ಹಾಕಿರುವ ಭಾಗದ ಚರ್ಮವನ್ನು ಕೊಯ್ದು ಅಶ್ವದಳದ ನಾಯಕನಾದ ಮದನಾರ್ಕನಿಗೆ ತೋರಿಸಿ ಬೇರೆ ಕುದುರೆ ಪಡೆಯಬಹುದು[೬೯] ಎಂದಿರುವನು. ಬಾರ್ಬೋಸಾ ಕುದುರೆ ಸಾಕುವ ವ್ಯವಸ್ಥೆಯನ್ನು ಈ ರೀತಿ ಹೇಳಿದ್ದಾನೆ: ''ಕುದುರೆಗಳನ್ನು ತನ್ನ ಶ್ರೀಮಂತ ಸರದಾರರಿಗೆ ಹಂಚಿಕೊಟ್ಟು ಅವರು ಅವುಗಳನ್ನು ಸಾಕುವಂತೆ ವ್ಯವಸ್ಥೆ ಮಾಡಿದ್ದಾನೆ. ಒಬ್ಬೊಬ್ಬ ಅಂಗರಕ್ಷ ಯೋಧನಿಗೆ ಒಂದು ಕುದುರೆಯನ್ನೂ, ಕುದುರೆಯ ಮಾಲೀಸು ಮಾಡಲು ಒಬ್ಬ ಆಳನ್ನೂ ಕೊಡುತ್ತಾನೆ. ಅಲ್ಲದೆ ಒಬ್ಬ ಗುಲಾಮೀ ಹುಡುಗಿಯನ್ನೂ ಕೊಟ್ಟು, ನಾಲ್ಕೈದು ಚಿನ್ನದ ಪರ್ದೋಗಳ ಮಾಸಾಶನವನ್ನು ಕೊಡುತ್ತಾನೆ.[೭೦] ಇದು ಕುದುರೆಗಳನ್ನು ಸಾಕುವ ಪರಿಯಾದರೆ, ಇವುಗಳಿಗಾಗಿ ಮಾಡಲಾದ ಖರ್ಚನ್ನು ಕುರಿತಂತೆ ಬಾರ್ಬೋಸಾ, ''ರಾಜನ ಖರ್ಚಿನಲ್ಲಿ ಇವುಗಳನ್ನು ಸಾಕಿ ಸಲುಹುತ್ತಾರೆ'' ಎಂದಿದ್ದಾನೆ. ರಾಜನಿಗೆ ಈ ಹಣವೆಲ್ಲಿ ಬರುತ್ತಿತ್ತೆನ್ನುವುದಕ್ಕೆ ಪಾಯೇಸ್, ''ಬಿಸನಗರದಿಂದ ಬರುವ ಉತ್ಪತ್ತಿಯಿಂದ ಈ ಆನೆ - ಕುದುರೆಗಳ ಖರ್ಚು ತೂಗುತ್ತದೆ'' ಎನ್ನುತ್ತಾನೆ.[೭೧] ಇಷ್ಟೆಲ್ಲ ಆರೈಕೆಯಿಂದ ಕುದುರೆಗಳನ್ನು

ಸಾಕುತ್ತಿದ್ದರೂ ''ಇಲ್ಲಿ ಕುದುರೆಗಳು ಬಹಳ ದಿನಗಳು ಬದುಕುವುದಿಲ್ಲ''ವೆಂದು ಹೇಳುವುದನ್ನು ಬಾರ್ಬೋಸಾ ಮರೆಯುವುದಿಲ್ಲ.

ಕುದುರೆಗಳ ಆಮದು

ಭಾರತವು ಪ್ರಾಚೀನ ಕಾಲದಿಂದಲೂ ಹೊರದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದುದು ತಿಳಿದು ಬರುವ ಸಂಗತಿ. ಕೌಟಲ್ಯನು ''ಕುದುರೆಗಳು ನಮ್ಮ ದೇಶದ ಪ್ರಾಣಿಗಳಲ್ಲ. ಅವುಗಳನ್ನು ಅರೇಬಿಯಾದಿಂದ ತರಿಸಿಕೊಳ್ಳುತ್ತಿದ್ದರು. ಪಳಗಿದ ಯುದ್ಧಯೋಗ್ಯವಾದ ಕುದುರೆಗಳಲ್ಲಿ ಉತ್ತಮವಾದವುಗಳು ಕಾಂಬೋಜ, ಸಿಂಧುದೇಶ, ಆರಟ, ವಾನಾಯು ದೇಶಗಳಲ್ಲಿ ಹುಟ್ಟಿದವುಗಳು''[೨೨] ಎಂದು ಹೇಳಿದ್ದಾನೆ. ಈ ಕುದುರೆಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಇಲಾಖೆಯಿದ್ದು, ಅದರ ಮುಖ್ಯಸ್ಥನನ್ನು ಅಶ್ವಾಧ್ಯಕ್ಷನೆಂದೂ ಕರೆಯಲಾಗಿದ್ದಿತು. ಮೌರ್ಯರ ಕಾಲದಲ್ಲಿ ಅಶ್ವದಳವು ಅಸ್ತಿತ್ವದಲ್ಲಿದ್ದು, ಚಂದ್ರಗುಪ್ತನು ಮೂವತ್ತು ಸಾವಿರ ಅಶ್ವದಳವನ್ನು ಹೊಂದಿದ್ದನೆಂದು ತಿಳಿದುಬರುತ್ತದೆ.[೨೩] ಕರ್ನಾಟಕದಲ್ಲಿ ಹೊಯ್ಸಳರು ಮತ್ತು ದೇವಗಿರಿಯ ಸೇವುಣರ ಕಾಲಾವಧಿಯಲ್ಲಿ ಕುದುರೆಗಳು ಮಹತ್ವದ ಪಾತ್ರವಹಿಸಿದ್ದುದು ಆಕರಗಳಿಂದ ದೃಢವಾಗಿದೆ.

ಭಾರತದಲ್ಲಿ ಹುಟ್ಟಿ ಬೆಳೆಯುವ ಕುದುರೆಗಳು ಸೈನ್ಯಕ್ಕೆ ಯೋಗ್ಯವಾಗಿರಲಿಲ್ಲವೆಂಬುದು ಹಲವು ವಿದ್ವಾಂಸರ ಅಭಿಮತ. ಮಾರ್ಕೋಪೋಲೋ ''ಈ ದೇಶ(ಭಾರತ)ದಲ್ಲಿ ಕುದುರೆಗಳ ತಳಿ ಅಭಿವೃದ್ಧಿಯಾಗುವುದಿಲ್ಲ. ಏಕೆಂದರೆ ಹವಾಮಾನದಿಂದಲೋ ಏನೋ ಇಲ್ಲಿ ಒಳ್ಳೆಯ ತಳಿಗೆ ಹುಟ್ಟಿದ ಮರಿಗಳೂ ವಕ್ರವಾಗಿಯೇ ಹುಟ್ಟುತ್ತವೆ. ಆದುದರಿಂದ ವರ್ಷ ವರ್ಷ ಕಿಸ್, ಓರ್ಮಸ್, ದೋಫರ್, ಸೂಯರ್ (ಸೂಪಾರ), ಏಡನಿನ್ನ ವರ್ತಕರುಗಳಿಂದ ಸಾವಿರಾರು ಕುದುರೆಗಳನನ್ನು ಕೊಂಡುಕೊಳ್ಳುತ್ತಾರೆ'' ಎಂದಿರುವನು.[೨೪] ಬಾರ್ಬೋಸಾ ಕೂಡ, ಇಲ್ಲಿ ಕುದುರೆಗಳು ಬಹಳ ದಿನಗಳು ಬದುಕುವುದಿಲ್ಲ. ಈ ದೇಶದಲ್ಲಿ ಕುದುರೆಗಳನ್ನು ಬೆಳೆಸುವುದಿಲ್ಲ. ಓರ್ಮಸ್ ಮತ್ತು ಕ್ಯಾಂಬೆಯಿಂದ ಇಲ್ಲಿಗೆ ಕುದುರೆಗಳನ್ನು ತರಿಸಿ ಸಾಕುತ್ತಾರೆ''[೨೫] ಎಂದಿರುವುದು ಭಾರತದಲ್ಲಿ ಬೆಳೆಯುತ್ತಿದ್ದ ಕುದುರೆಗಳಿಗಿಂತ ಬಲಿಷ್ಠವಾದ ಉತ್ತಮ ಜಾತಿಯ ಕುದುರೆಗಳು ಅರಬ್ಬೀ ದೇಶಗಳಲ್ಲಿ ಹೇರಳವಾಗಿ ದೊರೆಯುತ್ತವೆಂದು ಹೇಳಿರುವುದು ಆಮದಿಗೆ ಕಾರಣವಾಗಿದೆ.

ಕುದುರೆಗಳನ್ನು ಆಮದು ಮಾಡಿಕೊಳ್ಳುವ ಕುರಿತು ಬಾರ್ಬೋಸಾ ಹೇಳುವ ಮಾತು : ''ಓರ್ಮಸ್ ರಾಜ್ಯದಿಂದ ಕುದುರೆಗಳನ್ನು ಹೊತ್ತುಕೊಂಡು ಅನೇಕ ಹಡಗುಗಳು ಇಲ್ಲಿಗೆ(ಗೋವಾ) ಬರುತ್ತವೆ. ಕುದುರೆಗಳನ್ನು ಕೊಳ್ಳಲು ನರಸಿಂಗುವಾ ಮತ್ತು ದಖನ್ ರಾಜ್ಯಗಳಿಂದ ಅನೇಕ ವರ್ತಕರು ಇಲ್ಲಿಗೆ ಬರುತ್ತಾರೆ.''(ಚಿತ್ರ-೧೧)ಕುದುರೆಗಳ ಸಂಖ್ಯೆಗಳ ಬಗೆಗೆ, ವರ್ಷಕ್ಕೆ ಒಂದು ಸಾವಿರದಿಂದ ಎರಡು ಸಾವಿರ ಕುದುರೆಗಳು ಇಂಡಿಯಾಕ್ಕೆ ಬರುತ್ತಿದ್ದವೆಂದೂ

ಹೇಳುತ್ತಾನೆ. ನ್ಯೂನಿಜ್ "ದೇಶಿಯ ಕುದುರೆಗಳ ಜೊತೆಗೆ ಓರ್ಮಸಿನಿಂದ ಹದಿಮೂರು ಸಾವಿರ ಕುದುರೆಗಳನ್ನು ಕೊಂಡುಕೊಳ್ಳುತ್ತಾನೆ" ಎಂದು ಕೃಷ್ಣದೇವರಾಯ ಕಾಲದ ಕುದುರೆಗಳ ಬೇಡಿಕೆಯನ್ನು ವ್ಯಕ್ತಪಡಿಸುವನು. ಪ್ರವಾಸಿಗರು ಹೇಳುವಂತೆ ಇಷ್ಟೊಂದು ಸಂಖ್ಯೆಯಲ್ಲಿ ಆಮದಾಗುತ್ತಿದ್ದ ಕುದುರೆಗಳಿಗೆ ಬಹಮನಿ ಮತ್ತು ವಿಜಯನಗರಗಳೆರಡೂ ಪೈಪೋಟಿ ನಡೆಸುತ್ತಿದ್ದವು. ಕುದುರೆ ವ್ಯಾಪಾರಕ್ಕೆ ಮುಖ್ಯ ಕೇಂದ್ರವಾದ ಗೋವಾದ ಮೇಲೆ ಹಿಡಿತ ಸಾಧಿಸಲು ಈ ಎರಡೂ ರಾಜ್ಯಗಳು ಆಗಾಗ್ಗೆ ಕದನಕ್ಕಿಳಿಯುತ್ತಿದ್ದುದು ಚರಿತ್ರಾರ್ಹ. ಪೋರ್ಚುಗೀಸರು ಭಾರತಕ್ಕೆ ಆಗಮಿಸಿದ ಮೇಲೆ ವಿಜಯನಗರದವರು ಅವರೊಂದಿಗೆ ಸ್ನೇಹ ಬೆಳೆಸಲು ಉತ್ಸುಕರಾಗಿದ್ದರು. ಪೋರ್ಚುಗೀಸ್ ಮತ್ತು ಮುಸಲ್ಮಾನರಿಗೂ ಇದ್ದ ಪಾರಂಪರಿಕ ದ್ವೇಷದ ವಿಚಾರ ತಿಳಿದಿದ್ದ ಕೃಷ್ಣದೇವರಾಯ ಅವರಿಗೆ ಪ್ರೋತ್ಸಾಹ ನೀಡುವ ಮೂಲಕ ಕುದುರೆಗಳನ್ನು ತನ್ನ ರಾಜ್ಯಕ್ಕೆ ಮಾರಾಟ ಮಾಡುವ ಕರಾರುಗಳನ್ನು ಹಾಕಿಕೊಂಡಿದ್ದನು. ಅದರಂತೆ ಅಲ್ಬುಕರ್ಕನು ಒಪ್ಪಿದನೆಂದೂ ಹೇಳಲಾಗಿದೆ.[೨೬] ಕೃಷ್ಣದೇವರಾಯನ ನಂತರವೂ ಪೋರ್ಚುಗೀಸರು ವಿಜಯನಗರದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದರು. ಕ್ರಿ.ಶ.೧೫೪೭ರಲ್ಲಿ ರಾಮರಾಯ ಮತ್ತು ಪೋರ್ಚುಗೀಸರ ಮಧ್ಯೆ ವ್ಯಾಪಾರೀ ಮತ್ತು ಕುದುರೆಗಳ ಖರೀದಿಗೆ ಸಂಬಂಧಿಸಿದಂತೆ ಒಪ್ಪಂದವಾಗಿದ್ದು, ಅದರನ್ವಯ ಗೋವೆಯಲ್ಲಿ ಬಂದಿಳಿದ ಎಲ್ಲ ಯುದ್ಧಾಶ್ವಗಳನ್ನು ವಿಜಯನಗರಕ್ಕೆ ಮಾರಬೇಕಾಗಿದ್ದಿತು.[೨೭] ಹೀಗೆ ಬಾರೀ ಸಂಖ್ಯೆಯಲ್ಲಿ ಕೊಂಡ ಕುದುರೆಗಳನ್ನು ನೋಡಿಕೊಳ್ಳಲು ಸಾಕಷ್ಟು ಸಿಬ್ಬಂದಿಯಿದ್ದಿತು. ನ್ಯೂನಿಜ್ "ಕುದುರೆಗಳನ್ನು ಮಾಲೀಸು ಮಾಡುವುದಕ್ಕೆ ೧೫೦೦ ಜನರಿದ್ದಾರೆ. ಇಷ್ಟಲ್ಲದೆ ಕುದುರೆಗಳಿಗೆ ತರಬೇತಿ ಕೊಡುವ ೨೦೦ ಜನ ಅಶ್ವ ಶಿಕ್ಷಕರಿದ್ದಾರೆ" ಎಂದಿದ್ದಾನೆ. ಕುದುರೆಗಳ ಸಾಕಣೆ, ತರಬೇತಿ ಮತ್ತು ನಿರ್ವಹಣೆಯನ್ನು ನ್ಯೂನಿಜ್ "ಇದೆಲ್ಲಾ ತುಂಬಾ ವ್ಯವಸ್ಥೆ ಹಾಗೂ ಕ್ರಮದಿಂದ ನಡೆಯುತ್ತದೆ" ಎನ್ನುವ ಮೂಲಕ ಅಂದಿನ ಅಶ್ವದಳದ ಬಗೆಗಿದ್ದ ಜಾಗರೂಕತೆಯನ್ನು ದೃಢಗೊಳಿಸುತ್ತಾನೆ. ಕುದುರೆಗಳಿಗೆ ಮೇಯಲೆಂದೇ ಪ್ರತ್ಯೇಕ ಭೂಮಿಯನ್ನು ಬಿಡುವ ಪದ್ಧತಿ ವಿಜಯನಗರದಲ್ಲಿ ಇದ್ದುದನ್ನು ಕಾಣಬಹುದು. ಗುಡೇಕೋಟೆ ಬಳಿಯ ಸ್ಥಳವೊಂದನ್ನು ಇಂದಿಗೂ "ಕುದುರೆಡವು" ಎಂದು ಕರೆಯಲಾಗುತ್ತದೆ. ಸ್ಥಳೀಯರ ಪ್ರಕಾರ ಈ ಸ್ಥಳವು ಗುಡೇಕೋಟೆಯ ಪಾಳೆಯಗಾರರು ಕುದುರೆಗಳಿಗೆ ಬೇಕಾದ ಹುಲ್ಲನ್ನು ಬೆಳೆಸುವ ಸಲುವಾಗಿ ಬಿಟ್ಟುಕೊಟ್ಟ ಭೂಮಿಯಾಗಿದ್ದಿತು. ಆದ್ದರಿಂದ ಈ ಸ್ಥಳವನ್ನು ಕುದುರೆಯ ಅಡವಿಯೆಂದು ಕರೆಯುತ್ತಿದ್ದು, ಕಾಲಾಂತರದಲ್ಲಿ 'ಕುದರೆಡವು' ಆಗಿ ಬಳಕೆಗೊಂಡಿದೆ. ಇಂದಿಗೂ ಗ್ರಾಮಗಳಲ್ಲಿ ದನಕರುಗಳಿಗಾಗಿ ಬಿಟ್ಟ ಗೋಮಾಳಗಳಿರುವಂತೆ ಹಿಂದೆ ಕುದುರೆಗಳಿಗೂ ಅಡವಿಗಳಿದ್ದುದು ಗಮನಿಸಬಹುದಾದ ಅಂಶ.

ಕುದುರೆಗಳ ಬೇಡಿಕೆ

ವಿಜಯನಗರ ಅವಧಿಯಲ್ಲಿ ಕುದುರೆಗಳಿಗೆ ದೊರೆತ ಬೇಡಿಕೆ ಮತ್ತಾವ ಕಾಲದಲ್ಲೂ ಸಿಗಲಿಲ್ಲವೆನ್ನಬಹುದು. ಕಾರಣ ಕುದುರೆಗಳು ಅಂದಿನ ಸೈನ್ಯಕ್ಕೆ ತೀರಾ ಅಗತ್ಯ ಸರಕಾಗಿದ್ದವು. ಆಮುಕ್ತಮಾಲ್ಯದದಲ್ಲಿ ಹೇಳುವಂತೆ, ''ಕೃಷ್ಣರಾಯನು ಬೀದರ ಸುಲ್ತಾನನ ವಿರುದ್ಧ ಮಾಡಿದ ಯುದ್ಧದಲ್ಲಿ ಜಯಗಳಿಸಲು ಸಾಧ್ಯವಾದುದು ಅಶ್ವಪಡೆಯ ಸಹಾಯದಿಂದ''[೨೮] ಎಂದಿರುವುದು ಅಂದು ಕುದುರೆಗಳಿಗಿದ್ದ ಮಾನ್ಯತೆಯ ಸಂಕೇತವಾಗಿದೆ.

ಮಧ್ಯಯುಗ ಅದರಲ್ಲೂ ವಿಜಯನಗರ ಕಾಲದಲ್ಲಿ ಕುದುರೆಗಳ ಬೆಲೆಯು ಎಷ್ಟೆಷ್ಟು ಪ್ರಮಾಣದಲ್ಲಿದ್ದಿತೆಂಬುದನ್ನು ಪ್ರವಾಸಿಗರು ನೀಡಿದ ವರದಿಗಳ ಹಿನ್ನೆಲೆಯಲ್ಲಿ ರಚಿಸಲಾದ ಈ ಕೆಳಗಿನ ಅಂಕಣದಲ್ಲಿ ಕಾಣಬಹುದಾಗಿದೆ :

ಸಂಖ್ಯೆ	ವರ್ಷ	ದೇಶ/ವಿವರಣೆ	ಬೆಲೆ
೧.	೧೨೯೩	ಪರ್ಶಿಯಾದ ಕುದುರೆಗಳು	೨೦೦ ಲಿವ್ರೇಸ್ ಟರ್ನಾಯಿಸ್(Livres tournois)
೨.	೧೨೯೩	ಪರ್ಶಿಯಾ ಮತ್ತು ಅರೇಬಿಯಾ	೫೦೦ ಸಪ್ಪಿ ಅಥವಾ ೧೦೦ ಬೆಳ್ಳಿಯ ಮಾರ್ಕಗಳು
೩.	೧೨೯೩	ಅರೇಬಿಯ	೧೦೦ ಮಾರ್ಕ್‌ಗಳು
೪.	೧೩೧೦	-,,-	೨೨೦ ಚಿನ್ನದ ದಿನ್ನಾರುಗಳು
೫.	೧೩೩೦	ಅರೇಬಿಯ	೨೨೦ ಚಿನ್ನದ ಕೆಂಪು ದಿನ್ನಾರುಗಳು
೬.	೧೩೪೯	--,,--	೧೦೦ ರಿಂದ ೧೦೦೦ ಚಿನ್ನದ ತುಣುಕುಗಳು
೭.	೧೫೦೪	ಅರೇಬಿಯ	೨೦೦, ೪೦೦, ೫೦೦, ೮೦೦ ಪರ್ದಾವೋಗಳು
೮.	೧೫೧೬	--,,--	೫೦೦ ಕ್ರುಜೆಡೋಗಳು
೯.	೧೫೧೬	--,,--	೬೦೦ ಕ್ರುಜೆಡೋಗಳು
೧೦.	೧೫೧೬	--,,--	೪೦೦ --,,--
೧೧.	೧೫೧೬	--,,--	೩೦೦ --,,--
೧೨.	೧೫೩೭	--,,--	೩೩೩೧/೨ ಪರ್ದಾವೋಗಳು

ಹೀಗೆ ೧೨೯೩ ರಿಂದ ೧೫೩೭ವರೆಗೆ ಕುದುರೆಗಳ ಬೆಲೆ ಮತ್ತು ಅವುಗಳ ಬೇಡಿಕೆಯ ಪರಿಮಾಣವನ್ನು ಗಮನಿಸಬಹುದಾಗಿದೆ.[೨೯] ಪೋರ್ಚುಗೀಸ್‌ನ ಅಲ್ಬುಕರ್ಕನು ವಿಜಯನಗರದೊಂದಿಗೆ ಮಾಡಿಕೊಂಡ ವಾರ್ಷಿಕ ಒಪ್ಪಂದಕ್ಕೆ ಬರೆದ ಪತ್ರದಲ್ಲಿ ''ರಾಯ ಕುದುರೆಗಳ ಪೂರೈಕೆಗಾಗಿ ಪ್ರತಿ ವರ್ಷ ೭೦,೦೦೦ ಕ್ರುಜೇಡೋಗಳನ್ನು ಕೊಡುವುದಾದರೆ ಮತ್ತು ಕುದುರೆಗಳನ್ನು ತರಲು ಗೋವಾಕ್ಕೆ ತನ್ನದೇ ಆಳುಗಳನ್ನು ಕಳುಹಿಸುವುದಾದರೆ ರಾಯನಿಗೆ

ತನ್ನೆಲ್ಲ ಕುದುರೆಗಳನ್ನು ಕೊಳ್ಳುವ ಇಲ್ಲವೆ ಬಿಡುವ ಹಕ್ಕನ್ನು ನೀಡಲಾಗುವುದು'' ಎಂದು ಬರೆದಿದ್ದನು.[೮೦] ಇದೇ ರೀತಿ ಬಿಜಾಪುರದ ಸುಲ್ತಾನನಿಗೂ ಪತ್ರ ಬರೆದಿದ್ದನೆಂದು ಹೇಳಲಾಗಿದೆ. ಆದರೆ ಇದು ಇತ್ಯರ್ಥವಾಗಲಿಲ್ಲವೆಂದು ಸಿವೆಲ್ ಅಭಿಪ್ರಾಯ ಪಡುತ್ತಾರೆ. ವಿಜಯನಗರ ಅವಧಿಯಲ್ಲಿ ಕುದುರೆಗಳಿಗೆ ಅಪಾರ ಬೇಡಿಕೆಯಿದ್ದು, ಸಾಮ್ರಾಜ್ಯ ವಿಸ್ತರಣೆಗೆ ಇವು ಅನಿವಾರ್ಯವಾದ ಅಂಗಗಳಾಗಿದ್ದುದನ್ನು ಇಲ್ಲಿ ಕಾಣಬಹುದು.

ಯುದ್ಧಾಶ್ವಗಳ ಸಿದ್ಧತೆ

ಯುದ್ಧಕ್ಕೆ ಹೊರಡುವಾಗ ಕುದುರೆಗಳನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿದೇಶಿ ಪ್ರವಾಸಿಗರು ಹಾಗೂ ಸಾಹಿತ್ಯ ಕೃತಿಗಳಿಂದ ತಿಳಿದುಕೊಳ್ಳಬಹುದಾಗಿದೆ.ಗಂಗಾದೇವಿಯು ತನ್ನ ಮಧುರಾವಿಜಯಂನಲ್ಲಿ ಅಶ್ವದಳದ ವರ್ಣನೆ ಮಾಡಿರುವ ಪರಿಯಿದು:

ಕಚ್ಚಿದ್ದ ಹಾವಂತೆ ಬಾಯಲಿರೆ ಕಡಿವಾಣ
ಚಿತ್ತಾರಗೊಂಡ ಪಕ್ಕರೆ ರೆಕ್ಕೆಯಂತೆ
ದೇಹರೂಪದಿ ಕೂಡ ಹೋಲಿಕೆಯ ತೋರಿಸಿತು
ದಿವ್ಯ ತುರಗವು ತಾನು ಗರುಡನಂತೆ.[೮೧]

ಇದು ತನ್ನ ಪತಿ ಕಂಪಣ್ಣನು ಕೈಗೊಂಡ ಮಧುರೆಯ ದಂಡೆಯಾತ್ರೆಯ ಅವಧಿಯಲ್ಲಿ ಸಿದ್ಧತೆಗೊಳಿಸಿದ ಕುದುರೆಗಳ ಚಿತ್ರಣ. ರಾಮನಾಥ ಚರಿತದಲ್ಲೂ ಈ ಬಗೆಯ ವರ್ಣನೆಗಳಿವೆ. ಸಮರವೆಂದು ಕೇಳಿದ ಕೂಡಲೇ,

''ತೆಗೆದು ತೇಜಿಗಳ ಹಲ್ಲಣಿಸಿ ಹಕ್ಕರಿಕೆಯ
ಪುಗಿಸಿ ಸವಗ ಜೋಡುಗಳನು
ಬಿಗಿದು ಬಿರಿದನಿಕ್ಕಿ ಪೊರಮಟ್ಟರೊಸೆದು ಕಾ
ಳೆಗ ಕಾ ರಾಯ ರಾವುತರು''[೮೨]ಎಂದಿರುವುದು.

ಹಾಗೆಯೇ ಇನ್ನೊಂದೆಡೆ,

ಲೋಹವಕ್ಕರೆ ಝುಲ್ಲಿ ಮೊಗರಂಭ ಮೊದಲಾ
ದಾಹವ ಸನ್ನಾಹವೆಸೆಯೆ
ಗಾಹುಗದುಕನುಳಿದೇರಿದರಶ್ವಾ
ರೋಹಕರಾ ಸಮಯದಲಿ [೮೩]

ಎಂಬ ಪದ್ಯಗಳಲ್ಲಿ ಕುದುರೆಗಳನ್ನು ಅಲಂಕರಿಸುತ್ತಿದ್ದ ಬಗೆ ಹಾಗೂ ಅವುಗಳ ಪರಿಕರಗಳನ್ನು ಕಾಣಬಹುದು. ಕುದುರೆಗಳಿಗೆ ಕಣ್ಣು, ಗೊರಸುಗಳನ್ನು ಬಿಟ್ಟು ಉಳಿದೆಲ್ಲ ಅಂಗಗಳಿಗೆ ಕವಚಗಳನ್ನು ತೊಡಿಸುತ್ತಿದ್ದುದೂ ತಿಳಿದುಬರುತ್ತದೆ. ಕುದುರೆಗಳಿಗೆ ತೊಡಿಸುತ್ತಿದ್ದ ಇಂತಹ ಮುಖವಾಡಕ್ಕೆ 'ಮೊಗರಂಭ'ವೆಂದು ಕಾವ್ಯಗಳಲ್ಲಿ ಕರೆಯಲಾಗಿದೆ. ಪಾಯೆಸ್‌ನು ''ಕುದುರೆಗಳ ಮುಖಕ್ಕೆ ಸರ್ಪ ಮುಂತಾದ ದೊಡ್ಡ ಪ್ರಾಣಿಗಳ ತಲೆಗಳಂಥ

ಮುಖವಾದಗಳನ್ನು ತೊಡಿಸಿದ್ದರು''[೮೪] ಎಂದು ಅವುಗಳಿಗೆ ತೊಡಿಸುತ್ತಿದ್ದ ಕವಚಗಳನ್ನು ಹೇಳುತ್ತಾನೆ. ಇದಕ್ಕೆ ಪೂರಕವಾಗಿ ನೂನಿಜ್ ಕುದುರೆಗಳಿಗೆ ವಸ್ತ್ರಗಳನ್ನು ಹೊದಿಸಿದ್ದರೆಂಬುದನ್ನು ಗಮನಿಸಬಹುದು.

ಬಾರ್ಬೋಸಾ ಕುದುರೆಗಳ ಕವಚಗಳೊಂದಿಗೆ ಆಯುಧಗಳನ್ನು ಉಲ್ಲೇಖಿಸುತ್ತಾನೆ. ''ಕುದುರೆಗಳ ತಲೆಗೆ ಉಕ್ಕಿನ ಟೋಪಿ ಹಾಕಿ, ಜೀನು ಬಿಗಿದು ಎರಡಾಳುಗಳಿಗಾಗುವಷ್ಟು ಗಂಡುಗೊಡಲಿ, ಎರಡು ಕತ್ತಿ, ಲೋಹದ ಮುಳ್ಳುಗಧೆ, ಎರಡು-ಮೂರು ತುರ್ಕಿ ಬಿಲ್ಲುಗಳು, ಬಹು ಉದ್ದವಾದ ಬಾಣಗಳು-ಇವುಗಳಿಂದ ಸಜ್ಜಿತರಾಗಿ ಯುದ್ಧಕ್ಕೆ ಹೊರಡುತ್ತಾರೆ'' ಎಂದು ಬಹಮನಿ ಯುದ್ಧಾಶ್ವಗಳ ನೈಜ ಚಿತ್ರಣ ನೀಡುತ್ತಾನೆ. ಕುದುರೆಗಳಿಗೆ ತೊಡಿಸಲಾಗುತ್ತಿದ್ದ ಯುದ್ಧಕವಚ ಕೆಲವು ವೀರಗಲ್ಲುಗಳಲ್ಲೂ ಕಾಣಬರುತ್ತದೆ. ಬೇಗೂರು, ಚಂದ್ರಶೇಖರಪುರ (ಕೂಡ್ಲಿಗಿ ತಾ.) ಮತ್ತು ಕೊಂಚಗೆರೆ(ಸಿರುಗುಪ್ಪ ತಾ., ಚಿತ್ರ-೧೦), ಹುಲಿಕಲ್ಲು, ಬಸವನಕಲ್ಲು (ಶಿವಮೊಗ್ಗ ಜಿಲ್ಲೆ)ಗಳಲ್ಲಿರುವ ವೀರಗಲ್ಲುಗಳಲ್ಲಿ ಕುದುರೆಯ ಮೈತುಂಬಾ ಕವಚವನ್ನು ಕಡೆಯಲಾಗಿದೆ. ಕಾಲು ಮತ್ತು ಮುಖಗಳನ್ನು ಬಿಟ್ಟು ಉಳಿದ ಭಾಗ ಪೂರ್ಣವಾಗಿ ಕವಚವು ಆವರಿಸಿದೆ. ಇದರಿಂದ ಕುದುರೆಗಳಿಗೆ ಮೊಗರಂಭದಂತಹ ಮುಖವಾಡವಲ್ಲದೆ ಜೀನು ಮತ್ತು ಮೈಕವಚಗಳನ್ನು ತೊಡಿಸುತ್ತಿದ್ದರೆಂಬುದು ಗೊತ್ತಾಗುತ್ತದೆ. ಆದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡ ಅಗಾಧ ಸಂಖ್ಯೆಯ ಎಲ್ಲಾ ಕುದುರೆಗಳಿಗೂ(ಚಿತ್ರ - ೬, ೯, ೧೨, ೧೫)ಈ ಬಗೆಯ ಕವಚಗಳನ್ನು ತೊಡಿಸಿದ್ದರೆಂದು ಹೇಳುವುದು ಕಷ್ಟ.

ರಾವುತರು

ಕುದುರೆಯ ಸವಾರಿಯಲ್ಲಿ ಪರಿಣತಿ ಹಾಗೂ ಸವಾರಿಯೊಂದಿಗೆ ಆಯುಧಗಳನ್ನು ಪ್ರಯೋಗಿಸುವ ನಿಪುಣತೆ ಹೊಂದಿರುವ ಯೋಧರನ್ನು ರಾಹುತ ಅಥವಾ ರಾವುತರೆನ್ನುವರು. ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದುದರಿಂದ ಇವರನ್ನು ಮೇಲಾಳುಗಳೆಂದೂ ಕರೆಯಲಾಗುತ್ತಿತ್ತು. ರಾವುತರು ಸಾಮಾನ್ಯವಾಗಿ ತಮ್ಮ ರಕ್ಷಣೆಗೆ ಎದೆಕವಚ, ಶಿರಸ್ತ್ರಾಣಗಳನ್ನು ಧರಿಸಿ, ಕೈಗಳಲ್ಲಿ ಭರ್ಜಿ, ಖಡ್ಗ ಮತ್ತು ಕಠಾರಿಗಳನ್ನು ಹಿಡಿದಿರುತ್ತಿದ್ದರು. ವಿಜಯನಗರ ಕಾಲದ ರಾವುತರನ್ನು ಕುರಿತು ಪಾಯೇಸ್‌ನು ನೀಡುವ ವರ್ಣನೆ ಸ್ವಲ್ಪ ಉತ್ಪ್ರೇಕ್ಷೆಯನ್ನೇ ಒಳಗೊಂಡಿದೆ. ಅವನು, ''ರಾವುತರು ಚರ್ಮದ ಹಾಗೂ ಕಿಂಕಾಪು ಮತ್ತು ಮಕಮಲ್ಲಿನಿಂದ ತಯಾರಾದ ಲೂದಿಗಳನ್ನು ತೊಟ್ಟಿದ್ದರು. ತಲೆಗೆ ಕುತ್ತಿಗೆಯವರೆಗೂ ಬರುವ ಶಿರಸ್ತ್ರಾಣಗಳನ್ನು ಹಾಕಿಕೊಂಡಿದ್ದರು. ಮುಖವನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾದ ರಕ್ಷಣೋಪಾಯ ಸಲಕರಣೆಯನ್ನು ಒದಗಿಸಿಕೊಂಡಿದ್ದರು. ಕುತ್ತಿಗೆಯಲ್ಲಿ ಚಿನ್ನದ ಗಿಲೀಟಿನ ಇಲ್ಲವೆ ಕನ್ನಡಿಯಂತೆ ಪ್ರಕಾಶಮಾನವಾದ ಉಕ್ಕಿನ ಕೊರಳಾಪುವನ್ನು ಧರಿಸಿದ್ದರು. ನಡುವಿಗೆ ಗಂಡುಗೊಡಲಿಯನ್ನು ಸಿಕ್ಕಿಸಿ, ಕೈಯಲ್ಲಿ ಭಲ್ಲೆ-ಭರ್ಚಿಗಳನ್ನು ಹಿಡಿದಿದ್ದರು''ಎಂದಿದ್ದಾನೆ[೮೫] ಬಾರ್ಬೋಸಾ ಕೂಡ ಇದೇ ಬಗೆಯಲ್ಲಿ ರಾವುತರನ್ನು

ವರ್ಣಿಸುತ್ತಾನೆ. ''ರಾವುತರ ಕೈಯಲ್ಲಿ ಒಂದು ಗುರಾಣಿ ಮತ್ತು ಎರಡು ಕತ್ತಿಗಳು ಇರುತ್ತವೆ. ಅಲ್ಲದೆ ಒಂದು ಈಟಿ ಮತ್ತು ತುರ್ಕಿ ಬಿಲ್ಲು- ಬಾಣಗಳಿರುತ್ತವೆ. ಕೆಲವರು ಉಕ್ಕಿನ ಕವಚ ಧರಿಸಿರುತ್ತಾರೆ. ಮತ್ತೆ ಕೆಲವರು ಹತ್ತಿಯ ಗಿಲೀಟು ಮಾಡಿದ ಚರ್ಮದ ಕವಚಗಳನ್ನು ಧರಿಸಿರುತ್ತಾರೆ. ಕುದುರೆಗಳಿಗೆ ರಕ್ಷಾ ಬಟ್ಟೆಯನ್ನೂ, ಉಕ್ಕಿನ ಕವಚಗಳನ್ನು ಹಾಕಿರುತ್ತಾರೆ. ಈ ಕಾರಣ ಈ ಜನ ಚೆನ್ನಾಗಿ ಯುದ್ಧ ಮಾಡಬಲ್ಲರು.''[೮೬] ಬಾರ್ಬೋಸಾ ಮತ್ತು ಪಾಯೇಸ್‌ರು ನೀಡುವ ವರ್ಣನೆಗಳಲ್ಲಿ ಸತ್ಯಾಂಶಗಳಿಲ್ಲದಿಲ್ಲ. ಇದು ಒಬ್ಬ ಸಾಮಾನ್ಯ ರಾವುತ ಧರಿಸಬೇಕಾದ ಅತ್ಯವಶ್ಯಕ ಪರಿಕರಗಳೆಂಬುದರಲ್ಲಿ ಸಂಶಯವಿಲ್ಲ.

ವಿಜಯನಗರದ ಸೈನ್ಯದಲ್ಲಿದ್ದ ಕೆಲವು ಪ್ರಮುಖ ರಾವುತರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ. ಈ ರಾವುತರು ಕೆಲವು ಭೂಮಿಗಳನ್ನು ದಾನ ನೀಡಿದ ವಿವರಗಳೂ ಇವೆ. ವಿಜಯನಗರ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ರಾಮಿಯಪ್ಪ ರಾಹುತನು ಭೂಮಿಯನ್ನು ದಾನ ಮಾಡಿದನೆಂದು ಹೇಳಿದೆ.[೮೭] ಇದೇ ರಾಮಪ್ಪ ರಾಹುತನನ್ನು ನರಸಣ ರಾಹುತರ ಮಗನೆಂದು ಇನ್ನೊಂದು ಶಾಸನದಲ್ಲಿ ಹೇಳಲಾಗಿದೆ.[೮೮] ಕೃಷ್ಣದೇವರಾಯನ ಅಶ್ವದಳದಲ್ಲಿ ಮುರಾರಿ ರಾವುತ ಮತ್ತು ವಿಸಣರಾವುತರು ಸೇವೆ ಸಲ್ಲಿಸುತ್ತಿದ್ದುದು ಚಟ್ನಹಳ್ಳಿ ಶಾಸನದಿಂದ ತಿಳಿದುಬರುವುದು.[೮೯] ಹಾಗೆಯೇ ಈ ರಾವುತರಿಗೆ ನಾಯಕತನವನ್ನು ನೀಡಿದುದರಿಂದ ಇವರು ಸೈನ್ಯದಲ್ಲಿ ಮಹತ್ವ ಪಾತ್ರವಹಿಸಿದ್ದರೆಂದು ಹೇಳಬಹುದು. ಕೃಷ್ಣದೇವರಾಯನ ಕಾಲದ ಇನ್ನೊಂದು ಶಾಸನದಲ್ಲಿ ದುಗ್ಗಾವಿಯ ಮಲಿರಾಮಹ ರಾಹುತ ಮತ್ತು ಅವನ ಮಗ ಹರಿದಾಸ ರಾಹುತರಿದ್ದುದನ್ನು ಹೇಳುತ್ತದೆ. ಹೀಗೆ ಪ್ರಮುಖ ರಾವುತರ ಉಲ್ಲೇಖವನ್ನು ಶಾಸನಗಳಲ್ಲಿ ಕಾಣಬಹುದು. ಇದರ ಜೊತೆಗೆ ಪ್ರಾದೇಶಿಕತೆಯನ್ನು ಹೊಂದಿದ ರಾವುತ ಪಡೆಗಳಿದ್ದುದೂ ತಿಳಿದುಬರುತ್ತದೆ. ರಾಯವಾಚಕಮುವಿನಲ್ಲಿ ''ಮೊರಸರಾವುತರು, ಕಬ್ಬಿಲರಾವುತರು, ತುಳುವ ರಾವುತರು'' ವಿಜಯನಗರ ಸೇನೆಯಲ್ಲಿದ್ದರೆಂದು ಹೇಳಿದೆ. ಇದು ಶ್ರೀ ಕೃಷ್ಣದೇವರಾಯನ ದಿನಚರಿಯಲ್ಲೂ ಉಲ್ಲೇಖಗೊಂಡಿದೆ. ರಾಮನಾಥ ಚರಿತವು ಕಂಪಿಲರಾಯನ ಸೈನ್ಯದಲ್ಲಿದ್ದ ರಾವುತರನ್ನು ಹೀಗೆ ಹೇಳಿದೆ:

> ಲಾಳ ರಾವುತರಾರಿಯರಾವುತರು ಕೈ
> ಮೇಳದ ಕನ್ನೋಜಿಗಳು
> ಗೌಳರಾವುತರು ಗುರ್ಜರ ರಾವುತರು ಬಂದ
> ರಾಳುತನದ ಮತ್ಸರದೊಳು[೯೦]

ಎಂದಿರುವುದು ವಿವಿಧ ಪ್ರದೇಶಗಳಿಂದ ಬಂದ ರಾವುತರು ಸೇನೆಗಳಲ್ಲಿರುತ್ತಿದ್ದರೆಂಬುದನ್ನು ಸಮರ್ಥಿಸುತ್ತದೆ.

೩.೪.೩ ಗಜದಳ

ಪ್ರಾಣಿಗಳಲ್ಲಿ ಪ್ರತಿಷ್ಠಿತ ಹಾಗೂ ಗಾಂಭೀರ್ಯವುಳ್ಳ ಪ್ರಾಣಿ ಆನೆ. ಇದು ಪ್ರಾಚೀನ ಕಾಲದಿಂದಲೂ ಸೈನ್ಯದಲ್ಲಿ ಪ್ರಧಾನ ಪಾತ್ರವಹಿಸಿದೆ. ಇದಕ್ಕೆ ಅದರ ಗಾತ್ರ, ಬಲ ಹಾಗೂ ಮಂದತೆಗಳು ಮುಖ್ಯವೆನ್ನಬಹುದು. ರಾಮಾಯಣ-

ಮಹಾಭಾರತ ಕಾಲಗಳಿಂದಲೂ ಭಾರತದಲ್ಲಿ ಆನೆ ಚಿರಪರಿಚಿತ ಪ್ರಾಣಿ. ಮೂಲತಃ ಭಾರತವು ಆನೆಗಳ ವಾಸಸ್ಥಾನ. ಕರ್ನಾಟಕವಂತೂ ಆನೆಗಳ ತವರೂರೇ ಸರಿ. ಸೈನ್ಯದಲ್ಲಿ ಗಜದಳವು ಎಷ್ಟು ಅನಿವಾರ್ಯ ಅಂಗವಾಗಿದ್ದಿತೆಂದರೆ, "ಬೆಳಸಿಲ್ಲದ ಪೊಲ ಮದಕರಿಯಿಲ್ಲದ ಸೇನೆಯೊಪ್ಪಲಾರ್ಕುಮೆ ಜಗದೊಳ್ "ಎಂಬಂತಿತ್ತು.[೯೧] ಸೈನ್ಯವ್ಯವಸ್ಥೆಯ ಮುಖ್ಯ ಅಂಗಗಳಾದ ಆನೆಗಳ ತಯಾರಿಗಾಗಿ ಪ್ರತ್ಯೇಕ ಕೇಂದ್ರಗಳಿದ್ದವು. ಹೊಯ್ಸಳ ಬಲ್ಲಾಳನ ಆಳ್ವಿಕೆಯಲ್ಲಿ ಟಿ.ನರಸೀಪುರದ ಕೋಳಿಗುಂದವು ಆನೆಗಳ ತರಬೇತಿಯ ಕೇಂದ್ರವಾಗಿದ್ದಿತು.[೯೨]

ಪ್ರಾಚೀನ ಯುದ್ಧಗಳಲ್ಲಿ ಸೇನೆಯ ಮುಂಚೂಣಿಯಲ್ಲಿ ನಿಂತು, ಭದ್ರಕೋಟೆಯಂತೆ ಸೈನ್ಯಕ್ಕೆ ರಕ್ಷಣೆ ನೀಡುವ ಸಂರಕ್ಷಕ ಸಾಧನಗಳಾಗಿಯೂ ಆನೆಗಳು ಕಾರ್ಯನಿರ್ವಹಿಸುತ್ತಿದ್ದವು. ಆದರೆ ಮಧ್ಯಯುಗದಲ್ಲಿ ಮದ್ದುಗುಂಡುಗಳು ಬಳಕೆಗೆ ಬಂದ ನಂತರ ಫಿರಂಗಿದಳವು ಆನೆಯ ಸ್ಥಾನವನ್ನು ಆಕ್ರಮಿಸಿತು.

ಭಾರತದಲ್ಲಿ ಹಿಂದಿನಿಂದಲೂ ಸೈನ್ಯದಲ್ಲಿ ಆನೆಗಳು ಬಳಕೆಯಾಗುತ್ತಿದ್ದುದನ್ನು ಅರಿಯಬಹುದು. ಮೆಗಾಸ್ತನೀಸನು, ಇಂಡೀಯಾ ದೇಶದಲ್ಲಿರುವಷ್ಟು ಆನೆಗಳು ಬೇರೆಲ್ಲಿಯೂ ಇಲ್ಲ. ಇವು ಗಾತ್ರಗಳಲ್ಲಿಯೂ ದೊಡ್ಡವೇ. ಖಾಸಗಿಯಾಗಿ ಯಾರೂ ಆನೆಗಳನ್ನಾಗಲೀ, ಕುದುರೆಗಳನ್ನಾಗಲೀ ಇಟ್ಟುಕೊಳ್ಳುವಂತಿಲ್ಲ. ಈ ಹಕ್ಕು ರಾಜನಿಗೆ ಮಾತ್ರ ಸೇರಿದ್ದೆಂದು ಹೇಳುತ್ತಾನೆ.[೯೩] ಕವಿರಾಜಮಾರ್ಗದಲ್ಲಿ ಸೈನ್ಯವನ್ನು ವರ್ಣಿಸುತ್ತಾ,

"ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದ ವೃಂದದವ್ರೋಲಿರೆ ಹಸ್ತಿಗಳ್
ಗಳಿತ ಧಾರೆಗಳಂತಿರೆ ಪತ್ತಿಗಳ್
ಬಳಸಿ ಕಾರ್ಗೆಣೆಯಾಯ್ತು ಮಾಹಾಹತಂ" ಎಂದಿದೆ. ಇಲ್ಲಿ ಆನೆಗಳನ್ನು ಮೋಡದ ಸಮೂಹಕ್ಕೆ ಹೋಲಿಸಲಾಗಿದೆ.

ವಿಜಯನಗರ ಕಾಲದ ಗಜದಳವನ್ನು ಅರಿಯಲು ವಿದೇಶಿ ಪ್ರವಾಸಿಗರ ವರದಿಗಳು ಮತ್ತು ಸಾಹಿತ್ಯ ಕೃತಿಗಳು ನೆರವಾಗಿವೆ. ಕ್ರಿ.ಶ.೧೪೪೨ರ ವೇಳೆಗೆ ವಿಜಯನಗರಕ್ಕೆ ಬಂದಿದ್ದ ಅಬ್ದುಲ್ ರಜಾಕ್ ಆನೆಗಳ ಬಗೆಗೆ ವರ್ಣಿಸಿರುವ ಪರಿಯಿದು : "ಪರ್ವತದೋಪಾದಿಯಲ್ಲಿರುವ ಮತ್ತು ಪೆಡಂಭೂತಗಳಂತಿರುವ ಸಾವಿರಕ್ಕೂ ಮೀರಿದ ಆನೆಗಳನ್ನು ವಿಜಯನಗರದಲ್ಲಿ ನೋಡಬಹುದು". ಆನೆಗಳು ರಾಜವೈಭವದ ಸಂಕೇತಗಳಾಗಿದ್ದು, ಅವುಗಳಲ್ಲಿ ಪಟ್ಟದಾನೆಗಳು ಪೂಜ್ಯನೀಯವೂ ಆಗಿದ್ದವು. ರಾಜನ ಬಳಿ ಅತ್ಯಂತ ದೊಡ್ಡದಾದ ಬಿಳಿ ಆನೆಯಿದೆ. ಇದನ್ನು ರಾಜನು ಪ್ರತಿದಿನ ಬೆಳಗಿನ ಜಾವ ನೋಡುವ ಪರಿಪಾಠವಿಟ್ಟುಕೊಂಡಿದ್ದನು. ಇದರ ದರ್ಶನವು ತನಗೆ ಒಳ್ಳೆಯದೆಂದು ರಾಜ ಭಾವಿಸುವುದನ್ನು ರಜಾಕ್ ಹೇಳಿದ್ದಾನೆ. ಇದನ್ನು ಆಯಾಯ ವೃತ್ತಿ-ದುಡಿಮೆಗಳಲ್ಲಿ ಬಳಸುವ ಪರಿಕರಗಳಿಗೂ ಅನ್ವಯಿಸಬಹುದು. ರೈತರು ತಮ್ಮ ದುಡಿಮೆಯ ಆಧಾರಸ್ತಂಭಗಳಾದ ಎತ್ತುಗಳನ್ನು ಗೌರವಿಸುವ ಹಾಗೂ ಪೂಜಿಸುವ ಪದ್ಧತಿಯನ್ನು ಇಂದಿಗೂ ನೋಡಬಹುದು.

ಗಜಬಲ

ವಿಜಯನಗರ ಅರಸರು ಸಾಕಷ್ಟು ಸಂಖ್ಯೆಯಲ್ಲಿ ಆನೆಗಳನ್ನು ಇಟ್ಟುಕೊಂಡಿದ್ದುದು ವಿವಿಧ ಆಕರಗಳಿಂದ ತಿಳಿದುಬರುವ ಸಂಗತಿ. ರಜಾಕ್ ವಿಜಯನಗರ ಸೇನೆಯಲ್ಲಿ ೧೦೦೦ ಆನೆಗಳಿದ್ದವೆಂದೂ, ವಾರ್ಥೆಮಾ ೪೦೦, ಬಾರ್ಬೋಸಾ ೯೦೦, ನ್ಯೂನಿಜ್ ರಾಯಚೂರು ಕದನದಲ್ಲಿದ್ದ ಮೂಲ ಸೇನೆಯಲ್ಲಿ ೫೫೧ ಎಂದೂ, ಪ್ರಾಂತೀಯ ಪಡೆಗಳಲ್ಲಿ ೬೩೩ ಆನೆಗಳಿದ್ದುದನ್ನು ಉಲ್ಲೇಖಿಸಿರುವರು. ಕೃಷ್ಣರಾಜ ವಿಜಯಂನಲ್ಲಿ ೨೦೦೦ ಆನೆಗಳಿದ್ದುದಾಗಿ ಹೇಳಿದರೆ, ರಾಮರಾಜನ ಬಖೈರು ನೀಡುವ ಸಂಖ್ಯೆ ೧೮,೭೦೮. ಹೀಗೆ ವಿವಿಧ ಸಂಖ್ಯೆಯಲ್ಲಿ ಆನೆಗಳ ಸಂಖ್ಯೆಯನ್ನು ಗುರುತಿಸುತ್ತಾರೆ. ವಿಜಯನಗರ ಸೇನೆಯಲ್ಲಿ ಆನೆಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡಿರುವುದಂತೂ ಸತ್ಯ(ಚಿತ್ರ - ೬, ೧೨).

ಕರ್ತವ್ಯಗಳು

ಆನೆಗಳ ಬಲ, ಬಾಣಗಳ ಹೊಡೆತಕ್ಕೆ ಜಗ್ಗದಂತಹ ಮಂದತೆ, ಕತ್ತಿ ಮುಂತಾದ ಆಯುಧಗಳ ಏಟಿಗೆ ಮೀರಿದ ಗಾತ್ರ-ಇನ್ನು ಮುಂತಾದ ಲಕ್ಷಣಗಳು ಆನೆಗಳನ್ನು ಶತ್ರುಗಳ ಮೇಲೆ ಹರಿಬಿಡುವುದಕ್ಕೆ ಮುಖ್ಯ ಕಾರಣಗಳಾಗಿವೆ. ಅಲ್ಲದೆ ಸೈನ್ಯದ ಮುಂಚೂಣಿಯಲ್ಲಿರುವುದರಿಂದ ಸೇನೆಯು ಸುರಕ್ಷಿತವಾಗಿ ಮುಂದುವರಿಯಲು ಸಹಕಾರಿಯಾಗುತ್ತವೆ. ಕೌಟಲ್ಯನು ಗಜದಳದ ಕರ್ತವ್ಯಗಳನ್ನು ಹೀಗೆ ಹೇಳಿದ್ದಾನೆ: ಸೈನ್ಯದ ಮುಂದಿನಿಂದ ಸಾಗುವುದು, ಮೊದಲು ನಿರ್ಮಿಸದಿರುವ ಮಾರ್ಗ ಹಾಗೂ ವಾಸಸ್ಥಾನಗಳನ್ನು ನಿರ್ಮಿಸುವುದು, ನದಿಗಳನ್ನು ದಾಟುವುದು, ಸೈನ್ಯದ ಪಾರ್ಶ್ವಗಳಲ್ಲಿದ್ದ ಶತ್ರುಗಳನ್ನು ಓಡಿಸುವುದು, ಶತ್ರುಸೈನ್ಯವನ್ನು ಆಕ್ರಮಿಸಲು ಸಾಲಾಗಿ ನಿಲ್ಲುವುದು ಹಾಗೂ ಮುಂದುವರಿಯುವುದು. ಎತ್ತರ ಪ್ರದೇಶದಿಂದ ಕೆಳಗಿಳಿಯುವುದು, ತೃಣಗುಲ್ಮಾದಿಗಳಿಂದ ಸಂಚರಿಸಲು ಕಷ್ಟವಾದ ಪ್ರದೇಶದಲ್ಲಿ ಮತ್ತು ಶತ್ರು ಸೈನ್ಯಗಳ ಗುಂಪನ್ನು ಪ್ರವೇಶಿಸುವುದು. ಶತ್ರು ಶಿಬಿರಕ್ಕೆ ಬೆಂಕಿಯಿಡುವುದು, ಶತ್ರುಗಳು ತನ್ನ ಶಿಬಿರಕ್ಕೆ ಇಟ್ಟ ಬೆಂಕಿಯನ್ನು ನಂದಿಸುವುದು, ಅಶ್ವಾದಿ ಸೈನ್ಯಗಳಿಲ್ಲದೆ ಬರೇ ಆನೆಯ ಸೈನ್ಯದಿಂದ ಶತ್ರುಗಳನ್ನು ಜಯಿಸುವುದು, ಚದರಿದ ಸೈನ್ಯವನ್ನು ಒಂದುಗೂಡಿಸುವುದು, ಅಭಿನ್ನವಾದ ಶತ್ರು ಸೈನ್ಯವನ್ನು ಭೇದಿಸುವುದು, ಆಪತ್ತಿನಲ್ಲಿ ರಕ್ಷಣೆ ಕೊಡುವುದು, ...ಶತ್ರುಸೈನಿಕರನ್ನು ಅಪಹರಿಸುವುದು, ಅಪಹರಿಸಲ್ಪಟ್ಟ ತನ್ನ ಸೈನಿಕರನ್ನು ಬಿಡಿಸುವುದು, ಕೋಟೆ-ಗೋಪುರ-ಅಟಾಲಕಗಳನ್ನು ಒಡೆಯುವುದು, ಕೋಶವನ್ನು ಸಾಗಿಸುವುದು ಅಪಜಯವುಂಟಾದ ಸಂದರ್ಭದಲ್ಲಿ ಕೋಶವು ಶತ್ರುವಿಗೆ ಸಿಕ್ಕದಂತೆ ಸಾಗಿಸುವುದು - ಇವು ಗಜದಳದ ಮುಖ್ಯ ಕಾರ್ಯವೈಖರಿಗಳಾಗಿವೆ.

ನಿರ್ವಹಣೆ : ಸೈನ್ಯಾಡಳಿತದಲ್ಲಿ ಆನೆಗಳಿಗಾಗಿ ಪ್ರತ್ಯೇಕ ಶಾಖೆಯಿದ್ದಿತು. ಇದರ ಮುಖ್ಯಸ್ಥನನ್ನು ಕೌಟಲ್ಯನು 'ಹಸ್ತ್ಯಧ್ಯಕ್ಷ'ನೆಂದು ಕರೆದರೆ, ಶಾಸನಗಳು 'ಗಜಸಾಹಣಿ'ಯೆಂದಿವೆ. ವಿಜಯನಗರದಲ್ಲಿ ಪ್ರತ್ಯೇಕ ಗಜಶಾಲೆಯಿದ್ದಿತು.

ರಜಾಕ್ ಹೇಳುವಂತೆ, ''ದಿವಾನ್ ಖಾನೆಗೆ ಎದುರಾಗಿ ಫಿಲ್‌ಶಾಲೆ(ಗಜಶಾಲೆ) ಇದೆ. ರಾಜನಿಗೆ ಸೇರಿದ ಅನೇಕ ಆನೆಗಳು, ದೇಶದಲ್ಲೆಲ್ಲಾ ಭಾರಿಯಾದ ಆನೆಗಳು ಅರಮನೆಯ ಬಳಿ ಅಂದರೆ ಮೊದಲನೆಯ ಮತ್ತು ಎರಡನೆಯ ಕೋಟೆಗಳ ಮಧ್ಯೆ ಉತ್ತರ-ಪಶ್ಚಿಮ ಜಾಗದಲ್ಲಿರುತ್ತವೆ .... ಆನೆಗಳನ್ನು ಕಟ್ಟುವುದಕ್ಕೆ ಒಂದೊಂದು ಆನೆಗೂ ಒಂದೊಂದು ಬೇರೆ ಬೇರೆ ಅಂಕಣವಿದೆ. ಈ ಅಂಕಣದ ಗೋಡೆಗಳು ಭದ್ರವಾಗಿವೆ.[೯೪] ಇಲ್ಲಿ ಹೇಳಲಾದ ವಿವರಗಳು ಡಣಾಯಕನ ವಾಸಸ್ಥಳ ಹಾಗೂ ಗಜಶಾಲೆಯ ಕಟ್ಟಡಗಳಿಗೆ ಸರಿಹೊಂದುತ್ತವೆ. ಗಜಶಾಲೆಯನ್ನು ಇಂದಿಗೂ ಆನೆಲಾಯವೆಂದು ಕರೆಯುತ್ತಿರುವುದನ್ನು ಗಮನಿಸಬಹುದು.

ಆನೆಗಳನ್ನು ಹೊರದೇಶಗಳಿಂದಲೂ ಆಮದು ಮಾಡಿಕೊಳ್ಳುತ್ತಿದ್ದುದನ್ನು ರಜಾಕ್ ಹೇಳುತ್ತಾನೆ : ಆನೆಯ ವ್ಯಾಪಾರದಲ್ಲಿ ನಿರತರಾದ ವರ್ತಕರ ಸೆರನ್‌ದಿಬ್(ಶ್ರೀಲಂಕಾ)ಗೆ ಹೋಗಿ ಅಲ್ಲಿ ಆನೆಗಳನ್ನು ಕೊಂಡು ನಾನಾ ದೇಶಗಳಿಗೆ ಮಾರುತ್ತಾರೆ. ಆನೆಗೆ ಬೆಲೆಯನ್ನು ಗಜಕ್ಕೆ ಇಷ್ಟು ಎಂದು ನಿಗದಿ ಮಾಡುತ್ತಾರೆ.[೯೫] ರಜಾಕ್ ಇನ್ನೊಂದು ಕಡೆ ಸಿಲೋನ್‌ನಲ್ಲಿ ಬಹು ಅಪರೂಪದ ಹಲವು ಕಾಡು ಆನೆಗಳಿವೆ. ಇವುಗಳನ್ನು ಇಲ್ಲಿನ ರಾಜ ಹಿಡಿದು ಪಳಗಿಸಿ ಅವುಗಳನ್ನು ನರಸಿಂಗರಾಜ್ಯಕ್ಕೆ ಕೋರಮಂಡಲ ತೀರದ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾನೆ ಎಂದಿರುವುದು ಕರ್ನಾಟಕದಲ್ಲಿ ಸೈನ್ಯಕ್ಕೆ ಸಾಕಾಗುವಷ್ಟು ಆನೆಗಳಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ವಿಜಯನಗರದ ಅರಸರು ಆನೆಗಳನ್ನು ಕುದುರೆಗಳಷ್ಟೇ ಜವಾಬ್ದಾರಿಯಿಂದ ಸಾಕುತ್ತಿದ್ದರೆಂಬುದನ್ನು ಪ್ರವಾಸಿಗರ ವರದಿಗಳು ಹೇಳುತ್ತವೆ. ಪಾಯೇಸ್ ರಾಜನ ಬಳಿ ೮೦೦ ಆನೆಗಳೂ, ೫೦೦ ಕುದುರೆಗಳೂ ಇವೆ. ಇವುಗಳ ಖರ್ಚು ವಿಜಯನಗರದಿಂದ ಬರುವ ಆದಾಯದಲ್ಲಿ ತೂಗುತ್ತದೆಯೆಂದು ಹೇಳಿರುವನು.

ಆನೆಗಳ ತರಬೇತಿ

ಆನೆಗಳು ಕಾಡು ಪ್ರಾಣಿಗಳಾಗಿದ್ದು, ಅವುಗಳನ್ನು ಹಿಡಿದು ಪಳಗಿಸುವುದು ಅಷ್ಟೇನೂ ಸುಲಭದ ಮಾತಲ್ಲ. ಎಂತಹ ಆನೆಗಳನ್ನು ಹಿಡಿದು ಪಳಗಿಸಬೇಕೆಂಬುದರ ಬಗೆಗೆ ಕೌಟಲ್ಯನು, ಹಸ್ತಿ ಶಿಕ್ಷಕರಿಂದ ಹೊಗಳಲ್ಪಟ್ಟ ಲಕ್ಷಣಗಳುಳ್ಳ ಆನೆಗಳನ್ನು ರಾಜನಿಗಾಗಿ ಹಿಡಿಯಬೇಕು. ರಾಜನಿಗೆ ಶತ್ರುಗಳನ್ನು ಜಯಿಸುವುದಕ್ಕೆ ಆನೆಗಳು ಪ್ರಧಾನ ಸಾಧನಗಳು. ಕಳಿಂಗ, ಅಂಗ, ಚೇದಿ, ಕರೂಷಾದಿ, ಪೂರ್ವದೇಶದ ಆನೆಗಳು ಶ್ರೇಷ್ಠವಾದವುಗಳೆಂದು ಹೇಳುತ್ತಾನೆ.[೯೬] ಯೋಗ್ಯ ಶಿಕ್ಷಣದಿಂದ ಆನೆಗಳಿಗೆ ವೇಗವೂ, ಪರಾಕ್ರಮವೂ, ತೇಜಸ್ಸೂ ಹೆಚ್ಚುತ್ತದೆಯೆಂಬುದು ಕೌಟಲ್ಯನ ಅಭಿಮತವಾಗಿತ್ತು.

ವಿಜಯನಗರ ಅವಧಿಯಲ್ಲಿ ಆನೆಗಳನ್ನು ಹಿಡಿಯುವ ವಿಧಾನ ಹಾಗೂ ಅವುಗಳಲ್ಲಿ ಪಳಗಿಸುತ್ತಿದ್ದ ಬಗೆಯನ್ನು ರಜಾಕ್ ಮತ್ತು ನಿಕೊಲೊಕೊಂತಿ ಸವಿವರವಾಗಿ ತಮ್ಮ ದಿನಚರಿಯಲ್ಲಿ ಹೇಳಿದ್ದಾರೆ. ಈ ಕಾಲದಲ್ಲಿ ರಾಜರು

ಆನೆಯ ಬೇಟೆಗೆ ಹೋಗುತ್ತಿದ್ದರೆನ್ನುವ ರಜಾಕ್‌ನ ಮಾತಿಗೆ, ಇಮ್ಮಡಿ ದೇವರಾಯನು ಹೊಂದಿದ್ದ ಗಜಬೇಂಟೆಕಾರನೆಂಬ ಬಿರುದು ಸಮರ್ಥನೀಯವಾಗಿದೆ.

ಆನೆಗಳನ್ನು ಪಳಗಿಸಲು ಮಾವಟಿಗರು ಇರುತ್ತಿದ್ದರು. ರಾಯವಾಚಕಮು ತುಳುಮಾವಟಿಗಳನ್ನು ಕುರಿತು ಹೇಳುತ್ತದೆ. ಇದರಿಂದ ಕೋಳಿಗುಂದದಂತೆ ಆನೆಗಳನ್ನು ಪಳಗಿಸುವ ಕೇಂದ್ರವು ತುಳುನಾಡಿನಲ್ಲೂ ಇದ್ದಿರುವ ಸಾಧ್ಯತೆಯಿದೆ. ಆನೆಗಳ ಲಾಲನೆ-ಪಾಲನೆಗಳನ್ನು ಗಮನಿಸುವ ಗಜವೈದ್ಯರೂ ವಿಜಯನಗರದಲ್ಲಿ ಇದ್ದರು.[೯೭] ಇವರು ಆನೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದು, ಅವುಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು.

ಯುದ್ಧ ಸಿದ್ಧತೆ

ಗಜದಳವು ವಿಸ್ತಾರ ಸೈನ್ಯದಲ್ಲಿ ಸಾಗರದಲ್ಲಿನ ನೌಕಾಪಡೆಯ ಹಾಗೆ ಚಲಿಸುತ್ತಿತ್ತೆಂದು ಒಂದೆಡೆ ವರ್ಣಿಸಲಾಗಿದೆ.[೯೮] ಆನೆಗಳನ್ನು ಯುದ್ಧಗಳಿಗೆ ಸಜ್ಜುಗೊಳಿಸುತ್ತಿದ್ದ ರೀತಿಯನ್ನು ನಿಕಿಟಿನ್ ನು ಮನಮೋಹಕವಾಗಿ ಚಿತ್ರಿಸಿದ್ದಾನೆ: ''ಯುದ್ಧಗಳಲ್ಲಿ ಆನೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಆನೆಗಳಿಗೆ ಅಲಂಕರಿಸಿದ ಉಕ್ಕಿನ ತಗಡುಗಳನ್ನು ಹೊದಿಸಿ, ಅವುಗಳ ಸೊಂಡಿಲು ಮತ್ತು ಕೋರೆಗಳಿಗೆ ದೊಡ್ಡ ಕೋಲ್ಕತ್ತಿಗಳನ್ನು ಹೊದಿಸಿ, ಬೆನ್ನಿಗೆ ಅಂಬಾರಿಯನ್ನು ಬಿಗಿದು ಅದರೊಳಗೆ ಬಂದೂಕಗಳನ್ನು, ಬಿಲ್ಲು-ಬಾಣಗಳನ್ನು ಹಿಡಿದು ರಕ್ಷಾಕವಚಗಳನ್ನು ಧರಿಸಿದ ಹನ್ನೆರಡು ಜನರು ಇರುತ್ತಾರೆ''.[೯೯] ಇದು ನಿಕಿಟಿನ್ ಹೇಳುವ ವಿವರವಾದರೆ, ಬಾರ್ಬೋಸಾ : ''ಯುದ್ಧಕ್ಕೆ ಹೋಗುವಾಗ ಆನೆಗಳ ಮೇಲೆ ಅಂಬಾರಿಗಳನ್ನು ಬಿಗಿದು ಅವುಗಳಲ್ಲಿ ಬಿಲ್ಲು-ಬಾಣ ಮುಂತಾದ ಶಸ್ತ್ರಾಸ್ತ್ರ ಸಜ್ಜಿತರಾದ ಯೋಧರು ಕುಳಿತು ಯುದ್ಧ ಮಾಡುತ್ತಾರೆ. ಯುದ್ಧಕ್ಕೆ ಆನೆಗಳನ್ನು ತಯಾರು ಮಾಡಿರುತ್ತಾರೆ. ಯುದ್ಧದಲ್ಲಿ ಅವು ತಮ್ಮ ಕೋರೆದಾಡಿಗಳಿಂದ ಕುದುರೆಗಳನ್ನು, ಯೋಧರನ್ನು ತಿವಿದು ಕೊಂದು ರಣರಂಗದಿಂದ ಓಡಿಸುತ್ತವೆ'' ಎಂದಿರುವನು. ಇದು ಯುದ್ಧದಲ್ಲಿನ ಆನೆಗಳ ಕಾರ್ಯವೈಖರಿಯನ್ನು ಬಿಂಬಿಸುತ್ತದೆ. ಆನೆಗಳು ಶತ್ರುಸೈನ್ಯವನ್ನು ಪುಡಿಗಟ್ಟುತ್ತಿದ್ದುದೇನೋ ನಿಜ. ಆದರೆ ಅವು ಗಾಯಗೊಂಡಾಗ ಘಾಸಿಪಟ್ಟು ಓಡಿ ಹೋಗುತ್ತಿದ್ದುದನ್ನು ಮತ್ತು ಹಿಂದಿರುಗಿ ತಮ್ಮವರ ಮೇಲೆಯೆ ಬೀಳುತ್ತಿದ್ದುದ್ದನ್ನು ಬಾರ್ಬೋಸಾ ದಾಖಲಿಸುತ್ತಾನೆ.[೧೦೦] ನ್ಯೂನಿಜ್‌ನು ಆನೆಗಳಿಗೆ ಬಿಗಿಯುತ್ತಿದ್ದ ಅಂಬಾರಿಗಳನ್ನು, ಅಂಬಾರಿಗಳಲ್ಲಿ ಕುಳಿತ ಯೋಧರನ್ನು ಕುರಿತು ಹೇಳುತ್ತಾನೆ. ಅಲ್ಲದೆ ಆನೆಗಳ ಕೊಂಬುಗಳಿಗೆ ಬಿಚ್ಚುಗತ್ತಿಗಳನ್ನು ಸಿಕ್ಕಿಸಿದ ಸಂಗತಿಯನ್ನು ವ್ಯಕ್ತಪಡಿಸುತ್ತಾನೆ. ಉಲ್ಲೇಖಿಸಿದ್ದಾನೆ. ನಿಕಿಟಿನ್, ವಿಜಯನಗರ ಸೇನೆಯಲ್ಲಿ ಆನೆಗಳ ಮೇಲೆ ರಕ್ಷಾಕವಚ ಧರಿಸಿದ ಹನ್ನೆರಡು ಜನ ಯೋಧರಿದ್ದರೆಂದು ಒಂದೆಡೆ ಹೇಳಿದ್ದರೆ, ಇನ್ನೊಂದೆಡೆ ಬಹಮನಿ ಸೈನ್ಯದ ಆನೆಗಳ ಮೇಲೆ ನಾಲ್ಕು ಜನ ಉದ್ದನೆಯ ಬಂದೂಕುಗಳನ್ನು ಹಿಡಿದು ಕುಳಿತ ಯೋಧರಿದ್ದರೆನ್ನುತ್ತಾನೆ. ಒಂದೇ ಕಾಲದಲ್ಲಿನ ಯುದ್ಧದಲ್ಲಿ ಬಳಸುತ್ತಿದ್ದ ಅಸ್ತ್ರಗಳಲ್ಲಿ

ವಿಭಿನ್ನತೆಯಿದ್ದುದನ್ನು ಇಲ್ಲಿ ಕಾಣಬಹುದು. ವಿಜಯನಗರದವರು ಬಿಲ್ಲು-ಬಾಣಗಳಂತಹ ಹಳೆಯ ಮಾದರಿಯ ಆಯುಧಗಳನ್ನು ಹಿಡಿದಿದ್ದರು. ಬಹುಮನಿ ಯೋಧರು ಸಿಡಿಮದ್ದನ್ನು ಹೊಂದಿದ ಬಂದೂಕಗಳನ್ನು ಹಿಡಿದಿದ್ದು, ಇದು ವಿಜಯನಗರ ಸೇನೆಯು ಯುದ್ಧ ತಂತ್ರದಲ್ಲಿ ಬಹುಮನಿಯವರಿಗಿಂತ ಹಿಂದುಳಿದುದನ್ನು ಸೂಚಿಸುತ್ತದೆ.

೩.೪.೪ ಫಿರಂಗಿದಳ (Artillary)

ಪ್ರಸ್ತುತ 'ಫಿರಂಗಿದಳ' ವಿಭಾಗವು ಸಿಡಿಮದ್ದನ್ನು ಒಳಗೊಂಡ ಎಲ್ಲ ಶಸ್ತ್ರಾಸ್ತ್ರಗಳನ್ನು ಒಳಗೊಂಡಿದೆ. ಇದರಲ್ಲಿ ಬಂದೂಕು, ತೋಪು ಅಥವಾ ಫಿರಂಗಿ ಮತ್ತಿತರ ಸಿಡಿಮದ್ದಿನ ಉಪಕರಣಗಳೂ ಸೇರಿವೆ.

ಸಿಡಿಮದ್ದಿನ ಬಳಕೆ ಕುರಿತು ನಡೆದಷ್ಟು ಚರ್ಚೆ ಸೈನಿಕ ವ್ಯವಸ್ಥೆಯ ಯಾವುದೇ ವಿಷಯದ ಮೇಲೆ ಬಹುಶಃ ನಡೆದಿಲ್ಲವೆನ್ನಬಹುದು. ಇದರ ಬಗೆಗೆ ವಿದ್ವಾಂಸರು ಹಲವು ರೀತಿಯಲ್ಲಿ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಗಿಬ್ಬನ್ ಎಂಬ ವಿದ್ವಾಂಸ ಕ್ರಿ.ಶ.೮೩ರ ಹೊತ್ತಿಗೆ ಫಿರಂಗಿಗಳನ್ನು ಚೀನಾದವರು ಬಳಕೆಗೆ ತಂದಿದ್ದರೆಂದಿದ್ದಾನೆ. ಆದರೆ ಮಾರ್ಕೋಪೋಲೊ ಈ ಬಗೆಗೆ ಎಲ್ಲೂ ಉಲ್ಲೇಖಿಸಿಲ್ಲ, ಕೊಲ್ ಫೇವ್ (Col. Fave) ಎಂಬುವನು ಅರಬ್ಬರು ಸಿಡಿಮದ್ದನ್ನು ಹಿಂದೆಯೇ ತಿಳಿದಿದ್ದರು ಎಂದಿದ್ದಾನೆ. ಇದಕ್ಕೆ ಆಕರವಾಗಿ ಕ್ರಿ.ಶ.೧೨೦೦ರಲ್ಲಿ ಅರೇಬಿಯಾದ ಅಬ್ದುಲ್ಲಾ ಕವಿಯು ಪೆಟ್ಲುಪ್ಪನ್ನು ಉಲ್ಲೇಖಿಸಿರುವುದಾಗಿ ಸಮರ್ಥಿಸುತ್ತಾರೆ. ಸಾಮಾನ್ಯವಾಗಿ ಸಿಡಿಮದ್ದನ್ನು ತಯಾರಿಸಲು ಬಳಸುತ್ತಿದ್ದ ವಸ್ತುಗಳಿವು: ಗಂಧಕ, ಇದ್ದಿಲು ಮತ್ತು ಪೆಟ್ಲುಪ್ಪುಗಳನ್ನು ಅನುಪಾತ ೧೧.೯:೧೩.೫:೭೪.೭ರ ಪ್ರಮಾಣದಲ್ಲಿ ಸಂಯೋಜಿಸಿ ತಯಾರಿಸಲಾಗುತ್ತಿತ್ತು. ಈ ಪದ್ಧತಿಯನ್ನು ಚೀನಾ, ಭಾರತ, ಗ್ರೀಕ್, ಅರಬ್, ಮಂಗೋಲ್, ಬ್ರಿಟನ್ ಮತ್ತು ಜರ್ಮನ್ನರೂ ಅನುಸರಿಸಿದ್ದರು. ಹೆಚ್.ಜಿ. ವೇಲ್ಸ್ ಮಂಗೋಲರ ದಿಗ್ವಿಜಯಗಳಿಗೆ ಅವರು ಬಳಸಿದ ಬಂದೂಕು ಮತ್ತು ಸಿಡಿಮದ್ದುಗಳು ಕಾರಣವಾಗಿದ್ದವು. ಇದನ್ನು ಅವರು ಚೀನಿಯರಿಂದ ತಿಳಿದುಕೊಂಡಿದ್ದರೆಂದು ಹೇಳುತ್ತಾರೆ. ಇಂಗ್ಲೀಷರು ಸಿಡಿಮದ್ದಿನ ಪುಡಿಯನ್ನು ಕಂಡುಹಿಡಿದುದು ಆಂಗ್ಲನಾದ ಪ್ರೈಯರ್ ರೋಗರ್ ಬೇಕನ್ (೧೨೨೦-೯೨ AD) ಎಂದು ಆರೋಪಿಸಿದರೆ, ಯೂರೋಪಿಯನ್ನರು ಬೆರ್ತ್‌ಹೋಲ್ಡ್ ಸ್ಕವಾರ್ಟ್ಸ್(Berthold Schwarts) ಎಂಬ ಜರ್ಮನಿಯವನು ೧೪ನೆಯ ಶತಮಾನದಲ್ಲಿ ಕಂಡುಹಿಡಿದನೆಂದೂ ಹೇಳುತ್ತಾರೆ. ಇದು ಸಿಡಿಮದ್ದಿನ ಪ್ರಾಪಂಚಿಕ ಅಭಿಪ್ರಾಯಗಳಾದರೆ ಭಾರತೀಯ ಮೂಲವನ್ನೂ ಮಂಡಿಸುವ ವಾದ ಮತ್ತೊಂದು ಬಗೆಯದು :

ಭಾರತೀಯರು ಪ್ರಾಚೀನ ಕಾಲದಲ್ಲೇ ಸಿಡಿಮದ್ದನ್ನು ಬಳಸಿದ್ದರು; ಅದನ್ನು ಮಹಾಭಾರತ, ಮುದ್ರಾರಾಕ್ಷಸ ಹಾಗೂ ಅಗ್ನಿಪುರಾಣ ಮೊದಲಾದ ಸಂಸ್ಕೃತ ಕಾವ್ಯಗಳಲ್ಲಿ ಕಾಣಬಹುದೆಂಬ ಅಭಿಪ್ರಾಯಗಳೂ ಇವೆ. ಈ ವಾದವನ್ನು ಮುಂದಿಡುವ ವಿದ್ವಾಂಸರೆಂದರೆ ಒಪೆರ್ಟ್(Oppert), ವಿಲ್ಸನ್, ರಾಮದಾಸ್ ಸೇನ್ ಮತ್ತು

ವಿ.ಆರ್.ಆರ್.ದೀಕ್ಷಿತರ್. ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ಶತಘ್ನಿ, ಕನಪ, ಆಯುರ್ವಘ್ನಿ, ನರಚ, ಲೋಹಯಂತ್ರ, ಕಾಲಚಕ್ರ, ಸರ್ವಘಾಟಿ, ದೀಧಿತಿ, ಸ್ಫುಲಿಂಗ, ಕದಿನಿ ಹಾಗೂ ಕೌಟಲ್ಯನು ಹೇಳುವ 'ಅಗ್ನಿಬಾಣ', ಕಾಮಂದಕ ಮತ್ತು ಶುಕ್ರನೀತಿಯಲ್ಲಿ ಬರುವ 'ನಲಿಕ'ಗಳನ್ನು ಸಿಡಿಮದ್ದಿನ ಆಯುಧಗಳೆಂದೂ ಹೇಳಲಾಗಿದೆ.[೧೦೧] ಕನ್ನಡ ಕಾವ್ಯಗಳಲ್ಲೂ ಇಂತಹ ಆಯುಧಗಳ ಉಲ್ಲೇಖಗಳಿವೆ. ಅವುಗಳೆಲ್ಲವೂ ೧೫ನೇ ಶತಮಾನದ ನಂತರದವು. ಈ ಕಾವ್ಯಗಳು ವ್ಯಕ್ತಪಡಿಸುವ ಫಿರಂಗಿ, ಗುಂಡುಗೋವಿ, ಮದ್ದಿನಪಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೆಟಲು, ಕೈಗೋವಿ, ಭೂರಿಶತಗ್ನಿ, ತೋಪು ಇನ್ನು ಮುಂತಾದವುಗಳು ಸಿಡಿಮದ್ದಿನ ಸಮರ್ಥ ಬಳಕೆಯನ್ನು ಎತ್ತಿ ಹಿಡಿದಿವೆ.[೧೦೨] ಕರ್ನಾಟದಲ್ಲಿ ಸಿಡಿಮದ್ದಿನ ಬಳಕೆ ಕುರಿತು ಹೇಳುವ ಮುನ್ನ ಚರಿತ್ರೆಯ ಆಕರಗಳಾದ ಸಾಹಿತ್ಯ, ಶಾಸನ, ಸ್ಮಾರಕ, ವೀರಗಲ್ಲು, ಪ್ರವಾಸಿಗರ ವರದಿ ಮೊದಲಾದವುಗಳನ್ನು ಸಮೀಕ್ಷಿಸಿದಾಗ ಕ್ರಿ.ಶ.೧೪ನೆಯ ಶತಮಾನದ ಪೂರ್ವದಲ್ಲಿ ಸಿಡಿಮದ್ದು ಬಳಕೆಯಾದ ಉಲ್ಲೇಖಗಳಿಲ್ಲ. ಚಿದಾನಂದಮೂರ್ತಿ ಅವರು ಕೂಡ ಸಿಡಿಮದ್ದಿನ ಬಳಕೆ ಪ್ರಾಚೀನ ಕರ್ನಾಟಕದಲ್ಲಿ ಇರಲಿಲ್ಲವೆಂಬುದನ್ನು ಒಪ್ಪುತ್ತಾರೆ. ಸಾಹಿತ್ಯದಲ್ಲಿ ಶಸ್ತ್ರಗಳ ಉಲ್ಲೇಖವಿದ್ದರು. ಅವು ವಿಷಪೂರಿತ ಆಯುಧಗಳೆ ಹೊರತು ಸಿಡಿಮದ್ದು ಆಗಿರಲಿಲ್ಲ. ಶಾಸನ ಮತ್ತು ಪ್ರವಾಸಿ ವರದಿಗಳು ೧೪ನೆಯ ಶತಮಾನದಲ್ಲಿ ಸಿಡಿಮದ್ದು ಬಳಕೆಯಾಗಿರುವುದನ್ನು ಎತ್ತಿ ಹಿಡಿದಿವೆ. ಇವುಗಳಲ್ಲದೆ ಕರ್ನಾಟಕವು ವೀರಗಲ್ಲುಗಳ ತಾಣವೇ ಹೌದು. ಕ್ರಿ.ಶ.೧೫ನೆಯ ಶತಮಾನದ ಪೂರ್ವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಶಸ್ತ್ರಾಸ್ತ್ರಗಳೆಂದರೆ ಬಿಲ್ಲು-ಬಾಣ, ಕತ್ತಿ-ಗುರಾಣಿ, ಈಟಿ-ಭರ್ಚಿಗಳೇ ಆಗಿವೆ. ಇವುಗಳಲ್ಲಿ ಬಂದೂಕಗಳಿರುವುದಿಲ್ಲ. ಆದರೆ ವಿಜಯನಗರ ಮತ್ತು ನಂತರ ಕಾಲದ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವರು(ಚಿತ್ರ - ೧೭, ೨೪). ಇಲ್ಲಿ ಬಂದೂಕಿನ ಉಪಯೋಗ ಕಂಡುಕೊಂಡಿದ್ದರು. ವೀರರ ಬಳಿ ಕತ್ತಿ ಅಥವಾ ಬಾಕು ಇರುವುದು ಇಂದಿನ ಆಯುಧಗಳ ಪ್ರಭಾವವೇ ಇರಬೇಕು. ವಿಜಯನಗರ ಕಾಲಾವಧಿಯ ವೀರಗಲ್ಲುಗಳಲ್ಲಿ ಕಾಣಬರುವ ವಿಶೇಷ ಹಾಗೂ ವಿನೂತನ ಆಯುಧವಾದ ಬಂದೂಕು ಕಂಡುಬರುವುದರಿಂದ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕ್ರಿ.ಶ.೧೪ನೆಯ ಶತಮಾನ ಅಂದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡಿತ್ತೆಂಬುದು ಸ್ಪಷ್ಟ. ಅಂತೆಯೇ ವಿಜಯನಗರ ಕಾಲದ 'ಫಿರಂಗಿ ಪಡೆ'ಗೆ ಸಂಬಂಧಿಸಿದಂತೆ ಹಲವು ಆಕರಗಳು ದೊರೆತಿವೆ.

ವಿಜಯನಗರ ಆರಂಭ ಕಾಲದ ಫಿರಂಗಿ ಪಡೆಯಿದ್ದುದಕ್ಕೆ ನಮಗೆ ಸದ್ಯದ ಆಧಾರವೆಂದರೆ ಫೆರಿಸ್ತಾನ ಹೇಳಿಕೆ. ಫೆರಿಸ್ತಾನು ದಾವೂದ್ ಬಿದುರಿಯ 'ತಹಫುತ್ -ಉಸ್ -ಸಲಾತಿನ್ ' ಕೃತಿಯಲ್ಲಿ ಉಲ್ಲೇಖಿಸಲಾದ ಬಹಮನಿಯ ಮಹಮದ್ ಷಹ ವಿಜಯನಗರದೊಂದಿಗೆ ಕೈಗೊಂಡ ಯುದ್ಧದ ವಿವರಣೆಯನ್ನು ನೀಡುತ್ತಾನೆ. ಕ್ರಿ.ಶ.೧೩೬೬-೬೮ರ ಸಮಯದಲ್ಲಿ ಮಹಮದ್‌ಷಹನು ವಿಜಯನಗರದ ಬುಕ್ಕರಾಯನನ್ನು ಸೋಲಿಸಿ ೨೦೦೦ ಆನೆಗಳು, ೩೦೦

ಬಂದೂಕು ಮತ್ತು ಫಿರಂಗಿ ಗಾಡಿಗಳು, ೨೦೦ ಅರೇಬಿಯಾದ ಕುದುರೆಗಳು ಹಾಗೂ ಬೆಲೆಬಾಳುವ ಆಭರಣಗಳನ್ನು ಲೂಟಿ ಮಾಡಿದನೆಂದು ಹೇಳಲಾಗಿದೆ.[೧೦೩] ಕ್ರಿ.ಶ.೧೩೬೭ರ ಜುಲೈ ತಿಂಗಳಲ್ಲಿ ಮಹಮದ್‌ಶಹ ಮತ್ತು ಬುಕ್ಕರಾಯನಿಗೆ ನಡೆದ ಕದನದಲ್ಲಿ ಬಹಮನಿಯ ಫಿರಂಗಿ ಪಡೆಯ ಚಾಕಚಕ್ಯತೆಯನ್ನು ಫೆರಿಸ್ತಾ ಹೀಗೆ ಹೇಳುತ್ತಾನೆ: ''ಫಿರಂಗಿಯೊಂದಿಗೆ ಮುಂದುವರಿಯುತ್ತಿದ್ದ ಮುಕ್ರಿಬ್‌ಖಾನ ನಿರ್ವಹಣೆಯಲ್ಲಿ ಹಿಂದೆ ಬೀಳದೆ ಶತ್ರುಗಳ ಅಶ್ವದಳ ಮತ್ತು ಕಾಲ್ದಳಗಳನ್ನು ಚೆಲ್ಲಾಪಿಲ್ಲಿಗೊಳಿಸಿದ..... ಅವನು ಎಷ್ಟು ಶೀಘ್ರವಾಗಿ ಮುನ್ನಡೆದನೆಂದರೆ ಕಾಫಿರ (ವಿಜಯನಗರ)ರಿಗೆ ಸಿಡಿಮದ್ದ(ಫಿರಂಗಿ)ನ್ನು ಬಳಸಲು ಸಮಯವೆ ಸಿಗದಂತಾಗಿ ಕತ್ತಿ-ಕಠಾರಿಗಳಂತಹ ಗಿಡ್ಡ ಆಯುಧ ಬಳಸಬೇಕಾಯಿತು.[೧೦೪] ಇವು ಬಹಮನಿ ಮತ್ತು ವಿಜಯನಗರ ಎರಡೂ ಸೇನೆಗಳು ಫಿರಂಗಿಪಡೆ ಹೊಂದಿದ್ದುದನ್ನು ದೃಢಪಡಿಸುತ್ತವೆ. ಫೆರಿಸ್ತಾನ ಈ ಮೇಲಿನ ಎರಡೂ ಉಲ್ಲೇಖಗಳು ಒಂದೇ ಯುದ್ಧದವುಗಳಾಗಿದ್ದುದನ್ನು ದಿನಾಂಕಗಳಲ್ಲಿ ಕಾಣಬಹುದು.

ಬ್ರಿಗ್ಸ್‌ರು ಸಿಡಿಮದ್ದಿನ ಬಳಕೆಗೆ ಸಂಬಂಧಿಸಿದ ಚರ್ಚೆಯಲ್ಲಿ ಕ್ರಿ.ಶ.೧೩೬೮ರ ಹೊತ್ತಿಗೆ ಬಂದೂಕುಗಳನ್ನು ಪಶ್ಚಿಮ ದೇಶಗಳಿಂದ ದೊರಕಿಸಿಕೊಂಡಿದ್ದುದಾಗಿ ಹೇಳಿದ್ದಾರೆ. ಕ್ರಿ.ಶ.೧೩೬೮ಕ್ಕೆ ೧೮ ವರ್ಷಗಳಷ್ಟು ಹಿಂದೆಯೇ ೩ನೇ ಎಡ್ವರ್ಡ್‌ನು ಕ್ರೆಸ್ಸಿ ಕದನದಲ್ಲಿ ಫಿರಂಗಿ ಬಳಸಿದ್ದುದನ್ನು ಸಮರ್ಥಿಸುತ್ತಾರೆ.[೧೦೫] ತೋಪುಗಳನ್ನು ಬಳಸುವಲ್ಲಿ ಪರಿಣತರಾದ ಟರ್ಕರು ಮತ್ತು ಯೂರೋಪಿಯನ್ನರು ಮಹಮ್ಮದೀಯ ಸೈನ್ಯದ ಫಿರಂಗಿ ಪಡೆಯಲ್ಲಿದ್ದರೆನ್ನುವ ಫೆರಿಸ್ತಾನ ಹೇಳಿಕೆಗೆ ಬ್ರಿಗ್ಸ್‌ರ ಅಭಿಪ್ರಾಯ ಸಮ್ಮತವಾಗಿದೆ.

ಕ್ರಿ.ಶ.೧೩೮೮ರ ಶಾಸನದಲ್ಲಿ ಚಿಕ್ಕಗೊಂಡನ ಮಗ ಕೋವಿಕಾರ ದೇವಯ್ಯನಾಯಕನು ಹಾವು ಕಚ್ಚಿ ಸತ್ತನೆಂದು ಹೇಳಲಾಗಿದೆ.[೧೦೬] ಇಲ್ಲಿ ಬಳಕೆಗೊಂಡ ಕೋವಿಯು ಬಂದೂಕೆಂಬುದರಲ್ಲಿ ಸಂಶಯವಿಲ್ಲ. ಅಂತೆಯೇ ೧೪೪೧ರ ಇನ್ನೊಂದು ಶಾಸನದಲ್ಲಿ ಮಹಾಪ್ರಭು ಬಯಿಚಗವುಡನು 'ನಾಡಂಗಿರಿನಾಡ ರಾಜನ ಮದ್ದಿನ ಸೇವೆಯಂ ನಡೆಸಿತ್ತುದ....' ಎಂದಿದೆ. ಇಲ್ಲಿ ಹೇಳಲಾದ ಮದ್ದಿನ ಸೇವೆಯನ್ನು ಸಿಡಿಮದ್ದೆಂದು ಕೆಲವರು ಹೇಳಿದ್ದಾರೆ. ಮತ್ತೆ ಕೆಲವರು ಇದು ಔಷಧಿಯ ಸೇವೆಯಿರಬೇಕೆಂದೂ ಹೇಳುತ್ತಾರೆ.[೧೦೭] ಈ ಮೇಲಿನ ಎಲ್ಲಾ ಆಕರಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲ ಅಂದರೆ ೧೪ನೆಯ ಶತಮಾನದ ಹೊತ್ತಿಗೆ ಸಿಡಿಮದ್ದು ಯಥೇಚ್ಛವಾಗಿ ಬಳಕೆಯಲ್ಲಿತ್ತೆಂದು ಹೇಳಬಹುದು.

೧೪೨೦ರಲ್ಲಿ ಭಾರತಕ್ಕೆ ಬಂದಿದ್ದ ಕೊಂತಿಯು ''ಮಧ್ಯ ಇಂಡಿಯಾದ ಜನರು ಗುಂಡುಗಳನ್ನು ಸಿಡಿಸುವ ಯಂತ್ರವನ್ನೂ, ಸಿಡಿಗುಂಡುಗಳನ್ನು ಉಪಯೋಗಿಸುತ್ತಾರೆ''[೧೦೮] ಎಂದಿದ್ದಾನೆ. ಇಲ್ಲಿ ಹೇಳಲಾದ ಯಂತ್ರಗಳನ್ನು ರಾಮರಾಜನ ಬಖೈರಿನಲ್ಲಿ ಉಲ್ಲೇಖಗೊಂಡಿರುವ ಸುತರನಾಲಿ ಮತ್ತು ಹತರನಾಲಿಗಳೆಂದೂ ವಿದ್ವಾಂಸರು

ಗುರುತಿಸಿದ್ದಾರೆ.[೧೦೯] ಕ್ರಿ.ಶ.೧೫೧೦ರಲ್ಲಿ ಆಳ್ವಿಕೆಗೆ ಬಂದ ಕೃಷ್ಣದೇವರಾಯನ ಕಾಲದಲ್ಲಂತೂ ಫಿರಂಗಿಗಳನ್ನು ಸಮರ್ಥವಾಗಿ ಬಳಸಿದ ಉಲ್ಲೇಖಗಳಿವೆ. ನ್ಯೂನಿಜ್, ಪಾಯೇಸ್, ಬಾರ್ಬೋಸಾ ಮತ್ತಿತರರು ಫಿರಂಗಿ ಪಡೆಯ ಬಳಕೆ ಹಾಗೂ ನಿರ್ವಹಣೆಗಳನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ.

ಡೊಮಿಂಗೋ ಪಾಯೇಸ್, ವಿಜಯದಶಮಿಯ ದಿನ ರಾಜನು ಸೇನಾ ವೀಕ್ಷಣೆಯಲ್ಲಿ ತೊಡಗಿರುವಾಗ, ಮೈದಾನ ಪ್ರದೇಶಗಳಲ್ಲಿ ಸಿಡಿಮದ್ದು, ಬಾಣ-ಬಿರುಸುಗಳ ಪ್ರದರ್ಶನ ಅದ್ಭುತವಾಗಿತ್ತು[೧೧೦] ಎನ್ನುತ್ತಾನೆ. ನ್ಯೂನಿಜ್ ನೀಡುವ ವಿವರವಂತೂ ಅಪಾರ. ಕೃಷ್ಣದೇವರಾಯನು ಕೈಗೊಂಡ ರಾಯಚೂರು ದಂಡೆಯಾತ್ರೆಯಲ್ಲಿ ತನ್ನ ಬೃಹತ್ ಮೊತ್ತದ ಸೈನ್ಯದ ಜೊತೆಗೆ ಫಿರಂಗಿಗಳಿದ್ದುವೆಂದು ಹೇಳಿದ್ದಾನೆ. ಅಲ್ಲದೆ ಬಹುಮನಿಯವರು ರಾಯಚೂರು ಕೋಟೆಯಲ್ಲಿ ೨೦೦ ಫಿರಂಗಿಗಳನ್ನು ಅಳವಡಿಸಿಟ್ಟಿದ್ದರೆಂದೂ, ಬಹಮನಿಯ ಯೋಧರು ಫಿರಂಗಿಗಳಿಂದ ಗುಂಡುಗಳನ್ನು ಹಾರಿಸಿ ಹಾಗೂ ಕೋವಿಗಳಿಂದ ಮದ್ದು ಹೊಡೆದು ಕೃಷ್ಣದೇವರಾಯನ ಅನೇಕ ಸೈನಿಕರನ್ನು ಆಹುತಿ ತೆಗೆದುಕೊಂಡ ವಿಚಾರವನ್ನು ಪ್ರಸ್ತಾಪಿಸುತ್ತಾನೆ. ಈ ಕೋಟೆಯ ಮುತ್ತಿಗೆಯಲ್ಲಿ ಪೋರ್ಚುಗೀಸರ ಪಾತ್ರ ಮಹತ್ವದ್ದು. ನ್ಯೂನಿಜ್ "ವಿಜಯನಗರದಲ್ಲಿದ್ದ ಪೋರ್ಚುಗೀಸರ ಕ್ರಿಸ್ತಾಂವ್-ದ-ಫಿಗೈರೆಡೋ ಇಪ್ಪತ್ತು ಗೋಲಂದಾಜರೊಡಗೂಗಿ ರಾಯಚೂರನ್ನು ತಲುಪಿದನು. ...ಫಿಗೈರೆಡೋ ತನ್ನವರೊಡನೆ ಹೊರಟು ರಾಯಚೂರು ಕೋಟೆಗೆ ಬಹು ಸಮೀಪಕ್ಕೆ ಹೋಗಿ ಕೋವಿಗಳಿಂದ ಗುಂಡು ಹೊಡೆದನು. ಕೋಟೆಯಲ್ಲಿದ್ದವರಿಗೆ ಈ ತರಹ ಕೋವಿಯ ಗುಂಡುಗಳ ಅನುಭವವಿರಲಿಲ್ಲ"[೧೧೧] ಎಂದಿದ್ದಾನೆ. ಇದರಿಂದ ಕೃಷ್ಣದೇವರಾಯನ ಕಾಲದಲ್ಲಿ ಇದುವರೆಗೆ ಬಳಕೆಯಿದ್ದ ಮದ್ದುಗುಂಡುಗಳು, ಫಿರಂಗಿಗಳಿಗೆ ಬದಲಾಗಿ ಪೋರ್ಚುಗೀಸರ ನವೀನ ಮಾದರಿಯ ಅಸ್ತ್ರಗಳು ಬಳಕೆಗೊಂಡುದನ್ನು ಇಲ್ಲಿ ಕಾಣಬಹುದು. ವಾಸ್ಕೋಡಿಗಾಮ ಭಾರತಕ್ಕೆ ಪೋರ್ಚುಗಲ್‌ನಿಂದ ಹದಿನೈದು ದೊಡ್ಡ ಹಡಗುಗಳೊಂದಿಗೆ ಬಂದಿದ್ದನು. ಇವುಗಳಲ್ಲಿ ಐದು ಫಿರಂಗಿ ಹೊತ್ತ ಹಡಗುಗಳಿದ್ದವೆನ್ನಲಾಗಿದೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಪೋರ್ಚುಗೀಸರು ಭಾರತಕ್ಕೆ ಕಾಲಿಡುವ ಮುನ್ನ ಇದ್ದ ಸಿಡಿಮದ್ದು ಉಪಕರಣಗಳ ತಂತ್ರಜ್ಞಾನಕ್ಕೂ, ಪೋರ್ಚುಗೀಸರು ಅನುಸರಿಸಿದ್ದ ತಂತ್ರಜ್ಞಾನದಲ್ಲೂ ವ್ಯತ್ಯಾಸವನ್ನು ಕಾಣಬಹುದು. ಪೋರ್ಚುಗೀಸರು ಪ್ರಯೋಗಿಸಿದ ಕೋವಿಯ ಗುಂಡುಗಳ ಅನುಭವವೇ ಬಹಮನಿಯವರಿಗೆ ಇರಲಿಲ್ಲವೆನ್ನುವ ನ್ಯೂನಿಜನ ಮಾತಿನಿಂದ ಪೋರ್ಚುಗೀಸರು ಫಿರಂಗಿ ಹಾಗೂ ಬಂದೂಕಗಳ ತಂತ್ರಜ್ಞಾನದಲ್ಲಿ ಸಾಕಷ್ಟು ನಿಪುಣತೆ ಹೊಂದಿದ್ದರೆನ್ನಬಹುದು.

ಪೋರ್ಚುಗೀಸ್ ಯೋಧರ ನೆರವಿನಿಂದ ಕೃಷ್ಣದೇವರಾಯನು ರಾಯಚೂರು ಕೋಟೆಯನ್ನು ವಶಪಡಿಸಿಕೊಂಡ ಮೇಲೆ ಅವನ ಸೈನಿಕರು ಕೊಳ್ಳೆ ಹೊಡೆಯಲಾರಂಭಿಸಿದರು. ಈ ಯುದ್ಧಕೊಳ್ಳೆಯಲ್ಲಿ ದೊರೆತ ವಸ್ತುಗಳಲ್ಲಿ ನಾನೂರು ಭಾರಿ ಫಿರಂಗಿಗಳೂ ಸೇರಿದ್ದವೆಂದು ನ್ಯೂನಿಜ್ ಹೇಳುತ್ತಾನೆ.[೧೧೨] ಇದು ಕೃಷ್ಣದೇವರಾಯನ ಕಾಲದ

ಫಿರಂಗಿದಳದ ಕಾರ್ಯವೈಖರಿಗಳಾದರೆ ರಕ್ಕಸಗಿ-ತಂಗಡಗಿ ಯುದ್ಧದಲ್ಲಿದ್ದ ಫಿರಂಗಿಗಳು, ಬಂದೂಕು ಕೋವಿಗಳ ಸಂಖ್ಯೆಯಂತೂ ಅಪರಿಮಿತವಾದುದು. ಬಿಜಾಪುರದ ಮಲ್ಲಿಕ್-ಇ-ಮೈದಾನ್(ಚಿತ್ರ-೧೯) ತೋಪು ಪಂಚಲೋಹಗಳಿಂದ ತಯಾರಿಸಲಾಗಿದ್ದು ಇದನ್ನು ಕ್ರಿ.ಶ.೧೫೪೯ರಲ್ಲಿ ಹಸನ್ ರೂಮಿಯ್ ಮಗ ಮುಹಮ್ಮದ್‌ನು ಅಹಮದ್ ನಗರದಲ್ಲಿ ತಯಾರಿಸಿದ್ದನೆಂದು ತಿಳಿದುಬರುತ್ತದೆ. ಈ ಫಿರಂಗಿಯನ್ನು ವಿಜಯನಗರ ಪತನಕ್ಕೆ ಕಾರಣವಾದ ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ಬಳಸಲಾಗಿದ್ದಿತು. ನಂತರ ಬಿಜಾಪುರದ ಸುಲ್ತಾನನು ಕ್ರಿ.ಶ.೧೬೩೨ರಲ್ಲಿ ಇದನ್ನು ಬಿಜಾಪುರಕ್ಕೆ ತಂದನೆನ್ನಲಾಗಿದೆ. ಇದರಿಂದ ೧೬-೧೭ನೆಯ ಶತಮಾನದಲ್ಲಿ ಸಿಡಿಮದ್ದನ್ನು ಬಳಸಿ ಗುಂಡುಗಳನ್ನು ಸಿಡಿಸುತ್ತಿದ್ದ ಫಿರಂಗಿಗಳ ಬಳಕೆ ಯಥೇಚ್ಛವಾಗಿದ್ದು ದೃಢಪಡುತ್ತದೆ(ಚಿತ್ರ - ೨೧). ವಿಜಯನಗರದ ಸಾಮಂತ ಮನೆತನವಾದ ಕೆಳದಿಯ ಸೈನ್ಯದಲ್ಲಿ 'ತೋಪುಖಾನಿ ಸನ್ನಾಹ ತಂತ್ರಪ್ರಯೋಗ'ವನ್ನು ವಿಶೇಷವಾಗಿ ಉಲ್ಲೇಖಿಸಿರುವುದು ಅಂದಿನ ಫಿರಂಗಿದಳದ ಪ್ರಭಾವವನ್ನು ಎತ್ತಿ ತೋರುತ್ತದೆ.[೧೧೩] ಹೀಗೆ ಬಳಕೆಗೊಂಡ ಸಿಡಿಮದ್ದು ಪ್ರಾಚೀನ ಕಾಲದಲ್ಲಾಗುತ್ತಿದ್ದ ಮುಖಾಮುಖಿ ಯುದ್ಧಗಳಿಂದ ದೂರ ಸರಿಯುವ ಪ್ರಕ್ರಿಯೆಯನ್ನು ಆರಂಭಿಸಿತ್ತೆನ್ನಬಹುದು.

೩.೪.೫ ಇತರೆ - ಒಂಟೆ ಮತ್ತು ಎತ್ತುಗಳು

ವಿಜಯನಗರ ಸೈನ್ಯದಲ್ಲಿ ಕಾಲ್ದಳ, ಅಶ್ವದಳಗಳಂತೆ ಒಂಟೆ, ಎತ್ತು, ಕತ್ತೆಗಳು ಅಪಾರ ಸಂಖ್ಯೆಯಲ್ಲಿದ್ದುದು ತಿಳಿದುಬರುತ್ತದೆ. ಇವು ಸೈನ್ಯದ ನೇರ ಹೋರಾಟದಲ್ಲಿ ಭಾಗಿಯಾಗದೆ, ಸೈನ್ಯಕ್ಕೆ ಬೇಕಾದ ಶಿಬಿರ ಸಾಮಗ್ರಿಗಳು, ಆಹಾರ ವಸ್ತುಗಳು, ಶಸ್ತ್ರಾಸ್ತ್ರಗಳು-ಇವೇ ಮೊದಲಾದವುಗಳನ್ನು ಸೈನ್ಯಕ್ಕೆ ಪೂರೈಸುವ ಸಾಗಾಣಿಕೆ ಸಾಧನಗಳಾಗಿದ್ದವು. ಆದುದರಿಂದ ಇವುಗಳನ್ನು ಪೋಷಕ ಅಥವಾ ಸಹಾಯಕ ಸೈನ್ಯವೆಂದೂ ಕರೆಯಲಾಗುತ್ತದೆ. ರಾಯಚೂರು ದಂಡೆಯಾತ್ರೆಯಲ್ಲಿ ಕೃಷ್ಣದೇವರಾಯನ ಸೈನ್ಯದಲ್ಲಿ ಅನೇಕ ಹೇಸರಗತ್ತೆಗಳು, ಕತ್ತೆಗಳು, ಗೂಳಿಗಳು, ಗುಡಾರ ಮತ್ತು ಇತರ ಸಾಮಾನುಗಳನ್ನು ಹೊತ್ತು ಸಾಗುತ್ತಿದ್ದವೆಂದು ನ್ಯೂನಿಜ್ ಹೇಳುತ್ತಾನೆ. ಎತ್ತು, ಕೋಣ, ಕತ್ತೆ ಮತ್ತು ಕುದುರೆಗಳ ಮೇಲೆ ಸಾಮಾನುಗಳನ್ನು ಹೇರುತ್ತಾರೆ ಎಂದು ಬಾರ್ಬೋಸಾ ಕೂಡ ತಿಳಿಸುತ್ತಾನೆ.

ಒಂಟೆಗಳು ವಿಜಯನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದವು. ಎರಡನೇ ದೇವರಾಯನು ತನ್ನ ಮಹಾಸೇನಪತಿಯಾದ ನಾಗಮನಾಯಕನನ್ನು ದಕ್ಷಿಣದ ದಿಗ್ವಿಜಯಕ್ಕೆಂದು ಕಳುಹಿಸಿದಾಗ ಅವನೊಂದಿಗೆ ಇದ್ದ ಸೈನ್ಯದಲ್ಲಿ ೧೦,೦೦೦ ಒಂಟೆಗಳಿದ್ದವೆಂದು ತಿಳಿದುಬರುತ್ತದೆ.[೧೧೪] ರಾಮರಾಜನ ಬಖೈರಿನಲ್ಲಿ ದೊರೆಯುವ ಒಂಟೆಗಳ ಸಂಖ್ಯೆಯಂತೂ ಉತ್ಪ್ರೇಕ್ಷೆಯೇ ಸರಿ. ೧೮,೭೪,೪೨೯ ಒಂಟೆಗಳು ರಕ್ಕಸಗಿ-ತಂಗಡಗಿ ಕದನದಲ್ಲಿದ್ದವೆಂದು ಹೇಳಿದೆ.[೧೧೫] ಒಂಟೆಗಳನ್ನು ವಿಜಯನಗರದ ಸ್ಮಾರಕಗಳಲ್ಲೂ ಕಾಣಬಹುದು. ಮಹಾನವಮಿ ದಿಬ್ಬದ ಶಿಲ್ಪಪಟ್ಟಿಕೆಗಳಲ್ಲಿ ಒಂಟೆಗಳ ಸಾಲನ್ನು ಚಿತ್ರಿಸಲಾಗಿದೆ(ಚಿತ್ರ - ೧೬, ೧೮). ಸಾಹಿತ್ಯಗಳಲ್ಲೂ ಒಂಟೆಗಳನ್ನು ಬಳಸಿದ ಉಲ್ಲೇಖಗಳನ್ನು ಕಾಣಬಹುದು:

ರಾಮನಾಥ ಚರಿತದಲ್ಲಿ, 'ಹಿಡಿದರೊಂಟೆಯ ಹಿಡಿದರು ಪಾಳೆಯವನು'[೧೬] ಎಂಬ ವಾಕ್ಯವು ಒಂಟೆಗಳ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತದೆ. ಕೌಟಲ್ಯನು ಕೂಡ ಸಾಮಗ್ರಿಗಳನ್ನು ಸಾಗಿಸಲು ಒಂಟೆಗಳು ತುಂಬಾ ಉಪಯುಕ್ತವಾಗಿವೆ ಎಂದಿದ್ದಾನೆ. ಒಂಟೆಗಳು ಸಮರದಲ್ಲಿ ಸಹಾಯಕ ಸೈನ್ಯವಾಗಿತ್ತೇ ಹೊರತು ಹೋರಾಟದಲ್ಲಿ ಭಾಗವಹಿಸುತ್ತಿರಲಿಲ್ಲವೆನ್ನುವುದು ಸ್ಪಷ್ಟ ಸಂಗತಿ.

ಒಂಟೆಗಳಂತೆ ಎತ್ತುಗಳನ್ನು ಬಂಡಿಗಳು ಮತ್ತು ಫಿರಂಗಿಗಾಡಿಗಳನ್ನು ಎಳೆಯಲು ಯಥೇಚ್ಛವಾಗಿ ಬಳಸಲಾಗುತ್ತಿತ್ತು. ವಿಜಯನಗರಕ್ಕೆ ಹೊರಗಡೆಯಿಂದ ಪ್ರತಿದಿನ ನೂರಾರು ಹೇರೆತ್ತುಗಳು ಬರುತ್ತಿದ್ದುದನ್ನು ಪಾಯೇಸ್ ಹೇಳಿರುವುದಲ್ಲದೆ, ಈ ಹೇರೆತ್ತು(ಮೂಲೆವೀಸ ಒಳಹೇರು)ಗಳಿಗೆ ಒಂದೊಂದಕ್ಕೆ ಒಂದೊಂದು ಕಾಸು ತೆರಿಗೆಯನ್ನು ವಸೂಲಿ ಮಾಡುತ್ತಿದ್ದರೆಂಬುದು ಶಾಸನವೊಂದರಿಂದ ತಿಳಿದುಬರುತ್ತದೆ.[೧೭] ರಾಮರಾಜನ ಬಖೈರಿನಲ್ಲಿ ಹೇಳಿರುವಂತೆ, ೧೫೬೫ರ ಯುದ್ಧದಲ್ಲಿ ಪಾಲ್ಗೊಂಡ ಎತ್ತುಗಳ ಸಂಖ್ಯೆ ೫೪,೩೨,೧೦,೦೦೦. ಹೀಗೆ ಸೈನ್ಯದಲ್ಲಿ ಒಂಟೆ, ಎತ್ತು ಮತ್ತು ಕತ್ತೆಗಳು ಸೇನಾ ಶಿಬಿರದ ಪರಿಕರಗಳು, ಶಸ್ತ್ರಾಸ್ತ್ರಗಳು ಇನ್ನು ಮುಂತಾದ ವಸ್ತುಗಳ ಸಾಗಣಿಕೆಗೆ ಬಳಕೆಗೊಂಡ ಪೋಷಕ ಸೈನ್ಯವಾಗಿತ್ತೆಂದು ಹೇಳಬಹುದು.

ಟಿಪ್ಪಣಿಗಳು

೦೧. ಹೊಸತು ಹೊಸತು, ಪು.೪೭೪

೦೨. ಪ್ರ.ಕಂ.ಇಂ., ಸಂ-೨, ರಜಾಕ್, ಪು.೧೫೪

೦೩. ಅದೇ, ನಿಕೊಲೊ-ದೆ-ಕೊಂತಿ, ಪು.೧೨೫

೦೪. ಅದೇ, ಡೊಮಿಂಗೋ ಪಾಯೇಸ್, ಪು.೩೬೭

೦೫. ಅದೇ, ಬಾರ್ಬೋಸಾ, ಪು.೨೯೦-೯೪

೦೬. The Indian Cavalry, Vol-1, 1981, Pp.15

೦೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೬೨

೦೮. EC., Vol-VIII, Sb.375; EI., Vol-III, Pp.33

೦೯. ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಸಿವೆಲ್, (ಅನು : ಸದಾನಂದ ಕನವಳ್ಳಿ), ಪು.೭೦

೧೦. Administration and Social life under Vijayanagar, Part-I, P.151

೧೧. ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.೧೫೯

೧೨. War in Ancient India, V.R.R.Dikshitar, P.190

೧೩. ಪ್ರ.ಕಂ.ಇಂ., ಸಂ-೧, ಪು.೨೨೨

೧೪. Social and Political life in Vijayanagar Empire, Vol-I, P.420

೧೫. War in Ancient India, P.Jagannadha Swamy, P.22

೧೬. ಶಿವತತ್ತ್ವರತ್ನಾಕರ, ೫.೧೪.೪೭-೪೯, ಪು.೩೩೪

೧೭. Sources of Vijayanagar History, P.102

೧೮. Social and Political lief in Vijayanagar Empire, Vol-I, P.414

೧೯. ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.೪೪

೨೦. ಪ್ರ.ಕಂ.ಇಂ., ಸಂ-೨, ಪು.೨೮೦

೨೧. ಅದೇ, ಪು.೧೫೪

೨೨. Administration and Social life under Vijayanagar Empire, Part-I, P.142

೨೩. ಪ್ರ.ಕಂ.ಇಂ., ಸಂ-೨. ಪು.೨೮೦

೨೪. ಅದೇ, ಪು.೨೯೫

೨೫. ಮ.ಹೋ.ಮ.ವಿ., ಪು.೧೯೧

೨೬. The Sources of Vijayanager, History, P.೧೩೧

೨೭. ಮ.ಹೋ.ಮ.ವಿ., ಪು.೨೧೯

೨೮. ಕ.ಶಾ.ಸಾಂ.ಅಧ್ಯಯನ, ಚಿ.ಮೂರ್ತಿ, ಪು.೨೯೭

೨೯. The Art of war in Ancient India, B.P.Sinha, P.132

೩೦. ಪ್ರ.ಕಂ.ಇಂ., ಸಂ-೨, ಪು.೩೭೯

೩೧. ಮಧುರಾವಿಜಯಂ, ೪-೩೭

೩೨. ರಾಮನಾಥ ಚರಿತ, ೫-೩೭

೩೩. ಪ್ರ.ಕಂ.ಇಂ., ಸಂ-೧, ಹೂಯನ್‌ತ್ಸಾಂಗ್, ಪು.

೩೪. ಅದೇ, ಸಂ-೨, ಪು.೨೯೫

೩೫. ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೯

೩೬. EC., Vol-XI, Chitradurga, No.2 and 3

೩೭. ರಾಮನಾಥ ಚರಿತ ೧೧-೨೧ ರಿಂದ ೨೪ ಮತ್ತು ೪೫-೧೪; ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೪

೩೮. ರಾಮನಾಥ ಚರಿತ ೪-೮೨

೩೯. ಅದೇ, ೧೦-೨೫

೪೦. Social and Political life in Vijayanagar Empire-I, P.424

೪೧. ಪ್ರ.ಕಂ.ಇಂ., ಸಂ-೨, ಪು.೧೭೭

೪೨. ಅದೇ, ಪಾಯೇಸ್, ಪು.೩೭೮

೪೩. ಅದೇ, ನೂನಿಜ್, ಪು.೩೯೮

೪೪. ಅದೇ, ಪು.೩೯೭

೪೫. ಚೆನ್ನಬಸವಪುರಾಣ, ಸಂ-೨, ಪು.೨೧, ೪೧-೫೩

೪೬. E.C., Vol-VII, Shikaripur, 7, P.39

೪೭. ಕೊಪ್ಪಳ: ಸಾಂಸ್ಕೃತಿಕ ಪರಂಪರೆ, ಪು.೩೩-೩೫

೪೮. Position of Women During Vijayanagar, P.33

೪೯. ARSIE., 1929-30, No.542

೫೦. Kannada Inscriptions of Andhra Pradesh, No.285, P.80

೫೧. Social and Political life in Vijayanagar Empire, P. 454

೫೨. ಪ್ರ.ಕಂ.ಇಂ., ಸಂ - ೨, ಪು.೩೦೦

೫೩. ರಾಮನಾಥ ಚರಿತ, ಸಂ-೩, ಪು.೪೨-೬೩, ೪೧-೫೯

೫೪. The Hoysala Vamsa, William Coeldho, P.25-58; ಕರ್ನಾಟಕ ವೀರಗಲ್ಲುಗಳು, ಪು.೧೭೫

೫೫. ಶಿವತತ್ತ್ವರತ್ನಾಕರ, ೫.೧೫.೧೦೭- ೧೧೨

೫೬. Vijayanagar Inscriptions, KN.412, Bagguru ; SII., Vol-IX-ii, No.532

೫೭. ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು.೫೧

೫೮. Indian Antiquary, Vol-XI, P.37

೫೯. EC., Vol-XI, Dg.25

೬೦. EC., Vol-Viii, Sb.319

೬೧. Vijayanager Insciptions, Kn.557, ಹಳ್ಳಿಹಾಳು, ಹರಿಹರ ತಾ.

೬೨. ಮ.ಹೋ.ಮ.ವಿ., ಪು.೭೭

೬೩. EC., Vol-iii, Sr.15

೬೪. SII., Vol-IX-ii, No.447

೬೫. SII., Vol-iv, No's.272 & 277

೬೬. Indian Antiquary Vol-xliii, P.191

೬೭. ಕೌಟಲ್ಯನ ಅರ್ಥಶಾಸ್ತ್ರ, ಪು.೫೪೪, ಅಧ್ಯಾಯ ೧೩೧, ಪ್ರಕರಣ:೧೫೦-೧೫೨

೬೮. ಪ್ರ.ಕಂ.ಇಂ., ಸಂ-೨, ಪು.೪೧೭

೬೯. ಅದೇ, ಪು.೪೨೦

೭೦. ಅದೇ, ಬಾರ್ಬೋಸಾ, ಪು.೨೯೪

೭೧. ಅದೇ, ಪಾಯೇಸ್, ಪು.೩೮೧

೭೨. ಕೌಟಲ್ಯನ ಅರ್ಥಶಾಸ್ತ್ರ, ಪು.೨೦೯

೭೩. The Indian Cavalry, Vol-I, G.S.Sandhu, P.15

೭೪. ಪ್ರ.ಕಂ.ಇ., ಸಂ-೨, ಮಾರ್ಕೋಪೋಲೊ, ಪು.೨೭

೭೫. ಅದೇ, ಬಾರ್ಬೋಸಾ, ಪು.೨೯೫

೭೬. ಮ.ಹೋ.ಮ.ವಿ., ಪು.೧೩೯

೭೭. Bombay Gazetter- II, P.115

೭೮. Administration and Political life under Vijayanagar Empire, P.154

೭೯. Industries and Commerce in Karnataka during the Vijayanagar- Period (1335-1565), K.S.Nanjndappa (Ph.D. Thesis) Dept. of History, Manasagangotri, Mysore.

೮೦. ಮ.ಹೋ.ಮ.ವಿ., ಪು.೧೩೯

೮೧. ಗಂಗಾದೇವಿಯ ಮಧುರಾವಿಜಯಂ, ಸಂ. ಕುಶಾಲಪ್ಪಗೌಡ, ಪು.೪-೨೫

೮೨. ರಾಮನಾಥ ಚರಿತ, ೧೧-೧೬

೮೩. ಅದೇ, ೧೨-೮೮

೮೪. ಪ್ರ.ಕಂ.ಇಂ., ಸಂ-೨ ಪಾಯೇಸ್ ಪು.೨೭೮

೮೫. ಅದೇ

೮೬. ಅದೇ, ಬಾರ್ಬೋಸಾ, ಪು.೨೬೫-೬

೮೭. EC.Vol-xvii, No.146, P.53, ಬೆಳ್ಳೂರು, ಕೋಲಾರ ಜಿಲ್ಲೆ

೮೮. ಅದೇ, No.146

೮೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಸಂಖ್ಯೆ-೩, ಪು.೪೫೬

೯೦. ರಾಮನಾಥಚರಿತ, ಸಂ-೨, ಪು.೧೯೦, ೧೧:೨೪

೯೧. ಧರ್ಮಪರೀಕ್ಷೆ, ಪು.೨೨೯; ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೧೧

೯೨. ಕರ್ನಾಟಕ ಪರಂಪರೆ, ಸಂ-೧, ಪು.೬೨೧-೬೨೨

೯೩. ಪ್ರಕಂ.ಇಂ., ಸಂ-೨, ಪು.೪೦

೯೪. ಅದೇ, ರಜಾಕ್, ಪು.೧೫೮

೯೫. ಅದೇ, ಪು.೧೫೯

೯೬. ಕೌಟಿಲ್ಯನ ಅರ್ಥಶಾಸ್ತ್ರ, ಪು.೧೦೨

೯೭. ಶ್ರೀ ಕೃಷ್ಣದೇವರಾಯನ ದಿನಚರಿ, ಪು.೧೭

೯೮. ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ, ಪು.೧೭೫

೯೯. ಪ್ರ.ಕಂ.ಇಂ., ಸಂ-೨, ನಿಕಿಟಿನ್ ಪು.೧೭೭

೧೦೦. ಅದೇ, ಬಾರ್ಬೋಸಾ, ಪು.೨೬೫

೧೦೧ The Art of war in Medieval Indian P.128; ಪಾಳೆಯಗಾರರ ಕಾಲದ ಫಿರಂಗಿಗಳು, ಲಕ್ಷ್ಮಣ್ ತೆಲಗಾವಿ, ಬ್ರಹ್ಮಗಿರಿ, ೧೯೮೬

೧೦೨. ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೧೦೭; ಕರ್ನಾಟಕ ಜನಜೀವನ, ಪು.೨೮

೧೦೩. Briggs- II, P.312; Social and Political life in Vijanagar Empire, P.430; The Art of War in Medieval India P.132

೧೦೪. ಮ.ಹೋ.ಮ.ವಿ., ಪು. ೩೬

೧೦೫. Social and Political life in Vijayanagar Empire, P.430

೧೦೬. EC., Vol- VIII, Sb.433, P.81

೧೦೭. Social & Political life in Vijaynagar Empire, P.432

೧೦೮. ಪ್ರ.ಕಂ.ಇಂ., ಸಂ-೨ ಪು.೧೪೨

೧೦೯. The Art of war in Medieval India P.133

೧೧೦. ಪ್ರ.ಕಂ.ಇಂ., ಸಂ-೨, ಪಾಯೇಸ್ , ಪು.೩೮೦

೧೧೧. ಅದೇ, ನ್ಯೂನಿಜ್, ಪು. ೩೯೮-೪೦೨

೧೧೨. ಅದೇ, ಪು.೪೦೧

೧೧೩. ಕೆಳದಿ ನೃಪವಿಜಯಂ, ಪು.೧೦೭, ಅಷ್ಟಮಾಶ್ವಾಸಂ

೧೧೪. Indian Antiquary XLIII, P.191

೧೧೫. Further Sources of Vijyanagar History, Ramarajana Bakhair, P.೨೭೫

೧೧೬. ರಾಮನಾಥ ಚರಿತ, ೨೮-೧೦೫

೧೧೭. SII., Vol-IV, No.266

ಅಧ್ಯಾಯ ೪

ಸೈನ್ಯಾಡಳಿತ

ಸೈನ್ಯಾಡಳಿತವು ರಾಜ್ಯವ್ಯವಸ್ಥೆಯ ಒಂದು ಅಂಗ. ಇದು ರಾಜ್ಯಾಡಳಿತದ ಅತಿ ಮುಖ್ಯ ಆಧಾರ ಸ್ತಂಭವೂ ಹೌದು. ರಾಜ್ಯರಕ್ಷಣೆ ಹಾಗೂ ಶಾಂತಿ-ಸುವ್ಯವಸ್ಥೆಗಳಲ್ಲಿ ಇದರ ಪಾತ್ರ ತುಂಬ ಹಿರಿದು. ಯಾವುದೇ ರಾಜ್ಯವು ಭದ್ರತೆಯಿಂದ ಕೂಡಿರಬೇಕಾದರೆ ಅದಕ್ಕೆ ಪ್ರಬಲ ಸೈನ್ಯವು ಅತ್ಯವಶ್ಯವಾಗಿದೆ. ಅಂತೆಯೇ ಸುಭದ್ರ ಸೈನ್ಯಕ್ಕೆ ವ್ಯವಸ್ಥಿತವಾದ ಆಡಳಿತ ಕ್ರಮವಿರಬೇಕು. ಹಲವು ಸಂಘರ್ಷ-ತಿಕ್ಕಾಟಗಳಿಂದ ಕೂಡಿದ ಹಾಗೂ ಅರ್ಹನಿಗೆ ಮಾತ್ರ ಉಳಿವು ಎಂಬ ವಿಚಾರ ಪ್ರಧಾನವಾಗಿದ್ದ ಮಧ್ಯಯುಗೀನ ಚರಿತ್ರೆಯಲ್ಲಿ ಸೈನ್ಯವು ಅನಿವಾರ್ಯವಾಗಿದ್ದಿತು. ಸೈನ್ಯದ ಆಡಳಿತದಲ್ಲೂ ಮೇಲಿನಿಂದ ಕೆಳಗಿನ ಹಂತದವರೆಗಿನ ಎಲ್ಲರಲ್ಲೂ ಸಮನ್ವಯತೆ, ಅನ್ಯೋನ್ಯತೆ ಹಾಗೂ ಶಿಸ್ತುಗಳನ್ನು ಅಳವಡಿಸಬೇಕಾಗಿದ್ದಿತು. ವಿಜಯನಗರವು ತನ್ನ ಕಾಲಾವಧಿಯ ಹೆಚ್ಚು ಸಮಯವನ್ನು ಯುದ್ಧಗಳಲ್ಲಿ ಕಳೆದುದನ್ನು ಗಮನಿಸಿದರೆ, ಅಂದಿನ ಸೈನ್ಯದ ಪಾತ್ರ ಮತ್ತು ಅಗತ್ಯಗಳ ಅರಿವಾಗುವುದು. ಇದು ನೆರೆ-ಹೊರೆಯವರೊಂದಿಗೆ ಸದಾ ಯುದ್ಧದಲ್ಲಿ ತೊಡಗಿರುತ್ತಿದ್ದ ಮಿಲಿಟರಿ ಆಡಳಿತವಾಗಿದ್ದಿತೆಂದೂ ಅಭಿಪ್ರಾಯಪಡಲಾಗಿದೆ.[೧] ಈ ಹೇಳಿಕೆಯು ಒಂದರ್ಥದಲ್ಲಿ ಸರಿಯೂ ಆಗಿದೆ. ವಿಜಯನಗರ ಸಾಮ್ರಾಜ್ಯದ ಆಡಳಿತವು ಕೇಂದ್ರೀಕೃತ ವ್ಯವಸ್ಥೆಗಿಂತ ಬಹುಪಾಲು ವಿಕೇಂದ್ರೀಕರಣ ವ್ಯವಸ್ಥೆಯ ಮೇಲೆ ನಡೆಯುತ್ತಿದ್ದಿತು. ಇದಕ್ಕೆ ಅಂದಿನ ಅರಸರು ಪುಷ್ಟಿ ನೀಡಿ ಬೆಳೆಸಿದ ಅಮರನಾಯಕ ಪದ್ಧತಿಯು ಕಾರಣವಾಗಿದೆ. ಈ ಅಮರನಾಯಕ ವ್ಯವಸ್ಥೆಯ ನಾಯಕರು ಮುಖ್ಯವಾಗಿ ಸೈನ್ಯಾಧಿಕಾರಿಗಳೇ ಆಗಿದ್ದರು. ಸೈನ್ಯದಲ್ಲಿ ಹೆಚ್ಚು ಪರಿಣತಿ ಹೊಂದಿದ ನಿಪುಣರು, ಅನುಭವವುಳ್ಳವರನ್ನು ಈ ಸ್ಥಾನಕ್ಕೆ ನೇಮಕ ಮಾಡಲಾಗುತ್ತಿತ್ತು. ಕೇಂದ್ರವು ಈ ಅಮರನಾಯಕರಿಂದ

ನಿರೀಕ್ಷಿಸುತ್ತಿದ್ದದು ಸೈನ್ಯ ಪಾಲನೆ ಮತ್ತು ಆದಾಯದ ಪಾಲು ಮಾತ್ರವಾಗಿತ್ತು. ಉಳಿದ ವಿಷಯಗಳಲ್ಲಿ ಇವರು ಸಂಪೂರ್ಣ ಸ್ವತಂತ್ರರು. ತಮ್ಮ ರಾಜ್ಯದಲ್ಲಿ ಪ್ರಜೆಗಳ ಕ್ಷೇಮಕ್ಕಿಂತ ಹೆಚ್ಚಾಗಿ ರಾಜನಿಗೆ ಬೇಕಾದ ಧನ ಮತ್ತು ಸೈನ್ಯದ ಸಂರಕ್ಷಣೆಯೇ ಆಗಿದ್ದಿತು. ಇದರಿಂದ ಯಥೇಚ್ಚ ತೆರಿಗೆಗಳನ್ನು ಹಾಕಿ ಪ್ರಜೆಗಳಿಂದ ಹಣ ಸುಲಿಯುತ್ತಿದ್ದುದು ಉಂಟು.[೭] ವಿಜಯನಗರದ ಅವಧಿಯನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಆಳ್ವಿಕೆಯ ಹೆಚ್ಚು ಸಮಯವನ್ನು ಅರಸರು ಯುದ್ಧಗಳಲ್ಲಿಯೇ ಕಳೆದಿರುವುದು ತಿಳಿದುಬರುತ್ತದೆ. ವಿಜಯನಗರ ಅರಸರಿಗೆ ಸೈನ್ಯದ ಬಲವರ್ಧನೆಯು ಅತ್ಯಂತ ಮುಖ್ಯವಾಗಿದ್ದು, ಸೈನ್ಯ ಅದರ ಅಧಿಕಾರಿ ವರ್ಗ, ಶಸ್ತ್ರಾಸ್ತ್ರಗಳ ಉತ್ಪಾದನೆ ಕೋಟೆ-ಕೊತ್ತಲಗಳ ನಿರ್ಮಾಣದತ್ತ ಹೆಚ್ಚು ಒತ್ತು ನೀಡಿ ಅದರ ಮೂಲಕ ರಾಜ್ಯವಾಳಿದುದನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯದ ಆಡಳಿತವು ಮಿಲಿಟರಿ(ಸೈನಿಕ) ಆಡಳಿತವೇ ಆಗಿದ್ದುದು ಸ್ಪಷ್ಟವಾಗುತ್ತದೆ. ಆಡಳಿತದಲ್ಲಿ ಸಮಗ್ರತೆ ಹಾಗೂ ಪ್ರಭುತ್ವಗಳನ್ನು ರಕ್ಷಿಸಿಕೊಳ್ಳಬೇಕಾದ ಅನಿವಾರ್ಯತೆಯಿದ್ದುದರಿಂದ ಸೈನ್ಯವನ್ನು ಸದಾ ಜಾಗರೂಕವಾಗಿ ಇಡಬೇಕಾದುದು ಅತ್ಯವಶ್ಯವಾಗಿತ್ತು.

ರಾಜ್ಯಾಡಳಿತವು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದುದಾದರೆ, ಸೈನ್ಯಾಡಳಿತವು ಸೇನೆಗೆ ಮಾತ್ರ ಅನ್ವಯಿಸುವುದು. ಆದರೂ ರಾಜ್ಯವ್ಯವಸ್ಥೆಯಲ್ಲಿ ರಾಜನ ನಂತರದ ಸ್ಥಾನವನ್ನು ಮಹಾಪ್ರಧಾನ ಅಥವಾ ದಂಡನಾಯಕರು ಅಲಂಕರಿಸಿದ್ದರು. ಆದ್ದರಿಂದ ರಾಜ್ಯ ಮತ್ತು ಸೈನ್ಯಗಳೆರಡೂ ಒಂದನ್ನು ಬಿಟ್ಟು ಮತ್ತೊಂದು ಇರಲಿಲ್ಲವೆಂದೇ ಹೇಳಬೇಕು. ಸೈನ್ಯಾಡಳಿತ ವಿಭಾಗವನ್ನು ವಿಜಯನಗರ ಕಾಲದಲ್ಲಿ ಕಂದಾಚಾರವೆಂದು ಕರೆಯಲಾಗಿತ್ತು.[೮] ವಿಜಯನಗರದ ಅರಸರು ಸೈನ್ಯಾಡಳಿತದಲ್ಲಿ ವಿಭಾಗಗಳಾಗಿ ಮಾಡಿಕೊಂಡಿದ್ದರಲ್ಲದೆ, ಶ್ರೇಣೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರು. ಇಲ್ಲಿ ರಾಜನು ಮುಖ್ಯವಾದ ಕೇಂದ್ರಬಿಂದುವಾಗಿದ್ದು, ಮಹಾಪ್ರಧಾನ ಅಥವಾ ಮಹಾದಂಡನಾಯಕ, ದಂಡನಾಯಕರು, ದಳಪತಿ ಅಥವಾ ದಳವಾಯಿಗಳು ಕ್ರಮವಾಗಿ ಅಧಿಕಾರ ಹೊಂದಿದ್ದರು. ಇದು ಕೇಂದ್ರದ ಸಂಪೂರ್ಣ ನಿಯಂತ್ರಣವನ್ನು ಹೊಂದಿದ್ದಿತು. ಆಡಳಿತದ ಅನುಕೂಲತೆಗೆ ವಿಜಯನಗರದ ಅರಸರು ಅನುಸರಿಸಿದ ನವೀನ ಮಾದರಿಯ ಇನ್ನೊಂದು ಪದ್ಧತಿಯೆಂದರೆ, ಅಮರನಾಯಕ ಅಥವಾ ನಾಯಂಕರ ವ್ಯವಸ್ಥೆ. ಇದು ಪ್ರಾಂತೀಯ ಆಡಳಿತವನ್ನು ನೋಡಿಕೊಳ್ಳುವ ಸ್ವತಂತ್ರ ಘಟಕಗಳಿಂದ ರೂಪುಗೊಂಡಿತ್ತು. ಸೈನ್ಯವನ್ನು ಕೇಂದ್ರ ಮತ್ತು ಪ್ರಾಂತೀಯ ಎಂಬುದಾಗಿ ವಿಂಗಡಿಸಿದ್ದುದನ್ನು ಈ ಕಾಲದಲ್ಲಿ ಕಾಣಬಹುದು. ಕೇಂದ್ರ ಸೈನ್ಯವು ಅರಸನ ನೇರ ಅಧೀನದಲ್ಲಿದ್ದು, ಸಂಬಳ-ಸಾರಿಗೆ ಇತ್ಯಾದಿಗಳನ್ನು ಅರಸನೇ ಭರಿಸುತ್ತಿದ್ದನು. ಆದರೆ ಪ್ರಾಂತೀಯ ಸೈನ್ಯವು ಪ್ರಾಂತ್ಯಾಧಿಕಾರಿಗಳಾದ ಅಮರನಾಯಕರ ಅಧೀನದಲ್ಲಿತ್ತು. ಈ ಅಧಿಕಾರಿಗಳು ಅರಸನಿಂದ ಉಂಬಳಿ ಪಡೆದ ಭೂಮಿಯಿಂದ ಬಂದ ಉತ್ಪತ್ತಿಯಲ್ಲಿ ಇಂತಿಷ್ಟು ಪ್ರಮಾಣದ ವಂತಿಗೆಯನ್ನು ಸಲ್ಲಿಸುವುದರ ಜೊತೆಗೆ ಆದಾಯಕ್ಕನುಗುಣವಾಗಿ ಸೈನ್ಯವನ್ನು ಕಾಯ್ದಿಟ್ಟು ಕೊಳ್ಳಬೇಕಾಗಿದ್ದಿತು. ವಿಜಯನಗರ ಸಾಮ್ರಾಜ್ಯವು

ಅನುಸರಿಸಿದ ಈ ನಾಯಂಕರ ವ್ಯವಸ್ಥೆಯಿಂದ ಅಮರನಾಯಕರು, ಮಂಡಲೇಶ್ವರರು, ಇನ್ನೂ ಮುಂತಾದ ಅಧಿಕಾರಿಗಳು ಅಸ್ತಿತ್ವ ಪಡೆದಿದ್ದರು. ನ್ಯೂನಿಜ್ ಪ್ರಕಾರ, "ರಾಜ್ಯದಲ್ಲಿ ಉದ್ಯುಕ್ತರಾದ ರಾಜನ ಅಧಿಕಾರಿಗಳು ಇವರು: ಮೊದಲು ರಾಜ್ಯದ ಮಂತ್ರಿ. ಅವನು ಅದರಲ್ಲಿ ಎರಡನೆಯ ವ್ಯಕ್ತಿ. ನಂತರ ರಾಜನ ಸ್ವಂತ ಭೂಮಿಯ ಗುಮಾಸ್ತರೊಂದಿಗೆ ಭಂಡಾರಿ, ಪ್ರಧಾನ ಭಂಡಾರಿ, ಮತ್ತು ಅರಮನೆ ರಕ್ಷಕದಳಪತಿ, ರತ್ನಭಂಡಾರಿ, ಪ್ರಧಾನ ಅಶ್ವಪತಿ, ಇವರಲ್ಲದೆ ರಾಜ್ಯದ ದಳವಾಯಿಗಳು ಇರುವರು."[೪] ಇಲ್ಲಿ ಅಮರನಾಯಕರನ್ನು ದಳವಾಯಿಗಳೆಂದು ಕರೆಯಲಾಗಿದೆ. ನ್ಯೂನಿಜ್‌ನು ಈ ದಳವಾಯಿಗಳು ಹೊಂದಿದ ಆದಾಯ ಮತ್ತು ಪ್ರದೇಶಗಳನ್ನು ಉಲ್ಲೇಖಿಸಿರುವುದನ್ನು ಕಾಣಬಹುದು. ಹೀಗೆ ಅಡಳಿತವು ಅಧೋಮುಖವಾಗಿ ಹಂಚಿಹೋಗಿದ್ದುದರಿಂದ ರಾಜನಿಗೆ ಆಳ್ವಿಕೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವಲ್ಲಿ ಈ ವ್ಯವಸ್ಥೆ ನೆರವಾಯಿತೆಂದು ಹೇಳಬಹುದು. ವಿಜಯನಗರ ಕಾಲದ ಸೈನ್ಯಾಡಳಿತದ ಶ್ರೇಣೀಕರಣವನ್ನು ಮುಂದೆ ವಿವರವಾಗಿ ಅಭ್ಯಸಿಸಲಾಗಿದೆ.

೪.೧ ರಾಜ ಅಥವಾ ರಾಜತ್ವ

ರಾಜ್ಯಾಡಳಿತದ ಸಪ್ತಾಂಗಗಳಲ್ಲಿ ರಾಜ ಅಥವಾ ರಾಜತ್ವ ಕೇಂದ್ರ ಬಿಂದು ಹೇಗೋ, ಸೈನ್ಯದ ಆಡಳಿತ ಕ್ರಮದಲ್ಲಿಯೂ ಅವನೇ ಮುಖ್ಯನು. ಇವನು ಇಡೀ ಸೇನಾ ಮುಖಂಡನೂ ಹೌದು. ಸ್ವತಃ ಸೈನ್ಯ ಮುನ್ನಡೆಸುವವನೂ ಆಗಿದ್ದನು. ಹಾಗಾಗಿಯೇ ರಾಜ ಮೊದಲು ಯೋಧ, ನಂತರ ಅವನು ಅರಸನೆಂದು ಕರೆದಿರುವುದು. ಅರಸನಿಗೆ ಸೈನ್ಯವ್ಯವಸ್ಥೆಯ ಸಂಪೂರ್ಣ ಅರಿವು ಇರಬೇಕು. ಸೇನೆಯ ಅಡಳಿತ, ನಿರ್ವಹಣೆ, ಬಳಕೆ ಮತ್ತು ಶಿಸ್ತುಕ್ರಮಗಳಲ್ಲಿ ರಾಜನದು ಮಹತ್ವದ ಪಾತ್ರವಿದೆ. ಯುದ್ಧದಲ್ಲಿ ಸೈನ್ಯದ ಮುಂಚೂಣಿಯಲ್ಲಿದ್ದು, ದಂಡನಾಯಕರು ಹಾಗೂ ಸೈನಿಕ ಸಿಬ್ಬಂದಿಯನ್ನು ಸಂಘಟಿಸುವ, ಪ್ರೋತ್ಸಾಹಿಸುವ ಮತ್ತು ಚಾಲನೆ ನೀಡುವ ಕಾರ್ಯಗಳಲ್ಲಿ ಸಮರ್ಥನಾಗಿರಬೇಕಾಗಿದ್ದಿತು. ಅಂತೆಯೇ ವಿಜಯನಗರದಲ್ಲಿ ಹರಿಹರ-ಬುಕ್ಕರಿಂದ ಹಿಡಿದು ಕೃಷ್ಣದೇವರಾಯ-ರಾಮರಾಯರವರೆಗೆ ಎಲ್ಲರೂ ಸೇನಾ ಮುಖಂಡತ್ವವಹಿಸಿ ಯುದ್ಧಗಳಲ್ಲಿ ಸ್ವತಃ ಪಾಲ್ಗೊಂಡಿದ್ದುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿಯೇ ಶುಕ್ರನೀತಿಯು 'ಅರಸನು ರಾಜ್ಯ ವ್ಯವಸ್ಥೆಯ ಮೂಲಬೇರು' ಎಂದಿರುವುದು. ಅಲ್ಲದೆ ಮಂತ್ರಿಮಂಡಲವನ್ನು ಕಾಂಡಕ್ಕೆ ಸೇನಾಧಿಪತಿಗಳನ್ನು ರಂಬೆಗಳಿಗೆ ಮತ್ತು ಸೇನಾಪಡೆಗಳನ್ನು ಮರದ ಎಲೆ ಹಾಗೂ ಹೂವುಗಳಿಗೆ ಹೋಲಿಸಿದ್ದಾನೆ.[೫] ಶುಕ್ರನ ಈ ಹೋಲಿಕೆ ಮಧ್ಯಯುಗದ ಸೈನ್ಯಾಡಳಿತದ ಶ್ರೇಣೀಕರಣಕ್ಕೆ ಸೂಕ್ತ ನಿದರ್ಶನವೆನ್ನಬಹುದು. ರಾಜನು ಆಡಳಿತವನ್ನು ಹೇಗೆ ನಡೆಸಬೇಕೆನ್ನುವುದನ್ನು ಆಮುಕ್ತಮಾಲ್ಯದಲ್ಲಿ ಹೀಗೆ ಹೇಳಲಾಗಿದೆ: ರಾಜನು ರಾಜ್ಯತಂತ್ರದಲ್ಲಿ ನಿಪುಣರಾದವರ ಮೂಲಕ ಆಳಬೇಕು, ಪ್ರಜೆಗಳ ಮೇಲೆ ತೆರಿಗೆ ಸಾಧಾರಣವಾಗಿರಬೇಕು, ಶತ್ರುಗಳನ್ನು ಬಲಪ್ರಯೋಗದಿಂದ ಅಡಗಿಸಬೇಕು, ಪ್ರಜೆಗಳಲ್ಲಿ ಜಾತಿಬೆರಕೆಗೆ ಅವಕಾಶ ಮಾಡಿಕೊಡಕೂಡದು.[೬] ಇದೇ ಗ್ರಂಥವು ಇನ್ನೊಂದು ಕಡೆ, 'ರಾಜನಾದವನು ಸಂತತವಾಗಿ

ಸೈನ್ಯ ಸಂವರ್ಧನೆ ಮಾಡಿಕೊಂಡು ಬಲಿಷ್ಠನಾಗಿರಬೇಕು. ರಾಜ್ಯದಲ್ಲಿ ವಿಚ್ಛಿದ್ರತೆಯನ್ನು ಉಂಟುಮಾಡಲೆತ್ನಿಸುವ ದುಷ್ಟರನ್ನು ನಿಗ್ರಹಿಸಬೇಕು. ರಾಷ್ಟ್ರೋಪದ್ರವಕಾರಿಗಳು ಯಾರೇ ಆಗಿದ್ದರೂ, ಎಷ್ಟು ಮಾತ್ರವು ಕನಿಕರಿಸದೆ, ಎಚ್ಚರ ತಪ್ಪದೆ ವಿನಾಶ ಮಾಡಬೇಕು'[೭] ಎಂದಿದೆ. ಈ ವಾಕ್ಯವು ಸೈನ್ಯವನ್ನು ಬಲವರ್ಧಿಸುವ ಅಂಶವನ್ನು ವ್ಯಕ್ತಪಡಿಸಿದರೆ. ಸೈನ್ಯದ ವೃದ್ಧಿ ಕುರಿತು ಆಮುಕ್ತಮಾಲ್ಯದ ಪುಷ್ಟಿಯುತ ಮಾಹಿತಿ ನೀಡುತ್ತದೆ: ''ಸರ್ಕಾರದ ಆದಾಯವನ್ನು ನಾಲ್ಕು ಭಾಗಗಳನ್ನಾಗಿ ವರ್ಗೀಕರಿಸಬೇಕು. ಒಂದು ಭಾಗವನ್ನು ದಾನ-ಧರ್ಮ ಮತ್ತು ಸುಖ-ಸಂತೃಪ್ತಿಗಳನ್ನು ಪಡೆಯಲು ಬಳಸಬೇಕು. ಎರಡು ಭಾಗ ಅಂದರೆ ಆದಾಯದ ಅರ್ಧ ಪಾಲನ್ನು ಸುಸಜ್ಜಿತ, ಸಶಕ್ತ ಸೇನಾ ಸಿದ್ಧತೆಗೆ ಬಳಸಬೇಕು. ಉಳಿದ ಒಂದು ಭಾಗವನ್ನು ಆಪದ್ಧನವನ್ನಾಗಿ ಉಳಿಸಿಡಬೇಕು.''[೮] ಆಮುಕ್ತಮಾಲ್ಯದ ಹೇಳುವ ಈ ಮಾತು ಇಂದಿನ ಆಧುನಿಕ ಯುಗದ ಸೇನಾವೆಚ್ಚಕ್ಕೂ ಅನ್ವಯವಾಗುತ್ತದೆ. ಸೈನ್ಯ ಕಟ್ಟುವುದು ರಾಜರಿಗೆ ಒಂದು ಸಾಹಸದ ಕೆಲಸವೇ ಸರಿ. ಕಾಲಾನುಕಾಲಕ್ಕೆ ಬದಲಾಗುತ್ತಿದ್ದ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ, ಇಲ್ಲವೆ ಆಮದು ಮಾಡಿಕೊಳ್ಳುವ, ಆ ಮೂಲಕ ಸೈನಿಕರನ್ನು ತರಬೇತುಗೊಳಿಸುವ ಕೆಲಸ ನಿರಂತರವಾಗಿಯೂ ಕ್ರಿಯಾಶೀಲ ವಾದುದಾಗಿತ್ತು.

ವಿಜಯನಗರ ಅವಧಿಯಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತದ ಮುಖ್ಯಸ್ಥನಾಗಿದ್ದ ಅರಸನು ಧರ್ಮ ಅಥವಾ ನ್ಯಾಯದ ಸಂಕೇತವೂ ಹೌದು. ರಾಜನು ಅನುಸರಿಸಬೇಕಾದ ಕರ್ತವ್ಯಗಳು, ಕೈಗೊಳ್ಳಬೇಕಾದ ದಂಡೋಪಾಯಗಳನ್ನು ತಿಳಿಸುವ ಆಮುಕ್ತಮಾಲ್ಯದವು ಇನ್ನೊಂದು ಬಗೆಯ ಚಿತ್ರಣವನ್ನು ನೀಡುತ್ತದೆ. ದಂಡೋಪಾಯವನ್ನೇ ಅವಲಂಬಿಸುವ ರಾಜನು ಉತ್ತಮನಲ್ಲ. ಅದು ಕೊನೆಯ ಮಾರ್ಗವೆಂದೂ, ಪಾರ್ಥಿವನಾದವನು ಚತುರೋಪಾಯಗಳಿಂದ ರಾಜ್ಯದೊಳಗಿನ ಗೂಢ ಶತ್ರುಗಳನ್ನು ಪತ್ತೆ ಮಾಡಿ ದಮನ ಮಾಡಬೇಕು. ರಾಜ ಯಾವಾಗಲೂ ಕಾರ್ಯಪರನಾಗಿರಬೇಕೇ ಹೊರತು ಸಮರಶೀಲನಾಗಬಾರದು.[೯] ಇದು ಆಕ್ರಮಣವೊಂದೇ ಅರಸನ ಮಾರ್ಗವಲ್ಲ, ರಾಜ್ಯದ, ಪ್ರಜೆಗಳ ಅಭಿವೃದ್ಧಿಯತ್ತಲೂ ಗಮನ ಹರಿಸಬೇಕೆಂಬ ಸತ್ಯವನ್ನು ಒಳಗೊಂಡಿದೆ. ಒಟ್ಟಿನಲ್ಲಿ ಅರಸನು ಇಡೀ ರಾಜ್ಯದ ಜವಾಬ್ದಾರಿ ಹೊತ್ತವನು. ಒಂದೆಡೆ ಉಲ್ಲೇಖಿಸುವಂತೆ ''ಅಶ್ವಪತಿ ಕುದುರೆಗಳಿಗೆ ಅಧಿಪತಿ, ಆನೆಗಳಿಗೆ ಗಜಪತಿ ಅಧಿಪತಿ, ಕರ್ನಾಟಕ ಸಿಂಹಾಸನಾಧಿಪತಿ ಮನುಷ್ಯರೆಲ್ಲರಿಗೂ ಅಧಿಪತಿ'' ಎಂದಿರುವುದು ಒಟ್ಟು ವ್ಯವಸ್ಥೆಯ ಮುಖಂಡನೆಂಬುದನ್ನು ಸ್ಪಷ್ಟಗೊಳಿಸುತ್ತದೆ.[೧೦]

೪.೨ ಮಹಾದಂಡನಾಯಕ

ಸೇನೆಯ ಸಂಘಟನೆಯಲ್ಲಿ ರಾಜನಷ್ಟೇ ಮುಖ್ಯ ಪಾತ್ರ ದಂಡನಾಯಕನದು. ವಿಜಯನಗರ ಕಾಲದಲ್ಲಿ ಮಹಾಪ್ರಧಾನ ಹುದ್ದೆಯನ್ನು ದಂಡನಾಯಕರು ಅಲಂಕರಿಸಿದ್ದುದನ್ನು ಕಾಣಬಹುದು. ಆದುದರಿಂದ ದಂಡನಾಯಕ

ಮಹಾಪ್ರಧಾನನಾಗಿ ಮಂತ್ರಿಮಂಡಲದ ಸದಸ್ಯನಾಗಿಯೂ, ಸೈನ್ಯವ್ಯವಸ್ಥೆಯ ಮುಖಂಡನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದನು. ಅರಸನ ಗೈರು ಹಾಜರಿಯಲ್ಲಿ ಸೈನ್ಯವನ್ನು ಸ್ವತಃ ಮುನ್ನಡೆಸಿ ಜಯಗಳಿಸಿಕೊಟ್ಟುದನ್ನು ಕಾಣಬಹುದಾಗಿದೆ. ಲಕ್ಕಣ್ಣದಣ್ಣಾಯಕ ದಕ್ಷಿಣದ ದಂಡಯಾತ್ರೆಯಲ್ಲಿ ಜಯಿಸಿ ಸಿಲೋನ್‌ವರೆಗೆ ದಿಗ್ವಿಜಯ ಕೈಗೊಂಡಿದ್ದುದನ್ನು ನೆನಪಿಸಿಕೊಳ್ಳಬಹುದು. ಹಾಗೆಯೇ ಬುಕ್ಕರಾಯನ ಕಾಲದಲ್ಲಿ ಮುದ್ದಪ್ಪ ದಣ್ಣಾಯಕ, ಕೃಷ್ಣದೇವರಾಯನ ಅವಧಿಯಲ್ಲಿ ತಿಮ್ಮಣ್ಣನಾಯಕರ ಸಾಧನೆಗಳು ಮಹತ್ವದವು.

ಮಹಾಪ್ರಧಾನ ಅಥವಾ ದಂಡನಾಯಕನಿಗೆ ದಣ್ಣಾಯಕ, ದಳವಾಯಿ, ದಳನಾಯಕ, ಸೇನಾಧಿಪತಿ, ಸರ್ವಸೈನ್ಯಾಧಿಕಾರಿ[೧೧] ಇನ್ನೂ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಸೇನಾಧಿಪತಿಯನ್ನು ಕುರಿತು ಕೌಟಲ್ಯನು ಹೀಗೆ ಹೇಳುತ್ತಾನೆ: ಚತುರಂಗ ಸೇನೆಯು ಮೌಲ್ಯ ಭೃತಾದಿ ಭೇದದಿಂದ ಆರುವಿಧ. ಅವುಗಳ "ಅಧಿಪತಿಯು ಸೇನಾಧಿಪತಿ.... ನಾಲ್ಕು ಅಂಗಾಧ್ಯಕ್ಷರಿಗೆ ಹೇಳಿದ ಯಾವ ಕೆಲಸವಿದೆಯೋ ಅವುಗಳನ್ನು ಸೇನಾಪತಿಯು ತಿಳಿದಿರಬೇಕು. ಎಲ್ಲಾ ರೀತಿಯ ಆಯುಧಗಳನ್ನೂ, ಎಲ್ಲಾ ವಿಧದ ಆಯುಧ ಪ್ರಯೋಗಗಳನ್ನೂ, ಅನ್ವೀಕ್ಷಿಕ್ಯಾದಿ ವಿದ್ಯೆಗಳನ್ನೂ ತಿಳಿದಿರಬೇಕು". ಸೇನಾಧಿಪತಿಯು ನಿರ್ವಹಿಸಬೇಕಾದ ಕಾರ್ಯಗಳನ್ನೂ ತಿಳಿಸಿದ್ದಾನೆ : "ಸೇನೆಯ ವ್ಯಾಯಾಮಾರ್ಹವಾದ ದೇಶ, ಯುದ್ಧಕಾಲ, ಶತ್ರುಬಲ, ಅಭಿನ್ನವಾದ ಶತ್ರುವ್ಯೂಹವನ್ನು ಭೇದಿಸುವುದು, ಭಿನ್ನವಾದ ವ್ಯೂಹವನ್ನು ಒಟ್ಟುಗೂಡಿಸುವುದು, ಪರಸ್ಪರ ರಕ್ಷಣೆಗಾಗಿ ಒಟ್ಟು ಸೇರಿದವರನ್ನು ದೂರಗೊಳಿಸುವುದು, ಬೇರೆಯಾದ ಅವರನ್ನು ನಾಶಮಾಡುವುದು, ದುರ್ಗವನ್ನು ನಾಶಮಾಡುವುದು, ಶತ್ರುವನ್ನಾಕ್ರಮಿಸುವ ಕಾಲ-ಇವುಗಳನ್ನೆಲ್ಲಾ ತಿಳಿದಿರಬೇಕು.... ಸ್ಥಾನಗಮನಾಧಿಗಳನ್ನು ಮಾಡುವಂತೆ ಸೈನಿಕರಿಗೆ ಶಿಕ್ಷಣವನ್ನು ನೀಡಬೇಕು.'[೧೨] ಇವು ಸೇನಾಧಿಪತಿಯು ತಿಳಿದಿರಬೇಕಾದ ಅಂಶಗಳಾದರೆ, ಸೇನಾಧಿಪತಿಯ ಸ್ಥಾನಕ್ಕೆ ಅಗತ್ಯವಾಗಿ ಬೇಕಾದ ಕೆಲವು ಅರ್ಹತೆಗಳನ್ನೂ ಹೇಳಲಾಗಿದೆ: ದೈಹಿಕ ಮತ್ತು ಮಾನಸಿಕ ಸ್ಥೈರ್ಯಗಳು, ಪರಾಕ್ರಮ, ನ್ಯಾಯದೃಢತೆ ಮತ್ತು ಆತ್ಮವಿಶ್ವಾಸಗಳು, ಉತ್ತಮ ನಡತೆ, ವೈಜ್ಞಾನಿಕ ಮತ್ತು ಸೈನಿಕ ಜ್ಞಾನ ಹಾಗೂ ಸೈನ್ಯ ಕೈಗೊಳ್ಳಬಹುದಾದ ಎಲ್ಲ ಬಗೆಯ ಯುದ್ಧತಂತ್ರಗಳನ್ನು ಬಲ್ಲವನಾಗಿರಬೇಕು.[೧೩] ದಂಡನಾಯಕನು ರಾಜ್ಯಾಡಳಿತ ಮುಖಂಡರಲ್ಲೊಬ್ಬನಾಗಿದ್ದು ಮೂರು ಮುಖ್ಯ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗಿದ್ದಿತು. ಅವುಗಳೆಂದರೆ ರಕ್ಷಣೆ, ಪಾಲನೆ ಮತ್ತು ಯೋಗಕ್ಷೇಮಗಳು.

ಮಹಾದಂಡನಾಯಕನ ಅಡಿಯಲ್ಲಿ ಅನೇಕ ದಂಡನಾಯಕರು, ಅಮರನಾಯಕರು, ಸಾಮಂತ ಮತ್ತಿತರರು ಇದ್ದರು. ರಾಜಧಾನಿಯಲ್ಲಿ ಇವನಿಗೆ ಪ್ರತ್ಯೇಕವಾದ ವಾಸಸ್ಥಳವಿದ್ದಿತು. "ಸುಲ್ತಾನ (ರಾಜ)ನ ಅರಮನೆಯ ಮಹಾದ್ವಾರದ ಎಡಗಡೆ ಅರಮನೆಯೋಪಾದಿಯಲ್ಲಿ ಕಾಣುವ ಬಹುದೊಡ್ಡದಾದ ದಿವಾನ್ ಖಾನೆಯಿದೆ.... ಈ ದಿವಾನ್ ಖಾನೆಯ ಮಧ್ಯೆ ಎತ್ತರವಾದ ವೇದಿಕೆಯ ಮೇಲೆ ದೈಯ್ಯಾಂಗ್ (ದಿವಾನ, ದಣಾಯಕ) ಕುಳಿತಿರು

ತ್ತಾನೆ".[೧೪] ಇಲ್ಲಿ ಹೇಳಲಾದ ಸ್ಥಳವನ್ನು ಹಂಪೆಯ ಅರಮನೆ ಪ್ರದೇಶದಲ್ಲಿ ಗುರುತಿಸಲಾಗಿದೆ. ಈಗಲೂ ಆ ಸ್ಥಳವನ್ನು ದಣಾಯಕನ ಆವರಣವೆಂದೇ ಕರೆಯುತ್ತಿರುವರು. ದಂಡನಾಯಕನಿಗೆ ವಿಶೇಷ ಅಧಿಕಾರಗಳು ಹಾಗೂ ಮರ್ಯಾದೆಗಳನ್ನು ಅಂದು ಅರಸರು ನೀಡಿದ್ದರು. ರಜಾಕ್ ಹೇಳುವಂತೆ, ದಿವಾನ್ ಖಾನೆಯಿಂದ ದೈಯ್ಯಾಂಗ್ ಹೊರಟಾಗ ಅವನ ಮುಂದೆ ವಿವಿಧ ಬಣ್ಣಗಳ ಛತ್ರಿಗಳನ್ನು ಹಿಡಿದುಕೊಂಡು ಹೋಗುತ್ತಾರೆ. ವಾದ್ಯಗಳು ಮೊಳಗುತ್ತಿರುತ್ತವೆ. ಅವನ ಅಕ್ಕ-ಪಕ್ಕದಲ್ಲಿ ಹೋಗುವ ಹೊಗಳುಭಟ್ಟರು ಬಹುಪಾರಾಕು ಹೇಳುತ್ತಿರುತ್ತಾರೆ.[೧೫] ಇಲ್ಲಿ ಹೇಳಲಾದ ವಿವರವನ್ನು ಗಮನಿಸಿದರೆ, ರಾಜನಷ್ಟೇ ಗೌರವಯುತ ಪದವಿಯಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ರಜಾಕ್‌ನ ಹೇಳಿಕೆಗೆ ಪುಷ್ಟಿಯೆನ್ನುವಂತೆ, ಚೆನ್ನಮರಾಜು ರಚಿಸಿದ ಚಾರುಚಂದ್ರೋದಯವು ಸೇನಾಧಿಪತಿಯು ಹೊಂದಿದ್ದ ಚಿಹ್ನೆಗಳನ್ನು ಉಲ್ಲೇಖಿಸುತ್ತದೆ. ಅವುಗಳಲ್ಲಿ ಗರುಡ ನಾರಾಯಣ ಧ್ವಜ, ಕೆಂಪು ಬಟ್ಟೆಯ ಬಂಗಾರದ ಹೂವಿನ ಕುಸುರಿ ಮಾಡಿದ ತುರಾಯಿ, ಆನೆ, ಬೆಲೆಯುಳ್ಳ ಕುದುರೆ, ಕಂಠಹಾರ, ತಾಳಿಚೌಕಟ್ಟು, ಬೆಲೆಬಾಳುವ ಬಳೆಗಳು, ಕಾಲಬಳೆ(ಗಂಡ ಪೆಂಡಾರ), ಅಲಂಕಾರಿಕ ಖಡ್ಗಗಳು ಮುಖ್ಯವಾಗಿವೆ.[೧೬]

ಮಹಾದಂಡನಾಯಕರು ಸೈನ್ಯವನ್ನು ನೋಡಿಕೊಳ್ಳುತ್ತಿದ್ದುದಲ್ಲದೆ, ಕೆಲವು ಪ್ರಾಂತ್ಯಗಳ ಆಡಳಿತವನ್ನೂ ವಹಿಸಿಕೊಂಡದ್ದುಂಟು. ಕೃಷ್ಣದೇವರಾಯ ಕೊಂಡವೀಡನ್ನು ವಶಪಡಿಸಿಕೊಂಡಾಗ ಅದರ ಆಡಳಿತವನ್ನು ನೋಡಿ ಕೊಳ್ಳಲು ಸಾಳುವ ತಿಮ್ಮನನ್ನು ನೇಮಿಸಿದನೆಂದು ನ್ಯೂನಿಜ್ ಹೇಳಿದ್ದಾನೆ.[೧೭] ಹೀಗೆ ಮಹಾದಂಡನಾಯಕನು ಸರ್ವಸೈನ್ಯಾಧಿಕಾರಿಯಾಗಿ, ಆಡಳಿತಾಧಿಕಾರಿಯಾಗಿ, ಪ್ರಧಾನಮಂತ್ರಿಯಾಗಿ ವಿಜಯನಗರ ಕಾಲದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದುದನ್ನು ಕಾಣಬಹುದು.

೪.೩ ದಂಡನಾಯಕರು

ವಿಜಯನಗರದಲ್ಲಿ ಪ್ರಧಾನ ದಂಡನಾಯಕನಲ್ಲದೆ, ಹಲವು ದಂಡನಾಯಕ ಅಥವಾ ದಳವಾಯಿಗಳಿದ್ದುದು ತಿಳಿದುಬರುತ್ತದೆ. ಇವರು ಮಹಾದಂಡನಾಯಕನ ಅಧೀನಾಧಿಕಾರಿಗಳಾಗಿದ್ದು, ಕೇಂದ್ರದ ನೇರ ಅಧೀನದಲ್ಲಿ ಪ್ರಾಂತೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ದಂಡನಾಯಕರ ಅಧೀನದಲ್ಲಿ ಅಮರನಾಯಕರು ಆಳ್ವಿಕೆ ನಡೆಸುತ್ತಿದ್ದರು. ವಿಜಯನಗರ ಸಾಮ್ರಾಜ್ಯವನ್ನು ಹಲವು ರಾಜ್ಯಗಳಾಗಿ ವಿಭಾಗಿಸಲಾಗಿತ್ತು. ಅವುಗಳೆಂದರೆ ಕಳಸ-ಕಾರ್ಕಳ, ಆರಗ, ಗುತ್ತಿ, ಹೊನ್ನಾವರ, ಮಂಗಳೂರು, ತುಳು, ತೇಕಲನಾಡು, ಮುಳಬಾಗಿಲು, ತೆರಕಣಾಂಬಿ, ಪಡೈವೀಡು ಚಂದ್ರಗಿರಿ, ಬಾರಕೂರು, ರಾಜಗಂಭೀರ, ಉದಯಗಿರಿ, ಪೆನುಕೊಂಡ ರಾಜ್ಯಗಳು. ಹೀಗೆ ಅನೇಕ ವಿಭಾಗಗಳಾಗಿ ವಿಂಗಡಿಸಿ, ಇವುಗಳಿಗೆ ರಾಜ್ಯಪಾಲರುಗಳನ್ನಾಗಿ ದಂಡನಾಯಕರನ್ನು ನೇಮಿಸಲಾಗುತ್ತಿತ್ತು. ಅಮರನಾಯಕರು ಇವರ ವ್ಯಾಪ್ತಿಯಲ್ಲಿ ಬರುತ್ತಿದ್ದುದನ್ನು ಗಮನಿಸಬೇಕು.

ದಂಡನಾಯಕರಿಗೂ ಪ್ರಧಾನ ದಂಡನಾಯಕನು ಹೊಂದಿದ್ದ ಗುಣ-ಲಕ್ಷಣಗಳೇ ಅರ್ಹತೆಗಳಾಗಿದ್ದವು. ಇವರು ಅಮರನಾಯಕರಂತೆ ಪ್ರಾಂತ್ಯಗಳ ಮೇಲ್ವಿಚಾರಣೆಯನ್ನು ರಾಜನ ಪ್ರತಿನಿಧಿಗಳಾಗಿ ನಿರ್ವಹಿಸುತ್ತಿದ್ದರು. ಇವರನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ವರ್ಗಮಾಡಬಹುದಾಗಿದ್ದಿತು. ಆದರೆ ಅಮರನಾಯಕರನ್ನು ಹಾಗೆ ಮಾಡಲಾಗುತ್ತಿರಲಿಲ್ಲ. ದಂಡನಾಯಕರು ಪ್ರಾಂತ್ಯಧಿಕಾರಿಗಳಾಗಿದ್ದುದಲ್ಲದೆ, ಸೇನೆಯ ಮುಂಖಡತ್ವವನ್ನು ವಹಿಸುತ್ತಿದ್ದರು.

ವಿಜಯನಗರ ಅವಧಿಯಲ್ಲಿದ್ದ ದಂಡನಾಯಕರ ಪಟ್ಟಿಯನ್ನು ಈ ಕೆಳಕಂಡಂತೆ ನೀಡಬಹುದಾಗಿದೆ: ಸಾಯಣ್ಣ, ಮುದ್ದಪ್ಪ ದಂಡನಾಥ, ಗೋಪಣ್ಣ ಒಡೆಯ, ಸಾಳುವ ಮಂಗು, ಮಾದರಸ ಒಡೆಯ, ಮಲ್ಲೆಯ ದಣ್ಣಾಯಕ, ಬಯಿಚ, ಮಾದಯ್ಯನಾಯಕ, ಇರುಗಪ್ಪ ಒಡೆಯ, ಗುಂಡದಂಡನಾಥ, ಮಲ್ಲಪ್ಪ ಒಡೆಯ, ಸಿಂಗಪ್ಪ, ನಾಗಣ್ಣ, ಬೊಮ್ಮ ದಣ್ಣಾಯಕ, ಅಂತಪ, ಈರಣ್ಣ ಅಥವಾ ವೀರಣ್ಣ ಒಡೆಯ, ಲಕ್ಕಣ್ಣ ದಣ್ಣಾಯಕ ನಾಗಮನಾಯಕ, ಈಶ್ವರ, ನರಸನಾಯಕ, ಸೋಮಯ್ಯ, ಕೊಂಡಮರಸಯ್ಯ, ತಿಮ್ಮರಸ ಇತ್ಯಾದಿ.

ಹೀಗೆ ದಂಡನಾಯಕರು ಕಾಲಾನುಕ್ರಮವಾಗಿ ಪ್ರಾಂತೀಯ ಮತ್ತು ಕೇಂದ್ರ ಆಡಳಿತಗಳಲ್ಲಿ ಮಹತ್ವದ ಸೇವೆಯನ್ನು ಸಲ್ಲಿಸಿರುವರು. ಇವರಲ್ಲಿ ಮಹಾದಂಡನಾಯಕರಾಗಿಯೂ ಸೇವೆ ಸಲ್ಲಿಸಿದವರಿದ್ದಾರೆ. ಸೈನ್ಯಾಡಳಿತದಲ್ಲಿ ದಂಡನಾಯಕರ ಪಾತ್ರ ಮಹತ್ವದ್ದು. ಕ್ರಿ.ಶ.೧೩೫೭ರ ಬೇಲೂರಿನ ಶಾಸನವು ಗುಂಡ ದಂಡಾದಿಪನು ತುರುಷ್ಕರನ್ನು ಯುದ್ಧದಲ್ಲಿ ಸೋಲಿಸಿದುದನ್ನು ಪ್ರಸ್ತಾಪಿಸುತ್ತದೆ. ಒಂದನೆಯ ಬುಕ್ಕರಾಯನ ಕಾಲದಲ್ಲಿ ವೀರಕಂಪಣರಾಯನು ಕೈಗೊಂಡ ದಕ್ಷಿಣ ದಂಡಯಾತ್ರೆಯ ಯಶಸ್ಸಿಗೆ ಗೋಪಣ ಮತ್ತು ಸಾಳುವ ಮಂಗು ಕಾರಣಕರ್ತರೆಂಬುದನ್ನು ಮರೆಯುವಂತಿಲ್ಲ. ಎರಡನೇ ಹರಿಹರನ ಕಾಲದಲ್ಲಿ ಇರುಗ ಮತ್ತು ಗುಂಡ ದಂಡನಾಯಕರು, ಎರಡನೆಯ ದೇವರಾಯನ ಅವಧಿಯಲ್ಲಿ ಲಕ್ಕಣ್ಣ ದಂಡನಾಯಕರು ತೋರಿದ ನಿಷ್ಠೆ ಅಪ್ರತಿಮವಾದುದು. ದಂಡನಾಯಕರಲ್ಲದೆ ಯುವರಾಜರು, ದಳಪತಿಗಳು, ಇನ್ನು ಮುಂತಾದ ಅಧಿಕಾರಿಗಳು ಸೈನ್ಯಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

೪.೪ ಅಮರನಾಯಕ ವ್ಯವಸ್ಥೆ

ವಿಜಯನಗರವು ಆಡಳಿತದ ದೃಷ್ಟಿಯಿಂದ ಅನೇಕ ಪ್ರಾಂತ್ಯ ಅಥವಾ ರಾಜ್ಯಗಳಾಗಿ ವಿಭಾಗಿಸಿದ್ದುದನ್ನು ಈಗಾಗಲೇ ಹೇಳಲಾಗಿದೆ. ವಿಜಯನಗರದ ಅರಸರು ಆಡಳಿತದಲ್ಲಿ ಕೆಲವು ವಿಶಿಷ್ಟ ವಿಧಾನಗಳನ್ನು ಅನುಸರಿಸಿದ್ದರು. ಅಂತಹ ವ್ಯವಸ್ಥೆಗಳಲ್ಲಿ ಅಮರನಾಯಕ ಅಥವಾ ನಾಯಂಕರ ಪದ್ಧತಿಯೂ ಒಂದು. ನಾಯಕ ಅಥವಾ ಅಮರನಾಯಕರು ನಿರ್ದಿಷ್ಟಪಡಿಸಿದ ಸೈನಿಕ ಸೇವೆಯನ್ನು ಸಲ್ಲಿಸಬೇಕಾದ ಸಾಮಂತ ಅಧಿಕಾರಿಗಳಾಗಿದ್ದರು. ಇವರು ದ್ರವ್ಯ ಮತ್ತು ಸೈನಿಕ ಸೇವೆಯನ್ನು ಸಲ್ಲಿಸಲು ಇಂತಿಷ್ಟು ಭೂಮಿಯನ್ನು ಉಂಬಳಿಯಾಗಿ ಪಡೆಯುತ್ತಿದ್ದರು. ಭೂಮಿಯ ಉತ್ಪತ್ತಿಗೆ ಅನುಗುಣವಾಗಿ ಸೈನ್ಯವನ್ನು ಸಲಹಬೇಕಾಗಿದ್ದಿತು.

ಈ ಪದ್ಧತಿಯನ್ನು ಒಂದನೆಯ ಹರಿಹರನು ಅನುಸರಿಸಿದ್ದಿರಬಹುದಾದರೂ ಒಂದನೇ ಬುಕ್ಕರಾಯನ ಅವಧಿಯಲ್ಲಿ ಹೆಚ್ಚು ಪ್ರಚಲಿತಗೊಂಡಿತು. ಬುಕ್ಕರಾಯನು ವಿಜಯನಗರ ಪಟ್ಟಣವನ್ನು ಕಟ್ಟಿಸಿದ್ದು[೧೮] ದಲ್ಲದೆ ರಾಜ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿದ್ದನು. ಉದಯಗಿರಿ, ಪೆನುಗೊಂಡೆ, ಮುಳವಾಯಿ, ಆರಗ, ತುಳು ಮುಂತಾದ ವಿಭಾಗಗಳನ್ನು ಮಾಡಿ ಅವುಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಿದನೆಂದು ಹೇಳಲಾಗಿದೆ. ನಾಯಕತನವು ಆರಂಭದಲ್ಲಿ ವೈಯಕ್ತಿಕವಾಗಿ ಯಶಸ್ಸುಗಳಿಸಿದವರಿಗೆ ನೀಡಲಾಗುತ್ತಿದ್ದು, ಕಾಲಕ್ರಮೇಣ ಅದು ವಂಶಪಾರಂಪರ್ಯತೆಗೆ ಒಳಗಾಯಿತೆಂದು ಹೇಳಬಹುದು. ಇವರಿಗೆ ನೀಡಲಾಗುತ್ತಿದ್ದ ಭೂಮಿಯ ಒಡೆತನವನ್ನು ಅಮರನಾಯಕತನ ಅಥವಾ ಅಮರಮಾಗಣೆ ಎಂದು ಕರೆಯುತ್ತಿದ್ದರು.[೧೯]

ಅಮರನಾಯಕರ ಬಗೆಗೆ ನ್ಯೂನಿಜ್ ಬಹು ವಿಸ್ತಾರವಾಗಿ ಹೇಳಿದ್ದಾನೆ: ಇಡೀ ರಾಜ್ಯವನ್ನು ಪ್ರಾಂತ್ಯಾಧಿಪತ್ಯದಲ್ಲಿ ವಿಭಜಿಸಲಾಗಿತ್ತು. ಅಲ್ಲದೆ ಪ್ರತಿಯೊಬ್ಬ ಪ್ರಾಂತಾಧಿಪತಿಯು ಅಶ್ವ, ಕಾಲಾಳು, ಆನೆಗಳ ತನ್ನ ಪಾಲನ್ನು ಉಳಿಸಿಕೊಂಡು ಬರುವ ಹಾಗೂ ಸಾರ್ವಭೌಮನಿಗೆ ವಾರ್ಷಿಕ ಕಪ್ಪ ಸಲ್ಲಿಸುವ ತನಕ ತನಗೆ ವಹಿಸಿಕೊಟ್ಟ ಪ್ರದೇಶದಲ್ಲಿ ಸ್ವತಂತ್ರನಾಗಿದ್ದನು. ಕ್ಷಿಪ್ರ ಕಾರ್ಯಾಚರಣೆಗಾಗಿ ಪೂರ್ಣ ಸನ್ನದ್ಧತೆಯಲ್ಲಿರುವಂತೆ ಸೈನ್ಯವನ್ನು ಇಟ್ಟಿರುವುದೇ ಒಡೆತನದ ಬೆಲೆಯಾಗಿತ್ತು. ಇವುಗಳಲ್ಲಿ ತಪ್ಪಿದರೆ ಅವನು ತಕ್ಷಣ ಅವರ ಒಡೆತನವನ್ನು ಕಿತ್ತುಕೊಳ್ಳಲು ಬದ್ಧನಾಗುತ್ತಾನೆ.[೨೦]

ಅಮರನಾಯಕ ವ್ಯವಸ್ಥೆ ಕುರಿತು ನೀಡಿದ ಕೆಲವು ವ್ಯಾಖ್ಯಾನಗಳನ್ನು ಈ ಕೆಳಗೆ ಗಮನಿಸಬಹುದು. ಎ.ವಿ.ವೆಂಕಟರತ್ನಂ ಅವರು, ''ರಾಜನು ಒಬ್ಬ ನಾಯಕ ಅಥವಾ ಪಾಳೆಯಗಾರನಿಗೆ ಸೈನಿಕ ಸೇವೆಯ ಷರತ್ತಿನ ಮೇಲೆ ಭೂಮಿಯನ್ನು ಕೊಡುತ್ತಿದ್ದುದೇ ನಾಯಂಕರ ಪದ್ಧತಿ'' ಎನ್ನುತ್ತಾರೆ. ವೆಂಕಟರಮಣಯ್ಯನವರು, '' ಒಂದು ನಿಗದಿಯಾದ ಆದಾಯವನ್ನು ತರುತ್ತಿದ್ದ ಪ್ರದೇಶವನ್ನು ಒಬ್ಬ ಸೈನಿಕ ನಾಯಕನಿಗೆ ವಿಜಯನಗರ ಅರಸರು ನೀಡುತ್ತಿದ್ದುದು ಅಮರನಾಯಕ ಪದ್ಧತಿ''ಯೆಂದು ವ್ಯಾಖ್ಯಾನಿಸಿದ್ದಾರೆ. ಭೂಮಿಯೆಲ್ಲವೂ ರಾಜನಿಗೆ ಸೇರಿದ್ದು, ಅವನು ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದನು. ಹಾಗೆ ಭೂಮಿಯನ್ನು ರಾಜನಿಂದ ಪಡೆದುಕೊಂಡವರನ್ನು ನಾಯಕರೆಂದು ಕರೆಯುತ್ತಿದ್ದುದಾಗಿ ಮಹಾಲಿಂಗಂ ಅಭಿಪ್ರಾಯಿಸುವರು.[೨೧] ಮತ್ತೆ ಕೆಲವು ವಿದ್ವಾಂಸರು ಹೇಳುವಂತೆ 'ಅಮರ' ಎನ್ನುವುದು ಒಂದು ಸಾವಿರ ಕಾಲ್ದಳದ ಒಡೆತನವಾಗಿತ್ತು.[೨೨] ಈ ವ್ಯವಸ್ಥೆಯ ಹಿನ್ನೆಲೆಯಲ್ಲಿ ಬರ್ಟನ್ ಸ್ಟೀನರು, ವಿಜಯನಗರ ರಾಜ್ಯಾಡಳಿತದಲ್ಲಿ ಧರ್ಮಾಚರಣೆಯನ್ನು ನಿರ್ವಹಿಸುವ ಕೇಂದ್ರವಿದ್ದಿತೆಂದು ಹೇಳಿದರೆ, ಉಳಿದ ವಿದ್ವಾಂಸರು, ಕೇಂದ್ರವಿದ್ದುದು ನವರಾತ್ರಿ ಮೊದಲಾದ ಹಬ್ಬ-ಹರಿದಿನಗಳನ್ನು ನಡೆಸಿ ಸೈನ್ಯಾಧಿಕಾರಿಗಳನ್ನು ಸಂಘಟಿಸುವ ಸಲುವಾಗಿ ಅಷ್ಟೇ. ವಿಜಯನಗರ ಸಾಮ್ರಾಜ್ಯವು ಹೆಚ್ಚು ಮಟ್ಟಿಗೆ ಕೇಂದ್ರೀಕೃತ ಆಧಾರದ ಮೇಲೆ ವ್ಯವಸ್ಥೆಗೊಂಡಿರಲಿಲ್ಲವೆನ್ನುತ್ತಾರೆ (ನೋಡಿ: ಅದೇ).

ಅಮರನಾಯಕ ವ್ಯವಸ್ಥೆಯಿಂದ ವಿಜಯನಗರ ಸಾಮ್ರಾಜ್ಯದ ಅಧಿಕಾರವು ಕೇಂದ್ರದಲ್ಲಿ ಸಂಚಯಗೊಳ್ಳದೆ ಹಲವಾರು ಮಿಲಿಟರಿ ಆಡಳಿತ ಘಟಕಗಳ ಮೂಲಕ ಅಧೋಮುಖವಾಗಿ ಹಂಚಿ ಹೋಗಿತ್ತೆಂಬುದು ವಿದ್ವಾಂಸರ ಅಭಿಮತ. ಈ ವ್ಯವಸ್ಥೆಯಿಂದ ಆಡಳಿತದಲ್ಲಿ ಅನುಕ್ರಮಿಕ ಶ್ರೇಣಿ ಪದ್ಧತಿಯಿದ್ದು, ಸಾಮಂತೀಕರಣದ ಜೊತೆಗೆ ಉಪಸಾಮಂತೀಕರಣ ಪ್ರಕ್ರಿಯೆಯನ್ನು ಒಳಗೊಂಡಿದ್ದುದನ್ನು ಗುರುತಿಸಲಾಗಿದೆ.[೨೩] ವಿಜಯನಗರ ಅವಧಿಯಲ್ಲಿ ಸಾಮ್ರಾಜ್ಯದಾದ್ಯಂತ ಅನೇಕ ಅಮರನಾಯಕರಿದ್ದರು. ನ್ಯೂನಿಜ್ ನೀಡುವ ಮಾಹಿತಿಯನ್ನಾಧರಿಸಿ ಹೇಳುವುದಾದರೆ, 'ರಾಜನ ಬಳಿ ಯಾವಾಗಲೂ ಇನ್ನೂರು ಸರದಾರರು ಇದ್ದೇ ಇರುತ್ತಾರೆ.' ಇವರಲ್ಲದೆ ಅಧೀನ ರಾಜರು ಇದ್ದು ಅವರಲ್ಲಿ ಮುಖ್ಯವಾದ ಐದು ರಾಜರನ್ನು ನ್ಯೂನಿಜ್ ಉಲ್ಲೇಖಿಸುತ್ತಾನೆ. ಅವರೆಂದರೆ ಗೇರುಸೊಪ್ಪೆ, ಬಂಕಾಪುರ, ಬಾರಕೂರು, ಕಾಲಿಕಟ್ ಮತ್ತು ಭಟ್ಕಳ ರಾಜರುಗಳು.[೨೪] ಅಂದರೆ ರಾಜ್ಯದಲ್ಲಿ ಇನ್ನೂರಕ್ಕೂ ಹೆಚ್ಚು ಜನ ಅಮರನಾಯಕರು ವಿಜಯನಗರದಲ್ಲಿ ಆಳ್ವಿಕೆ ನಡೆಸುತ್ತಿದ್ದರೆಂಬುದು ತಿಳಿದು ಬರುವ ಅಂಶ. ಈ ಅಮರನಾಯಕ ರಲ್ಲಿ ಮುಖ್ಯರಾದವರನ್ನು ನ್ಯೂನಿಜ್ ಪ್ರಸ್ತಾಪಿಸುವುದರೊಂದಿಗೆ ಅವರು ನೀಡುತ್ತಿದ್ದ ವಾರ್ಷಿಕ ಪೊಗದಿ ಹಾಗೂ ಕಾಪಾಡಿಕೊಂಡಿರುತ್ತಿದ್ದ ಸೇನಾ ವಿವರಗಳನ್ನು ನೀಡಿದ್ದಾನೆ.[೨೫] ಅದನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು:

ಅಮರನಾಯಕ	ವಾರ್ಷಿಕ ವರಮಾನ	ಸೈನ್ಯದ ಪ್ರಮಾಣ	ಹಣ(ವಾರ್ಷಿಕ)
೧. ಸಾಳುವನಾಯಕ(ಕೋರ ಮಂಡಲ ಮತ್ತಿತರ ಪ್ರದೇಶಗಳು)	೧೧ಲಕ್ಷ ಸುವರ್ಣ ಪರ್ದಾವೋ	೩೦,೦೦೦ ಕಾಲಾಳು ೩,೦೦೦ ಕುದುರೆಗಳು ೩೦ ಆನೆಗಳು	೧/೩ ಭಾಗ
೨. ಅಜಪರ್ಕಟಿಮಪ (ಉದಯಗಿರಿ, ಕೊಂಡ ವೀಡು ಇತ್ಯಾದಿ)	೮,೦೦,೦೦೦ --,,--	೨೫,೦೦೦ ಕಾಲಾಳು ೧೫,೦೦೦ ಕುದುರೆಗಳು ೪೦ ಆನೆಗಳು	೩,೦೦,೦೦೦ ಪರ್ದಾವೊ
೩. ಗೋಪನಾಯಕ	೬,೦೦,೦೦೦ --,,--	೨೦,೦೦೦ ಕಾಲಾಳು ೨,೫೦೦ ಕುದುರೆಗಳು ೨೦ ಆನೆಗಳು	೧,೫೦,೦೦೦ ಪರ್ದಾವೊ
೪. ಲೆಪನಾಯಕ(ಬಂಕಾಪುರ)	೩,೦೦,೦೦೦ --,,--	೨೦,೦೦೦ ಕಾಲಾಳು ೧,೨೦೦ ಕುದುರೆಗಳು ೨೮ ಆನೆಗಳು	೮೦,೦೦೦ ಪರ್ದಾವೊ
೫. ಒಂದೆಗೆಮಾದ ರಾಜ ನರ್ವರ	೪,೦೦,೦೦೦--,,--	೧೨,೦೦೦ ಕಾಲಾಳು ೬೦೦ ಕುದುರೆಗಳು ೨೦ ಆನೆಗಳು	೨,೦೦,೦೦೦ ಪರ್ದಾವೊ
೬. ಚಿನ್ನಪ್ಪನಾಯಕ(ಕಳಲೆ)	೩,೦೦,೦೦೦--,,--	೧೦,೦೦೦ ಕಾಲಾಳು ೮೦೦ ಕುದುರೆಗಳು	೧,೦೦,೦೦೦ ಪರ್ದಾವೊ

೭. ಕೃಷ್ಣಪ್ಪ ನಾಯಕ	೨೦,೦೦೦ --,,--	೭೦೦ ಕಾಲಾಳು ೫೦೦ ಕುದುರೆಗಳು	೭,೦೦೦ ಪರ್ದಾವೊ
೮. ಬಾಜಪ್ಪ ಅಥವಾ ಬಸಪ್ಪನಾಯಕ (ಬೂದಿಹಾಳ)	೩,೦೦,೦೦೦ --,,--	೧೦,೦೦೦ ಕಾಲಾಳು ೮೦೦ ಕುದುರೆಗಳು ೧೫ ಆನೆಗಳು	೧೦,೦೦೦ ಪರ್ದಾವೊ
೯. ಮಲ್ಲಪ್ಪ ನಾಯಕ (ಅವಲಿ)	೧೫,೦೦೦ --,,--	೬,೦೦೦ ಕಾಲಾಳು ೪೦೦ ಕುದುರೆಗಳು	೫,೦೦೦ ಪರ್ದಾವೊ
೧೦. ಆದಪ್ಪನಾಯಕ (ಗುತ್ತಿ)	೩,೦೦,೦೦೦ --,,--	೮,೦೦೦ಕಾಲಾಳು ೮೦೦ ಕುದುರೆಗಳು ೩೦ ಆನೆಗಳು	೪೦,೦೦೦ ಪರ್ದಾವೊ
೧೧. ಬಾಜಪ್ಪನಾಯಕ (ಬಸವಪ್ಪ ನಾಯಕ) ಮುದುಗಲ್ಲು	೪,೦೦,೦೦೦ --,,--	೧೦,೦೦೦ ಕಾಲಾಳು ೧,೦೦೦ ಕುದುರೆಗಳು ೫೦ ಆನೆಗಳು	೧೫,೦೦೦ ಪರ್ದಾವೋ

ಹೀಗೆ ಅಮರನಾಯಕರು ತಮ್ಮ ತಮ್ಮ ಆದಾಯಕ್ಕೆ ಅನುಸಾರವಾಗಿ ಸೈನ್ಯವನ್ನು ಹೊಂದಿದ್ದರು. ನ್ಯೂನಿಜ್ ನೀಡುವ ವಿವರಕ್ಕೆ ಪಾಯೇಸನೂ ಪುಷ್ಟಿ ನೀಡಿದ್ದಾನೆ : ''ತನ್ನ ಸೈನಿಕರ ಮೇಲೆ ನಿಯಮಿಸಿದ ಈ ದಳಪತಿಗಳು ಅವನ (ರಾಜ) ಮನ್ನೆಯರು; ಅವರು ಪ್ರಭುಗಳು. ಅವರು ನಗರಗಳು, ಪಟ್ಟಣಗಳು ಮತ್ತು ಗ್ರಾಮಗಳ ಸ್ವಾಮ್ಯ ಪಡೆದಿರುತ್ತಾರೆ. ದಳಪತಿಗಳಲ್ಲಿ ಕೆಲವರು ಒಂದು ಒಂದೂವರೆ ದಶಲಕ್ಷ ಪರ್ದಾಒಗಳ ಆದಾಯವುಳ್ಳವರಿದ್ದಾರೆ. ಇನ್ನೂ ಕೆಲವರು ಒಂದು ನೂರು ಮತ್ತು ಇನ್ನೂ ಕೆಲವರು ಇನ್ನೂರು, ಮುನ್ನೂರು ಅಥವಾ ಐನೂರು ಸಾವಿರ ಪರ್ದಾಒಗಳ ಆದಾಯವುಳ್ಳವರು. ಪ್ರತಿಯೊಬ್ಬನಿಗೂ ಆದಾಯವಿರುವುದರಿಂದ ರಾಜ ಅವನು ಸಲಹಬೇಕಿದ್ದ ಕಾಲಾಳು, ಕುದುರೆ ಮತ್ತು ಆನೆಗಳ ಸೈನ್ಯವನ್ನು ನಿಗದಿಗೊಳಿಸುತ್ತಾನೆ. ಯಾವಾಗಲೇ ಕರೆಯಲಿ, ಎಲ್ಲಿಗೇ ಹೋಗಬೇಕಿರಲಿ ಈ ಸೈನಿಕರು ಕರ್ತವ್ಯಕ್ಕಾಗಿ ಸದಾ ಸನ್ನದ್ಧರಾಗಿರುತ್ತಾರೆ.''[೨೬] ಬಹಮನಿ ಸುಲ್ತಾನರು ಇದೇ ಬಗೆಯ ವ್ಯವಸ್ಥೆಯನ್ನು ಅನುಸರಿಸಿದ್ದ ಸೂಚನೆಗಳಿವೆ. ಇದಕ್ಕೆ ನಿಕಿಟಿನ್ ದಿನಚರಿಯೂ ಪೂರಕ ಮಾಹಿತಿ ನೀಡುತ್ತದೆ. ಸುಲ್ತಾನನು(ಬಹಮನಿ) ಬಿದರೆಯನ್ನು ಈಸ್ಟರ್ ಹಬ್ಬವಾದ ನಂತರ ಎಂಟನೇ ತಿಂಗಳಲ್ಲಿ ಬಿಟ್ಟನು. ಅವನೊಡನೆ ಇಪ್ಪತ್ತಾರು ವಜೀರರು ಹೊರಟರು. ಈ ವಜೀರರಲ್ಲಿ ಇಪ್ಪತ್ತು ಮುಸಲ್ಮಾನರು ಮತ್ತು ಆರು ಹಿಂದೂಗಳು..... ಸುಲ್ತಾನನ ಜೊತೆಯಲ್ಲಿದ್ದ ೨೬ ವಜೀರರುಗಳಿದ್ದು, ಒಬ್ಬೊಬ್ಬನ ಬಳಿ ಹತ್ತು ಅಥವಾ ಹದಿನೈದು ಸಾವಿರ ಕುದುರೆ ಮತ್ತು ಮೂವತ್ತು ಸಾವಿರ ಕಾಲ್ಬಳ ಇತ್ತು''.[೨೭] ಇಲ್ಲಿ ಹೇಳಲಾದ ವಜೀರರ ಸ್ಥಾನದಲ್ಲಿ ಅಮರನಾಯಕರು ವಿಜಯನಗರದ ಆಡಳಿತ ವ್ಯವಸ್ಥೆಯನ್ನು ಕಾರ್ಯನಿರ್ವಹಿಸುತ್ತಿದ್ದುದನ್ನು ನೋಡಬಹುದು.

ವಿಜಯನಗರದಲ್ಲಿ ಅಸ್ತಿತ್ವದಲ್ಲಿದ್ದ ಅಮರನಾಯಕ ವ್ಯವಸ್ಥೆಯಿಂದ ಅರಸನ ಬೊಕ್ಕಸಕ್ಕೆ ಹಣವೂ, ರಕ್ಷಣೆಗೆ ಸೈನ್ಯವು ದೊರೆಯುತ್ತಿದ್ದುದೇನೂ ನಿಜ. ಇದರಲ್ಲಿ ನ್ಯೂನತೆಗಳು ಇಲ್ಲದಿರಲಿಲ್ಲ. ಈ ವ್ಯವಸ್ಥೆ ಪ್ರಬಲ ಹಾಗೂ ದಕ್ಷ ಅರಸರು ಅಧಿಕಾರದಲ್ಲಿ ಇರುವವರೆಗೆ ಮುಂದುವರೆದು ಅದಕ್ಷರ ಅವಧಿಯಲ್ಲಿ ಮುರಿದುಬೀಳುತ್ತಿತ್ತು. ಅಮರನಾಯಕರು ಆಗ ಸ್ವತಂತ್ರವನ್ನೂ ಘೋಷಿಸಿಕೊಂಡದ್ದುಂಟು. ಇದಕ್ಕೆ ಉಮ್ಮತ್ತೂರು ಪಾಳೆಯಗಾರ ಗಂಗರಾಜನನ್ನು ಉಲ್ಲೇಖಿಸಬಹುದು. ಈ ವ್ಯವಸ್ಥೆಯಿಂದ ಬೆಳೆದ ಅಮರನಾಯಕರು ೧೫೬೫ರ ನಿರ್ಣಾಯಕ ಯುದ್ಧವಾದ ರಕ್ಕಸಗಿ-ತಂಗಡಿಗಿಯ ತರುವಾಯ ಪಾಳೆಯಗಾರರಾಗಿ ಮೆರೆದುದನ್ನು ಚರಿತ್ರೆಯಲ್ಲಿ ಕಾಣಬಹುದು. ಅಮರನಾಯಕ ವ್ಯವಸ್ಥೆಯು ವಿಜಯನಗರ ಸಾಮ್ರಾಜ್ಯದ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಂತೂ ದಿಟ.

೪.೫ ಸೈನಿಕರ ಆಯ್ಕೆ

ಸೇನೆಯಲ್ಲಿ ಸೈನಿಕರದೇ ಸ್ಥಾನ. ಇವರು ಪ್ರತ್ಯೇಕವಾಗಿ ಹೋರಾಡುವುದಲ್ಲದೆ, ಸೈನ್ಯದ ಇತರ ಅಂಗಗಳಾದ ಅಶ್ವದಳ, ಗಜದಳ ಮತ್ತು ಫಿರಂಗಿದಳಗಳನ್ನು ಮುನ್ನಡೆಸುವವರೂ ಆಗಿದ್ದರು. ಇವರನ್ನು ಆಯಾಯ ಪಡೆಗಳು, ಶಸ್ತ್ರಾಸ್ತ್ರಗಳಲ್ಲಿ ಗಳಿಸಿದ ನೈಪುಣ್ಯತೆಯ ಆಧಾರದ ಮೇಲೆ ಸೇನೆಗೆ ಆಯ್ಕೆ ಮಾಡಲಾಗುತ್ತಿತ್ತು. ವಿಜಯನಗರದಲ್ಲಿ ಮುಖ್ಯವಾಗಿ ಎರಡು ಬಗೆಯ ಸೈನ್ಯಗಳಿದ್ದುದನ್ನು ಕಾಣಬಹುದು. ಒಂದು ರಾಜನ ನೇರ ಅಧೀನಕ್ಕೆ ಒಳಪಟ್ಟ ಕೇಂದ್ರಸೈನ್ಯ. ಇದು ಕ್ರಮವಾಗಿ ರಾಜ, ಮಹಾದಂಡನಾಯಕ, ದಂಡನಾಯಕರು ಮತ್ತು ದಳಪತಿಗಳ ನಿಯಂತ್ರಣದಲ್ಲಿದ್ದಿತು. ಇನ್ನೊಂದು, ಅಮರನಾಯಕರು, ಸಾಮಂತರು ಇನ್ನು ಮುಂತಾದವರು ಕಾಯ್ದಿಟ್ಟುಕೊಂಡಿದ್ದ ಪ್ರಾಂತೀಯ ಸೈನ್ಯ. ಇದು ಭೂವಿಸ್ತಾರ ಮತ್ತು ಆದಾಯಗಳಿಗೆ ಅನುಗುಣವಾಗಿ ನಿರ್ದಿಷ್ಟವಾದ ಸಂಖ್ಯೆಯಲ್ಲಿ ಹೊಂದಿರಬೇಕಿದ್ದಿತು. ಸೈನ್ಯದ ಈ ಮೇಲಿನ ವಿಭಾಗಗಳನ್ನು ಹೀಗೂ ಕರೆಯಬಹುದು:

೧. ಮೂಲಬಲ ಅಥವಾ ಕಾಯ್ದಿಟ್ಟ ಸೈನ್ಯ

೨. ಮಿತ್ರ ಬಲ ಅಥವಾ ಪ್ರಾಂತೀಯ ಸೈನ್ಯ.

ವಿಜಯನಗರ ಕಾಲದಲ್ಲಿ ಸೈನಿಕರನ್ನು ಎರಡು ಬಗೆಯಲ್ಲಿ ನೇಮಕ ಮಾಡಲಾಗುತ್ತಿತ್ತು.

೧. ಮೂಲಬಲ ಅಥವಾ ಕಾಯ್ದಿಟ್ಟ ಸೈನ್ಯವು ರಾಜ ಮತ್ತು ಆತನ ಅಧಿಕಾರಿಗಳ ನೇರ ಅಧೀನದಲ್ಲಿದ್ದಿತು. ಈ ಸೈನ್ಯಕ್ಕೆ ಯೋಧರನ್ನು ರಾಜ ಮತ್ತು ಅವನ ದಂಡನಾಯಕರು ನೇಮಕ ಮಾಡಿಕೊಳ್ಳುತ್ತಿದ್ದರು.

೨. ಪ್ರಾಂತೀಯ ಸೈನ್ಯಕ್ಕೆ ಸೈನಿಕರನ್ನು ನೇಮಕ ಮಾಡಿಕೊಳ್ಳುತ್ತಿದ್ದವರು ಸಾಮಂತಾಧಿಕಾರಿಗಳಾದ ಅಮರನಾಯಕರು ಮತ್ತು ಸಾಮಂತ ಅರಸರು. ಇವರು ಕಡ್ಡಾಯವಾಗಿ ಆದಾಯಕ್ಕೆ ತಕ್ಕಂತೆ ಸೈನ್ಯವನ್ನು ಸಲಹಬೇಕಾಗಿದ್ದಿತು.

ವಿಜಯನಗರ ಸಮಕಾಲೀನರಾದ ಬಿಜಾಪುರದ ಸುಲ್ತಾನರು ನಾಲ್ಕುವರ್ಗಗಳಲ್ಲಿ ಸೈನಿಕರನ್ನು ನೇಮಿಸುತ್ತಿದ್ದುದು ತಿಳಿದುಬರುತ್ತದೆ:

೧. ರಾಜ್ಯದ ಸೇವೆಗೆ ಖಾಯಂ ಆಗಿ ನೇಮಕಗೊಂಡ ಯೋಧರು

೨. ಪ್ರಾಂತೀಯ ಗವರ್ನರರು ಮತ್ತು ನೋಬಲರು ಖಾಯಂ ಆಗಿ ಪಾಲಿಸಿಕೊಂಡ ಸೈನ್ಯ

೩. ಯುದ್ಧ ಸಮಯದಲ್ಲಿ ವಿಶೇಷವಾಗಿ ನೇಮಿಸಿಕೊಳ್ಳುತ್ತಿದ್ದ ಸೈನಿಕರು

೪. ಧರ್ಮಯುದ್ಧವನ್ನು ಕಾದಲು ನೇಮಿಸಿಕೊಳ್ಳುತ್ತಿದ್ದ ಸೇವಕರು.

ರಾಜ್ಯದ ಖಾಯಂ ಸೇವೆಯಲ್ಲಿದ್ದ ಯೋಧರಲ್ಲೂ ಎರಡು ವರ್ಗಗಳಿದ್ದುದನ್ನು ಗುರುತಿಸಲಾಗಿದೆ.

೧. ನೇರವಾಗಿ ಸುಲ್ತಾನನ ಆಜ್ಞಾಧೀನವಾಗಿದ್ದುದು,

೨. ಮಂತ್ರಿಗಳು, ನೋಬಲರು ಮತ್ತು ಇತರ ಉನ್ನತ ಅಧಿಕಾರಿಗಳ ವಶದಲ್ಲಿದ್ದುದು.[೨೮]

ಈ ಮೇಲಿನ ಅಂಶಗಳನ್ನು ಗಮನಿಸಿದರೆ ಬಹಮನಿ ಮತ್ತು ವಿಜಯನಗರ ಸೇನೆಗಳಲ್ಲಿ ಸೈನಿಕರ ನೇಮಕ ಪ್ರಕ್ರಿಯೆಗಳಲ್ಲಿ ಸಾಮ್ಯತೆ ಎದ್ದು ಕಾಣುತ್ತದೆ.

ಸೈನಿಕರನ್ನು ರಾಜ, ದಂಡನಾಯಕರು, ಅಮರನಾಯಕರು, ಸಾಮಂತ ಮತ್ತಿತರರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸೈನಿಕರನ್ನು ಸೇವೆಗೆ ನೇಮಕ ಮಾಡುತ್ತಿದ್ದುದೇನೋ ನಿಜ. ಆದರೆ ಸೈನಿಕರ ಆಯ್ಕೆಯಲ್ಲಿ ಅನುಸರಿಸುತ್ತಿದ್ದ ಕ್ರಮಗಳೇನು? ಯಾವ ಯಾವ ಮಾನದಂಡಗಳು ಸೈನಿಕರ ಆಯ್ಕೆಯಲ್ಲಿ ಪ್ರಮುಖವಾಗಿದ್ದವು ಎಂಬ ಅಂಶಗಳನ್ನು ಅರಿಯುವುದು ಕೂಡ ಮುಖ್ಯವಾಗಿದೆ. ಈ ಕುರಿತು ಹೂಯೆನ್ ತ್ಸಾಂಗ್, ಇಬ್ನಬತೂತಾ ಮತ್ತು ಬಾರ್ಬೋಸಾ ಮತ್ತಿತರರ ಹೇಳಿಕೆಗಳು ಉತ್ತರ ನೀಡುತ್ತವೆ. ಹೂಯೆನ್-ತ್ಸಾಂಗನು, ''ದೇಶದ ಅವಶ್ಯಕತೆಗೆ ಅನುಗುಣವಾಗಿ ಸಿಪಾಯಿಗಳನ್ನು ನೇಮಿಸಿಕೊಳ್ಳುತ್ತಾರೆ. ಸೇರಿಸಿಕೊಳ್ಳುವಾಗ ಇಷ್ಟೇ ಸಂಬಳ-ಸಾರಿಗೆಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಅವರ ನೇಮಕವನ್ನು ಬಹಿರಂಗವಾಗಿ ಮಾಡುತ್ತಾರೆ[೨೯] ಎಂದಿದ್ದಾನೆ. ಇದು ಪ್ರಾಚೀನ ಭಾರತದ ಸೈನಿಕರ ನೇಮಕ ಪ್ರಕ್ರಿಯೆಯಾಗಿದೆ.

ವಿಜಯನಗರ ಕಾಲದ ಯೋಧರ ನೇಮಕವನ್ನು ಕುರಿತ ವಿಸ್ತಾರ ಹೇಳಿಕೆ ನೀಡಿದ ಪ್ರವಾಸಿಯೆಂದರೆ ಬಾರ್ಬೋಸಾ. ಇವನು ಹೇಳುತ್ತಾ, ''ಸೈನ್ಯಕ್ಕೆ ಯೋಧನನ್ನು ಚುನಾಯಿಸಿಕೊಳ್ಳುವ ಮುನ್ನ ಅವನನ್ನು ಬೆತ್ತಲೆಯಾಗಿ ನಿಲ್ಲಿಸಿ ಅವನ ಮೈಕಟ್ಟು, ಉದ್ದ, ದಪ್ಪ ಇವುಗಳನ್ನು ನೋಡಿ, ಅವನ ಹೆಸರು, ತಂದೆ-ತಾಯಿಗಳ ಹೆಸರು ಇತ್ಯಾದಿ ವಿಚಾರಗಳನ್ನು ತಿಳಿದುಕೊಂಡು ಬರೆದುಕೊಳ್ಳುತ್ತಾರೆ. ಸಂಬಳದ ಬಟವಾಡೆ ಪುಸ್ತಕದಲ್ಲಿ ಅವನ ಈ ವಿವರಗಳೆಲ್ಲಾ ಇರುತ್ತವೆ''[೩೦] ಎಂದಿದ್ದಾನೆ. ಬಾರ್ಬೋಸಾ ನೀಡುವ ನೇಮಕದ ವಿವರ ಇಂದಿಗೂ ಸೈನ್ಯದಲ್ಲಿ ಅನುಸರಿಸಿರುವುದನ್ನು

ಕಾಣಬಹುದು. ಸೈನ್ಯಕ್ಕೆ ಒಮ್ಮೆ ಸೇರಿದ ಬಳಿಕ ಯೋಧರು ಬಿಟ್ಟುಹೋಗುವುದು ಕಷ್ಟದಾಯಕವಾಗಿದ್ದು, ಯಾರಾದರೂ ತಪ್ಪಿಸಿಕೊಂಡು ಹೋಗಿ ಸಿಕ್ಕಿಬಿದ್ದರೆ ಬಹಳ ಕಠಿಣ ಶಿಕ್ಷೆಯಾಗುತ್ತಿತ್ತೆಂಬುದೂ ಬಾರ್ಬೊಸಾನಿಂದ ತಿಳಿದುಬರುವ ಸಂಗತಿ. ಬಾರ್ಬೊಸಾ ನೀಡುವ ಮೇಲಿನ ವಿವರಗಳು ಒಬ್ಬ ಸೈನಿಕನನ್ನು ನೇಮಿಸಿಕೊಳ್ಳುವಾಗ ಅನುಸರಿಸುತ್ತಿದ್ದ ಸಾಮಾನ್ಯ ಕ್ರಮಗಳಾಗಿವೆ. ಇದು ಮುಂದುವರಿದು ಸೈನ್ಯದ ವಿವಿಧ ಅಂಗಗಳು, ಉಪಾಂಗಗಳಿಗೆ ಆಯಾಯ ಪಡೆಗಳಲ್ಲಿ ನಿಪುಣರಾದ ಸೈನಿಕರು ಬೇಕಾಗಿದ್ದಿತು. ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿ ಪಡೆಗಳನ್ನು ಹಾಗೂ ಅವುಗಳ ಉಪಾಂಗಗಳನ್ನೂ ಈಗಾಗಲೇ ಅಭ್ಯಸಿಸಲಾಗಿದೆ. ಕಾಲ್ದಳದಲ್ಲಿ ಆಯುಧಗಳಿಗೆ ಅನುಸಾರವಾಗಿ ಕತ್ತಿವರೆಸೆಗಾರರು, ಬಿಲ್ಗಾರರು, ಈಟಿಗಾರರು, ಬಂದೂಕುಧಾರಿಗಳು ಇದ್ದರು. ಈ ಎಲ್ಲ ಅಂಗಗಳಿಗೂ ಪ್ರತ್ಯೇಕವಾದ ಅರ್ಹತೆಗಳು ಅವಶ್ಯವಾಗಿದ್ದವು. ಈ ಅರ್ಹತೆಗಳನ್ನು ಇಬ್ನಬತೂತಾ ವಿವರಪೂರ್ಣ ಮಾಹಿತಿಗಳೊಡನೆ ನೀಡಿದ್ದಾನೆ. ಇವನು ವಿಜಯನಗರ ಪೂರ್ವದ ಸೈನಿಕರ ನೇಮಕ ಪ್ರಕ್ರಿಯೆಯನ್ನು ಹೇಳಿದರೂ ವಿಜಯನಗರ ಹಾಗೂ ನಂತರದ ಅವಧಿಗಳಲ್ಲಿ ಇದೇ ಪದ್ಧತಿಯು ಮುಂದುವರಿದಿದ್ದಿತು. ಇದು ಸಾಮಾನ್ಯವಾಗಿ ಎಲ್ಲಾ ಕಾಲಗಳಿಗೂ ಅನ್ವಯವಾಗುತ್ತದೆ.

ಇಬ್ನಬತೂತಾ, ಬಿಲ್ಲಾಳು ಮತ್ತು ರಾವುತನಾಗಿ ಸೈನ್ಯಕ್ಕೆ ಸೇರಬೇಕಾದಾಗ ಅವನು ಹೊಂದಿರಬೇಕಾದ ಅರ್ಹತೆಗಳನ್ನು ಹೀಗೆ ಹೇಳುತ್ತಾನೆ: ''ಯಾರಾದರೂ ಬಿಲ್ಲಾಳಾಗಿ ಸೈನ್ಯಕ್ಕೆ ಸೇರುತ್ತೇನೆಂದು ಬಂದರೆ ಅವರಿಗೆ ಈ ಬಿಲ್ಲುಗಳಲ್ಲಿ ಒಂದನ್ನು ಕೊಟ್ಟು ಪರೀಕ್ಷೆ ಮಾಡುತ್ತಾರೆ. ಈ ಬಿಲ್ಲುಗಳ ಸೆಡೆತ ಒಂದಕ್ಕೊಂದು ವ್ಯತ್ಯಾಸವಿರುತ್ತದೆ. ಬಿಲ್ಲನ್ನು ಎಷ್ಟು ಹೆಚ್ಚು ಬಗ್ಗಿಸಿದರೆ, ಅವನ ಸಂಬಳ ಅಷ್ಟೂ ಹೆಚ್ಚಾಗುತ್ತದೆ''[೩೧] ಇದು ಬಿಲ್ಗಾರನ ನೇಮಕವಾದರೆ, ರಾವುತನದು ಮತ್ತೊಂದು ಬಗೆಯದು. ''ರಾವುತನಾಗಿ ಸೈನ್ಯಕ್ಕೆ ಸೇರಲು ಬಂದವನು ಕುದುರೆಯ ಮೇಲೆ ಕುಳಿತು ಕುದುರೆಯನ್ನು ಕುಲುಕೋಟ ಮತ್ತು ನಾಗಾಲೋಟದಲ್ಲಿ ಓಡಿಸಿ ತನ್ನ ಭಲ್ಲೆಯಿಂದ ಲಕ್ಷ್ಯವನ್ನು ತಿವಿಯಬೇಕು. ಹಾಗೆಯೇ ಒಂದು ತಗ್ಗಾದ ಗೋಡೆಗೆ ತೂಗು ಹಾಕಿದ ಉಂಗುರವನ್ನು ಕುದುರೆಯ ಮೇಲೆ ಕುಲುಕೋಟ ಹೋಗುತ್ತಾ ತನ್ನ ಭಲ್ಲೆಯಿಂದ ಎತ್ತಿಕೊಳ್ಳಬೇಕು. ಹೀಗೆ ಮಾಡಿದವನನ್ನು ಒಳ್ಳೆಯ ಅಶ್ವಾರೋಹಿ ಎಂದು ಭಾವಿಸುತ್ತಾರೆ.''[೩೨] ಬತೂತಾ ನೀಡುವ ನೇಮಕ ಕ್ರಮಗಳು ವಿಜಯನಗರದಲ್ಲೂ ಮುಂದುವರಿದಿದ್ದುದನ್ನು ಕಾಣಬಹುದು. ಹೀಗೆಯೇ ಗಜದಳ ಹಾಗೂ ಫಿರಂಗಿ ಪಡೆಯವರಿಗೂ ಕೆಲವು ಅರ್ಹತೆಗಳು ಅನಿವಾರ್ಯವಾಗಿದ್ದವು. ಮಧ್ಯಯುಗದಲ್ಲಿ ಬಳಕೆಗೆ ಬಂದ ಸಿಡಿಮದ್ದಿನಿಂದ ವಿನೂತನ ಮಾದರಿಯ ಅಸ್ತ್ರಗಳು ಬಳಕೆಗೆ ಬಂದವು. ಅವುಗಳಲ್ಲಿ ಬಂದೂಕು, ಫಿರಂಗಿಗಳು ಮುಖ್ಯವಾಗಿವೆ. ಆರಂಭದಲ್ಲಿ ದೇಶೀಯ ಯೋಧರಿಗೆ ಈ ಅಸ್ತ್ರಗಳನ್ನು ಬಳಸುವ ಕ್ರಮ ಅಷ್ಟಾಗಿ ತಿಳಿದಿರಲಿಲ್ಲ. ಆದ ಕಾರಣ ವಿದೇಶೀಯ ಯೋಧರನ್ನು ಈ ಸಿಡಿಮದ್ದಿನ ಪರಿಕರಗಳನ್ನು ಪ್ರಯೋಗಿಸುವ ಸಲುವಾಗಿ ವಿಜಯನಗರ ಹಾಗೂ ಬಹಮನಿ ಸೈನ್ಯಗಳಲ್ಲಿ

ನೇಮಕ ಮಾಡಿಕೊಂಡಿದ್ದುದು ತಿಳಿದುಬರುತ್ತದೆ. ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆಯಲ್ಲಿ ಪೋರ್ಚುಗೀಸ್ ಫಿಗ್ಯೆರಡೋ ಮತ್ತು ಅವನ ತಂಡವು ನಿರ್ವಹಿಸಿದ ಪಾತ್ರವನ್ನು ಇಲ್ಲಿ ನೆನೆಯಬಹುದು.

ಸೈನ್ಯಕ್ಕೆ ಸೇರಲು ಅರ್ಹತೆಗಳು ಬೇಕಾದುದೇನೋ ನಿಜ. ಆದರೆ ಇಬ್ನಬತೂತಾ ಹೇಳುವಷ್ಟು ನೈಪುಣ್ಯತೆಯನ್ನು ಸೈನಿಕರು ಮೊದಲೇ ಹೊಂದಿರಬೇಕಿತ್ತೆನ್ನುವ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ವಿಜಯನಗರವು ಹೊಂದಿದ್ದ ಬೃಹತ್ ಗಾತ್ರದ ಸೈನ್ಯದಲ್ಲಿ ಎಲ್ಲ ಯೋಧರೂ ನಿಪುಣರಾಗಿದ್ದರೆಂದು ಹೇಳಲು ಬರುವುದಿಲ್ಲ. ಅಲ್ಲದೆ ಸೈನ್ಯಕ್ಕೆ ಸೇರಿದ ನಂತರ ತರಬೇತಿಯ ಮೂಲಕ ನಿಪುಣತೆಯನ್ನು ಸಾಧಿಸಿಕೊಳ್ಳುತ್ತಿದ್ದುದು ಇಂದಿಗೂ ಮುಂದುವರಿದು ಬಂದಿರುವ ಕ್ರಮ. ಆದ್ದರಿಂದ ಸೈನ್ಯಕ್ಕೆ ಸೇರುವ ಮುನ್ನವೇ ಎಲ್ಲ ಬಗೆಯ ಯುದ್ಧತಂತ್ರಗಳಲ್ಲಿ ಪರಿಣತಿ ಪಡೆದಿರಬೇಕೆಂಬುದು ಸತ್ಯಕ್ಕೆ ದೂರವಾದ ಸಂಗತಿ. ಸೇನೆಗೆ ಸೇರಿದ ಮೇಲೆ ಅವರಿಗೆ ತರಬೇತಿ ನೀಡಿ ಸೈನಿಕ ಶಿಸ್ತುಪಾಲನೆಗಳನ್ನು ಬೋಧಿಸುವ ಮೂಲಕ ತರಬೇತುಗೊಳಿಸುತ್ತಿದ್ದುದು ನೈಜಕ್ರಮವಾಗಿದೆ.

ವಿಜಯನಗರ ಕಾಲದಲ್ಲಿ ಸೈನ್ಯಕ್ಕೆ ಸೇರಲು ದೈಹಿಕ ಅರ್ಹತೆಗಳು ಒಂದೆಡೆಯಾದರೆ, ಜಾತಿ ಮತ್ತು ಪ್ರದೇಶಗಳು ಕೂಡ ಯೋಧರ ಆಯ್ಕೆಯಲ್ಲಿ ಮಹತ್ವದ ಪಾತ್ರವಹಿಸಿದ್ದುದು ಆಕರಗಳಿಂದ ತಿಳಿದುಬರುವ ಸಂಗತಿ. ಕೌಟಲ್ಯನು ಅರ್ಹತೆಯುಳ್ಳ ಎಲ್ಲ ವರ್ಗದವರನ್ನೂ ಸೈನ್ಯಕ್ಕೆ ನೇಮಕ ಮಾಡಿಕೊಳ್ಳಬಹುದೆಂದು ಹೇಳಿ, ವಿಶೇಷವಾಗಿ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಹಾಗೂ ಬುಡುಕಟ್ಟು ಸಮುದಾಯಗಳ ಜನರು ಸೈನ್ಯಕ್ಕೆ ಹೆಚ್ಚು ಯೋಗ್ಯರು ಎಂಬ ಅಂಶವನ್ನು ಒತ್ತಿ ಹೇಳುತ್ತಾನೆ.

ವಿಜಯನಗರ ಅವಧಿಯಲ್ಲಿ ಸಾಮಾನ್ಯವಾಗಿ ಎಲ್ಲ ವರ್ಗದ ಸೈನಿಕರೂ ಇದ್ದರು. ಬ್ರಾಹ್ಮಣರು, ಶೈವರು, ಬೇಡರು ಇನ್ನು ಮುಂತಾದ ಎಲ್ಲ ಜಾತಿ-ಉಪಜಾತಿಗಳ ಯೋಧರಿದ್ದುದು ತಿಳಿದುಬರುತ್ತದೆ. ಇದರಲ್ಲಿ ಕೆಲವರು ದಂಡನಾಯಕರೂ ಆಗಿದ್ದರು. ದಂಡನಾಯಕ ಮತ್ತಿತರ ಪ್ರಮುಖ ಹುದ್ದೆಗಳನ್ನು ಹೆಚ್ಚಾಗಿ ಬ್ರಾಹ್ಮಣರು ವಹಿಸಿದ್ದರು. ಸಾಯಣಮಂತ್ರಿ, ಸಾಳ್ವತಿಮ್ಮ, ಗೋಪಮಂತ್ರಿ, ಗೋಪಣ್ಣ ಒಡೆಯ, ಗೋವಿಂದಯ್ಯ, ಕೊಂಡಮರಸಯ್ಯ, ಮಾಧವ ಇತ್ಯಾದಿ. ಲಕ್ಕಣ ದಣಾಯಕನು ಶೈವ ದಂಡನಾಯಕನಾದರೆ? ಇರುಗುಪ್ಪ ಮತ್ತು ಬೈಚಪ್ಪರು ಜೈನಧರ್ಮಕ್ಕೆ ಸೇರಿದವರು. ಕೃಷ್ಣದೇವರಾಯನ ಕಾಲದಲ್ಲಿ ರಾಮಪ್ಪನು ಬೇಡಜನಾಂಗದ ಪ್ರತಿನಿಧಿಯಾಗಿ ಅಮರನಾಯಕ ತನವನ್ನು ಅನುಭವಿಸುತ್ತಿದ್ದುದು ತಿಳಿದುಬರುತ್ತದೆ. ಸೈನಿಕ ಮತ್ತು ಆಡಳಿತದ ಬಹುಮುಖ್ಯ ಸ್ಥಾನಗಳನ್ನು ವಿಜಯನಗರದ ಅರಸರು ಬ್ರಾಹ್ಮಣರಿಗೇ ನೀಡಿದ್ದರು. ಅದಕ್ಕೆ ಅವರ ವಿಶ್ವಾಸಾರ್ಹತೆ ಮತ್ತು ದಕ್ಷತೆಗಳು ಕಾರಣವಾಗಿದ್ದವೆಂಬುದು ವಿದ್ವಾಂಸರ ಅಭಿಮತ. ಆದರೆ ಸೈನಿಕರಲ್ಲಿ ವಿವಿಧ ಪ್ರದೇಶ ಹಾಗೂ ಜಾತಿಯ ಯೋಧರಿದ್ದುದನ್ನು ನಂಜುಂಡಕವಿಯು ತನ್ನ ಕೃತಿಯಲ್ಲಿ ಮನಮೋಹಕವಾಗಿ ಚಿತ್ರಿಸಿದ್ದಾನೆ. ರಾಮನಾಥ ಚರಿತದಲ್ಲಿ ಉಲ್ಲೇಖವಾಗಿರುವ ಯೋಧರಲ್ಲಿ ಹೊಲೆಯರ ಹುಳ್ಳ, ಮಾದಿಗರ ಹಂಪ, ಕಾಳಾಂಜಿಯ ಕಂಪ,

ಅಕ್ಕಸಾಲಿಯ ಚಿಕ್ಕ, ಕೊಳ್ಳಿಯ ನಾಗ, ದೇವಿಸೆಟ್ಟಿಯ ಲಿಂಗ, ಹಡಪದ ಬಲ್ಲುಗ, ಗಿಂಡಿಯ ಲಕ್ಕ, ಒಕ್ಕಲಿಗರ ನಾಗಣ, ಭಂಡಾರಿ ಸೋವಣ[೩೩] ಇನ್ನು ಮುಂತಾದವರು ಮುಖ್ಯರು. ಈ ಯೋಧರು ಯುದ್ಧದಲ್ಲಿ ತೋರಿದ ಶೌರ್ಯ-ಸಾಹಸವನ್ನೂ ಕವಿ ವರ್ಣಿಸಿದ್ದಾನೆ. ಈ ಮೇಲಿನ ವಿವರದನ್ವಯ ಸೈನ್ಯದಲ್ಲಿ ಎಲ್ಲಾ ವರ್ಗದವರಿಗೂ ಅವಕಾಶವಿದ್ದುದು ತಿಳಿದುಬರುತ್ತದೆ.) ಶ್ರೀಕೃಷ್ಣದೇವರಾಯನ ದಿನಚರಿಯಲ್ಲಿ ಬೇಡರ ವಿಶೇಷ ಪಡೆಯ ಉಲ್ಲೇಖವಿದೆ. ಶಾಸನಗಳೂ ಬೇಡರ ಪಡೆಯಿದ್ದುದನ್ನು ಸಮರ್ಥಿಸುತ್ತವೆ.[೩೪] ವಿಜಯನಗರ ಸೇನೆಯಲ್ಲಿ ಬೇಡಪಡೆಯಲ್ಲದೆ, ತುರುಕ ದಳವಿದ್ದುದನ್ನೂ ಕಾಣಬಹುದು. ಕ್ರಿ.ಶ.೧೩೫೭ರ ಶಾಸನದಲ್ಲಿ ವಿಜಯನಗರ ಸೇನೆಯು ತುರುಕ(ಮುಸ್ಲಿಮರು)ರನ್ನು ಹೊಂದಿದ್ದುದಾಗಿ ಹೇಳಿದೆ. ಎರಡನೆಯ ದೇವರಾಯನು ಮುಸ್ಲಿಮರಿಗೆ ತನ್ನ ಸೈನ್ಯದಲ್ಲಿ ಹೆಚ್ಚು ಆದ್ಯತೆ ನೀಡಿದ್ದುದು ಫೆರಿಸ್ತಾನಿಂದ ತಿಳಿದುಬರುವುದು. ಫೆರಿಸ್ತಾನ ಪ್ರಕಾರ, ದೇವರಾಯನ ಸೈನ್ಯದಲ್ಲಿ ಎರಡು ಸಾವಿರ ಮುಸ್ಲಿಂ ಬಿಲ್ಲುಗಾರರಿದ್ದರು. ಶ್ರೀರಂಗಪಟ್ಟಣದ ಶಾಸನವೊಂದರಲ್ಲಿ ವಿಜಯನಗರ ಸೇನೆಯು ಹತ್ತುಸಾವಿರ ತುರುಕ(ಮುಸ್ಲಿಂ) ರಾವುತರಿದ್ದುದನ್ನು ದೃಢಪಡಿಸುತ್ತದೆ.[೩೫]

ಡೊಮಿಂಗೋ ಪಾಯೇಸ್‌ನು ನೀಡುವ ನವರಾತ್ರಿ ಉತ್ಸವದ ವರ್ಣನೆಯಲ್ಲಿ, ''ಮೂರರು-ಅವರನ್ನು ಮರೆಯುವಂತಿಲ್ಲ. ಅವರು ಕೂಡ ತಮ್ಮ ಡಾಲು, ಈಟಿ. ತುರ್ಕಿಬಿಲ್ಲು, ಅನೇಕ ಸಿಡಿಗುಂಡುಗಳು, ಭಲ್ಲೆ ಮತ್ತು ಅಗ್ನಿ ಬಾಣಗಳೊಂದಿಗೆ ಸೈನ್ಯ ಪ್ರದರ್ಶನದಲ್ಲಿದ್ದರು'' ಎಂದಿದ್ದಾನೆ.[೩೬] ವಿಜಯನಗರ ಸೈನ್ಯದಲ್ಲಿ ಎಲ್ಲ ಜಾತಿಗಳ ಜನರು ಸೈನ್ಯಕ್ಕೆ ಸೇರಬಹುದಾಗಿತ್ತೆಂಬ ಅಂಶವನ್ನು ಈ ಮೇಲಿನ ಸಂಗತಿಗಳು ಬಿಂಬಿಸುತ್ತವೆ. ಇದಕ್ಕೆ ಪುಷ್ಟಿಯಾಗಿ ಬಾರ್ಬೋಸಾನ ಹೇಳಿಕೆಯನ್ನು ಗಮನಿಸಬಹುದು. ಅವನು ವಿಜಯನಗರದ ವರ್ಣನೆ ಮಾಡುವಾಗ,''ನಾನಾ ಕಡೆಗಳಿಂದ ಬಂದು ಇಲ್ಲಿ ಸೈನ್ಯಕ್ಕೆ ಸೇರಿದ ಸರದಾರರಿಗೆ ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ''[೩೭] ಎನ್ನುವ ಮಾತು ಸೈನ್ಯದ ನೇಮಕದಲ್ಲಿ ಅಳವಡಿಸಿಕೊಂಡಿದ್ದ ಸಾಮಾಜಿಕ ಪ್ರಕ್ರಿಯೆಯ ಪ್ರತಿಬಿಂಬವಾಗಿದೆ.

ಸೈನ್ಯದಲ್ಲಿ ಜಾತಿ-ಜನಾಂಗಗಳಾಧಾರಿತ ಅಂಶಗಳಂತೆಯೇ ಪ್ರಾದೇಶಿಕತೆಗೂ ಸ್ಥಾನವನ್ನು ನೀಡಲಾಗಿದ್ದಿತು. ನಂಜುಂಡ ಕವಿಯು 'ಹುಳಿಹೇರು ಕಾಳಗ'ದಲ್ಲಿ ಪ್ರಾದೇಶಿಕ ಪಡೆಗಳನ್ನು ಗುರುತಿಸಿದ್ದಾನೆ. ಅದರಲ್ಲಿ ಕನ್ನಡಿಗರು, ತುರುಕರು, ಒಡ್ಡಿಯವರು(ಒರಿಸ್ಸಾ), ಲಾಳ, ಅರಿಯ(ಮಹಾರಾಷ್ಟ್ರ), ಗೌಳ, ಗೂರ್ಜರ, ತೆಲುಗ, ತಿಗುಳ-ಇನ್ನು ಮುಂತಾದ ಪ್ರದೇಶಗಳ ಯೋಧರಿದ್ದುದಾಗಿ ಹೇಳಿದ್ದಾನೆ. ಕ್ರಿ.ಶ.೧೩೫೭ರ ಶಾಸನವು ಕೂಡ ಈ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತದೆ. ವಿಜಯನಗರ ಸೈನ್ಯವು ತುರುಕರು, ಸೇವುಣ, ತೆಲುಗ, ಪಾಂಡ್ಯ ಮತ್ತು ಹೊಯ್ಸಳ ಎಂಬ ಸೇನಾ ವಿಭಾಗಗಳಿಂದ ಕೂಡಿತ್ತೆಂದು ಹೇಳಿದೆ.[೩೮] ಶ್ರೀಕೃಷ್ಣದೇವರಾಯನ ದಿನಚರಿಯು ತುಳುವ ಮತ್ತು ಮೊರಸನಾಡ ರಾವುತರನ್ನು ಕುರಿತಿದೆ. ಸಿವೆಲ್‌ರು, ವಿಜಯನಗರ ಸೇನೆಯು ಎಲ್ಲ ಪ್ರಾಂತ್ಯಗಳ ದೊಡ್ಡ

ದೊಡ್ಡ ಪಡೆಗಳಿಂದ ಕೂಡಿದುದಾಗಿತ್ತು. ಕನ್ನಡಿಗರು ಮತ್ತು ಗಡಿಯ ತೆಲುಗರು, ಪಶ್ಚಿಮ ಮತ್ತು ಕೇಂದ್ರ ಭಾಗಗಳ ಮೈಸೂರಿಗಳು ಮತ್ತು ಮಲಬಾರಿಗಳೊಂದಿಗೆ ದಕ್ಷಿಣದ ದೂರ ಜಿಲ್ಲೆಗಳ ತಮಿಳರು ಮಿಳಿತವಾಗಿದ್ದರೆಂದು ಹೇಳುತ್ತಾರೆ. ಈ ಮೇಲಿನ ಹೇಳಿಕೆಯು ವಿಜಯನಗರ ಸಾಮ್ರಾಜ್ಯದ ವಿವಿಧ ಪ್ರದೇಶಗಳ ಯೋಧರನ್ನು ಹೇಳಿದರೆ, ಇಬ್ನಬತೂತಾನು ವಿದೇಶಗಳ ಸೈನಿಕರಿದ್ದುದಾಗಿಯೂ ಹೇಳುತ್ತಾನೆ. ಅವನು, "ಓರ್ಮಸ್ ಮತ್ತು ಖಾಟಫ್ ದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳುವುದರ ಜೊತೆಗೆ ಅರಬ್ಬೀ ಸಿಪಾಯಿಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದಕ್ಕೋಸ್ಕರ ಆಮದು ಮಾಡಿಕೊಳ್ಳುತ್ತಿದ್ದರು"[೩೯] ಎಂದಿದ್ದಾನೆ. ನ್ಯೂನಿಜ್ ಕೂಡ ಪೋರ್ಚುಗೀಸರ ಪಡೆಯೊಂದು ಕೃಷ್ಣದೇವರಾಯನ ಸೈನ್ಯದಲ್ಲಿದ್ದುದಾಗಿ ಹೇಳಿದ್ದಾನೆ. ಇದರಿಂದ ವಿಜಯನಗರ ಸೇನೆಯು ಜಾತಿ-ಜನಾಂಗಗಳಲ್ಲದೆ, ಪ್ರದೇಶಗಳ ಎಲೆಯನ್ನು ಮೀರಿ ವಿದೇಶಗಳಿಂದ ಬಂದಂತಹ ಸಮರ್ಥಯೋಧರನ್ನು ಒಳಗೊಂಡಿದ್ದುದು ಸ್ಪಷ್ಟವಾಗುತ್ತದೆ.

೪.೬ ಸೈನಿಕರ ವೇತನ ಮತ್ತು ರಾಜ್ಯದ ಆದಾಯ

ವಿಜಯನಗರ ಕಾಲದಲ್ಲಿ ಎರಡು ಬಗೆಯ ಸೈನಿಕ ಆಡಳಿತವಿದ್ದುದನ್ನು ಈಗಾಗಲೇ ಗಮನಿಸಿಲಾಗಿದೆ. ೧.ಕೇಂದ್ರ ೨.ಪ್ರಾಂತ್ಯ ಸೈನ್ಯ. ಕೇಂದ್ರದಲ್ಲಿ ನೇರವಾಗಿ ರಾಜನ ಅಧೀನವಾಗಿರುವ ಸೈನ್ಯವು ದಂಡನಾಯಕರ ಮೂಲಕ ನಿಯಂತ್ರಿಸಲ್ಪಡುತ್ತಿತ್ತು. ಈ ಸೈನ್ಯಕ್ಕೆ ಯೋಧರನ್ನು ರಾಜ ಅಥವ ಅವನ ಅಧಿಕಾರಗಳ ಮೂಲಕ ನೇಮಿಸಲಾಗುತ್ತಿತ್ತು. ಈ ಬಗೆಯಲ್ಲಿ ನೇಮಕಗೊಂಡ ಯೋಧರಿಗೆ ವೇತನ ಮತ್ತಿತರ ಸೌಲಭ್ಯಗಳು ಕೇಂದ್ರದ ಖಜಾನೆಯಿಂದ ದೊರೆಯುತ್ತಿದ್ದವು. ಪ್ರಾಂತೀಯ ಸೈನ್ಯವು ಅಮರನಾಯಕರು, ಸಾಮಂತರು ಇನ್ನು ಮುಂತಾದವರ ಅಧೀನದಲ್ಲಿದ್ದುದರಿಂದ ಈ ಸೈನ್ಯದ ಯೋಧರಿಗೆ ಆಯಾಯ ಸಾಮಂತರೇ ನೀಡುತ್ತಿದ್ದರು. ಅರಸನು ಇವರಿಗೆ ಇಂತಿಷ್ಟು ಭೂಮಿಯನ್ನು ಉಂಬಳಿಯಾಗಿ ನೀಡಿ ನಿರ್ದಿಷ್ಟ ಮೊತ್ತದ ಧನವನ್ನು ನೀಡುವುದರ ಜೊತೆಗೆ ಸೈನ್ಯವನ್ನು ಸಲಹುವಂತೆ ವ್ಯವಸ್ಥೆಯನ್ನು ಮಾಡಿದ್ದನು. ಈ ಪದ್ಧತಿಯಿಂದ ಅರಸನಿಗೆ ಬೃಹತ್ ಗಾತ್ರದ ಸೈನ್ಯವನ್ನು ಕಟ್ಟಲು ಸಾಧ್ಯವಾಯಿತೆಂದು ಹೇಳಬಹುದು. ಪ್ರಾಂತೀಯ ಸೈನ್ಯದ ಯೋಧರಿಗೆ ತಗಲುವ ವೆಚ್ಚಗಳಿಗೆ ಪ್ರಾಂತೀಯ ಅಧಿಕಾರಗಳೇ ಬಾಧ್ಯರಾಗಿದ್ದರು.

ಸೈನಿಕರ ವೇತನಕ್ಕೆ ಸಂಬಂಧಿಸಿದಂತೆ ನಿಖರವಾಗಿ ಮಾಹಿತಿ ದೊರೆಯದಿದ್ದರೂ, ಪ್ರವಾಸಿಗರ ಹೇಳಿಕೆಗಳಿಂದ ಅಂದಿನ ವೇತನದ ಸ್ವರೂಪವನ್ನು ತಿಳಿಯಬಹುದಾಗಿದೆ. ಪ್ರವಾಸಿಗರ ಹೇಳಿಕೆಗಳು ವಿವಿಧ ಬಗೆಯ ವೇತನ ಪದ್ಧತಿಯನ್ನು ಕುರಿತಿವೆ. ಅಬ್ದುಲ್ ರಜಾಕ್‌ನು "ಸಿಪಾಯಿಗಳಿಗೆ ಸಂಬಳವನ್ನು ನಾಲ್ಕು ತಿಂಗಳಿಗೊಂದು ಸಾರಿ ಪಾವತಿ ಮಾಡುತ್ತಾರೆ"[೪೦] ಎಂದು ಒಂದೆಡೆ ಹೇಳಿದ್ದರೆ, ಇನ್ನೊಂದೆಡೆ, "ದರಬ್ ಖಾನೆಗೆ ಎದುರಾಗಿ ರಾಜ್ಯಪಾಲನ ಮನೆಯಿದೆ. ಇಲ್ಲಿ ಹನ್ನೆರಡು ಸಾವಿರ ಸೈನಿಕರು ಕಾವಲು ಕಾಯುತ್ತಾರೆ. ಪ್ರತಿಯೊಬ್ಬರಿಗೂ ದಿನಕ್ಕೆ ಒಂದು

ಘನಂ ಕೂಡುತ್ತಾರೆ''[೪೧] ಎಂದಿದ್ದಾನೆ. ರಜಾಕ್ ಎರಡು ವಿಧದ ವೇತನವನ್ನು ಪ್ರಸ್ತಾಪಿಸಿರುವುದನ್ನು ಇಲ್ಲಿ ಕಾಣಬಹುದು. ಒಂದು ನಾಲ್ಕು ತಿಂಗಳಿಗೊಂದು ಬಾರಿ ಸಂಬಳ ನೀಡುವುದು; ಇನ್ನೊಂದು ಪ್ರತಿದಿನ ವೇತನ ನೀಡುವ ಪದ್ಧತಿಯಿದ್ದುದು. ಪಾಯೇಸ್‌ನದು ರಜಾಕ್ ಹೇಳಿಕೆಗಿಂತ ಭಿನ್ನವಾದುದು. ವಿಜಯದಶಮಿ ಹಬ್ಬದ ವರ್ಣನೆ ಮಾಡುತ್ತಾ ಪಾಯೇಸ್, ''ಅದು ವರ್ಷಾರಂಭವಾದುದರಿಂದ ಅವನು(ರಾಜ) ಎಲ್ಲರಿಗೂ ಸಂಬಳ ವಿತರಿಸಿದ. ವರ್ಷಕ್ಕೊಮ್ಮೆ ಸಂಬಳ ಕೊಡುವುದು ಅವರ ರೂಢಿ''[೪೨] ಎಂದಿದ್ದಾನೆ. ಅಲ್ಲದೆ ''ಈ ಕೆಲಸವು ಅವನ(ರಾಜನ) ಮನೆಯ ಅಧಿಕಾರಿಗಳಿಂದ ವೀಕ್ಷಣೆ ನಡೆದು ಸಂಬಳ ನೀಡುವಾಗ ಅವರು ಪ್ರತಿಯೊಬ್ಬರ ಹೆಸರು ಮತ್ತು ಅವನ ಮುಖ ಇಲ್ಲವೇ ದೇಹದ ಮೇಲೆ ಇರುವ ಕಲೆಗಳನ್ನು ಬರೆದುಕೊಳ್ಳುತ್ತಿದ್ದರು'' ಎನ್ನುತ್ತಾನೆ. ಇದು ಸಂಬಳವನ್ನು ನೀಡುವಾಗ ಅಧಿಕಾರಿಗಳು ಅನುಸರಿಸಿದ್ದ ಕ್ರಮವಾಗಿದೆ. ಸೈನಿಕರ ಗುರುತು ಹಚ್ಚುವ ಕ್ರಮವನ್ನು ಬಾರ್ಬೋಸಾನ ವರದಿಯಲ್ಲೂ ಕಾಣಬಹುದಾಗಿದೆ. ನ್ಯೂನಿಜ್ ನೀಡುವ ಮಾಹಿತಿ ಪಾಯೇಸ್‌ನ ಹೇಳಿಕೆ ಹತ್ತಿರವಾಗಿದೆ. ಅವನು ಹೇಳುವಂತೆ, ''ರಾಜ ವೇತನ ನೀಡುವ ಅಶ್ವಾಳುಗಳು ಆರು ಸಾವಿರ ಇರುವರು ಮತ್ತು ಅವರೆಲ್ಲ ಲಾಯಗಳ ಸಿಬ್ಬಂದಿಯೆಂದು ಪರಿಗಣಿತವಾಗಿರುವರು; ಅವರ ಸೇವೆ ಮಾಡುವವರಿಗೆ ಪ್ರತಿವರ್ಷ, ಕೆಲವರಿಗೆ ಒಂದು ಸಾವಿರ, ಕೆಲವರಿಗೆ ಐದುನೂರು, ಮುನ್ನೂರು ಪರ್ದಾವೋಗಳನ್ನು ಕೊಡಲಾಗುತ್ತದೆ.''[೪೩] ಪಾಯೇಸ್ ಸೈನಿಕರಿಗೆ ನೀಡುತ್ತಿದ್ದ ಸಂಬಳವನ್ನು, ''ಒಂದು ಸಾವಿರ ಪರ್ದಾವೋ ಸಂಬಳವಿರುವ ರಕ್ಷಕ ಪಡೆಯವರೂ ಇದ್ದಾರೆ. ಕೆಲವರಿಗೆ ಎಂಟುನೂರು, ಆರುನೂರು ಸ್ವಲ್ಪ ಹೆಚ್ಚು ಕಮ್ಮಿ ವ್ಯತ್ಯಾಸವಿದೆ. ಹಾಗೂ ವ್ಯಕ್ತಿಗಳಲ್ಲೂ ವ್ಯತ್ಯಾಸವಿದೆ''[೪೪] ಎಂದಿದ್ದಾನೆ. ವೇತನ ನೀಡುವ ಕಾಲ ಹಾಗೂ ಮೊತ್ತದಲ್ಲಿ ನ್ಯೂನಿಜ್-ಪಾಯೇಸ್ ವರದಿಗಳು ಸಾಮ್ಯತೆ ಹೊಂದಿರುವುದನ್ನು ಇಲ್ಲಿ ಕಾಣಬಹುದು. ಸೈನಿಕರ ಸಂಬಳವನ್ನು ಹುದ್ದೆಗಳಿಗೆ ಅನುಗುಣವಾಗಿ ನೀಡುತ್ತಿದ್ದುದು ಇಲ್ಲಿ ವ್ಯಕ್ತವಾಗುತ್ತದೆ. ಸೈನಿಕರ ಸಂಬಳ-ಸಾರಿಗೆಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿಗಳಿದ್ದರು ಅವರನ್ನು ಪಾರುಪತ್ಯೆಗಾರರು, ಕರಣಿಕರು ಎಂದು ಕರೆಯಲಾಗಿದ್ದಿತು.[೪೫] ಇವರು ಸೈನ್ಯಕ್ಕೆ ಸಂಬಂಧಿಸಿದ ಎಲ್ಲ ಖರ್ಚು-ವೆಚ್ಚಗಳನ್ನು ಕ್ರಮಬದ್ಧವಾಗಿ ಬಟವಾಡೆ ಪುಸ್ತಕಗಳಲ್ಲಿ ನಮೂದಿಸಿಕೊಳ್ಳುತ್ತಿದ್ದರು. ಈ ಮೇಲಿನ ವರದಿಗಳ ಹಿನ್ನೆಲೆಯಲ್ಲಿ ಸೈನಿಕ ಸಿಬ್ಬಂದಿಗೆ ಅವರ ಹುದ್ದೆಗಳಿಗೆ ಅನುಗುಣವಾಗಿ ವೇತನವನ್ನು ನಿಗದಿಗೊಳಿಸುತ್ತಿದ್ದುದು; ಸೈನಿಕರಿಗೆ ಮಾಸಿಕ, ಚಾತುರ್ಮಾಸಿಕ, ವಾರ್ಷಿಕವಾಗಿಯೂ ಮತ್ತು ದಿನಗೂಲಿ ನೌಕರರಿಗೆ ಪ್ರತಿದಿನವೂ ವೇತನ ನೀಡುತ್ತಿದ್ದುದು ತಿಳಿದುಬರುವ ಸಂಗತಿ. ವೇತನಕ್ಕೆ ಸಂಬಂಧಿಸಿದಂತೆ ವಿವಿಧ ಅಭಿಪ್ರಾಯಗಳು ವ್ಯಕ್ತಗೊಳ್ಳುವುದರಿಂದ ಕಾಲ ಕಾಲಕ್ಕೆ ಅರಸರು ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ವೇತನವನ್ನು ಬದಲಾಯಿಸುತ್ತಿದ್ದುದು ಇಲ್ಲಿ ಕಂಡುಬರುತ್ತದೆ.

ಈ ಮೇಲಿನದು ಕೇಂದ್ರದ ವೇತನ ಪದ್ಧತಿಯಾದರೆ, ಪ್ರಾಂತೀಯ ಸೇನೆಯ ಯೋಧರಿಗೆ ಪ್ರಾಂತೀಯ ಅಧಿಕಾರಿಗಳೇ ನೀಡಬೇಕಾಗಿದ್ದಿತು. ಅಮರನಾಯಕರು, ಸಾಮಂತ ಅರಸರು ರಾಜನ ಭೂ ಒಡೆತನವನ್ನು

ಪಡೆದದ್ದರಿಂದ ಭೂಮಿಯ ಆದಾಯಕ್ಕೆ ತಕ್ಕಂತೆ ನಿರ್ದಿಷ್ಟಪಡಿಸಿದ ಸೇನೆಯನ್ನು ಸಲಹುತ್ತಿದ್ದರು. ಆದಾಯದಲ್ಲಿ ಸೈನ್ಯದ ನಿರ್ವಹಣೆಗೆಂದೇ ಹಣವನ್ನು ಮೀಸಲಿಡಬೇಕಾಗಿದ್ದಿತು. ಪಾಯೇಸ್‌ನು ಈ ಕುರಿತು, ''ಪ್ರತಿಯೊಬ್ಬನಿಗೂ (ಅಮರನಾಯಕ) ಆದಾಯವಿರುವುದರಿಂದ ರಾಜ ಅವನು ಸಲಹಬೇಕಿದ್ದ ಕಾಲಾಳು, ಕುದುರೆ ಮತ್ತು ಆನೆಗಳ ಸೈನ್ಯವನ್ನು ನಿಗದಿಗೊಳಿಸುತ್ತಾನೆ''[೪೬] ಎಂದಿರುವುದು ಪ್ರಾಂತೀಯ ನಾಯಕರು ವೇತನ ಪಾವತಿಸುತ್ತಿದ್ದುದು ಖಚಿತವಾಗುತ್ತದೆ. ಇದಕ್ಕೆ ಪೂರಕವೆನ್ನುವಂತೆ ನ್ಯೂನಿಜ್, ''ಈ ರಾಜಾ ಚಿತರಾವ್(ಅಚ್ಯುತರಾಯ)ನಲ್ಲಿ ಮನ್ನೆಯರು ಸಂಬಳ ನೀಡುವ ಕಾಲಾಳುಗಳಿದ್ದಾರೆ. ಅವರು ಕಡ್ಡಾಯವಾಗಿ ಆರುಲಕ್ಷ ಸೈನಿಕರನ್ನು ಮತ್ತು ೨೪,೦೦೦ ಕುದುರೆಗಳನ್ನು ಸಲಹಬೇಕಾಗುತ್ತದೆ.... ಅವರನ್ನು ಅದೇ ಮನ್ನೆಯರು ತಮ್ಮಲ್ಲಿಟ್ಟುಕೊಳ್ಳಬೇಕಾಗುತ್ತದೆ''[೪೭] ಎಂದಿದ್ದಾನೆ. ಇದರಿಂದ ಪ್ರಾಂತೀಯವಾಗಿ ನಿರ್ದಿಷ್ಟ ಗಾತ್ರದ ಸೈನ್ಯ ಹೊಂದಿದ್ದುದು ತಿಳಿದುಬರುತ್ತದೆ. ಹಾಗೆಯೇ ಅಮರನಾಯಕರು ಕೂಡ ತಮ್ಮ ಸೈನ್ಯವನ್ನು ಶ್ರಮಿವಹಿಸಿ ಕಾಪಾಡುತ್ತಿದ್ದುದೂ ಉಂಟು. ಪಾಯೇಸ್ ಹೀಗೆ ಹೇಳುತ್ತಾನೆ: ತನ್ನ(ರಾಜನ) ಸೈನಿಕರ ಮೇಲೆ ನಿಯಮಿಸಿದ ಈ ದಳಪತಿಗಳು ಅವನ ಮನ್ನೆಯರು ; .... ಪ್ರತಿ ದಳಪತಿಯೂ ತನಗೆ ಲಭ್ಯವಿರುವ ಅತ್ಯುತ್ತಮ ಸೈನಿಕರನ್ನು ತಯಾರಿಸಲು ಶ್ರಮಿಸುತ್ತಾನೆ. ಇದು ಅಮರನಾಯಕರಲ್ಲಿ ಸೈನ್ಯವನ್ನು ಸಜ್ಜುಗೊಳಿಸುವಲ್ಲಿ ಪೈಪೋಟಿಯಿದ್ದುದನ್ನು ಅಭಿವ್ಯಕ್ತಿಸುತ್ತದೆ.

ಇದುವರೆಗೆ ಸೈನಿಕರಿಗೆ ನೀಡುತ್ತಿದ್ದ ವೇತನವನ್ನು ಕುರಿತು ಚರ್ಚಿಸಲಾಗಿದೆ. ವಿಜಯನಗರದಲ್ಲಿದ್ದ ಬೃಹತ್ ಪ್ರಮಾಣದ ಸೈನಿಕರು ಹಾಗೂ ಸೈನ್ಯಕ್ಕೆ ತಗಲುವ ವೆಚ್ಚವನ್ನು ಹೇಗೆ ನಿಬಾಯಿಸುತ್ತಿದ್ದರು? ಇಷ್ಟೊಂದು ಪ್ರಮಾಣದ ಸೈನ್ಯ ಕಾಪಾಡುವಲ್ಲಿ ಅವರಿಗೆ ಬರುತ್ತಿದ್ದ ಆದಾಯದ ಮೂಲಗಳಾವುವು? ಭೂಕಂದಾಯದ ಮೂಲಕ ಜನರಿಂದ ಪಡೆಯುವಾಗ ಅದರ ಪ್ರಮಾಣ ಎಷ್ಟಿತ್ತು? ಎನ್ನುವ ಅಂಶಗಳನ್ನು ಮುಂದೆ ನೋಡಲಾಗಿದೆ.

ಅಬ್ದುಲ್ ರಜಾಕ್ , ''ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಹನ್ನೆರಡು ಸಾವಿರ ಫನಂ ಆದಾಯ ಬರುತ್ತದೆ. ಈ ಹಣವನ್ನು ಪಹರೆಯವರಿಗೆ ಸಂಬಳ ಕೊಡುತ್ತಾರೆ.''[೪೮] ಎಂದಿದ್ದಾನೆ. ಪಾಯೇಸ್ ''ರಾಜನ ಆದಾಯವೆಷ್ಟು ಮತ್ತು ಇಷ್ಟು ಸೈನಿಕರಿಗೆ ಸಂಬಳ ಕೊಡಲು ಶಕ್ತನಾಗಿರಲು ಅವನ ಭಂಡಾರ ಎಂಥದ್ದು ಎಂದು ಯಾರಾದರೂ ಕೇಳಿದರೆ... ನಾನು ಹೀಗೆ ಉತ್ತರಿಸುವೆ''[೪೯] ಎಂದು ದಳಪತಿಗಳು ವಾರ್ಷಿಕವಾಗಿ ಅರಸನಿಗೆ ನೀಡುತ್ತಿದ್ದ ಹಣದ ವಿವರ ಕೊಡುತ್ತಾನೆ. ನ್ಯೂನಿಜ್ ಅಮರನಾಯಕರಿಂದ ಬರುತ್ತಿದ್ದ ಒಟ್ಟು ಆದಾಯ ಅರವತ್ತು ಲಕ್ಷ ಪರ್ದಾವೋಗಳೆಂದೂ, ಅವನು ಇದರಲ್ಲಿ ಇಪ್ಪತ್ತೈದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಉಪಭೋಗಿಸುವುದಿಲ್ಲ. ಏಕೆಂದರೆ ಮಿಕ್ಕಿದ್ದು ಅವನ ಕುದುರೆಗಳು, ಆನೆಗಳು ಮತ್ತು ಕಾಲಾಳುಗಳು ಮತ್ತು ಅಶ್ವಾಳುಗಳಿಗೆ ಖರ್ಚಾಗುವುದೆಂದು ಹೇಳಿದ್ದಾನೆ.[೫೦] ಅವನು ಮುಂದುವರೆದು, ಅಮರನಾಯಕರು ಕಾಪಾಡಿಕೊಂಡಿರಬೇಕಿದ್ದ ಸೈನ್ಯ ಹಾಗೂ ಅವರು ನೀಡುತ್ತಿದ್ದ ಭೂಕಂದಾಯವನ್ನು ವಿವರವಾಗಿ ಹೇಳಿದ್ದಾನೆ. ಅಂತೆಯೇ ಈ ಅಮರನಾಯಕರು ರೈತರಿಂದ ಹೇಗೆ ವಸೂಲಿ ಮಾಡುತ್ತಿದ್ದರೆನ್ನುವ ಅಂಶವನ್ನು ನ್ಯೂನಿಜ್ ಹೇಳುತ್ತಾ: ಸೈನ್ಯವನ್ನು ಇಟ್ಟುಕೊಂಡು ಸಲಹುವ

ಜವಾಬ್ದಾರಿ ಶ್ರೀಮಂತ ಸರದಾರರುಗಳದು. ಈ ಕಾರಣಗಳಿಂದ ಸಾಮಾನ್ಯ ಜನರು ಬಹಳ ಕಷ್ಟಕ್ಕೀಡಾಗುತ್ತಾರೆ. ಯಾವ ಮುಲಾಜೂ ಇಲ್ಲದೆ, ಭೂಮಿಯ ಒಡೆಯರು ರೈತರಿಂದ ತೆರಿಗೆಯನ್ನು ವಸೂಲಿ ಮಾಡುತ್ತಾರೆ. ಇದು ಅಂದಿನ ತೆರಿಗೆ ವಸೂಲಿಯ ನೈಜ ಕ್ರಮವಾಗಿದೆ. ವಿಜಯನಗರ ಅರಸರು ತಮ್ಮ ಸಾಮ್ರಾಜ್ಯ ಅವಧಿಯುದ್ದಕ್ಕೂ ಯುದ್ಧಗಳಲ್ಲೇ ಕಾಲ ಕಳೆದರು. ಅವರು ಸೈನ್ಯದ ನಿರ್ವಹಣೆ ಮತ್ತು ಯುದ್ಧಗಳಿಗೆ ಹೆಚ್ಚು ಗಮನ ನೀಡಿದ್ದರೇ ಹೊರತು, ಜನಸಾಮಾನ್ಯರ ಸ್ಥಿತಿ-ಗತಿಗಳ ಕುರಿತು ಹೆಚ್ಚು ಗಮನ ನೀಡಲಿಲ್ಲ. ವಿಜಯನಗರ ಅವಧಿಯ ಹತ್ತಾರು ಶಾಸನಗಳು ಅಂದು ಹಾಕಿದ ತೆರಿಗೆಗಳನ್ನು ಕೊಡಲಾಗದೆ, ಜನರು ರಾಜ್ಯವನ್ನೇ ಬಿಟ್ಟು ಹೋದ ಪ್ರಸಂಗಗಳನ್ನು ಸಾರುತ್ತವೆ.[೫೧] ಕೌತಾಳಂ ಶಾಸನವು, ಅರಸನು ರೈತರಿಂದ ವಿಪರೀತವಾಗಿ ತೆರಿಗೆ ವಸೂಲಿಮಾಡಿದ್ದರಿಂದ ಅವರು ಒಟ್ಟಾಗಿ ತುಂಗಭದ್ರಾನದಿ ದಾಟಿ ವಲಸೆ ಹೋದರೆಂದು ಹೇಳಿದೆ. ಹಾಗೆಯೇ ಕೃಷ್ಣದೇವರಾಯನ ಕಾಲದ ೧೫೨೪ರ ಶಾಸನದಲ್ಲಿ ಮಲೆಯಬೆನ್ನೂರು ಗ್ರಾಮದ ಜನರು ತೆರಿಗೆ ಅಧಿಕವಾಗಿದ್ದುದರಿಂದ ಅದನ್ನು ನೀಡಲಾಗದೆ, ಬೇರೆ ಕಡೆಗೆ ವಲಸೆ ಹೋದರು ಎಂದಿದೆ.[೫೨] ವಿಜಯನಗರ ಅವಧಿಯಲ್ಲಿ ರಾಜರು, ಅಮರನಾಯಕರು, ಸಾಮಂತರು ಸೈನ್ಯದ ವೆಚ್ಚವನ್ನು ಭರಿಸುವ ಸಲುವಾಗಿ ಹಾಕುತ್ತಿದ್ದ ದುಬಾರಿ ತೆರಿಗೆಗಳಿಂದ ಅನೇಕ ಗ್ರಾಮಗಳ ಜನರು ಗ್ರಾಮಗಳನ್ನು ಬಿಟ್ಟು ಹೋಗಿರುವರು. ಈ ಬಗೆಯ ತೆರಿಗೆಗಳಿದ್ದುದನ್ನು ತಿಳಿದ ಮಾಧವಾಚಾರ್ಯರು ತಮ್ಮ 'ಪರಾಶರ ಮಾಧವೀಯಂ' ಕೃತಿಯಲ್ಲಿ ಹೀಗೆ ಹೇಳಿದ್ದಾರೆ: "ಹೂದೋಟದಲ್ಲಿದ್ದ ಮಾಲೆಗಾರನು ಗಿಡದಿಂದ ಹೂವುಗಳನ್ನು ಮತ್ತೆ ಮತ್ತೆ ಬಿಡಿಸಿಕೊಳ್ಳುತ್ತಾನೆಯೇ ಹೊರತು, ಆ ಗಿಡವನ್ನೇ ಕಡಿದು ತರುವುದಿಲ್ಲ. ಅದೇ ರೀತಿ ರಾಜನು ವಾಸ್ತವವಾಗಿ ಪ್ರಜೆಗಳಿಂದ ಆರನೇ ಒಂದು ಭಾಗ(೧/೬)ವನ್ನು ತೆಗೆದುಕೊಳ್ಳಬೇಕೇ ಹೊರತು, ಇದ್ದಿಲು ಮಾರುವವನ ಹಾಗೆ ಮರವನ್ನು ಕಡಿದು ಇದ್ದಿಲು ಮಾಡುವಂತೆ, ಪ್ರಜೆಗಳನ್ನು ನಾಶಮಾಡಬಾರದು"[೫೩] ಎನ್ನುವ ಮಾತು ಸಾಮಾಜಿಕ ಕಳಕಳಿಯನ್ನು ಪ್ರತಿಬಿಂಬಿಸುವಂಥದು.

ವಿಜಯನಗರ ಕಾಲದಲ್ಲಿ ಜನರಿಂದ ಭೂಕಂದಾಯವಲ್ಲದೆ, ಸೈನಿಕ ನಿರ್ವಹಣೆಗೆಂದೇ ವೀರಸೇಸೆ, ಆನೆ ಸೇಸೆ[೫೪], ಕುದುರೆ ಸೇಸೆ[೫೫], ಸೇನಾಯ, ಕೋಟೆಯ ಹಡಿಕೆ[೫೬], ಕೊಟ್ಟೈಪಣಂ[೫೭], ಬಂಟವಣ, ಕಟಕಸೇಸೆ[೫೮], ದಂಡಿನ ಹೊದಿಕೆ, ದಂಡಿನ ಅಭ್ಯಾಗತೆ[೫೯] ಇನ್ನು ಮುಂತಾದ ಸೈನಿಕ ತೆರಿಗೆಗಳನ್ನು ವಸೂಲಿ ಮಾಡಲಾಗುತ್ತಿತ್ತು. ಇವುಗಳಲ್ಲದೆ ಮನೆಗಂದಾಯ, ಮದುವೆ ತೆರಿಗೆ, ಹೇರೆತ್ತಿನ ತೆರಿಗೆ, ಅಂಗಡಿಗಳ ಮೇಲಿನ ತೆರಿಗೆ, ಗೋಮಾಳಗಳ ತೆರಿಗೆ ಹೀಗೆ ಅನೇಕ ತೆರಿಗೆಗಳ ಮೂಲಕ ಜನರಿಂದ ಸುಲಿಯುತ್ತಿದ್ದುದು ಶಾಸನ-ಸಾಹಿತ್ಯಗಳಿಂದ ತಿಳಿದುಬರುವ ಸಂಗತಿ. ಈ ಬಗೆಯ ತೆರಿಗೆಗಳಿಂದ ಜನರು ಸಂಕಷ್ಟಕ್ಕೆ ಒಳಗಾಗುತ್ತಿದ್ದರು. ಇದಕ್ಕೆ ಅಂದು ಕೈಗೊಂಡ ಯುದ್ಧಗಳು ಹಾಗೂ ಈ ಯುದ್ಧಗಳಿಗೆ ಬೇಕಾದ ಸೈನ್ಯ ಮತ್ತು ಪರಿಕರಗಳು ಕಾರಣವಾಗಿವೆ. ಅರಸರು ರಾಜ್ಯ ರಕ್ಷಣೆಗೆ ಹೆಚ್ಚು ಮಹತ್ವ ಕೊಟ್ಟರೇ ವಿನಹ ಸಮಾಜದ ಅಭಿವೃದ್ಧಿಯತ್ತ ಗಮನ ನೀಡಿದ್ದರೂ, ಹೆಚ್ಚಿನ ಒತ್ತು ನೀಡದಿರುವುದು ಜನಸಾಮಾನ್ಯರಲ್ಲಿ ಜನಪ್ರಿಯತೆಯನ್ನು ಕಳೆದುಕೊಳ್ಳಲು ಕಾರಣವಾಗಿರಬೇಕು.

೪.೭ ಸೈನಿಕರ ತರಬೇತಿ

ವಿಜಯನಗರ ಸೇನೆಯ ಕೇಂದ್ರ ಮತ್ತು ಪ್ರಾಂತೀಯ ಆಡಳಿತಗಳ ಅಧೀನದಲ್ಲಿ ಇದ್ದುದರಿಂದ ತರಬೇತಿಯನ್ನು ಕೂಡ ಆಯಾಯ ಆಡಳಿತವೇ ನೀಡುತ್ತಿತ್ತು. ಕೇಂದ್ರ ಸೇನೆಗೆ ಮಹಾದಂಡನಾಯಕರು, ದಂಡನಾಯಕರು, ದಳಪತಿಗಳು ಸೇನೆಯ ತರಬೇತುದಾರರಾದರೆ, ಪ್ರಾಂತೀಯ ಸೈನ್ಯದಲ್ಲಿ ಅಮರನಾಯಕರು ಮತ್ತು ಅವರ ಅಧಿಕಾರಿಗಳು ತರಬೇತಿ ನೀಡುತ್ತಿದ್ದರು.

ಡೊಮಿಂಗೋ ಪಾಯೇಸ್ ಸ್ವತಃ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಭೇಟಿ ನೀಡಿದ್ದು ರಾಯನ ನಡಾವಳಿಗಳನ್ನು ಅರಿತವನಾಗಿದ್ದನು. ಅವನು ಕೃಷ್ಣದೇವರಾಯನ ನಿತ್ಯ ನೈಮಿತ್ತಿಕ ಚಟುವಟಿಕೆಗಳನ್ನು ಕುರಿತು ಹೀಗೆ ಹೇಳುತ್ತಾನೆ: ''ರಾಜನು ನಿತ್ಯವೂ ಬೆಳಕು ಹರಿಯುವ ಮುನ್ನ ಒಂದಿಷ್ಟು ಎಳ್ಳೆಣ್ಣೆಯನ್ನು ಕುಡಿದು ಮೈಗೂ ತಿಕ್ಕಿಸಿಕೊಳ್ಳುತ್ತಾನೆ. ಬಟ್ಟೆಬರೆಗಳನ್ನು ತೆಗೆದು, ಬರೀ ಚಡ್ಡಿ ಹಾಕಿಕೊಂಡು, ಬಹಳ ತೂಕದ ಮಣ್ಣಿನ ಗುಂಡುಗಳನ್ನು ಕೈಯಲ್ಲಿ ಎತ್ತಿ ಆಡಿಸುವ ಕಸರತ್ತು ಮಡುತ್ತಾನೆ. ಮತ್ತು ತನ್ನ ಪೈಲ್ವಾನರಲ್ಲೊಬ್ಬನೊಂದಿಗೆ ಕುಸ್ತಿ ಆಡುತ್ತಾನೆ. ನಂತರ ಮೈದಾನದಲ್ಲಿ ಬೆಳಕು ಹರಿಯುವವರೆಗೂ ಕುದುರೆ ಸವಾರಿ ಮಾಡುತ್ತಾನೆ''.[೬೦]

ಇದು ರಾಜಮೊದಲು ಯೋಧ ಎನ್ನುವ ಮಾತಿಗೆ ಸಮರ್ಥನೀಯವಾಗಿದೆ. ರಾಜನಂತೆಯೇ ಕೃಷ್ಣದೇವರಾಯನ ಸೈನ್ಯವೂ ತರಬೇತಿ ಹೊಂದಿದ್ದುದರಲ್ಲಿ ಸಂಶಯವಿಲ್ಲ. ಅವನ ಅವಧಿಪೂರ್ಣ ಕೈಗೊಂಡ ದಂಡಯಾತ್ರೆಗಳ ಯಶಸ್ಸಿಗೆ ಉತ್ತಮ ತರಬೇತಿಯನ್ನು ಪಡೆದ, ನುರಿತ ಸೈನ್ಯವು ಕಾರಣವಾಗಿದ್ದಿತು. ವಿಜಯದಶಮಿಯ ಹಬ್ಬದ ಸಮಯದಲ್ಲಿ ಸೈನ್ಯದ ವೀಕ್ಷಣೆ ರಾಜನಿಂದ ನಡೆಯುತ್ತಿತ್ತು. ಈ ಸಮಯದಲ್ಲಿ ''ಸೇನಾಪತಿಗಳು ತಮ್ಮ ತಮ್ಮ ದಳದೊಳಗೂಡಿ ದಾರಿ ಉದ್ದಕ್ಕೂ ಶಿಸ್ತಿನಿಂದ ನಿಂತುಕೊಳ್ಳುತ್ತಾರೆ'' ಎಂದು ಪಾಯೇಸ್ ಹೇಳಿದ್ದಾನೆ. ಅವನು ಮುಂದುವರಿದು, ''ಕಾಲ್ದಳ ಅಶ್ವದಳದ ಮುಂದೆಯೂ, ಅಶ್ವದಳ ಗಜದಳದ ಮುಂದೆಯೂ ನಿಂತುಕೊಳ್ಳುತ್ತದೆ..... ರಾಜನು ಹಿಂದಿರುಗುವವರೆಗೂ ಸೈನ್ಯವೆಲ್ಲ ಅಲುಗಾಡದೆ ನಿಂತಲ್ಲಿ ನಿಲ್ಲುತ್ತಿತ್ತು. ಯಾವ ಆಲಸ್ಯವನ್ನು ತೋರಿಸದೆ ಘೋಷಣೆ ಮಾಡುತ್ತಿತ್ತು.[೬೧] ಇದು ಕೃಷ್ಣದೇವರಾಯನು ಸೈನ್ಯದಲ್ಲಿ ಅಳವಡಿಸಿದ ಶಿಸ್ತು-ಕ್ರಮಗಳನ್ನು ಅಭಿವ್ಯಕ್ತಿಸುತ್ತದೆ. ಇವನ ಅವಧಿಯಲ್ಲಿ ಕಾದಾಟಕ್ಕೆ ಸಿದ್ಧವಾದ ಅಂದರೆ ತರಬೇತಿ ಹೊಂದಿದ ದಶಲಕ್ಷ ಸೈನ್ಯವಿತ್ತು ಮತ್ತು ಮೂವತ್ತೈದು ಸಾವಿರ ಶಸ್ತ್ರಸಜ್ಜಿತ ಅಶ್ವದಳವೂ ಸೇರಿದ್ದಿತೆನ್ನುವ ಪಾಯೇಸನ ಹೇಳಿಕೆಯಿಂದ ಅಂದಿನ ಸೈನ್ಯದಲ್ಲಿದ್ದ ಶಿಸ್ತನ್ನು ಕಾಣಬಹುದು.

ವಿಜಯನಗರ ಸಮಕಾಲೀನ ಕಾವ್ಯಗಳೆಂದೇ ಕರೆಯಲಾಗುವ ರಾಮನಾಥ ಚರಿತ ಮತ್ತು ಚೆನ್ನಬಸವಪುರಾಣಗಳು ಕಾಲ್ದಳ ಮತ್ತು ಅಶ್ವದಳಗಳ ತರಬೇತಿಯನ್ನು ಕುರಿತು ವರ್ಣಿಸಿವೆ. ಸೈನಿಕರ ತರಬೇತಿ ಮತ್ತು ಅದಕ್ಕೆಂದೇ

ಪ್ರತ್ಯೇಕವಾಗಿದ್ದ ಬಯಲುಗಳನ್ನು ಕುರಿತು ರಾಮನಾಥ ಚರಿತವು.

ಬಿಲ್ಲಾಳು ಗುರಿಗಳನೆಸೆಯುವ ಬಯಲು ಬಲು
ಮಲ್ಲರು ಹೆಣಗುವ ಬಯಲು
ಪಲ್ಲಮರಿಯ ಸಾಧನೆಯ ಬಯಲು ಕ
ಣ್ಗಲ್ಲಲ್ಲಿ ಕರಮೆಸೆದಿಹುದು[೬೨] ಎಂದಿದೆ.

ಇಂತಹ ಬಯಲುಗಳಲ್ಲದೆ ಯೋಧರ ತರಬೇತಿಗೆಂದೇ ಗರಡಿ ಮನೆಗಳು ಇರುತ್ತಿದ್ದವು. ಶ್ರೀ ಕೃಷ್ಣದೇವರಾಯನ ದಿನಚರಿಯಲ್ಲೂ, ''ಸೀಮೆಯಪ್ಪಂಥ ಜಟ್ಟಿಗಳು ಮಾಡುವ ಸಾಮಿನ ಗರಿಡಿಗಳ ನೋಡಿ ಯಿರುವೆವು'' ಎಂದು ಹೇಳಿದೆ. ರಾಮನಾಥ ಚರಿತದಲ್ಲಿ ಗರಡಿಮನೆಗಳು ಮತ್ತು ತರಬೇತಿ ನೀಡುವ ಕ್ರಮ ಕುರಿತು,

ಪುರದ ಬಹಿರ್ವಳೆಯ ದೊಳೆಣ್ಣೆಸೆಯೊಳು
ಗರುಡಿಗಳಿಹವದರೊಳಗೆ
ಬಿರಿದಿನ ಬಂಟರ್ಗೆ ಬಿಡದೆ ಪಾಡುಗಳನು
ಬರಿಸುವಭ್ಯಾಸಿಗಳಿಹರು[೬೩] ಎನ್ನಲಾಗಿದೆ.

ಇದರಿಂದ ಯೋಧರಿಗೆ ತರಬೇತಿ ಕೊಡಲೆಂದೇ ಕೆಲವು ನುರಿತ ಶಿಕ್ಷಕರಿದ್ದುದು ತಿಳಿದುಬರುತ್ತದೆ. ಇವು ಕಾಲ್ದಳದ ಯೋಧರ ತರಬೇತಿಯಾದರೆ, ಅಶ್ವಗಳ ತರಬೇತಿಯ ವೈಖರಿ ಮತ್ತೊಂದು ಬಗೆಯದು:

...... ರವಿ ತುರಗಗಳ
ಅವಯವಗುಣದಿನಲ್ಲೆನಿಪಶ್ವಗಳಲ್ಲಿ
ತವೆ ತಿದ್ದುತಿಹರು ವಾಹಕರು
ಹೊಳೆ ಹೊಮ್ಮುವ ನಿಲ್ವ ಸೀಳ್ವೇಳ್ವ ಸುತುವ
ಬೀಳುವ ಝಾಡಿಸುವಶ್ವಗಳನು
ತಳುವದೆ ಕೋಲುನೇಣಿಂ ತಿದ್ದುತಿಹರಲ್ಲಿ
ಬಳಿಸಂದು ಬಲುಸಾಣೆಗಳು[೬೪] ಎಂದು ನಂಜುಂಡ ಕವಿಯು ಹೇಳಿದರೆ ವಿರೂಪಾಕ್ಷ ಪಂಡಿತನು,
ಉತ್ತಮಾಶ್ವಗಳಂ ತಿರ್ದುವ ನ
ವೀನ ಕುಶಲದ ಸಹಣೆಗಳು[೬೫]

ಎಂದಿರುವುದು ಅಶ್ವಗಳನ್ನು ಯುದ್ಧಕ್ಕೆ ಪಳಗಿಸುತ್ತಿದ್ದ ಬಗೆ ಹಾಗೂ ಅಶ್ವಗಳನ್ನು ತರಬೇತಿಗೊಳಿಸಲೆಂದೇ ಅಶ್ವಸಾಹಣಿಗಳನ್ನು ನೇಮಿಸುತ್ತಿದ್ದುದು ಕಾಣಬರುತ್ತದೆ. ಹೀಗೆ ವಿಜಯನಗರ ಕಾಲದಲ್ಲಿ ರಾಜನನ್ನು ಒಳಗೊಂಡು ಸೇನೆಯ ಎಲ್ಲ ಪಡೆಗಳು ತರಬೇತಿಯಿಂದ ಸಜ್ಜುಗೊಳ್ಳುತ್ತಿದ್ದುದು ಸಾಮಾನ್ಯ ಸಂಗತಿ. ಆದರೆ ಎಲ್ಲಾ ಅರಸರ ಕಾಲದಲ್ಲೂ ನುರಿತ ಸೇನೆಯಿದ್ದಿತೆಂದು ಹೇಳಲಾಗುವುದಿಲ್ಲ. ಅಲ್ಲದೆ ಎಲ್ಲ ಸೈನಿಕರಿಗೂ ತರಬೇತಿ ನೀಡುತ್ತಿದ್ದರೆಂಬುದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ವಿಜಯನಗರ ಅವಧಿಯಲ್ಲಿದ್ದ ಅಪಾರ ಸೇನೆಯನ್ನು ಒಂದುಗೂಡಿಸುವ, ಮುನ್ನಡೆಸುವ, ಸಂಘಟಿಸುವ ತರಬೇತಿ ನೀಡುವ ಕಾರ್ಯ ಸುಲಭ ಸಾಧ್ಯವಾದುದಾಗಿರಲಿಲ್ಲ.

೪.೮ ರಾಯಭಾರತ್ವ

ರಾಜ್ಯಾಡಳಿತದ ಅಂಗಗಳಲ್ಲಿ ರಾಯಭಾರತ್ವವೂ ಒಂದು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ರಾಯಭಾರತ್ವವನ್ನು 'ನಯ'(diplomacy) ಎಂದು ಕರೆದಿರುವನು. ಅವನು ಹೇಳುವಂತೆ "ನಯಜ್ಞಃ ಪೃಥಿವೀಂ ಜಯತಿ"ಎಂದರೆ 'ನಯ'ವನ್ನು ಅರಿತವನು ಲೋಕವನ್ನು ಜಯಿಸುತ್ತಾನೆ ಎಂಬುದಾಗಿದೆ.[೬೬] ನಯವು ರಾಯಭಾರತ್ವದ ರಾಜಕೀಯ ಪರಿಭಾಷೆಯೂ ಆಗಿದೆ. 'ನಯ'ದ ಅಧಿಕಾರಿಯನ್ನೇ ನಂತರದ ಕಾಲಗಳಲ್ಲಿ ಸಂಧಿವಿಗ್ರಹಿ, ಧೂತ, ಗೂಢಚಾರ, ರಾಯಭಾರಿ ಮುಂತಾಗಿ ಕರೆಯಲಾಗಿದೆ. ಅರಸನ ಮಂತ್ರಿ ಮಂಡಲದಲ್ಲಿ ಈ ಸಂಧಿ ವಿಗ್ರಹಿ ಅಥವಾ ರಾಯಭಾರಿಯು ಒಬ್ಬ ಪ್ರಮುಖ ಅಧಿಕಾರಿಯಾಗಿದ್ದನು. ಅರಸ ತನ್ನ ಆಡಳಿತದ ಉದ್ದೇಶಗಳು ಸಫಲಗೊಳ್ಳಲು ಉಪಯೋಗಿಸುವ ತಂತ್ರಗಳಲ್ಲಿ ಚತುರೋಪಾಯಗಳು ಮುಖ್ಯವಾಗಿವೆ. ಅವುಗಳೆಂದರೆ ಸಾಮ, ದಾನ, ಭೇದ ಮತ್ತು ದಂಡಗಳು. ಇವುಗಳಲ್ಲಿ ಮೊದಲಿಗೆ ಮೂರು ಉಪಾಯಗಳು ರಾಯಭಾರತ್ವಕ್ಕೆ ಸಂಬಂಧಿಸಿವೆ. ಅರಸ ಹೊರ ರಾಜ್ಯಗಳೊಂದಿಗೆ ಸಂಬಂಧಗಳನ್ನು ಕುದುರಿಸಲು, ಶತ್ರುವಿನೊಂದಿಗೆ ಶಾಂತಿ, ಸಂಧಾನ ಮತ್ತು ಯುದ್ಧಗಳನ್ನು ಕೈಗೊಳ್ಳುವಲ್ಲಿ ರಾಯಭಾರಿಯ ಪಾತ್ರ ಅತ್ಯಂತ ಮಹತ್ವದ್ದು. ರಾಯಭಾರತ್ವವು ರಾಜ್ಯಾಡಳಿತದ ಪ್ರಮುಖ ಅಸ್ತ್ರವೂ ಹೌದು. ಯಾವುದೇ ರಾಜ್ಯದೊಂದಿಗೆ ಯುದ್ಧ ಮಾಡುವ ಇಲ್ಲವೆ ತಡೆಯುವ ಶಕ್ತಿ ರಾಯಭಾರತ್ವಕ್ಕಿದೆ. ಕೆಲವೊಮ್ಮೆ ಈ ಅಧಿಕಾರವನ್ನು ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಂಡು ಯುದ್ಧಕ್ಕೆ ನಾಂದಿ ಹಾಡಿದ ಉದಾಹರಣೆಗಳೂ ಇವೆ.

ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವ, ಶಾಂತಿ-ಸಂಧಾನ ನಡೆಸಿ ಯುದ್ಧಗಳನ್ನು ನಿಯಂತ್ರಿಸುವ ಸಾಮರ್ಥ್ಯ ರಾಯಭಾರಿಗಿದೆ. ಈ ಪದವಿಗೆ ವಿಶೇಷ ಗೌರವವನ್ನು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲೂ ನೀಡಲಾಗುತ್ತಿತ್ತು. ಆದುದರಿಂದ ಈ ಹುದ್ದೆಗೆ ನೇಮಕವಾಗುವ ವ್ಯಕ್ತಿಗಳು ಕೆಲವು ಮುಖ್ಯ ಅರ್ಹತೆಗಳನ್ನು ಹೊಂದಿರಬೇಕಾಗಿತ್ತು. ರಾಯಭಾರಿಯು ಬಹು ಮೇಧಾವಿ, ವಿದ್ವಾಂಸ, ಚತುರನೂ ಆಗಿರಬೇಕು. ಅಲ್ಲದೆ ತನಗೆ ಒಪ್ಪಿಸಿದ ಕಾರ್ಯಗಳನ್ನು ಪರಿಪೂರ್ಣವಾಗಿ ಮುಗಿಸಲು ಪ್ರಾಣದ ಹಂಗನ್ನು ತೊರೆಯಲು ಸಿದ್ಧನಾಗಿರಬೇಕಿತ್ತು. ಇವೆಲ್ಲದರ ಹೊರತಾಗಿ ಅಗತ್ಯವಾದರೆ ಹಿಂಸೆ, ಹತ್ಯೆಗಳಂತಹ ಕಾರ್ಯಗಳಿಗೂ ಮುಂದಾಗಬೇಕಿದ್ದು, ಸದಾಕಾಲ ಅವನು ಜಾಗರೂಕನಾಗಿ ಇರಬೇಕಾಗಿದ್ದಿತು. ರಾಯಭಾರಿಯ ಅರ್ಹತೆಗಳನ್ನು ಕುರಿತು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಸೂಕ್ತಿ ಸುಧಾರ್ಣವಂನಲ್ಲಿ ಈ ಬಗೆಗೆ :

> ಚದುರಂ ಭಾವುಕನ್ ಇಂಗಿತಜ್ಞನ್ ಅರಿವುಳ್ಳಂ ದೇಶಭಾಷಾನ್ವಿತಂ
> ಪದವಾಕ್ಯಾರ್ಥವಿವಕ್ಷಿತಂ ಬಹುಕಳಾ ಸಂಪನ್ನನ್ ಆಸ್ಥಾನ ಸಮ್ಮದ
> ವಾಗ್ವೇತ್ತನ್ ಎಂದಿದೆ.[೬೭]

ಅಂದರೆ ಅನೇಕ ದೇಶ, ಭಾಷೆ, ಲಿಪಿಗಳನ್ನು ಬಲ್ಲವನಾಗಿರಬೇಕು. ಅಲ್ಲದೆ ಯೋಗ್ಯನೂ, ಸ್ಪಷ್ಟವಾಗಿ ಓದುವ ಮತ್ತು ಬರೆಯುವವನೂ ಆಗಿರಬೇಕು ಎಂಬುದಾಗಿದೆ. ಶಾಸನವೊಂದರಲ್ಲಿ ರಾಯಭಾರಿಯ ಅರ್ಹತೆಯನ್ನು ಕುರಿತು, ''ಶಸ್ತ್ರಶಾಸ್ತ್ರಸಾಹಿತ್ಯಕಳಾ ಜ್ಞಾನನಿಧಿ''[೬೮] ಎಂದಿದೆ. ಶಸ್ತ್ರವಿದ್ಯೆಯಲ್ಲಿ ನಿಪುಣನೂ, ಶಾಸ್ತ್ರಗಳಲ್ಲಿ ಪರಿಣತನೂ, ಸಾಹಿತ್ಯದಲ್ಲಿ ವಾಗ್ಮಿಯೂ, ವಿದ್ವಾಂಸನೂ ಆಗಿಬೇಕೆಂಬುದು ಈ ವಾಕ್ಯದ ತಾತ್ಪರ್ಯ. ರಾಯಭಾರಿಗೆ ತಿಳಿದಿರಬೇಕಾದ ವಿಷಯಗಳು: ಶತ್ರುರಾಜ್ಯದ ಎಲ್ಲೆ, ಕೋಟೆ-ಕೊತ್ತಲ; ಕಾಲ್ದಳ, ಅಶ್ವದಳ, ಗಜದಳ, ಫಿರಂಗಿ ದಳಗಳು; ಸೈನ್ಯದ ಗಣತಿ, ರಾಜರ ವಸತಿ ನೆಲೆ, ಆಹಾರ ವಿತರಣೆ, ರಾಜ್ಯದ ಆದಾಯ, ಧಾರ್ಮಿಕ ಒಡಂಬಡಿಕೆಗಳು; ರಾಜ್ಯದ ಲೆಕ್ಕಪತ್ರ, ಕಂದಾಯಗಳು; ಶತ್ರುಗಳಿಗೆ ಇರುವ ವೈರಿಗಳು. ಹೀಗೆ ಎಲ್ಲ ಬಗೆಯ ವಿವರಗಳ ಅರಿವು ರಾಯಭಾರಿ ಹೊಂದುವುದು ಅವಶ್ಯವಾಗಿದ್ದಿತು. ಇವುಗಳಲ್ಲದೆ ಶುದ್ಧ ನಡತೆ, ಪರಸ್ಪರ ಸಹಕಾರ ಹಾಗೂ ಧೈರ್ಯ-ಸ್ಥೈರ್ಯಗಳನ್ನು ಹೊಂದಿರಬೇಕೆಂಬುದು ಪ್ರಾಚೀನ ಗ್ರಂಥಗಳಿಂದಲೂ ತಿಳಿದುಬರುವ ಅಂಶ. ಒಟ್ಟಿನಲ್ಲಿ ರಾಯಭಾರಿಗಳು ಪಂಡಿತರು, ಜ್ಞಾನಿಗಳು, ಚತುರರೂ ಹಾಗೂ ವಿವೇಚನಾಶಕ್ತಿ ಉಳ್ಳವರೂ ಆಗಿರ ಬೇಕು.

ರಾಯಭಾರತ್ವಕ್ಕೆ ಸಂಬಂಧಿಸಿದ ಮತ್ತೊಂದು ಶಾಖೆಯೆಂದರೆ ಗೂಢಚಾರರದು. ಗೂಢಚಾರರು ಪ್ರಾಚೀನ ಕಾಲದಿಂದಲೂ ರಾಜ್ಯಾಡಳಿತದಲ್ಲಿ ರಾಯಭಾರಿಗಳಂತೆಯೇ ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಇವರು ರಾಯಭಾರಿ ಹುದ್ದೆಗೆ ಬೇಕಾದ ಅರ್ಹತೆಗಳನ್ನು ಹೊಂದಿರುತ್ತಿದ್ದರು. ಇವರನ್ನು 'ಅರಸನ ಚಲಿಸುವ ಕಣ್ಣುಗಳಿದ್ದಂತೆ'ಎಂದು ಬಣ್ಣಿಸಲಾಗಿದೆ. ಇವರು ರಾಜ್ಯದ ಒಳ ಹಾಗೂ ಹೊರಗೆ ನಡೆಯುವ ಎಲ್ಲ ಬಗೆಯ ವ್ಯವಹಾರ, ವಿದ್ಯಮಾನಗಳು; ಚಲವಲನಗಳನ್ನು ತಿಳಿದು ಗುಪ್ತವಾಗಿ ರಾಜನಿಗೆ ತಲುಪಿಸುವವರಾಗಿದ್ದರು. ಸಮಯ-ಸಂದರ್ಭಗಳಿಗೆ ಅನುಸಾರವಾಗಿ ಎಲ್ಲ ರೀತಿಯ ತಂತ್ರಗಳನ್ನು ಬಳಸಿ, ಉಡುಪುಗಳನ್ನು ಧರಿಸಿ ವಿಷಯಗಳನ್ನು ಸಂಗ್ರಹಿಸುವುದು ಇವರ ಕರ್ತವ್ಯವಾಗಿದ್ದಿತು.

ಪ್ರಾಚೀನ ಕಾಲದಂತೆ ವಿಜಯನಗರ ಕಾಲದಲ್ಲಿ ರಾಯಭಾರತ್ವಕ್ಕೆ ವಿಶೇಷ ಮನ್ನಣೆ ನೀಡಲಾಗಿತ್ತು. ವಿಜಯನಗರ ಅರಸರು ಆರಂಭ ಕಾಲದಿಂದ ಸಾಮ್ರಾಜ್ಯದ ಅವನತಿಯವರೆಗೂ ವಿವಿಧ ರಾಜ್ಯಗಳೊಂದಿಗೆ ಸಂಬಂಧಗಳನ್ನು ಇಟ್ಟುಕೊಂಡಿದ್ದರು. ಈ ಸಂಬಂಧಗಳಿಗೆ ಸೇತುವೆಯಾಗಿ ಕಾರ್ಯನಿರ್ವಹಿಸಲು ರಾಯಭಾರಿಗಳನ್ನು ನೇಮಿಸಿದ್ದುದು ವಿವಿಧ ಆಕರಗಳಿಂದ ತಿಳಿದುಬರುತ್ತದೆ.

ರಾಮನಾಥ ಚರಿತದಲ್ಲಿ ನಂಜುಂಡ ಕವಿ ರಾಯರ ಆಸ್ಥಾನದಲ್ಲಿ ರಾಯಭಾರಿಗಳಿದ್ದುದನ್ನು ಅನೇಕ ಪದ್ಯಗಳಲ್ಲಿ ಹೇಳಿದ್ದಾನೆ. ಅವನು ಒಂದೆಡೆ ಹೇಳುವಂತೆ,

ದೆಸೆದೆಸೆಯವನಿಪರಟ್ಟಿದು ಪಾಯನ
ವಿಸರವ ನೃಪ ಮಂತ್ರಿಗಳಿಗೆ
ಒಸೆದೊಪ್ಪುವ ರಾಯಭಾರಿಗಳಿಂ ಬಾಗಿ
ಲೆಸೆದಿಹುದಾ ನರಪತಿಯ[೬೯]

ಇದು ರಾಯಭಾರಿಗಳ ಇರವನ್ನು ದೃಢಪಡಿಸುವುದಲ್ಲದೆ ಅವರ ಕಾರ್ಯವೈಖರಿಯನ್ನು ಬಿಂಬಿಸಿದೆ.

ವಿಜಯನಗರ ಅರಸರು ರಾಯಭಾರಿಗಳನ್ನು ಗೌರವದಿಂದ ಕಂಡು, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡಿದ್ದರು. ಈ ಕಾಲದಲ್ಲಿ ವಿಜಯನಗರವು ಹೊರರಾಜ್ಯ, ದೇಶಗಳಿಗೆ ತನ್ನ ಆಸ್ಥಾನದಿಂದ ರಾಯಭಾರಿಗಳನ್ನು ಕಳುಹಿಸುವ, ಅಂತೆಯೇ ಹೊರಗಿನಿಂದಲೂ ಅವರನ್ನು ಆಮಂತ್ರಿಸಿರುವುದು ಕಂಡುಬರುತ್ತದೆ. ವಿಜಯನಗರ ಆರಂಭದ ಅರಸರಲ್ಲೊಬ್ಬನಾದ ಒಂದನೇ ಬುಕ್ಕರಾಯ ಕ್ರಿ.ಶ.೧೩೭೪ರಲ್ಲಿ ತನ್ನ ರಾಯಭಾರ ತಂಡವನ್ನು ಚೀನಾ ದೇಶದ ಮಿಂಗ್ ದೊರೆ ತೈತ್ಸು(Taitsu)ವಿನ ಆಸ್ಥಾನಕ್ಕೆ ಕಳುಹಿಸಿದ್ದುದು ತಿಳಿದುಬರುತ್ತದೆ.[೭೦] ಇದರಿಂದ ವಿಜಯನಗರವು ಚೀನಾದೇಶದೊಂದಿಗೆ ಇಟ್ಟುಕೊಂಡಿದ್ದ ಸಂಬಂಧದ ಅರಿವಾಗುತ್ತದೆ. ಇದು ವಿಜಯನಗರದಿಂದ ಹೊರ ರಾಜ್ಯಗಳಿಗೆ ಹೋದ ವಿವರವಾದರೆ, ಹೊರದೇಶ-ರಾಜ್ಯಗಳಿಂದ ವಿಜಯನಗರಕ್ಕೆ ಅನೇಕ ರಾಯಭಾರಿ ತಂಡಗಳು ಭೇಟಿ ನೀಡಿದುದನ್ನೂ ಕಾಣಬಹುದು. ಪ್ರಸಿದ್ಧ ಪ್ರವಾಸಿಯಾದ ಅಬ್ದುಲ್ ರಜಾಕ್ ಪರ್ಶಿಯಾದ ಷಾರುಖ್‌ನ ರಾಯಭಾರಿಯಾಗಿ ಎರಡನೆಯ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು. ದೇವರಾಯ ಇವನನ್ನು ಬಹಳ ಗೌರವಯುತವಾಗಿ ಕಂಡುದನ್ನು ಸ್ವತಃ ರಜಾಕ್‌ನೇ ಹೇಳಿಕೊಂಡಿರುವನು.ಅವನು ಹೇಳುವಂತೆ, "ನಾನೂ ನನ್ನ ಪರಿವಾರವೂ ವಿಜಯನಗರವನ್ನು ಮುಟ್ಟಿದೆವು. ನಮ್ಮನ್ನು ಎದುರುಗೊಳ್ಳಲು ರಾಜನು ದೊಡ್ಡ ಪರಿವಾರವನ್ನೇ ಕಳುಹಿಸಿದ್ದನು. ಅಲ್ಲದೆ ಇಳಿದುಕೊಳ್ಳಲು ನಮಗೆ ಚೆಂದದ ಮನೆಯೊಂದನ್ನು ಏರ್ಪಡಿಸಿದ್ದನು.[೭೧] ಆಸ್ಥಾನಕ್ಕೆ ಭೇಟಿ ನೀಡಿದ ರಾಯಭಾರಿಗಳ ತಂಡವನ್ನು ದೇವರಾಯ ಕಂಡ ಬಗೆಯಿದು: "ರಾಜನ ಮುಂದೆ ನನ್ನನ್ನು ಕರದುಕೊಂಡು ಹೋಗಲು ನಾನು ತಲೆಬಗ್ಗಿಸಿ ಮೂರು ಸಲ ನಮಸ್ಕಾರ ಮಾಡಿದೆ. ರಾಜನು ನನ್ನನ್ನು ಪ್ರೀತಿಯಿಂದ ಸ್ವಾಗತಿಸಿ ತನಗೆ ಬಹು ಸಮೀಪದಲ್ಲಿದ್ದ ಪೀಠದಲ್ಲಿ ಕುಳಿತುಕೊಳ್ಳುವಂತೆ ಅಪ್ಪಣೆ ನೀಡಿದನು. ನಾನು ನನ್ನ ರಾಜನಿಂದ ತಂದ ಪತ್ರವನ್ನು ಅವನ ಕೈಗೆ ಕೊಟ್ಟಾಗ ರಾಜ ಅದನ್ನು ದುಭಾಷಿಗೆ ಕೊಟ್ಟು ದೊಡ್ಡ ರಾಜನೊಬ್ಬ ನಮ್ಮ ಬಳಿಗೆ ರಾಯಭಾರಿಯನ್ನು ಕಳುಹಿಸಿರುವುದು ನಮ್ಮ ಮನಸ್ಸಿಗೆ ನಿಜವಾಗಿಯೂ ಸಂತೋಷವಾಗಿದೆ"[೭೨] ಎಂದು ಅವರನ್ನು ಪ್ರೀತಿಯಿಂದ ಸ್ವಾಗತಿಸಿದುದನ್ನು ಕಾಣುತ್ತೇವೆ. ಕೃಷ್ಣದೇವರಾಯನು ಕೂಡ ರಾಯಭಾರಿಗಳನ್ನು ಗೌರವದಿಂದ ಕಂಡಿದ್ದನು. ಪೋರ್ಚುಗೀಸ್ ರಾಯಭಾರಿ ಕ್ರಿಸ್ತಾಂವ್-ದ-ಫಿಗ್ಯೆರೆಡೋ ಕೃಷ್ಣದೇವರಾಯನ ಆಸ್ಥಾನಕ್ಕೆ ೧೫೨೦ರಲ್ಲಿ ಭೇಟಿ ನೀಡಿದ್ದನು. ಇವನ ಜೊತೆಯಲ್ಲಿ ಪ್ರವಾಸಿ ಡೋಮಿಂಗೋ ಪಾಯೇಸ್ ಕೂಡ ಬಂದಿದ್ದನು. ಇವರನ್ನು ರಾಜ ಆಸ್ಥಾನಲ್ಲಿ ಕಂಡ ಬಗೆಯನ್ನು ಪಾಯೇಸ್, "ರಾಯನು ಫಿಗ್ಯೆರೆಡೋವನ್ನು ಬಹಳ ಗೌರವದಿಂದ ಸ್ವಾಗತಿಸಿದನು. ಅವನ ಜೊತೆಗೆ ಇದ್ದ ನಮ್ಮನ್ನು ರಾಜ ಆತ್ಮೀಯರಂತೆ

ಕಂಡನು''ಎಂದಿರುವನು.[೨೩] ರಾಯಭಾರಿಗಳನ್ನು ಗೌರವದಿಂದ ಕಾಣುವುದು ಪದ್ಧತಿಯಾಗಿತ್ತು. ಈ ಪದ್ಧತಿಯಲ್ಲಿ ರಾಯಭಾರಿಗಳು ತಾವು ತಂದ ಕಾಣಿಕೆಗಳನ್ನು ನೀಡಿ ಸತ್ಕರಿಸುವ ಹಾಗೂ ಅರಸರಿಂದ ತಾವು ಸತ್ಕಾರ ಪಡೆಯುತ್ತಿದ್ದುದನ್ನು ಪ್ರವಾಸಿಗರ ವರದಿಗಳಿಂದಲೂ ಅರಿಯಬಹುದು. ರಜಾಕ್ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದಾಗ ತನ್ನ ರಾಜನಿಂದ ತಂದ ಪತ್ರ ಮತ್ತು ಕಾಣಿಕೆಗಳನ್ನು ನೀಡಿದ್ದನು. ಅಂತೆಯೇ ಇದಕ್ಕೆ ಪ್ರತ್ಯುತ್ತರವಾಗಿ ದೇವರಾಯ ''ಹರಿವಾಣದಲ್ಲಿ ಎರಡು ಕಟ್ಟು ವೀಳೆಯದೆಲೆ, ಐದುನೂರು ಫನಂ ನಾಣ್ಯಗಳುಳ್ಳ ಚೀಲ ಮತ್ತು ಇಪ್ಪತ್ತು ಮಿತ್‌ಕಾಲ್ ತೂಕದಷ್ಟು ಕರ್ಪೂರವನ್ನಿಟ್ಟು ಸಾಮಾನ್ಯನಾದ ನನ್ನನ್ನು ಸತ್ಕರಿಸಿದನು''ಎಂದು ರಜಾಕ್ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ.[೨೪] ಈ ಪದ್ಧತಿಯನ್ನು ಕೃಷ್ಣದೇವರಾಯ ಕೂಡ ಮುಂದುವರಿಸಿಕೊಂಡು ಬಂದಿದ್ದನು. ಅಂದು ಭೇಟಿ ನೀಡಿ ಫಿಗ್ಯೆರೆಡೋಗೆ ''ರಾಜನು ನಮ್ಮ ನಾಯಕ(ಫಿಗ್ಯೆರೆಡೋ)ನಿಗೆ ಕಿಂಕಾಪಿನ ಅಂಗಿಯನ್ನು ತಾನು ಧರಿಸಿದ್ದಂತಹ ತಲೆಯುಡೆಯನ್ನೂ ಕೊಟ್ಟು ಸತ್ಕರಿಸಿ ಬೀಳ್ಕೊಟ್ಟನು. ಪ್ರತಿಯೊಬ್ಬ ಪೋರ್ಚುಗೀಸನಿಗೂ ಸುಂದರ ಚಿತ್ರಗಳಿದ್ದ ಮಗುಟಗಳನ್ನು ಕೊಟ್ಟನು''ಎನ್ನಲಾಗಿದೆ.[೨೫] ಈ ವಸ್ತುಗಳನ್ನು ಅರಸ ಏಕೆ ನೀಡಿದನೆಂದು ಹೇಳುತ್ತಾ ಪಾಯೇಸ್ ''ರಾಜನು ಹೀಗೆ ಮಾಡಿದ್ದು ಇಲ್ಲಿಯ ಪದ್ಧತಿಗನುಸಾರವಾಗಿಯಲ್ಲದೆ ಮೈತ್ರಿ ಹಾಗೂ ಪ್ರೀತಿಗೋಸ್ಕರವಾಗಿ''ಎಂದು ವಾಸ್ತವತೆಯನ್ನು ಬಿಂಬಿಸುತ್ತಾನೆ. ಈ ಮುನ್ನ ಫಿಗ್ಯೆರೆಡೋ ಕ್ಯಾಪ್ಟನ್ ಮೇಜರ್ ನಿಂದ ತಂದಿದ್ದ ಪತ್ರದ ಜೊತೆಗೆ ಕಾಣಿಕೆಗಳನ್ನು ಕೃಷ್ಣದೇವರಾಯನಿಗೆ ಅರ್ಪಿಸಿದ್ದನು. ಇದು ಎರಡು ಕಡೆಯ ರಾಜ್ಯಗಳು ಅನುಸರಿಸುವ ಸಾಮಾನ್ಯ ಪದ್ಧತಿಯಾಗಿದ್ದಿತು.

ರಾಯಭಾರಿಗಳನ್ನು ಸತ್ಕರಿಸುವುದರ ಜೊತೆಗೆ ಅವರಿಗೆ ಉತ್ತಮ ವಸತಿ ಹಾಗೂ ಊಟದ ಸೌಲಭ್ಯಗಳನ್ನು ಒದಗಿಸುತ್ತಿದ್ದುದು ಆಯಾಯ ಅರಸರ ಕರ್ತವ್ಯವೂ ಆಗಿದ್ದಿತು. ಪರ್ಶಿಯಾದ ರಾಯಭಾರಿ ರಜಾಕನಿಗೆ ಉಳಿದುಕೊಳ್ಳಲು ಚಂದದ ಮನೆಯನ್ನು ನೀಡಿದ್ದುದಲ್ಲದೆ ಅವನಿಗೆ ''ಗ್ರಾಸಕ್ಕಾಗಿ ಪ್ರತಿನಿತ್ಯ ಎರಡು ಕುರಿ, ನಾಲ್ಕು ಜೊತೆ ಕೋಳಿ, ಐದುಮಣ ಅಕ್ಕಿ, ಒಂದು ಮಣ ಬೆಣ್ಣೆ, ಒಂದು ಮಣ ಸಕ್ಕರೆ, ಎರಡು ಚಿನ್ನದ ವರಾಹಗಳನ್ನು ಕೊಡುತ್ತಿದ್ದರು''[೨೬] ಪೋರ್ಚುಗೀಸ್ ರಾಯಭಾರಿ ಫಿಗ್ಯೆರೆಡೋವಿಗೂ ಭತ್ಯಕ್ಕೆ ರಾಜನ ಅಪ್ಪಣೆಯಂತೆ ಕುರಿ, ಕೋಳಿ, ಬೆಣ್ಣೆ, ತುಪ್ಪ, ಜೇನುತುಪ್ಪ ಮತ್ತು ಇತರ ತಿಂಡಿ-ತಿನಿಸುಗಳನ್ನು ಸರಬರಾಜು ಮಾಡಲಾಗಿತ್ತು. ಅಲ್ಲದೆ ಇವರನ್ನು ದಳವಾಯಿಗಳು, ಶ್ರೀಮಂತರು ರಾಜನ ಪರವಾಗಿ ಆಗಾಗ ಬಂದು ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದುದನ್ನು ಕಾಣಬಹುದು.[೨೭]

ವಿಜಯನಗರದಲ್ಲಿ ಈ ಮೇಲಿನ ದೇಶಗಳ ರಾಯಭಾರರಲ್ಲದೆ ನೆರೆಯ ಬಹುಮನಿ ಹಾಗೂ ನಂತರದ ಷಾಹಿ ಸುಲ್ತಾನರ ರಾಯಭಾರಿಗಳು ಇದ್ದರು. ಬುಸಾತಿನೆ ಸಲಾತೀನದಲ್ಲಿ ಹೇಳುವಂತೆ, ''ಐದು ಬಾದಶಹರ ಐವರು ರಾಯಭಾರಿಗಳು ರಾಮರಾಜನ ಆಸ್ಥಾನದಲ್ಲಿ ಯಾವಾಗಲೂ ಇರುತ್ತಿದ್ದರು. ಮೊದಲು ರಾಮರಾಜನು

ಅವರೊಂದಿಗೆ ಸಖ್ಯವನ್ನಿಟ್ಟುಕೊಂಡಿದ್ದು ಗೌರವದಿಂದ ಕಾಣುತ್ತಿದ್ದನು. ಏಕಾಂತದಲ್ಲಿ ಮಾತನಾಡುತ್ತಿದ್ದನು. ಅವರೊಂದಿಗೆ ಸಂತೋಷದಿಂದ ಕಾಣುತ್ತಿದ್ದನು'' ಎಂದಿದೆ.[೭೮] ಆದರೆ ಕಾಲಾನಂತರ ಷಾಹಿ ರಾಜ್ಯಗಳನ್ನು ರಾಮರಾಯ ತಿರಸ್ಕಾರದಿಂದ ಕಂಡುದು ಯುದ್ಧಗಳಿಂದ ಮಾತ್ರವಲ್ಲದೆ ಅವನು ರಾಯಭಾರಿಗಳನ್ನು ನೋಡಿಕೊಂಡ ಬಗೆಯಿಂದಲೂ ತಿಳಿಯಬಹುದಾಗಿದೆ. ಆರಂಭದಲ್ಲಿ ಗೌರವದಿಂದ ಕಾಣುತ್ತಿದ್ದ ರಾಮರಾಯ ಆನಂತರ, ''ಆ ನಡತೆಯನ್ನು ಒಟ್ಟಾರೆಯಾಗಿ ಬಿಟ್ಟು ಯಾವಾಗಾದರೊಮ್ಮೆ ರಾಯಭಾರಿಗಳಿಗೆ ಆಸ್ಥಾನದಲ್ಲಿ ಬರಲು ಅವಕಾಶ ಮಾಡಿಕೊಡುತ್ತಿದ್ದನು. ಅವರೊಂದಿಗೆ ಸಿಟ್ಟಿನಿಂದ, ದ್ವೇಷದಿಂದ ಮಾತನಾಡುತ್ತಿದ್ದನು. ನಿತ್ಯದ ಪರಿಪಾಠವನ್ನು ಬಿಟ್ಟು ಸಾಕಷ್ಟು ಸಮಯ ಅವರು ನಿಲ್ಲುವಂತೆ ಮಾಡಿ ಅನಂತರ ಕುಳಿತುಕೊಳ್ಳಲು ಅನುಮತಿ ನೀಡುತ್ತಿದ್ದನು. ನಿಯೋಗ ಹೊರಟರೆ ನಿಯೋಗದ ಮುಂದೆ ನಡೆಯಲು ರಾಯಭಾರಿಗಳು ಬಂದರೆ ಅವರಿಗೆ ಮುಂದಿರಲು ಬೇಗ ಅನುಮತಿ ಕೊಡುತ್ತಿರಲಿಲ್ಲ.'' ಇದು ರಾಯಭಾರಿಗಳನ್ನು ರಾಮರಾಯ ಕಂಡ ಬಗೆಯಾದರೆ ಈ ಮೂಲಕ ಷಾಹಿ ರಾಜ್ಯಗಳೊಂದಿಗೆ ವಿಜಯನಗರ ಹೊಂದಿದ್ದ ಸಂಬಂಧವೂ ಸ್ಪಷ್ಟವಾಗುತ್ತದೆ. ಕೃಷ್ಣದೇವರಾಯ ೧೫೨೦ರಲ್ಲಿ ಆದಿಲ್‌ಖಾನನ್ನು ಸೋಲಿಸಿ ರಾಯಚೂರು-ಮುದಗಲ್ಲುಗಳನ್ನು ವಶಪಡಿಸಿಕೊಂಡ ವಿಚಾರ ತಿಳಿದ ಉಳಿದ ಷಾಹಿ ಸುಲ್ತಾನರು ಆತಂಕಗೊಂಡು ತಮ್ಮ ಮೇಲೆ ಯುದ್ಧವನ್ನು ಸಾರಬಹುದೆಂದು ತಿಳಿದು ಎಲ್ಲರೂ ಸೇರಿ ರಾಯಭಾರಿಗಳನ್ನು ಕೃಷ್ಣದೇವರಾಯನಲ್ಲಿಗೆ ಕಳುಹಿಸಲು ಒಪ್ಪುತ್ತಾರೆ. ಸುಲ್ತಾನರು ಕೃಷ್ಣದೇವರಾಯನಿಗೆ ರಾಯಭಾರಿಗಳ ಮೂಲಕ ಕಳುಹಿಸಿದ ಪತ್ರದ ವಿವರವನ್ನು ನ್ಯೂನಿಜ್ ನೀಡುತ್ತಾನೆ. ಪತ್ರದಲ್ಲಿ ''ರಾಜನು ಯಾದುಲ್‌ಖಾನನ್ನು ಸೋಲಿಸಿದುದೇ ಸಾಕಂತಲೂ, ಮುಂದುವರಿಯಬಾರದೆಂತಲೂ, ಯಾದಲ್‌ಖಾನನಿಂದ ಪಡೆದುದನ್ನು ಅವನಿಗೆ ಹಿಂದಿರುಗಿ ಕೊಡಬೇಕೆಂತಲೂ, ಹಾಗೆ ಮಾಡಿದರೆ ತಾವೆಲ್ಲ ರಾಜನು ಹೇಳಿದಂತೆ ಕೇಳುವರೆಂತಲೂ, ಹಾಗೆ ಮಾಡದೆ ಹೋದರೆ ಅನಿವಾರ್ಯವಾಗಿ ತಾವು ಯಾದುಲ್‌ಖಾನನ್ನು ಸೇರಿಕೊಂಡು ಯುದ್ಧ ಮಾಡಿ ಅವನದನ್ನೆಲ್ಲ ಹಿಂದಿರುಗಿ ಪಡೆಯಬೇಕಾಗುತ್ತದೆ'' ಎಂಬುದಾಗಿ ಹೇಳಲಾಗಿತ್ತು.[೭೯] ಈ ಪತ್ರಕ್ಕೆ ಪ್ರತ್ಯುತ್ತರವಾಗಿ ಕೃಷ್ಣದೇವರಾಯ ಜವಾಬು ಬರೆಸಿ ಅದನ್ನು ಬಂದ ರಾಯಭಾರಿಗಳ ಮೂಲಕ ಕಳುಹಿಸುತ್ತಾನೆ. ಆದರೆ ಪತ್ರ ತಂದ ರಾಯಭಾರಿಗಳಿಗೆ ಎಂದಿನಂತೆ ಗೌರವದಿಂದ ಕಾಣುತ್ತಾನೆ. ಯಾವುದೇ ತೊಂದರೆಯನ್ನು ಅವರಿಗೆ ನೀಡುವುದಿಲ್ಲ. ರಾಯನಿಗೆ ಬೆದರಿಕೆಯ ಪತ್ರವನ್ನು ರಾಯಭಾರಿಗಳು ತಂದಿದ್ದರೂ ಅವರನ್ನು ಗೌರವದಿಂದ ಕಾಣುವುದರ ಜೊತೆಗೆ ಸೂಕ್ತ ಬಹುಮಾನಗಳನ್ನು ನೀಡಿ ಕಳುಹಿಸಿಕೊಟ್ಟನೆಂದೂ ಹೇಳಲಾಗಿದೆ.[೮೦] ಆದಿಲ್‌ಖಾನನು ತಾನು ರಾಯಚೂರು ಯುದ್ಧದಲ್ಲಿ ಸಂಪೂರ್ಣ ಸೋಲನ್ನು ಅನುಭವಿಸಿದ್ದರೂ ವಿಜಯನಗರ ದೊಂದಿಗೆ ಸಂಬಂಧವಿರಿಸಿಕೊಳ್ಳಲು ರಾಯಭಾರಿಗಳನ್ನು ಸೇತುವೆಯಾಗಿ ಉಪಯೋಗಿಸಿಕೊಂಡಿದ್ದನು. ಅವನು ಕಳುಹಿಸಿದ ರಾಯಭಾರಿಯ ಹೆಸರನ್ನು ನ್ಯೂನಿಜ್ 'ಮತುಕೊಟಾಂ' ಎಂದು ಕರೆದಿರುವನು.[೮೧] ಆದರೆ ಈ ರಾಯಭಾರಿ ತನ್ನನ್ನು ಕಾಣಲು ಬಂದಾಗ ಕೃಷ್ಣದೇವರಾಯ ಒಂದು ತಿಂಗಳ ಕಾಲ ಅನುಮತಿ ನೀಡಲಿಲ್ಲ. ಆನಂತರ

ಅವಕಾಶ ನೀಡಿದ್ದನು. ವಿಜಯನಗರ ಕಾಲದಲ್ಲಿ ಅರಸರು ರಾಯಭಾರಿಗಳನ್ನು ಗೌರವದಿಂದ ಕಾಣುತ್ತಿದ್ದುದು ಸಾಮಾನ್ಯ ಪದ್ಧತಿಯಾದರೆ, ಕೆಲವೊಮ್ಮೆ ತಿರಸ್ಕಾರದಿಂದ ಕಂಡ ಉದಾಹರಣೆಗಳೂ ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ.

ರಾಯಭಾರಿಗಳ ಪಾತ್ರ

ವಿಜಯನಗರ ಕಾಲದಲ್ಲಿ ರಾಯಭಾರಿಗಳು ಮಹತ್ವದ ಪಾತ್ರ ನಿರ್ವಹಿಸಿದ್ದರು. ಬಹಮನಿ ಸುಲ್ತಾನರು ಮತ್ತು ವಿಜಯನಗರದ ಮಧ್ಯೆ ಅನೇಕ ಭಾರಿ ಸಂಧಾನ, ಒಪ್ಪಂದಗಳ ಮೂಲಕ ಯುದ್ಧಗಳ ತಡೆದು ಶಾಂತಿಯನ್ನು ಸ್ಥಾಪಿಸುವಲ್ಲಿ ರಾಯಭಾರಿಗಳು ತಮ್ಮ ಕಾರ್ಯವೈಖರಿಯನ್ನು ತೋರ್ಪಡಿಸಿದ್ದಾರೆ.

ಒಂದನೆಯ ಬುಕ್ಕರಾಯ ಮಹಮ್ಮದಶಹನ ವಿರುದ್ಧ ಕೈಗೊಂಡ ಯುದ್ಧದ ಬಳಿಕ ಮುಸ್ಲಿಮರ ಹತ್ಯೆ ನಡೆಯಿತೆಂದೂ, ಇದಕ್ಕೆ ಪ್ರತಿಯಾಗಿ ಮಹಮ್ಮದನು ೧೩೬೬ರಲ್ಲಿ ನರಹತ್ಯೆಗೆ ಮುಂದಾಗಿ ಅದನ್ನು ಎಷ್ಟು ಕಟ್ಟುನಿಟ್ಟಿನಿಂದ ಪಾಲಿಸಿದನೆಂದರೆ ಬಸುರಿ ಹೆಂಗಸರು ಮತ್ತು ಮೊಲೆ ಕುಡಿಯುವ ಕೂಸುಗಳ ಸಹ ಖಡ್ಗದಿಂದ ಪಾರಾಗಲಿಲ್ಲವೆನ್ನಲಾಗಿದೆ.[೮೨] ಈ ಘೋರಹತ್ಯೆಯ ಸಮಯದಲ್ಲಿ ಬಹಮನಿ ರಾಯಭಾರಿಗಳು ಶಾಂತಿ-ಸಂಧಾನಗಳಿಗೆ ಮುಂದಾಗುತ್ತಾರೆ. ಮಹಮ್ಮದ್‌ಶಹನಿಗೆ ಅವರು ನಿವೇದಿಸಿದ ಬಗೆಯಿದು : ಅಮಾಯಕರು ಅದರಲ್ಲೂ ಅಸಹಾಯಕ ಸ್ತ್ರೀಯರು ಮತ್ತು ಮಕ್ಕಳು ತಪ್ಪಿತಸ್ಥರಿಂದಾಗಿ ಕಷ್ಟ ಅನುಭವಿಸಬೇಕೆಂದು ಯಾವ ಧರ್ಮವೂ ಹೇಳುವುದಿಲ್ಲ ಎನ್ನುತ್ತಾರೆ. ಅಲ್ಲದೆ ಎರಡೂ ರಾಜ್ಯಗಳು ನೆರೆಹೊರೆಯವರಾದುದರಿಂದ ಪರಸ್ಪರ ಸಂಬಂಧಗಳನ್ನು ಕಹಿಗೊಳಿಸುವ ಅನಾವಶ್ಯಕ ಕ್ರೌರ್ಯವನ್ನು ತಪ್ಪಿಸುವದು ನಿಜಕ್ಕೂ ಒಳ್ಳೆಯದೆಂದು ಸುಲ್ತಾನನಿಗೆ ಆಗ್ರಹಪಡಿಸಿದರು.[೮೩] ರಾಯಭಾರಿಗಳ ಈ ಮಾತುಗಳಿಂದ ಪ್ರಭಾವಿತನಾದ ಸುಲ್ತಾನ "ಇನ್ನು ಮುಂದೆ ವಿಜಯದ ನಂತರ ಒಬ್ಬ ಶತ್ರುವನ್ನೂ ಕೊಲ್ಲುವುದಿಲ್ಲವೆಂದೂ, ತನ್ನ ಉತ್ತರಾಧಿಕಾರಿಗಳನ್ನು ಅದೇ ಕರುಣೆ ಆಚರಿಸುವಂತೆ ಬದ್ಧರನ್ನಾಗಿಸುವುದಾಗಿಯೂ ಪ್ರತಿಜ್ಞೆಗೈದ.[೮೪] ಇದರಿಂದ ರಾಯಭಾರಿಗಳು ಘೋರ ಹತ್ಯೆಗಳನ್ನು ತಡೆಯುವಲ್ಲಿ ಯಶಸ್ವಿಯಾದುದು ಹಾಗೂ ರಾಯಭಾರಿಗಳ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಿದ್ದುದು ಸ್ಪಷ್ಟವಾಗುತ್ತದೆ. ರಾಮರಾಯನು ಕೈಗೊಂಡ ಅಹಮ್ಮದನಗರ ಯುದ್ಧದಲ್ಲಿ ಸೋಲುಂಟಾಗುವುದನ್ನು ಅರಿತ ಹುಸೇನ್ ನಿಜಾಂಶಹನು ತನ್ನ ರಾಯಭಾರಿಗಳಾದ ಕಾಸಿಂಬೇಗ್ ಮತ್ತು ಮೌಲಾನಾ ಇನಾಯತುಲ್ಲಾ ಅವರನ್ನು ರಾಮರಾಯನಲ್ಲಿಗೆ ಕಳುಹಿಸುತ್ತಾನೆ. ಆಗ ರಾಯಭಾರಿಗಳು ಎರಡು ರಾಜ್ಯಗಳ ಮಧ್ಯೆ ಒಡಂಬಡಿಕೆಗೆ ಯತ್ನಿಸಿ ರಾಮರಾಯನನ್ನು ಒಪ್ಪಂದಕ್ಕೆ ಸಮ್ಮತಿಸುವಂತೆ ಮಾಡಿದರು. ರಾಮರಾಯ ಕೆಲವು ಷರತ್ತುಗಳ ಮೂಲಕ ಒಪ್ಪಂದ ಮಾಡಿಕೊಂಡು ನಿಜಾಂಶಹನೊಂದಿಗೆ ನಡೆಯುತ್ತಿದ್ದ ಯುದ್ಧವನ್ನು ನಿಲ್ಲಿಸಿದ್ದನು.[೮೫] ಇಲ್ಲಿ ಕೂಡ ಯುದ್ಧವನ್ನು ತಡೆಯುವಲ್ಲಿ ರಾಯಭಾರಿಗಳು ಯಶಸ್ವಿಯಾಗಿದ್ದಾರೆ.

ರಾಮರಾಯ ಷಾಹಿ ಸುಲ್ತಾನರ ರಾಜಕೀಯದ ಒಳಜಗಳಗಳಲ್ಲಿ ನೇರವಾಗಿ ಭಾಗವಹಿಸಿ ಚಾಣಾಕ್ಷತನದಿಂದ ಅವರೊಂದಿಗೆ ತನ್ನದೇ ಆದ ವಿದೇಶ ನೀತಿ ರೂಪಿಸಿದ್ದನು. ಸುಲ್ತಾನರಲ್ಲಿ ಸದಾಕಾಲ ಒಬ್ಬನ ಮೇಲೆ ಮತ್ತೊಬ್ಬನನ್ನು ಎತ್ತಿಕಟ್ಟಿ ಅವರನ್ನು ಪರಸ್ಪರ ಸಂಘರ್ಷಗಳಲ್ಲಿ ತೊಡಗುವಂತೆ ಮಾಡಿ ಲಾಭ ಪಡೆಯುತ್ತಿದ್ದನು. ಅಲ್ಲದೆ ಷಾಹಿ ಸುಲ್ತಾನರು ವಿಜಯನಗರದ ಸೈನಿಕ ಸಹಾಯ ಯಾಚಿಸುವಂತೆ ಕಾರ್ಯತಂತ್ರ ರೂಪಿಸಿದ್ದನು. ಷಾಹಿ ಸುಲ್ತಾನರು ರಾಯಭಾರಿಗಳ ಮೂಲಕ ರಾಮರಾಯನಿಗೆ ವಿಜಯನಗರ ಸೇನೆಯ ಸಹಾಯವನ್ನು ಕೇಳುವುದು ಸಾಮಾನ್ಯವಾಗಿದ್ದಿತು. ಒಮ್ಮೆ ಅಹಮ್ಮದನಗರಕ್ಕೆ ಕುಮಕ್ಕು ನೀಡಿದರೆ ಇನ್ನೊಮ್ಮೆ ಬಿಜಾಪುರಕ್ಕೂ, ಮತ್ತೊಮ್ಮೆ ಗೋಲ್ಕೊಂಡಕ್ಕೂ ಹೀಗೆ ಒಬ್ಬರ ನಂತರ ಒಬ್ಬರಿಗೆ ಮತ್ತು ಯಾರಿಗೂ ಶಾಶ್ವತ ಸಹಾಯ ನೀಡದಂತಹ ಕ್ರಮ ಅನುಸರಿಸಿದ್ದನು. ಈ ಸಮಯದಲ್ಲಿ ಬುಸಾತಿನೆ ಸಲಾತೀನದಲ್ಲಿ ಹೇಳುವಂತೆ ರಾಯಭಾರಿಗಳನ್ನು ಹೀನಾಯವಾಗಿ ಕಂಡ ರೀತಿ ಹಾಗೂ ತಾನು ಷಾಹಿ ರಾಜ್ಯಗಳ ಮೇಲೆ ಸಾಧಿಸಿದ್ದ ಹಿಡಿತಗಳನ್ನು ಸುಲ್ತಾನರು ಅರ್ಥಮಾಡಿ ಕೊಳ್ಳಲೆತ್ನಿಸಿದರು. ವಿಜಯನಗರದ ನಿಜವಾದ ಧೋರಣೆಯನ್ನು ಅರಿತ ಅವರು ತಾತ್ಕಾಲಿಕವಾಗಿಯಾದರೂ ಒಂದಾಗಬೇಕೆಂದುಕೊಂಡರು. ಅಂತೆಯೇ ವೈವಾಹಿಕ ಸಂಬಂಧಗಳನ್ನು ಒಬ್ಬರ ನಡುವೆ ಒಬ್ಬರು ಬೆಸೆಯುವಲ್ಲಿ ಯಶಸ್ವಿಯಾದರು. ಕೊನೆಗೆ ಎಲ್ಲರೂ ಒಟ್ಟಾಗಿ ೧೫೬೫ರ ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ಭಾಗವಹಿಸಿ ತಮ್ಮ ಪ್ರಾಣದ ಹಂಗನ್ನು ತೊರೆದು ಹೋರಾಡಿ ಜಯ ಸಂಪಾದಿಸಿದುದನ್ನು ಕಾಣಬಹುದು.

ರಾಯಭಾರಿಗಳಂತೆ ವಿಜಯನಗರದಲ್ಲಿ ಬೇಹುಗಾರಿಕಾ ಪಡೆಯೂ ಇತ್ತು. ರಾಯಭಾರಿಗಳು ರಾಜ್ಯಗಳ ಮಧ್ಯೆ ಶಾಂತಿ-ಸಂಧಾನದ ಮಾತುಕತೆಗಳನ್ನು ನಡೆಸುವವರಾದರೆ, ಬೇಹುಗಾರ ಅಥವಾ ಗೂಢಚಾರರು ರಾಜ್ಯದ ಒಳಗೆ ಹಾಗೂ ಹೊರಗೆ ನಡೆಯುತ್ತಿದ್ದ ವಿದ್ಯಮಾನಗಳನ್ನು ರಾಜನಿಗೆ ಒದಗಿಸುವವರಾಗಿದ್ದರು. ಆದುದರಿಂದ ಇವರನ್ನು'ರಾಜನ ಚಲಿಸುವ ಕಣ್ಣುಗಳಿದ್ದಂತೆ' ಎಂದು ಬಣ್ಣಿಸಲಾಗಿದೆ. ಕೃಷ್ಣದೇವರಾಯನ ದಿನಚರಿಯಲ್ಲಿ ಬೇಹುಗಾರರ ತಂಡವಿದ್ದುದನ್ನು ಹೇಳಲಾಗಿದೆ. ರಾಯ ತಾನು ಅಧಿಕಾರಕ್ಕೆ ಬಂದ ಕೆಲವೇ ಸಮಯದಲ್ಲಿ ಅವನು ಮಾಡಿದ ಕೆಲಸವೆಂದರೆ ರಾಜ್ಯದ ಅಮರನಾಯಕರು, ಸಾಮಂತರು ಹಾಗೂ ಷಾಹಿ ಸುಲ್ತಾನರ ಪ್ರದೇಶಗಳಲ್ಲಿ ಸಂಚರಿಸಿ ಸುದ್ದಿಗಳನ್ನು ತಿಳಿದುಕೊಳ್ಳಲು ಅನೇಕ ಜನ ಬೇಹುಗಾರರನ್ನು ನೇಮಕ ಮಾಡಿದ್ದುದು. ದಿನಚರಿಯಲ್ಲಿ ಹೇಳುವಂತೆ "ಅಂತರಂಗ ಬಹಿರಂಗ ವಾರ್ತೆಗಳನ್ನು ತಿಳಿದು ಬಹ ಹಾಗೆ। ಗೋಲಕೊಂಡೆ, ಅಮದಾನಗರ, ಬೆಡಂದುಕೋಟೆ, ರಾಜಮಹೇಂದ್ರ, ಯಿಕ್ಕೇರಿ, ಆನಗರ?, ಚೆನ್ನಪಟ್ಟಣ, ಶ್ರೀರಂಗಪಟ್ಟಣ, ಉಮ್ಮತ್ತೂರು, ಶಿವನಸಮುದ್ರ, ಪೆನುಗೊಂಡೆ, ಮೊರಸನಾಡು, ತಿಗುಳಾಣ್ಯ, ಚೋಳದೇಶ, ಮಲೆಯಾಳ, ಕೊಚ್ಚಿ, ಕೇರಳ, ತಿರುಪತಿ, ಗಂಡಿಕೋಟೆ, ಗುತ್ತಿ, ನಂದ್ಯಾಲ, ರಾಯಚೂರು, ಮುದಗಲ್ಲು ಮೊದಲಾದ ಸ್ಥಳಗಳಿಗೆ ಬೇಹಿನವರ ನೇಮಕ ಮಾಡಿ ಕಳುಹಿಸಿದನೆಂದು ಹೇಳಿದೆ.[೮೬] ಇದರಿಂದ ವಿಜಯನಗರ ಕಾಲದಲ್ಲಿ ಬೇಹುಗಾರರ ದೊಡ್ಡ ಪಡೆ

ಇದ್ದುದು ದೃಢಪಡುತ್ತದೆ. ಇದೇ ಆಕರವು ತಿಳಿಸುವಂತೆ ಗಜಪತಿ ರಾಜ್ಯಕ್ಕೆ ಬೇಹುಗಾರನನ್ನಾಗಿ ಹನುಮಂತಯ್ಯ ಎಂಬುವವನನ್ನು ಕೃಷ್ಣದೇವರಾಯ ನೇಮಿಸಿದ್ದನು.[೮೭] ಈ ಬೇಹುಗಾರ ಅಥವಾ ಗೂಢಾಚಾರರು ನಿರ್ವಹಿಸಬೇಕಾದ ಕಾರ್ಯವೈಖರಿಯನ್ನು ಕುರಿತು ಜೀವಂಧರ ಚರಿತೆಯಲ್ಲಿ,

ಪೌರಜನರಿಷ್ಟವನು ನಿಜಪರಿವಾರಸನ್ನುತ ಸಚಿವರಂತ
ಸ್ಸಾರವನುಪರಿಜನರ ಗುಜುಗುಜಿನ ಪ್ರವರ್ತನೆಯ
ಅರಯಿದು ಬಂದರುಹಿ ನೀವೆನಲು[೮೮] ಎಂದಿದೆ.

ಇಲ್ಲಿ ಅರಸನೊಬ್ಬ ಗೂಢಚಾರರಿಗೆ ಅವರು ಮಾಡಬೇಕಾದ ಕೆಲಸ ಅರುಹುತ್ತಿರುವುದನ್ನು ಕಾಣಬಹುದು. ಈ ರೀತಿ ಬೇಹುಗಾರರನ್ನು ನೇಮಿಸಿ ರಾಜ್ಯದ ಒಳ ಹಾಗೂ ಹೊರ ರಾಜ್ಯಗಳ ಆಗುಹೋಗುಗಳು, ವಿದ್ಯಮಾನಗಳು, ಅರಸ ಅಥವಾ ಆಡಳಿತದ ಬಗೆಗಿನ ಜನರ ಅಭಿಪ್ರಾಯಗಳನ್ನು ಅರಸರು ಅವರಿಂದ ಪಡೆಯುತ್ತಿದ್ದರು. ಆ ಮೂಲಕ ಅರಸರು ರಾಜ್ಯದ ಆಡಳಿತದಲ್ಲಿ ನಿಯಂತ್ರಣ ಸಾಧಿಸುತ್ತಿದ್ದರು. ಒಟ್ಟಿನಲ್ಲಿ ರಾಯಭಾರಿಗಳು ರಾಜ್ಯ-ರಾಜ್ಯಗಳ ನಡುವೆ ಸಂಬಂಧ ಬೆಸೆಯುವ ಸೇತುವೆಗಳಾದರೆ, ಬೇಹುಗಾರರು ರಾಜ್ಯದ ಒಳ-ಹೊರಗಿನ ವಿದ್ಯಮಾನಗಳನ್ನು ಅರಿತು ಗುಪ್ತವಾಗಿ ಅರಸನಿಗೆ ತಿಳಿಸಿ ಆಡಳಿತಯಂತ್ರದ ಚಾಲನೆಗೆ ಸಹಾಯಕರಾಗಿ ಪಾತ್ರ ನಿರ್ವಹಿಸುತ್ತಿದ್ದುದನ್ನು ಕಾಣಬಹುದು.

ಟಿಪ್ಪಣಿಗಳು

೧. ಕರ್ನಾಟಕ ಚರಿತ್ರೆ, ಸಂ-೩.ಪು.೬೨

೨. ಸೈನಿಕರ ವೇತನ ಮತ್ತು ರಾಜ್ಯದ ಆದಾಯ ಭಾಗವನ್ನು ನೋಡಿ.

೩. EC., Vol-XI, Jl.24

೪. ಮ.ಹೋ.ಮ.ವಿ., ಪು.೪೦೮

೫. Sukraniti, B.K.Sarkar, P.೨೬೨

೬ ವಿಜಯನಗರ ಕಾಲದ ಸ್ಥಳೀಯ ಸರ್ಕಾರ, ಪು.೫

೭. ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ,ಪು.೪೮

೮. ಕರ್ನಾಟಕ ಪರಂಪರೆ, ಸಂ-೩. ಪು.೩೬; ಆಮುಕ್ತಮಾಲ್ಯದ: ಆಶ್ವಾಸ-೪, ಪದ್ಯ-೨೩೬

೯. ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು.೫೫

೧೦. ಶ್ರೀಕೃಷ್ಣದೇವರಾಯನ ದಿನಚರಿ, ಪು.೧೯

೧೧. Ec., Vol-IX, Dv.29

೧೨. ಕೌಟಲ್ಯನ ಅರ್ಥಶಾಸ್ತ್ರ, ಪು.೨೨೫-೬

೧೩. The Art of war in medieval India, P.63

೧೪. ಪ್ರ.ಕಂ.ಇಂ., ಸಂ-೨, ಪು.೧೫೬

೧೫. ಅದೇ, ಪು.೧೫೭

೧೬. The sources of vijayanagar History, P.242

೧೭. ಮ.ಹೋ.ಮ.ವಿ., ಪು.೧೪೦

೧೮. EC., Vol-V, Ch.256

೧೯. ವಿಜಯನಗರ ಕಾಲದ ಸ್ಥಳೀಯ ಸರ್ಕಾರ, ಪು.೧೫-೨೬; EC., Vol-XI, Dg.28,Hk.21,70

೨೦. ಮ.ಹೋ.ಮ.ವಿ., ಪು.೧೪೫

೨೧. South Indian Polity, P.320

೨೨. ಕರ್ನಾಟಕ ಚರಿತ್ರೆ, ಸಂ-೩, ಪು.೬೩

೨೩. ಅದೇ

೨೪. ಪ್ರ.ಕಂ.ಇಂ., ಸಂ-೨, ಪು.೪೧೭

೨೫. ಮ.ಹೋ.ಮ.ವಿ., ಪು.೪೦೮-೪೧೧; ಕರ್ನಾಟಕ ಚರಿತ್ರೆ, ಸಂ.೩, ಪು.೬೬-೭

೨೬. ಅದೇ, ಪು.೨೯೫

೨೭. ಪ್ರ.ಕಂ.ಇಂ, ಸಂ-೨, ಪು.೧೮೬

೨೮. ಕರ್ನಾಟಕ ಚರಿತ್ರೆ, ಸಂ-೪, ಪು.೨೦೧-೨

೨೯. ಪ್ರ.ಕಂ.ಇಂ., ಸಂ-೧, ಪು.೨೦೫

೩೦. ಅದೇ, ಸಂ-೨, ಬಾರ್ಬೋಸಾ, ಪು.೨೯೫

೩೧. ಅದೇ, ಬತೂತಾ, ಪು.೭೪

೩೨. ಅದೇ

೩೩. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು-೧೦೫

೩೪. EC., Vol-IV Ng.23

೩೫. EC, Vol-III, Sr.15

೩೬. ಮ.ಹೋ.ಮ.ವಿ., ಪು.೨೯೩

೩೭ ಪ್ರ.ಕಂ.ಇಂ., ಸಂ-೨, ಬಾರ್ಬೋಸಾ, ಪು-೨೯೫

೩೮. EC., Vol-XI, Chitaldrug, No.2-3

೩೯. ಪ್ರ.ಕಂ.ಇಂ., ಸಂ-೨, ಬತೂತಾ, ಪು.೧೦೫

೪೦. ಅದೇ, ರಜಾಕ್, ಪು.೧೫೭

೪೧. ಅದೇ., ಪು.೧೫೯

೪೨. ಮ.ಹೋ.ಮ.ವಿ, ಪಾಯೇಸ್, ಪು.೨೯೮

೪೩. ಅದೇ, ನ್ಯೂನಿಜ್, ಪು.೩೯೮

೪೪. ಅದೇ, ಪಾಯೇಸ್, ಪು.೩೯೮

೪೫. ರಾಯವಾಚಕಮು, ಪು.೨೯-೩೧; ಶ್ರೀಕೃಷ್ಣದೇವರಾಯನ ದಿನಚರಿ, ಪು.೧೬-೧೮

೪೬. ಮ.ಹೋ.ಮ.ವಿ., ಪು.೨೯೫

೪೭ ಅದೇ., ಪು.೩೯೯

೪೮. ಪ್ರ.ಕಂ.ಇಂ., ಸಂ-೨, ಪು.೧೬೦

೪೯ ಮ.ಹೋ.ಮ.ವಿ., ಪು.೨೯೫

೫೦. ಅದೇ, ಪು.೩೯೯

೫೧. SII., Vol-IX-ii NO.554; EC, Vol-XI, P.26

೫೨. ಕರ್ನಾಟಕ ದರ್ಶನ ಸಂ-೧೪, ಲೇಖನ:ವಿಜಯನಗರ ಕಾಲದಲ್ಲಿ ಸಾಮಾನ್ಯ ಜನರು ಸುಖಿಗಳಾಗಿದ್ದರೆ? ಮಹೇಶಕುಮಾರ ಹ.ಪಾಟೀಲ, ಕರ್ನಾಟಕ ಇತಿಹಾಸ ಅಕಾಡೆಮಿಯು ನಡೆಸಿದ ೧೯೯೮ರ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

೫೩. ಅದೇ; ಪರಾಶರ ಮಾಧವ - ೧, ಪು.೪೦೩

೫೪. EC., Vol-VII, Ng.73; ಅದೇ, VIII, Hn.41

೫೫. ಅದೇ

೫೬. ಅದೇ

೫೭. South Indian Polity, P.28

೫೮. EC., Vol-II, Sb.479

೫೯. ಅದೇ, Vol-VII, Ng.73,76

೬೦. ಪ್ರ.ಕಂ.ಇಂ., ಸಂ-೨, ಪಾಯೇಸ್, ಪು. ೩೬೪

೬೧. ಅದೇ, ಪು.೩೭೮ ಮತ್ತು ೩೮೦

೬೨. ರಾಮನಾಥ ಚರಿತ, ೪-೮೦

೬೩. ಅದೇ, ೪-೭೯

೬೪. ಅದೇ, ೪-೭೨, ೭೩

೬೫. ಚೆನ್ನಬಸವಪುರಾಣ, ಪು. ೧೮೭

೬೬. ಕ.ಶಾ.ಸಾಂ.ಅಧ್ಯಯನ, ಪು.೨೫೨

೬೭. ಸೂಕ್ತಿಸುಧಾರ್ಣವಂ. ಪು.೩೬೧, ೩೭೩

೬೮. SII, Vo-IX-i, P.158

೬೯. ರಾಮನಾಥ ಚರಿತ, ಸಂ-೨, ೫-೨

೭೦. Indian Antiquary, Vol-XLV, P.140; South Indian Polity, P.308

೭೧. ಪ್ರ.ಕಂ.ಇಂ., ಸಂ-೨, ರಜಾಕ್, ಪು.೧೫೪

೭೨. ಅದೇ, ಪು.೧೬೧

೭೩. ಅದೇ, ಪಾಯೇಸ್, ಪು.೩೬೫

೭೪. ಅದೇ, ರಜಾಕ್, ಪು.೧೬೧

೭೫. ಅದೇ, ಪಾಯೇಸ್, ಪು.೩೬೬

೭೬. ಅದೇ, ರಜಾಕ್, ಪು.೧೬೧

೭೭. ಅದೇ, ಪಾಯೇಸ್, ಪು.೩೬೬

೭೮. ಬುಸಾತಿನೆ ಸಲಾತೀನ, ಪು.೭೬-೭೭

೭೯. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೪೦೪

೮೦. ಅದೇ,

೮೧. ಅದೇ, ಪು.೪೦೫

೮೨. ಮ.ಹೋ.ಮ.ವಿಜಯನಗರ, ಪು.೩೭-೩೮

೮೩. ಅದೇ, ಪು.೩೯

೮೪. ಅದೇ,

೮೫. ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ-ಮುಸ್ಲಿಂ ಬಾಂಧವ್ಯ, ಪು.೩೪

೮೬. ಶ್ರೀಕೃಷ್ಣದೇವರಾಯನ ದಿನಚರಿ, ಪು.೧೦

೮೭. ಅದೇ, ಪು.೩೧

೮೮. ಜೀವಂಧರ ಚರಿತೆ, ೫-೪೮

ಅಧ್ಯಾಯ ೫

ವಿಜಯನಗರ ಕಾಲದ ಯುದ್ಧ ವ್ಯವಸ್ಥೆ

ಮತ್ತು

ಯುದ್ಧೋಪಕರಣಗಳು

೫.೧ ಯುದ್ಧ ವ್ಯವಸ್ಥೆ

ರಾಜಕೀಯದಲ್ಲಿ ಬಹುಮುಖ್ಯ ಕಾರ್ಯತಂತ್ರಗಳಾದ ಸಾಮ, ದಾನ, ಭೇದಗಳು ವಿಫಲಗೊಂಡ ತರುವಾಯ ಅನಿವಾರ್ಯವಾಗಿ ಪ್ರಯೋಗಿಸಬೇಕಾದ ಮಾರ್ಗವೇ ದಂಡ ಅಥವಾ ಯುದ್ಧ. ಇದು ಚತುರೋಪಾಯಗಳಲ್ಲಿ ಕೊನೆಯದು. ಯುದ್ಧ ವ್ಯವಸ್ಥೆಯು ಆರಂಭ, ಘಟನೆ, ಅಂತ್ಯ, ಫಲಿತಾಂಶ ಹಾಗೂ ಪರಿಣಾಮಗಳ ಸರಮಾಲೆ. ಇದರಲ್ಲಿ ಯುದ್ಧದ ಎಲ್ಲ ಪದ್ಧತಿ, ರೀತಿ-ನೀತಿಗಳಿರುತ್ತವೆ. ಯುದ್ಧ ಕುರಿತು ವಿದ್ವಾಂಸರು ಏನೆಲ್ಲಾ ವ್ಯಾಖ್ಯಾನಗಳನ್ನು ನೀಡಿದ್ದರೂ, ಯುದ್ಧವು ದಂಡೋಪಾಯದ ವ್ಯಕ್ತರೂಪವೆನ್ನುವ ಮತ್ತು ರಾಜಕೀಯದ ಹಿಂಸಾತ್ಮಕ ಮುಂದುವರಿಕೆ ಎನ್ನುವುದಂತೂ ನಿಜ. ಈ ಹಿಂದೆ ಉಲ್ಲೇಖಿಸಿದಂತೆ ಇತಿಹಾಸದ ಸೈನಿಕ ವ್ಯಾಖ್ಯಾನದಲ್ಲಿ ಯುದ್ಧವೇ ಅಂತಿಮ ತೀರ್ಪುಗಾರ. ಇದರ ವ್ಯಾಖ್ಯಾನವನ್ನು ದಂಡನಾಯಕರು ಮಾತ್ರ ಬರೆಯಬಲ್ಲರು.

೫.೧.೧ ಯುದ್ಧದ ಕಾರಣಗಳು

ಪ್ರಾಚೀನ ಕಾಲದಲ್ಲಿ ಯುದ್ಧಗಳನ್ನು ಇತರರೊಂದಿಗೆ ಕೈಗೊಳ್ಳುತ್ತಿದ್ದುದು ವಸ್ತುಗಳಿಗಾಗಿ. ಅಂದು ಯುದ್ಧವು ಸ್ವಾಭಾವಿಕ ಮಟ್ಟದ್ದಾಗಿದ್ದಿತು. ನಾಗರೀಕತೆ ಬೆಳೆದಂತೆಲ್ಲಾ ಇದನ್ನು ಭೂಭಾಗ ವಶಪಡಿಸಿಕೊಳ್ಳುವ, ಅದರಿಂದ ಆಹಾರ, ಶ್ರಮ, ಅಧಿಕಾರ ಪಡೆಯುವ ಹುನ್ನಾರವಾಗಿ ಮಾರ್ಪಾಟು ಹೊಂದಿತು. ಅಲ್ಲದೆ ಆಕ್ರಮಣಕಾರರು

ನೆಮ್ಮದಿಯಾಗಿ ಜೀವಿಸಲು, ಸಂಪತ್ತು ಮತ್ತು ಸಮೃದ್ಧಿ ಪಡೆಯುವ ಸಲುವಾಗಿ ಯುದ್ಧಗಳಿಗೆ ಮೊರೆ ಹೋಗುತ್ತಿದ್ದುದು ಹಿಂದಿನಿಂದಲೂ ನಡೆದು ಬಂದ ಸಂಗತಿ. ಸಮಾಜದಲ್ಲಿ ಚಿಕ್ಕ ಚಿಕ್ಕ ರಾಜಕೀಯ ಘಟಕಗಳು ಬೆಳವಣಿಗೆಗೊಂಡ ಮೇಲೆ ರಾಷ್ಟ್ರನಾಯಕರು ಇತರ ರಾಷ್ಟ್ರಗಳೊಂದಿಗೆ ಸ್ವತಃ ತಮ್ಮ ಶಕ್ತಿ ಹಾಗೂ ಅಧಿಕಾರಗಳನ್ನು ವಿಸ್ತಾರಗೊಳಿಸಲು ಯುದ್ಧಗಳನ್ನು ಕೈಗೊಳ್ಳುತ್ತಿದ್ದರು. ಸಾಮಾನ್ಯವಾಗಿ ಎಲ್ಲ ರಾಜ್ಯ, ರಾಷ್ಟ್ರಗಳು ಮತ್ತು ಜನರು ರಾಜಕೀಯ ಚಟುವಟಿಕೆಗಳಲ್ಲಿ ಬೆಳವಣಿಗೆ ಹೊಂದಿದಂತೆಲ್ಲಾ ಸಾಮ್ರಾಜ್ಯದ ಮೇರೆ ವಿಸ್ತರಿಸಲು, ಇತರ ರಾಷ್ಟ್ರಗಳ ಮೇಲೆ ದಬ್ಬಾಳಿಕೆ ಮಾಡಲು ಧಾರ್ಮಿಕ ನಂಬುಗೆಗಳೂ ಕಾರಣವಾಗಿವೆ. ಈ ಅಂಶಗಳಿಂದ ವಿಜಯನಗರ ಹೊರತಾಗಿಲ್ಲ. ಯುದ್ಧಗಳಿಗೆ ಹಲವು ಕಾರಣಗಳಿವೆ. ಅವುಗಳನ್ನು ಕ್ರಮವಾಗಿ ಈ ಕೆಳಗೆ ನೋಡಲಾಗಿದೆ.

ಸಾಮಾಜಿಕ ಯುದ್ಧಗಳು ಲೌಕಿಕ ಆಶೋತ್ತರಗಳನ್ನು ಹೊಂದಿರುತ್ತವೆ. ರೂಢಿಗತವಾದ ಹೊನ್ನು-ಹೆಣ್ಣು-ಮಣ್ಣು- ಈ ಕಾರಣಗಳು ಬಹಳಷ್ಟು ಸಾಮಾಜಿಕ ಯುದ್ಧದ ಕೇಂದ್ರಗಳಾಗಿರುತ್ತವೆ. ಆದರೆ ಧಾರ್ಮಿಕ ಯುದ್ಧವು ಧರ್ಮ ಸಂಬಂಧಿಯಾದುದು. ಒಂದು ಧರ್ಮ ಅಥವಾ ಅದರ ಅನುಯಾಯಿಗಳನ್ನು ನಾಶಮಾಡಿ ಅದರ ಸ್ಥಾನದಲ್ಲಿ ತನ್ನ ಧರ್ಮವನ್ನು ಪ್ರತಿಷ್ಠಾಪಿಸುವುದಷ್ಟೇ ಇದರ ಗುರಿಯಾಗಿರುವುದರಿಂದ ಎಲ್ಲ ಬಗೆಯ ನಾಶ ಈ ಯುದ್ಧದ ಉದ್ದೇಶವಾಗಿದೆ. ಮಧ್ಯಯುಗದಲ್ಲಿ ನಡೆದ 'ಧರ್ಮಯುದ್ಧಗಳು' ಈ ಬಗೆಯ ಯುದ್ಧಗಳಿಗೆ ಉತ್ತಮ ನಿದರ್ಶನಗಳು.[೧] ಈ ಹಿನ್ನೆಲೆಯಲ್ಲಿಯೇ ''ಧರ್ಮೋ ರಕ್ಷತಿ ರಕ್ಷಿತಃ''(ಧರ್ಮ ರಕ್ಷಿಸುವವನನ್ನು ಅದು ರಕ್ಷಿಸುತ್ತದೆ) ಎಂಬುದು ಬಳಕೆಗೊಂಡಿರುವುದು.[೨]

ಯುದ್ಧಗಳು ಸಾಮಾನ್ಯವಾಗಿ ಧರ್ಮದ್ವೇಷ, ಬಲಸಂವರ್ಧನೆ ಮತ್ತು ರಾಷ್ಟ್ರೀಯ ಭಾವನೆ ಇತ್ಯಾದಿ ಉದ್ದೇಶಗಳಿಂದ ಮೂಡಿಬರುತ್ತವೆ. ಯುದ್ಧ ಘಟಿಸುವುದು ಸಾಮಾಜಿಕ ಕಾರಣಗಳಿಂದಾಗಿ. ಅದು ಸಾಮ್ರಾಜ್ಯದಾಹಿಯ ಆಕಾಂಕ್ಷೆಯಾಗಿರಬಹುದು ಅಥವಾ ಸಾಮ್ರಾಜ್ಯ ಶಾಹಿಯ ರಕ್ಷಣೆಯಾಗಿರಬಹುದು. ವಿಜಯನಗರದ ಯುದ್ಧಗಳು ನಡೆದುದು ಸಾಮ್ರಾಜ್ಯದ ವಿಸ್ತರಣೆ ಮತ್ತು ರಕ್ಷಣೆಗಳೆರಡೂ ಉದ್ದೇಶಗಳಿಂದ. ಅದು ತನ್ನ ಆಳ್ವಿಕೆಯ ಬಹುಪಾಲು ಅವಧಿಯನ್ನು ಯುದ್ಧ, ಸಂಘರ್ಷ, ಆಕ್ರಮಣ, ಹೋರಾಟಗಳಲ್ಲೇ ಕಳೆಯಿತೆಂದರೆ ತಪ್ಪಾಗಲಾರದು. ಇದಕ್ಕೆ ಬಾರ್ಬೋಸಾನ ಹೇಳಿಕೆಯನ್ನು ಗಮನಿಸಬಹುದು: ''ನರಸಿಂಗ ರಾಜನಿಗೂ, ಆತನ ರಾಜ್ಯದ ಹೆಚ್ಚು ಭಾಗವನ್ನು ಗೆದ್ದುಕೊಂಡಿರುವ ದಖನ್ ರಾಜನಿಗೂ ಆಗಾಗ್ಗೆ ಯುದ್ಧಗಳಾಗುತ್ತಲೇ ಇರುತ್ತವೆ. ಹಾಗೆಯೇ ಜೆಂಟೈಲ್ ರಾಜನಾದ ಒಳನಾಡಿನಲ್ಲಿರುವ ಒಟಿರಾ(ಒರಿಸ್ಸಾ) ರಾಜನಿಗೂ ಯುದ್ಧಗಳು ನಡೆಯುತ್ತಲೇ ಇರುತ್ತವೆ''[೩] ಇದು ವಿಜಯನಗರ ಕೈಗೊಂಡಿದ್ದ ನಿರಂತರ ಯುದ್ಧಗಳಿಗೆ ಪ್ರಮುಖ ಸಾಕ್ಷ್ಯವಾಗಿದೆ. ಈ ಸಾಮ್ರಾಜ್ಯವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೂ ದಕ್ಷಿಣ ಭಾರತದಾದ್ಯಂತ ರಾಜ್ಯ ವಿಸ್ತರಿಸಲು ನೆರೆಹೊರೆಯವರೊಂದಿಗೆ

ಕಾದುತ್ತಲೇ ಹೋಯಿತು. ಯುದ್ಧಗಳು ಜರುಗಲು ಏಳು ಬಗೆಯ ಕಾರಣಗಳನ್ನು ವಿ.ಆರ್.ಆರ್.ದೀಕ್ಷಿತರ್ ನೀಡಿರುವರು. ಇವುಗಳನ್ನು ಎರಡನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ.

ವಿಜಯನಗರ ಮತ್ತು ಬಹಮನಿಗಳೊಂದಿಗೆ ನಡೆಯುತ್ತಿದ್ದ ನಿರಂತರ ಯುದ್ಧಗಳಿಗೆ ಬಿ. ಷೇಕ್ ಅಲಿಯವರು ಕೊಡುವ ಕಾರಣಗಳಿವು: ವಿಜಯನಗರ ಅದರ ನೆರೆಹೊರೆಯವರಿಗೂ ನಡೆದ ಯುದ್ಧಗಳು ಬಹುತೇಕ ರಾಜಕೀಯವಾಗಿದ್ದುವೇ ಹೊರತು ಮತೀಯವಲ್ಲ. ಬಹು ವಿವಾದಾತ್ಮಕವಾಗಿದ್ದ ರಾಯಚೂರು ದೋಅಬ್ ಪ್ರದೇಶವನ್ನು ವಶಪಡಿಸಿಕೊಳ್ಳುವುದು ಮತ್ತು ಅಧಿಕಾರದ ತಕ್ಕಡಿಯನ್ನು ತಮ್ಮ ಕಡೆಗೆ ವಾಲುವಂತೆ ಮಾಡುವುದು ಆ ಯುದ್ಧಗಳ ಗುರಿಯಾಗಿತ್ತು. ಅವರು ಮುಂದುವರಿದು, ನಿಲುಗಡೆಯೇ ಇಲ್ಲದ ವಿಜಯನಗರ - ಬಹಮನಿ ಯುದ್ಧಗಳು, ಆಕ್ರಮಣಗಳು, ಮುತ್ತಿಗೆಗಳು, ದಾಳಿಗಳು ನಡೆದುದು ರಾಜಕೀಯ ಪ್ರಭುತ್ವಕ್ಕಾಗಿ, ವೈಯಕ್ತಿಕ ಪ್ರತಿಷ್ಠೆಗಾಗಿಯೇ ಹೊರತು ಧಾರ್ಮಿಕ ಅಂಧ ಶ್ರದ್ಧೆಯಿಂದೇನು ಅಲ್ಲವೆಂದು ಒತ್ತಿ ಹೇಳುತ್ತಾರೆ.[೫]

ಷೇಕ್ ಅಲಿಯವರ ಮಾತಿಗೆ ಪೂರಕವೆನ್ನುವಂತೆ, ವಿಜಯನಗರ ಮತ್ತು ಬಹಮನಿ (ಷಾಹಿ ಸುಲ್ತಾನರು ಸೇರಿ)ಯವರಿಗೆ ನಡೆದ ಯುದ್ಧಗಳು ರಾಯಚೂರು ದೋಅಬ್ ಪ್ರದೇಶವನ್ನು ವಶಪಡಿಸಿಕೊಳ್ಳುವ ಸಲುವಾಗಿ ಆಗಿದ್ದಿತು. ಡಾ.ಸಿ.ಎಸ್.ಪಾಟೀಲರು ನೀಡಿದ ರಾಯಚೂರು-ಮುದಗಲ್ಲು ಕೋಟೆಗಳನ್ನು ವಶಪಡಿಸಿಕೊಳ್ಳಲು, ಈ ಎರಡು ರಾಜ್ಯಗಳು ನಿರಂತರವಾಗಿ ಹೋರಾಡಿದ ಯುದ್ಧಗಳ ಪಟ್ಟಿಯನ್ನು ಗಮನಿಸಬಹುದು.[೬] ಈ ಎರಡು ಕೋಟೆಗಳನ್ನು ವಶಪಡಿಸಿಕೊಳ್ಳಲು ಒಂದನೆಯ ಬುಕ್ಕರಾಯನಿಂದ ಹಿಡಿದು ಸದಾಶಿವರಾಯ - ರಾಮರಾಯರವರೆಗೆ ಸುಮಾರು ಇಪ್ಪತ್ತಾರು ಬಾರಿ ಯುದ್ಧಗಳು ನಡೆದಿವೆ. ಇಷ್ಟೊಂದು ಯುದ್ಧಗಳು ನಡೆದಿರುವುದು ಈ ರಾಯಚೂರು ದೋಅಬ್ ಪ್ರದೇಶವನ್ನು ವಶಪಡಿಸಿಕೊಳ್ಳುವ ಸಲುವಾಗಿ ಎಂಬುದಂತೂ ಸತ್ಯ. ಕೃಷ್ಣಾ-ತುಂಗಭದ್ರಾ ನದಿಗಳ ಮಧ್ಯಭಾಗದ ಈ ಪ್ರದೇಶವು ತುಂಬಾ ಫಲವತ್ತತೆಯಿಂದ ಕೂಡಿದ್ದುದು ಯುದ್ಧಗಳಿಗೆ ಮುಖ್ಯ ಕಾರಣವಾಗಿದ್ದಿತು. ಕೃಷ್ಣದೇವರಾಯನು ಕೈಗೊಂಡ ರಾಯಚೂರು ಯುದ್ಧಕ್ಕೆ ನ್ಯೂನಿಜ್ ನೀಡುವ, ಸೈಯದ್ ಮರ್ಕರ್ ಎನ್ನುವ ಮುಸ್ಲಿಂ ಕುದುರೆ ವ್ಯಾಪಾರಿಯು ರಾಯನಿಂದ ಹಣ ಪಡೆದು ಕುದುರೆಗಳನ್ನು ನೀಡದೆ ಆದಿಲ್ ಶಾಹನ ಮೊರೆಹೊಕ್ಕನೆಂದು, ಇವನಿಗೆ ಆಶ್ರಯ ನೀಡಿದ ಸಲುವಾಗಿ ರಾಯನು, ಇದೊಂದು ಕಾರಣವೆಂದು ತಿಳಿದು ರಾಯಚೂರು ಮುತ್ತಿಗೆ ಹಾಕಿದನೆನ್ನುತ್ತಾನೆ. ನ್ಯೂನಿಜ್ ನೀಡುವ ಕಾರಣವು ಸಾಮಾನ್ಯವಾದುದಾದಾರೂ, ಕೃಷ್ಣ ದೇವರಾಯನ ಈ ದಂಡಯಾತ್ರೆಯ ಉದ್ದೇಶ ದೋಅಬ್ ಪ್ರದೇಶವನ್ನು ವಶಮಾಡಿಕೊಳ್ಳುವುದೇ ಆಗಿತ್ತು. ಹೀಗೆ ವಿಜಯನಗರ ಕಾಲದ ಯುದ್ಧಗಳಿಗೆ ಧಾರ್ಮಿಕ ಮತ್ತು ಸಾಮಾಜಿಕವಾಗಿ ಏನೇ ಕಾರಣಗಳಿದ್ದರೂ, ಅವು ಮುಖ್ಯವಾಗಿ ಪಾತ್ರವಹಿಸಿದ್ದುದು ರಾಜಕೀಯ ಪ್ರಭುತ್ವ ಹಾಗೂ ಭೂ ಒಡೆತನವನ್ನು ಸಾಧಿಸುವುದಕ್ಕಾಗಿ.

೫.೧.೨ ಯುದ್ಧ ಸಿದ್ಧತೆ

ಯುದ್ಧ ಕೈಗೊಳ್ಳುವ ಮುನ್ನ ರಾಜಕೀಯ ಮಾತು-ಕತೆಗಳು, ಸಮಾಲೋಚನೆಗಳು, ಹಣಕಾಸು, ಶಸ್ತ್ರಾಸ್ತ್ರಗಳು - ಇವೇ ಮುಂತಾದವುಗಳನ್ನು ಕ್ರೋಢೀಕರಿಸುವುದು ಅತ್ಯಗತ್ಯ. ರಾಜಕೀಯ ನೀತಿಗಳಾದ ಸಾಮ-ದಾನ-ಭೇದಗಳು ವಿಫಲವಾದಾಗ ಯುದ್ಧಗಳು ಜರುಗುತ್ತಿದ್ದುದು ಪದ್ಧತಿ. ಆದರೆ ರಾಜ್ಯ ವಿಸ್ತರಣಾವಾದಿಯಾದ ಅರಸನು ಬೇರೆ ರಾಜ್ಯಗಳ ಭೂಭಾಗಗಳನ್ನು ಆಕ್ರಮಿಸಲು ಈ ಸಮರೋಪಾಯಗಳನ್ನು ಅನುಸರಿಸುವ ಅಗತ್ಯವಿರಲಿಲ್ಲ. ಅವು ಆಕ್ರಮಣಕಾರಿಯುತ ಯುದ್ಧ ಅಥವಾ ಕೂಟ ಯುದ್ಧಗಳಾಗಿರುವುದರಿಂದ.

ಯುದ್ಧಗಳು ಯಾವ ಬಗೆಯವೇ ಆದರೂ ಯುದ್ಧಕ್ಕೆ ಬೇಕಾದ ಎಲ್ಲ ಬಗೆಯ ಸಿದ್ಧತೆಗಳು ಅನಿವಾರ್ಯವಾಗಿದ್ದವು. ರಾಜನ ಬೊಕ್ಕಸದ ಹಣವಲ್ಲದೆ ಜನರಿಂದ ತೆರಿಗೆ ರೂಪದ ಹಣವೂ ಯುದ್ಧಸಿದ್ಧತೆಗೆ ವಿನಿಯೋಗವಾಗುತ್ತಿತ್ತು. ಯುದ್ಧಕ್ಕೆ ತರಬೇತಿ ಹೊಂದಿದ ನುರಿತ ಮೂಲ ಸೇನೆಯ ಜೊತೆಗೆ ಮಿತ್ರ ಅಥವಾ ಸಾಮಂತ ಸೇನೆಗಳೂ ಬಂದು ಕೂಡಿಕೊಳ್ಳುತ್ತಿದ್ದವು.

ಸನ್-ತ್ಸು(sun-Tzu) ಎಂಬ ವಿದ್ವಾಂಸ ಯಾವುದೇ ಸೈನ್ಯವು ಯುದ್ಧದಲ್ಲಿ ಯಶಸ್ಸು ಸಾಧಿಸಲು ಹೊಂದಿರಬೇಕಾದ ಏಳು ಅಂಶಗಳನ್ನು ನೀಡುತ್ತಾರೆ. ಇವು ಯುದ್ಧವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯ ಅಂಶಗಳಾಗಿವೆ. ಅವುಗಳೆಂದರೆ, "ನೈತಿಕ ಬಲ, ಸಶಕ್ತ ದಂಡನಾಯಕ, ಅನುಕೂಲಕರ ಭೂಭಾಗ ಮತ್ತು ವಾತಾವರಣ, ಕಾಯಿದೆ-ಕಟ್ಟಳೆಗಳಿಂದ ಕೂಡಿದ ಸೈನ್ಯ, ಧೀರರನ್ನೊಂದಿದ ಕಾಲ್ದಳ, ವೇಗಯುತ ಅಶ್ವದಳ, ಹರಿತ ಆಯುಧಗಳು ತರಬೇತಿ ಹೊಂದಿದ ಸೈನಿಕರು ಮತ್ತು ಅಧಿಕಾರಿಗಳು.[2]

ವಿಜಯನಗರದ ಅರಸರು ಯುದ್ಧ ಕೈಗೊಳ್ಳುವ ಮುನ್ನ ರಾಜ್ಯ ಮತ್ತು ಸೈನ್ಯದಲ್ಲಿ ಕೆಲವು ಸುಧಾರಣೆಗಳನ್ನು ಕೈಗೊಂಡ ಅಂಶ ವ್ಯಕ್ತವಾಗುತ್ತದೆ. ಫೆರಿಸ್ತಾನ ಪ್ರಕಾರ ಕ್ರಿ.ಶ.೧೪೪೨ರ ಅವಧಿಯಲ್ಲಿ ಎರಡನೆಯ ದೇವರಾಯನು ತನ್ನ ಸೈನ್ಯದ ನ್ಯೂನತೆಗಳನ್ನು ಸರಿಪಡಿಸಲು ಯತ್ನಿಸಿರುವುದು ತಿಳಿದುಬರುತ್ತದೆ. ಅದರಂತೆ ಮುಸ್ಲಿಂ ಯೋಧರನ್ನು ಸೇನೆಯಲ್ಲಿ ಸೇರಿಸಿಕೊಳ್ಳುವ ಮತ್ತು ಅಶ್ವಗಳನ್ನು ಆಮದು ಮಾಡಿಕೊಳ್ಳುವ ಪ್ರಯತ್ನ ನಡೆದುದು ತಿಳಿದುಬರುತ್ತದೆ. ಫೆರಿಸ್ತಾ ಹೇಳುವಂತೆ ಕ್ರಿ.ಶ.೧೪೪೨ರ ಹೊತ್ತಿಗೆ ವಿಜಯನಗರ ಸೈನ್ಯವು ಬಹಮನಿಗಳ ವಿರುದ್ಧದ ಯುದ್ಧಗಳಲ್ಲಿ ಸೋಲನ್ನು ಅನುಭವಿಸಿದ್ದಿತು. ಕ್ರಿ.ಶ.೧೪೦೬-೭ರಲ್ಲಿ ಒಂದನೆಯ ದೇವರಾಯ, ೧೪೨೨ -೨೩ರಲ್ಲಿ ಎರಡನೆಯ ದೇವರಾಯ ಮತ್ತು ೧೪೩೬ರಲ್ಲಿ ಎರಡನೆಯ ದೇವರಾಯ ಬಹುಮನಿಯವರೊಂದಿಗೆ ದೋಅಬ್ ಪ್ರದೇಶದ ರಾಯಚೂರು -ಮುದಗಲ್ಲುಗಳನ್ನು ವಶಪಡಿಸಿಕೊಳ್ಳಲು ನಡೆಸಿದ ಯುದ್ಧಗಳಲ್ಲಿ ವಿಜಯನಗರ ಸೈನ್ಯವು ಸೋಲನ್ನು ಅನುಭವಿಸಿದ್ದುದಂತೂ ಸ್ಪಷ್ಟ(ಪ್ರಮುಖ ಯುದ್ಧಗಳ ಪಟ್ಟಿ ನೋಡಿ). ಈ ನಿಟ್ಟಿನಲ್ಲಿ ಎರಡನೆಯ ದೇವರಾಯನು

ತನ್ನ ಸೈನ್ಯಕ್ಕಾದ ಸೋಲಿಗೆ ಕಾರಣಗಳೇನೆಂಬುದನ್ನು ಆಸ್ಥಾನದ ಗಣ್ಯರು, ಸೈನಿಕ ಮುಖಂಡರಿಂದ ತಿಳಿದು ಸರಿಪಡಿಸಲೆತ್ನಿಸಿದುದನ್ನು ಕಾಣುತ್ತೇವೆ. ಅಂತೆಯೇ ೧೪೪೨ರಲ್ಲಿ ದಂಡನಾಯಕ ಲಕ್ಕಣ್ಣ ದಂಡೇಶನು ದಕ್ಷಿಣದ ದಂಡೆಯಾತ್ರೆಯಲ್ಲಿ ಜಯಗಳಿಸಿದುದಲ್ಲದೆ ಶ್ರೀಲಂಕಾವನ್ನು ಜಯಿಸಿರುವುದು ದೇವರಾಯ ಸೈನ್ಯದ ಬಲವರ್ಧನೆಗೊಳಿಸಿದ್ದುದು ದೃಢವಾಗುತ್ತದೆ. ಅಲ್ಲದೆ ೧೪೪೨ರಲ್ಲಿ ಲಕ್ಕಣ್ಣನನ್ನು ಅಪಾರ ಸೈನ್ಯದೊಂದಿಗೆ ರಾಯಚೂರು-ಮುದಗಲ್ಲುಗಳನ್ನು ಮುತ್ತಿ ಬಹಮನಿಯ ಅಲ್ಲಾವುದ್ದೀನ ಅಹಮ್ಮದನ ಸೈನ್ಯವನ್ನು ಸೋಲಿಸಿ ವಿಜಯ ಸಾಧಿಸಿದುದು ಸೈನ್ಯದಲ್ಲಾದ ಬದಲಾವಣೆಯನ್ನು ಹಾಗೂ ಸೈನ್ಯದ ಬಲವರ್ಧನೆಯನ್ನು ದೃಢಪಡಿಸುತ್ತದೆ. ರಜಾಕ್ ಕೂಡ ಸೈನ್ಯದ ವಿಜಯವನ್ನು ಸಮರ್ಥಿಸಿರುವುದನ್ನು ಕಾಣಬಹುದು. ಎರಡನೆಯ ದೇವರಾಯನಂತೆ ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ತನ್ನ ರಾಜ್ಯದಲ್ಲಿದ್ದ ಎಲ್ಲ ಬಗೆಯ ಆಂತರಿಕ ಗಲಭೆಗಳನ್ನು ಹತ್ತಿಕ್ಕಿ, ಅಮರನಾಯಕರ ಸೇವೆಯನ್ನು ಕ್ರಮಬದ್ಧಗೊಳಿಸಿದ್ದನು. ಅವರಿಂದ ಬರಬೇಕಿದ್ದ ದ್ರವ್ಯ ಮತ್ತು ಸೈನ್ಯಗಳಿಗೆ ವ್ಯವಸ್ಥಿತ ಆಡಳಿತ ರೂಪಿಸಿದ್ದುದನ್ನೂ ಕಾಣಬಹುದು. ಹಾಗೆಯೇ ರಾಮರಾಜನ ಬಖೈರು ರಕ್ಕಸಗಿ-ತಂಗಡಿಗಿ ಯುದ್ಧಕ್ಕೆ ಹೋಗುವ ಮುನ್ನ ವಿಜಯನಗರವು ನಡೆಸಿದ ಸಿದ್ಧತೆಗಳನ್ನು ಮನೋಜ್ಞವಾಗಿ ಚಿತ್ರಿಸಿದೆ. ಒಂದು ಯುದ್ಧದಲ್ಲಿ ಏನೆಲ್ಲಾ ಪರಿಕರಗಳು ಇರಬೇಕೆಂಬುದನ್ನು ಅದು ತುಂಬಾ ನೈಜವಾಗಿ ಬಿಂಬಿಸಿದೆ.

೫.೧.೩ ಕಾಲ ಮತ್ತು ಮುಹೂರ್ತ

ಯುದ್ಧವನ್ನು ಎಲ್ಲಾ ಕಾಲಗಳಲ್ಲಿ ಮಾಡುವುದು ಸಾಧ್ಯವಿಲ್ಲ. ಇದಕ್ಕೆ ಕಾರಣ ಪ್ರಾಕೃತಿಕ ವೈಪರೀತ್ಯಗಳಿರುವುದು. ಯುದ್ಧಗಳನ್ನು ಯಾವ ಯಾವ ಕಾಲಗಳಲ್ಲಿ ಮಾಡಬೇಕೆಂಬುದು ಪ್ರಾಚೀನ ಕಾಲದಿಂದಲೂ ಚರ್ಚಿತವಾದ ಸಂಗತಿಯಾಗಿದೆ. ಶುಕ್ರನೀತಿಸಾರವು ಶರತ್, ಹೇಮಂತ ಮತ್ತು ಶಿಶಿರ ಕಾಲಗಳು ಯುದ್ಧ ಕಾರ್ಯಾಚರಣೆಗೆ ಅತ್ಯುತ್ತಮವೆಂದು, ವಸಂತವು ಮಧ್ಯಮವೆಂದು, ಗ್ರೀಷ್ಮವು ಅಧಮವೆಂದೂ ಹೇಳಿದೆ. ಮಳೆಗಾಲದಲ್ಲಿ ಯುದ್ಧವನ್ನು ಮಾಡಕೂಡದು ಎಂದೂ ಅದು ಹೇಳುತ್ತದೆ. ಸೂಕ್ತಿ ಸುಧಾರ್ಣವದಲ್ಲಿ ''ಶರದಂ ಯಾತ್ರೆಗೆ ಲೇಸು'' ಎಂದಿರುವುದು ಯುದ್ಧಕ್ಕೆ ಬಹುಯೋಗ್ಯ ಕಾಲವಾಗಿದ್ದುದನ್ನು ಸೂಚಿಸುತ್ತದೆ. ಮನುಚರಿತವು, ''ರಾಜನು ದಂಡೆಯಾತ್ರೆ ಕೈಗೊಳ್ಳಲು ಮಾರ್ಗಶಿರ ಅಥವಾ ಪಾಲ್ಗುಣ ಮತ್ತು ಚೈತ್ರ ಮಾಸಗಳು ಉತ್ತಮವೆಂದು, ಈ ಕಾಲದಲ್ಲಿ ಆಹಾರ ಸಂಗ್ರಹಣೆ, ಸೇನೆಯ ಸಂಘಟನೆ ಹಾಗೂ ಪ್ರಯಾಣ ಮಾಡಲು ಅನುಕೂಲಕರ ವಾತಾವರಣ ಇರುತ್ತದೆ ಎಂದು ಹೇಳಿದೆ.[೮] ಯುದ್ಧಗಳಿಗೆ ನಿಗದಿಪಡಿಸಿರುವ ಕಾಲಗಳಂತೆ ಸೈನ್ಯದೊಂದಿಗೆ ರಾಜರು ಯುದ್ಧಕ್ಕೆ ಹೊರಡುವಾಗ ಜೋತಿಷಿ ಅಥವಾ ಜೋಯಿಸರಿಂದ ಶುಭಲಗ್ನ-ಮುಹೂರ್ತಗಳನ್ನು ಕೇಳುವ ಪದ್ಧತಿಯೂ ಇತ್ತು. ರಾಮನಾಥ ಚರಿತೆಯು ಯುದ್ಧ ಸಿದ್ಧತೆಯಲ್ಲಿ ತೊಡಗಿದ್ದ ಕಂಪಿಲನನ್ನು ಕುರಿತು,

''ಸಮರ ಸನ್ನರ್ದ ನೃಪರ ನಡುವೆಸೆದನು
ಸುಮುಹೂರ್ತವ ನಾಲಿಸುತ''[೯]

ಎಂದಿರುವುದು. ದೇವಾಲಯಗಳಿಗೆ ಭೇಟಿ ನೀಡಿ ದೇವರ ಆಶೀರ್ವಾದವನ್ನು ಶುಭಲಗ್ನದಲ್ಲಿ ಪಡೆದುದನ್ನೂ ಪದ್ಯವೊಂದರಲ್ಲಿ ನೋಡಬಹುದು :

''ದೇವತಾರ್ಚನೆಯ ನೊಸೆದು ಮಾಡಿ ಶಸ್ತ್ರಾದಿ
ದೇವಿಯ ಬಳಗೊಂಡವನಿಯ
ದೇವರಾಶೀರ್ವಚನವ ನಾಲಿಸಿ ರುದ್ರ
ದೇವನುತ್ತಮ ಲಗ್ನದೊಳು''[೧೦]

ಕನಕದಾಸರು ತಮ್ಮ ಮೋಹನ ತರಂಗಿಣಿಯಲ್ಲಿ ವರ್ಣಿಸಿರುವಂತೆ,''ಪಂಡಿತ ಪಂಚಾಂಗಿಗಳು''[೧೧] ರಾಜನ ಬಳಿಯಿದ್ದರು. ವಿಜಯನಗರ ಕಾಲದ ಚಾರಿತ್ರಿಕ ದಾಖಲೆಯೆಂದೇ ಪರಿಗಣಿತವಾಗಿರುವ 'ಮಧುರಾವಿಜಯಂ'ನಲ್ಲಿ,

''ಸರ್ವಸನ್ನಾಹವನು ಮಾಡಿಕೊಂಡ ಮೇಲೆ
ಭೂಪತಿಯು ನಿಂತ ತಾನೆದುರು ನೋಡುತ್ತ
ಅತಿಹಿತರಾಗಿದ್ದ ಜೋಯಿಸರು ಹೇಳಿದ್ದ
ಯಾತ್ರಾನುಕೂಲ ಮಂಗಳ ಗಳಿಗೆಯ''[೧೨]

ಎಂದು ಗಂಗಾದೇವಿಯು ತನ್ನ ಪತಿ ವೀರಕಂಪಣನ ಮಧುರಾ ದಂಡಯಾತ್ರೆಯ ಸಿದ್ಧತೆಯನ್ನು ಚಿತ್ರಿಸುತ್ತಾಳೆ. ನ್ಯೂನಿಜ್, ಕೃಷ್ಣದೇವರಾಯನ ರಾಯಚೂರು ಯುದ್ಧ ಸಮಯದಲ್ಲಿ ನಡೆದ ಪ್ರಸಂಗವನ್ನು ಕುರಿತು ಹೀಗೆ ಹೇಳುತ್ತಾನೆ: ''ಎರಡು ಕಡೆಯ ಪಡೆಗಳೂ ಕೈಯಲ್ಲಿ ಆಯುಧಧಾರಿಗಳಾಗಿ ಹಗಲೂ ರಾತ್ರಿ ಯುದ್ಧ ಪ್ರಾರಂಭವಾಗುವುದನ್ನೇ ಕಾಯುತ್ತಿದ್ದರು. ಶುಕ್ರವಾರ ಯುದ್ಧ ಪ್ರಾರಂಭಿಸುವುದು ಸರಿಯಲ್ಲವೆಂದು ಜ್ಯೋತಿಷ್ಕರು ಹೇಳಿದ್ದರಿಂದ ಶನಿವಾರ ಪ್ರಾರಂಭಿಸಬೇಕೆಂದು ನಿರ್ಧರಿಸಿ ಆ ದಿನಕ್ಕಾಗಿ ಕಾದರು''. ರಕ್ಕಸಗಿ-ತಂಗಡಿಗಿ ಯುದ್ಧಕ್ಕೆ ರಾಯರಾಯ ತನ್ನ ಪಡೆಯೊಂದಿಗೆ ಹೊರಡುವಾಗ ಮುಹೂರ್ತ ಕೇಳಿಸಿದ್ದುದು ರಾಮರಾಜನ ಬಖೈರಿನಿಂದ ತಿಳಿದು ಬರುತ್ತದೆ. ''ತಾನು ಮೋಹಿಮು ಹೊರಡುವುದಕ್ಕೆ ಜೋಯಿಸರನ್ನು ವಳ್ಳೆ ಮುಹೂರ್ತವನ್ನು ನೋಡಿಸಿ, ಅಮೃತ ಸಿದ್ಧಿಯೋಗದಿಂದಾ ಸಮಸ್ತವನ್ನು ಯಪ್ಪತ್ತೆರಡು ವಿನಿಯೋಗದವರ ಸಂಗಡ'' ರಾಮರಾಯ ಹೊರಟನೆಂದು ಹೇಳುತ್ತದೆ. [೧೩] ಇವುಗಳಿಂದ ವಿಜಯನಗರ ಅರಸರು ಧಾರ್ಮಿಕ ಪದ್ಧತಿಗಳನ್ನು ಎಷ್ಟೊಂದು ನಂಬಿದ್ದರೆಂಬುದು ವ್ಯಕ್ತಪಡುತ್ತದೆ. ರಾಜರು ಯುದ್ಧಕ್ಕೆ ಹೊರಡುವ ಮುನ್ನ ಶುಭ ಮುಹೂರ್ತವನ್ನು ತಿಳಿಯುವುದು ಮಾತ್ರವಲ್ಲ, ಅವರು ದೇವಾಲಯಗಳಿಗೆ ಭೇಟಿ ನೀಡಿ ದೇವರು, ಬ್ರಾಹ್ಮಣರು, ಹಿರಿಯರ ಆಶೀರ್ವಾದವನ್ನು ಪಡೆಯುತ್ತಿದ್ದರು. ನ್ಯೂನಿಜ್ ಹೇಳುವಂತೆ, ''ಬ್ರಾಹ್ಮಣರು ದೇವರಿಗೆ ಪೂಜೆ ಪುರಸ್ಕಾರ ಬಲಿ ಮುಂತಾದವುಗಳನ್ನು ಮಾಡಿದರು. ವಿಜಯಯಾತ್ರೆ ಹೊರಡಲು ದೇವರಿಂದ ಅಪ್ಪಣೆಯಾಗಿದೆ ಎಂದ ಮೇಲೆ ದಂಡು ಮುಂದೆ ಹೊರಟು ರಾಯಚೂರಿನ ಬಳಿ ಬೀಡು ಬಿಟ್ಟಿತು''.[೧೪] ದೇವರುಗಳಿಗೆ ಬಲಿ ನೀಡಿದ ವಿಚಾರವನ್ನೂ ನ್ಯೂನಿಜ್ ಪ್ರಸ್ತಾಪಿಸಿದ್ದಾನೆ: ''ಯುದ್ಧಕ್ಕೆ

ಸಿದ್ಧತೆಗಳಾದವು. ನೆರೆಹೊರೆಯ ರಾಜರಿಗೆ ಸಹಾಯಕೇಳಿ ಪತ್ರಗಳು ಹೋದುವು. ಬಿಸ್ನಾಗರದ ದೇವರುಗಳಿಗೆ ಬಲಿ ಮುಂತಾದುವನ್ನು ಕೊಟ್ಟು ರಾಜನು ತನ್ನ ಮಂದಿ ಮಾರ್ಬಲ ಸಹಿತ ಹೊರಟನು''. ವಿಜಯನಗರದಲ್ಲಿ ದೇವಾಲಯಗಳ ಮುಂದೆ ನಡೆಯುತ್ತಿದ್ದ ಬಲಿಪದ್ಧತಿ ಕುರಿತು ಡೊಮಿಂಗೋ ಪಾಯೇಸ್ ಹೇಳಿದ್ದಾನೆ. ರಾಜರು ಯುದ್ಧಕ್ಕೆ ಹೊರಡುವ ಮುನ್ನ ಮುಹೂರ್ತಗಳನ್ನು ಗೊತ್ತುಪಡಿಸುವ ಹಾಗೂ ದೇವ-ದೇವತೆಗಳಿಗೆ ಪ್ರಾಣಿ-ಪಕ್ಷಿಗಳನ್ನು ಬಲಿ ಕೊಡುವ ಪದ್ಧತಿಗಳನ್ನು ರೂಢಿಸಿಕೊಂಡು ಬಂದಿದ್ದುದು ಈ ಮೇಲಿನ ಆಕರಗಳಿಂದ ದೃಢವಾಗುತ್ತದೆ.

೫.೧.೪ ವೀಳೆಯ ಪದ್ಧತಿ

ಯುದ್ಧಕ್ಕೆ ಹೊರಡುವ ಮುನ್ನ ಸೇನಾ ಮುಖಂಡರು, ವೀರಯೋಧರು ಮತ್ತಿತರರಿಗೆ ದಾನ-ದತ್ತಿ ಹಾಗೂ ಬಹುಮಾನಗಳನ್ನು ಕೊಡುವುದರ ಜೊತೆಗೆ ವೀಳೆಯವನ್ನೂ ನೀಡುತ್ತಿದ್ದರು. ತಾಂಬೂಲವು ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಪಾತ್ರವಹಿಸಿದೆ. ಇದು ಹಿಂದೂ ಧರ್ಮದ ಎಲ್ಲ ಬಗೆಯ ಶುಭ ಸಂದರ್ಭಗಳಲ್ಲೂ ಬಳಕೆಗೊಂಡಿದೆ. ಇದು ಗೌರವದ ಸಂಕೇತವೂ ಹೌದು. ವಿಜಯನಗರ ಪೂರ್ವ ಕಾಲದ ವೀಳೆಯ ಪದ್ಧತಿಯನ್ನು ಅನೇಕ ಶಾಸನಗಳು ತಿಳಿಸುತ್ತವೆ. ಕ್ರಿ.ಶ.೧೨೭೫ರ ವೀರಗಲ್ಲಿನಲ್ಲಿ ಸಿರಿಗನೆಂಬುವನು "ವೀಳೆಯವಂ ಕಳೆದುಕೊಂಡು ಜವಾದಿ ಸಿರಿಗಂಧ"ಗಳನ್ನು ಲೇಪಿಸಿಕೊಂಡು ಯುದ್ಧಕ್ಕೆ ಹೊರಟ ಸಂಗತಿಯಿದೆ.[೧೫] ಇನ್ನೊಂದು ವೀರಗಲ್ಲು ೧೯೨೩ಕ್ಕೆ ಸೇರಿದ್ದು, ಶತ್ರುಗಳು ಹೊಸಗುಂದವನ್ನು ಮುತ್ತಿಗೆ ಹಾಕಿದಾಗ ಅರಸನು ವೀರನನ್ನು "ಕರೆದು ವೀಳೆಯವಂ ಕೊಟ್ಟು ಕಾಳಗಕ್ಕೆ ನಡೆಯೆಂಬುದಂ" ಎಂದಿದೆ.[೧೬] ಹಾಗೆಯೇ ರಾಮನಾಥಚರಿತದಲ್ಲಿ ಮಾತಂಗಿಯು "ಹಿಡಿದು ತಂದೊಪ್ಪಿಸುವೆನು ರಾಮನಾಥನ ಕೊಡು ವೀಳೆಯವ ನೀನು"[೧೭] ಎನ್ನುವ ಮಾತುಗಳಿಂದ ಯುದ್ಧವ್ಯವಸ್ಥೆಯಲ್ಲಿ ವೀಳೆಯವು ಪರಿಣಾಮಕಾರಿಯಾದ ಸಾಧನವಾಗಿದ್ದುದು ವ್ಯಕ್ತಗೊಳ್ಳುತ್ತದೆ." ವಿಜಯನಗರ ಕಾಲದಲ್ಲಿ ವೀಳೆಯದೆಲೆಗೆ ತುಂಬಾ ಬೇಡಿಕೆಯಿದ್ದಿತು. ಅಂದಿನ ವಿಜಯನಗರ ಪಟ್ಟಣದಲ್ಲಿ ವೀಳೆಯದೆಲೆ ಮಾರಾಟಕ್ಕೆಂದೇ ಒಂದು ಅಂಗಡಿ ಬೀದಿಯಿದ್ದುದು ಶಾಸನದಿಂದ ತಿಳಿದುಬರುತ್ತದೆ.[೧೮] ಅದನ್ನು ಕ್ರಮುಕ-ಪರ್ಣಾಪಣ ವೀಧಿಯೆಂದು ಕರೆಯಲಾಗಿದೆ. ಶಾಸನದಲ್ಲಿ ಕರೆಯಲಾದ ಕ್ರಮುಕ ಪರ್ಣಾಪಣ ಬೀದಿಯೇ ಇಂದು ಕರೆಯುತ್ತಿರುವ ಪಾನ್‌ಸುಪಾರಿ ಬಜಾರು ಆಗಿದೆ. ಅಲ್ಲದೆ ಕನಕದಾಸರು ತಮ್ಮ ದ್ವಾರಕಾಪುರ ವರ್ಣನೆಯಲ್ಲಿ ವಿವಿಧ ಅಂಗಡಿಗಳನ್ನು ಕುರಿತು "ಲಲಿತ ಬೆಳ್ಳೆಲೆಗಳಂಗಡಿಗಳೊಪ್ಪಿದವು" ಎಂದಿರುವುದು ವಿಜಯನಗರದ ಚಿತ್ರಣವೇ ಆಗಿದೆ.[೧೯] ಈ ಬೀದಿಯಲ್ಲಿದ್ದ ಯಲ್ಲಮ್ಮ(ಪಟ್ಟಣದ ಯಲ್ಲಮ್ಮ)ಳು ಯುದ್ಧದೇವತೆಯಾಗಿದ್ದು, ಅಂದು ಅರಸರು ಯುದ್ಧಕ್ಕೆ ಹೋಗುವಾಗ ದೇವಿಯಿಂದ ರಣವೀಳ್ಯವನ್ನು ಪಡೆಯುತ್ತಿದ್ದರೆಂದು ಜನಪದರು ಹಾಗೂ ಪಾಯೇಸನ ವರದಿಗಳಿಂದ ತಿಳಿದುಬರುವುದು.

ಕೃಷ್ಣದೇವರಾಯನು ಶಾಹಿ ಸುಲ್ತಾನರ ಮೇಲೆ ದಂಡೆತ್ತಿ ಹೋದಾಗ ತನ್ನ ಜೊತೆಯಲ್ಲಿದ್ದ ಅಮರನಾಯಕನಾದ ಪೆಮ್ಮಸಾನಿ ರಾಮಲಿಂಗನಾಯಕನಿಗೆ ವೀಳೆಯವ ನೀಡಿದುದನ್ನು ರಾಯವಾಚಕಮು ಮತ್ತು ಶ್ರೀಕೃಷ್ಣದೇವರಾಯನ ದಿನಚರಿಗಳಲ್ಲಿ ಉಲ್ಲೇಖಿಸಲಾಗಿದೆ. ವೀಳೆಯ ಪಡೆದ ರಾಮಲಿಂಗ ನಾಯಕನು "ತನ್ನ ಬಳಿಗೆ ತಮ್ಮ ದೊರೆತನದವರೆಲ್ಲರನ್ನು ಕರೆಸಿಕೊಂಡು। ತನ್ನ ಸ್ತೋಮಕ್ಕೆಲ್ಲಕ್ಕು ಯಿಷ್ಟು ದಿವಸವೂ ರಾಯ ಉಂಬಳಿಯ ಊಟವ ಮಾಡಿ ಬದುಕಿದೆವು। ಯೀಗ ಆಳಿದವರಿಗೆ ಕಾರ್ಯ ಉಂಟಾಗಿ। ಆಣೆ ಮೊನೆಗೆ। ಯಿದರಾದವರ ಮೇಲೆ ನಡೆಯೆಂದು। ಬಹುಮಾನವಾಗಿ ವೀಳ್ಯವ ಕೊಟ್ಟು ಕಳುಹಿಸಲಾಗಿ ಬಂದೆನು।"[೨೦] ಎಂದು ತನ್ನ ಎಲ್ಲ ಸೇನೆಯೊಡಗೂಡಿ ಸುಲ್ತಾನರ ವಿರುದ್ಧ ಯುದ್ಧಕ್ಕೆ ನಡೆದುದು ತಿಳಿದುಬರುತ್ತದೆ. ಕೆಳದಿ ನೃಪವಿಜಯದಲ್ಲೂ ಕೃಷ್ಣದೇವರಾಯನು ಚೌಡಪ್ಪ-ಭದ್ರಪ್ಪನಾಯಕರಿಗೆ ವೀಳೆಯ ನೀಡಿದ ವಿವರವಿದೆ. ಅದರಲ್ಲಿ, "ರಾಜ್ಯಮಂ ಬಾಡಿಸುತ್ತುಮಿರಲೀ ವೃತ್ತಾಂತಮಂ ಕೃಷ್ಣರಾಯಂ ಕೇಳ್ದು ಚೌಡಪ ಭದ್ರಪರೊಡನೆ ಸೈನ್ಯಮಂ ಕೂಡಿಸಿಕೊಟ್ಟವರ್ಗಳಂ ನಿಗ್ರಹಿಸಿಬರ್ಪುದೆಂದು ನಿಯಾಮಿಸಿ ತಾಂಬೂಲವಿತ್ತು ತೆರಳ್ಚಲ್ಕೈದಿದುಭಯ ಸೈನ್ಯಕ್ಕೆ" ಎಂದಿದೆ. ರಾಜ್ಯಕ್ಕೆ ಯಾವುದೇ ಗಂಡಾಂತರ ತಗುಲಿದ್ದರೆ ಹಾಗೂ ರಾಜ್ಯ ವಿಸ್ತರಣೆಗಾಗಿ ಯುದ್ಧ ಕೈಗೊಳ್ಳುವಾಗ ಅರಸರು ಸೇನಾನಾಯಕರು ಮತ್ತು ಯೋಧರಿಗೆ ತಾಂಬೂಲ ಅಥವಾ ವೀಳೆಯ ನೀಡುವುದರ ಮೂಲಕ ತಮ್ಮ ಕಾರ್ಯವನ್ನು ಸಾಧಿಸುತ್ತಿದ್ದರು.

ರಾಮರಾಯನು ರಕ್ಕಸಗಿ-ತಂಗಡಗಿ ಯುದ್ಧಕ್ಕೆ ಹೊರಡುವ ಮುನ್ನ ಎಲ್ಲ ಸೈನಿಕ ಮುಖಂಡರನ್ನು ಕರೆಸಿ ಅವರಿಗೆ ವೀಳೆಯ-ಬಹುಮಾನಗಳನ್ನು ನೀಡಿದ ವಿವರವಿದೆ. ಅವನು ನಾಯಕರಿಗೆ ನೀಡಿದ ಬಹುಮಾನಗಳೆಂದರೆ ರತ್ನಖಚಿತವಾದ ಕಡಗ, ಕಂಠಮಾಲೆ, ಕುಂಡಲ, ಕಿರೀಟ, ಕೌಸ್ತುಭ, ಹಾರ, ಕಲ್ಕಿ ತುರಾಯಿ, ಅಂಗಲ್ಯಾದಿ ಆಭರಣಗಳನ್ನು ದತ್ತು ಮಾಡಿದನೆಂದು ರಾಮರಾಜನ ಬಖೈರಿನಲ್ಲಿ ಹೇಳಲಾಗಿದೆ.[೨೧] ವಿಜಯನಗರ ಅರಸರು ಯುದ್ಧ ಸಂದರ್ಭಗಳಲ್ಲಿ ದಂಡನಾಯಕರು, ಸೈನಿಕರನ್ನು ಹುರಿದುಂಬಿಸಿ, ಸೈನ್ಯಕ್ಕೆ ಚೈತನ್ಯ ನೀಡುವ ಮೂಲಕ ತಾವು ಸಾಫಲ್ಯತೆಗಳನ್ನು ಅನುಭವಿಸುವ ಸಲುವಾಗಿ ಬಳಸಿದ ತಂತ್ರಗಾರಿಕೆಯೇ ಈ ರಣವೀಳ್ಯ ಅಥವಾ ವೀಳೆಯ ಪದ್ಧತಿಯೆಂದು ಹೇಳಬಹುದು.

೫.೧.೫ ಅನ್ವೇಷಣೆ

ಯುದ್ಧಕ್ಕೆ ಎಲ್ಲ ಬಗೆಯ ಸಿದ್ಧತೆಗಳು ನಡೆದ ಬಳಿಕ ಸೇನೆಯನ್ನು ಮುನ್ನಡೆಸುತ್ತಿದ್ದರು. ಇದಕ್ಕೆ ಪೂರ್ವದಲ್ಲಿ ಸೈನ್ಯವು ನಿರ್ದಿಷ್ಟ ಸ್ಥಳವನ್ನು ಸುಗಮವಾಗಿ ತಲುಪಲು ಚಲನೆಗೆ ಬೇಕಾದ ಮಾರ್ಗ ಅತ್ಯವಶ್ಯಕ. ಅದಕ್ಕಾಗಿ ಮಾರ್ಗ ಸಿದ್ಧಪಡಿಸಲೆಂದೇ ಪಥಶಿಲ್ಪಿಗಳನ್ನು ಕಳುಹಿಸಲಾಗುತ್ತಿತ್ತು. ಈ ಪಥಶಿಲ್ಪಿಗಳ ಕೆಲಸ-ಕಾರ್ಯಗಳನ್ನು ಕೌಟಿಲ್ಯ ಹೀಗೆ ಹೇಳಿದ್ದಾನೆ:

೧. ಶೋಧನ ಕರ್ಮ: ಸೇನೆ ಬರುವುದಕ್ಕೆ ಮುನ್ನ ಮಾರ್ಗಮಧ್ಯದ ರಸ್ತೆಯನ್ನು ಸರಿಪಡಿಸುವುದು, ಸೇತುವೆ, ನದಿ, ಬಾವಿ ಇತ್ಯಾದಿ ನೀರಿನ ಮೂಲಗಳನ್ನು ಪರೀಕ್ಷಿಸುವುದು

೨. ವಹನ ಕರ್ಮ: ಸೇನೆಯ ಜೊತೆಯಲ್ಲಿದ್ದು ಅವುಗಳಿಗೆ ಆಯುಧ, ಕವಚ, ಧಾನ್ಯ ಮತ್ತಿತರ ಸಾಮಾಗ್ರಿಗಳನ್ನು ಪೂರೈಸುವುದು

೩. ಅಪನಯನ ಕರ್ಮ: ಯುದ್ಧರಂಗದಲ್ಲಿ ಪೆಟ್ಟು ತಿಂದು ಕೆಳಕ್ಕೆ ಬಿದ್ದ ಸೈನಿಕರನ್ನು ಅವರ ಆಯುಧಗಳ ಸಮೇತ ಹೊರುವುದು.[೨೨]

ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆಯಲ್ಲಿ ಸೈನ್ಯದ ಜೊತೆಗೆ ಸಹಾಯಕ ಸೈನ್ಯವೂ ಇದ್ದಿತು. ಇದರಲ್ಲಿ "ಅಗಸರು, ವೇಶ್ಯೆಯರು, ಇದ್ದರು. ಸೈನ್ಯದ ಮುಂದೆ ಹತ್ತು-ಹನ್ನೆರಡು ಸಾವಿರ ಜನರು ನೀರು ತುಂಬಿ ಕೊಳ್ಳಲು ಚರ್ಮದ ಚೀಲಗಳನ್ನು ಹಿಡಿದು ಹೊರಟಿದ್ದರು. ಇವರು ದಾರಿಯಲ್ಲಿ ಹೋಗುತ್ತ ಸಿಕ್ಕಿದ ಕಡೆ ನೀರು ತುಂಬಿಕೊಂಡು ಸೈನ್ಯಕ್ಕೆ ನೀರು ಒದಗಿಸುತ್ತಿದ್ದರು. ಅಲ್ಲದೆ ಇಡೀ ಸೈನ್ಯದ ಮುಂದೆ ಮೂರು ನಾಲ್ಕು ಹರಿದಾರಿಗಳಷ್ಟು ದೂರದಲ್ಲಿ ಐವತ್ತು ಸಾವಿರ ಅನ್ವೇಷಕರಿದ್ದರು. ಇವರು ಮಂದೆ ಹೋಗಿ ಪ್ರದೇಶವನ್ನೆಲ್ಲಾ ಶೋಧಿಸಿ ಗೂಢಚಾರರ ಕೆಲಸ ಮಾಡುತ್ತಿದ್ದರು. ಇವರ ರಕ್ಷಣೆಗಾಗಿ ಪಾರ್ಶ್ವದಲ್ಲಿ ಬಿಲ್ಲುಬಾಣಗಳನ್ನು ಹಿಡಿದು ಎರಡು ಸಾವಿರ ರಾವುತರು ಹೊರಟರು" ಎಂದು ನ್ಯೂನಿಜ್ ವಿವರ ಪೂರ್ಣ ಮಾಹಿತಿ ನೀಡುತ್ತಾನೆ.[೨೩] ಇದರಿಂದ ಒಂದು ಬಾರಿ ಸೈನ್ಯವು ಯುದ್ಧಕ್ಕೆ ಹೊರಟಿತೆಂದರೆ ಅದಕ್ಕೆ ಬೇಕಾದ ಯುದ್ಧದ ಎಲ್ಲ ಪರಿಕರಗಳ ಜೊತೆಗೆ ಸೈನ್ಯದ ಸಂರಕ್ಷಣೆಯತ್ತ ಗಮನಕೊಟ್ಟಿದ್ದುದನ್ನು ಇಲ್ಲಿ ಕಾಣಬಹುದು. ನ್ಯೂನಿಜ್‌ನ ಈ ಹೇಳಿಕೆಯು ಕೃಷ್ಣದೇವರಾಯನ ಸೈನ್ಯದ ಪರಿಪಕ್ವತೆಯನ್ನು ಸ್ಪಷ್ಟಗೊಳಿಸುತ್ತದೆ. ಇಷ್ಟೊಂದು ಪೂರ್ವಭಾವಿ ಸಿದ್ಧತೆಗಳಿದ್ದುದರಿಂದಲೇ ಕೃಷ್ಣದೇವರಾಯ ತನ್ನ ಆಡಳಿತದಲ್ಲಿ ಸೋಲನ್ನು ಕನಸಿನಲ್ಲೂ ಕಾಣಲಿಲ್ಲ. ರಕ್ಕಸಗಿ-ತಂಗಡಗಿ ಯುದ್ಧಕ್ಕೆ ರಾಮರಾಯನು ಇದೇ ಬಗೆಯ ಸಿದ್ಧತೆ ನಡೆಸಿದುದನ್ನು ಬಖೈರು ಹೇಳುತ್ತದೆ. ಆದರೆ ಇದರಲ್ಲಿ ಯಶ ವಿಜಯನಗರದ್ದಾಗಿರಲಿಲ್ಲ.

೫.೧.೬ ಸೇನಾ ಶಿಬಿರ

ಶಿಬಿರವು ಯುದ್ಧಭೂಮಿಯ ಸಮೀಪದಲ್ಲಿ ಏರ್ಪಡಿಸಿದ ಸೇನೆಯ ವಾಸಸ್ಥಳವಾಗಿದೆ. ಇದನ್ನು ಕೌಟಲ್ಯನು ಸ್ಕಂಧಾವಾರವೆಂದು ಕರೆದಿರುವನು. ಸೇನಾಶಿಬಿರದ ಆಕಾರ, ರಚನೆ ಕುರಿತು ಸುದೀರ್ಘವಾಗಿ ಬರೆದ ಒಂದು ಪ್ರಕರಣವೇ ಅರ್ಥಶಾಸ್ತ್ರದಲ್ಲಿದೆ. ಶಿಬಿರದಲ್ಲಿ ರಾಜನ ಸ್ಥಾನ-ಕೋಶ, ಶಾಸನ-ವ್ಯವಹಾರಗಳನ್ನು ವಿಚಾರಿಸುವ ಸ್ಥಳ, ಆನೆ, ಕುದುರೆ, ರಥಗಳಿಗೆ ಸ್ಥಾನ, ಆಯುಧಾಗಾರ, ಅಡಿಗೆಶಾಲೆ, ಸೇನಾಧಿಪತಿಯ ಸ್ಥಾನ ಹೀಗೆ ಸೈನ್ಯದೊಂದಿಗೆ ಬರುವ ಎಲ್ಲ ಜನರಿಗೂ ಪ್ರತ್ಯೇಕ ಸ್ಥಾನಗಳಿರಬೇಕೆಂದು ಕೌಟಲ್ಯನು ಹೇಳುತ್ತಾನೆ. ಅಲ್ಲದೆ ಶತ್ರುಗಳು ಶಿಬಿರದ ಮೇಲೆ ಆಕ್ರಮಣ ಮಾಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನೂ ನೀಡಿರುವನು.

ವಿಜಯನಗರ ಸೇನಾಶಿಬಿರವನ್ನು ತಿಳಿಸುವ ಮಾಹಿತಿಗಳೆಂದರೆ, ಪ್ರವಾಸಿಗರ ಬರವಣಿಗೆಗಳು ಹಾಗೂ ರಾಯವಾಚಕಮು ಮತ್ತು ರಾಮರಾಯನ ಬಖೈರು ಮತ್ತಿತರ ಕೆಲವು ಆಕರಗಳು. ಸೇನಾ ಶಿಬಿರಕ್ಕೆ ಸಂಬಂಧಿಸಿದಂತೆ ನ್ಯೂನಿಜ್ ಹೇಳಿಕೆಗಳು ಅತ್ಯಂತ ಉಪಯುಕ್ತವಾಗಿವೆ.

ಕೃಷ್ಣದೇವರಾಯನು ಕೈಗೊಂಡ ರಾಯಚೂರು ದಂಡಯಾತ್ರೆಯಲ್ಲಿ ಯುದ್ಧಕ್ಕೆ ಮುನ್ನ ಹಾಕಿದ್ದ ಶಿಬಿರವನ್ನು ನ್ಯೂನಿಜ್ ಹೀಗೆ ಹೇಳುತ್ತಾನೆ: ''ರಾಜನ ಡೇರೆಯ ಸುತ್ತ ಮುಳ್ಳಿನ ದೊಡ್ಡ ಬೇಲಿ ಹಾಕಿ ಒಂದು ಕಡೆ ಮಾತ್ರ ಬಾಗಿಲು ಬಿಟ್ಟಿದ್ದರು. ಬಾಗಿಲನ್ನು ಮತ್ತು ಸುತ್ತಮುತ್ತಣ ಪ್ರದೇಶವನ್ನೂ ರಕ್ಷಣಾ ಪಡೆಯವರು ಶಿಸ್ತಿನಿಂದ ಕಾಯುತ್ತಿದ್ದರು.'' ಇದು ಶಿಬಿರ ಮತ್ತು ಅದರ ರಕ್ಷಣೆಯಾದರೆ ಶಿಬಿರವೊಂದು ನಗರವಾಗಿಯೂ ಪರಿಣಮಿಸಿತ್ತು : ''ದಂಡು ಬೀಡು ಬಿಟ್ಟಿದ್ದ ಪಾಳೆಯವನ್ನು ಬೀದಿಗಳಾಗಿ ವಿಂಗಡಿಸಿದ್ದರು. ಪ್ರತಿಯೊಬ್ಬ ದಳವಾಯಿಯ ತಂಡಕ್ಕೂ ಬೇರೆ ಬೇರೆ ಅಂಗಡಿಗಳಿದ್ದವು. ಇಲ್ಲಿ ಕುರಿ, ಮೇಕೆ, ಹಂದಿ, ಕೋಳಿ, ಮೊಲ ಮತ್ತು ಪಕ್ಷಿಗಳ ಮಾಂಸವನ್ನು ಹೇರಳವಾಗಿ ಮಾರುತ್ತಿದ್ದರು. ಅಕ್ಕಿ ಮತ್ತು ಇತರ ದವಸ ಧಾನ್ಯ ಯಥೇಚ್ಛವಾಗಿ ಸಿಗುತ್ತಿದ್ದುವು. ಚಿನ್ನದ ಒಡವೆಗಳನ್ನು ವಜ್ರವೈಢೂರ್ಯ ಮತ್ತು ಮಾಣಿಕ್ಯಗಳನ್ನು ಮಾರುವ ಅಂಗಡಿಗಳೇ ಇದ್ದವು'' ಎಂದು ಹೇಳುತ್ತಾ ನ್ಯೂನಿಜ್, ಶಿಬಿರದಲ್ಲಿದ್ದ ಆನೆ-ಕುದುರೆಗಳಿಗಾಗಿ ತಂದಿದ್ದ ಹುಲ್ಲು-ಸೊಪ್ಪಿನ ಮೆದೆಗಳು, ಸಾಮಾನು ಸರಂಜಾಮುಗಳ ವಿವರವನ್ನೇ ಕೊಡುತ್ತಾನೆ. ಅವನೇ ಉದ್ಗಾರ ತೆಗೆದಂತೆ ಕೃಷ್ಣದೇವರಾಯನ ''ಸೇನಾ ಶಿಬಿರವು ಯಾರಿಗಾದರೂ ತಾವು ಬಿಸ್ನಾಗರದಲ್ಲಿರುವಂತ ಭಾಸವಾಗುತ್ತಿತ್ತು.''[೨೪] ವಿಜಯನಗರದವರಂತೆ ಬಹಮನಿಯ ಶಿಬಿರವನ್ನು ಫೆರಿಸ್ತಾನಿಂದ ತಿಳಿಯಬಹುದಾಗಿದೆ. ಎರಡನೆಯ ದೇವರಾಯನ ವಿರುದ್ಧ ನಡೆದ ಯುದ್ಧವೊಂದರಲ್ಲಿ ಬಹಮನಿಯವರು ಸ್ಥಾಪಿಸಿದ್ದ ಶಿಬಿರದ ವಿವರ: ಹಿಂದೂ ಬಿಡಾರದ ಎದುರುಗಡೆ ನದಿಯ ಉತ್ತರ ದಡದ ಮೇಲೆ ಸುಲ್ತಾನ, ಒಂದು ಸುತ್ತುಗಟ್ಟೆ ಪಾಳೆಯ ರಚಿಸಿದ. ವೈರಿಗಳ ಕಾಲ್ದಳ ರಾತ್ರಿ ಆಕ್ರಮಣ ಮಾಡದಂತೆ ತಡೆಯಲು ರೋಮ್‌ನ ರೀತಿಯಲ್ಲಿ ಅವನು ತನ್ನ ಬಿಡಾರವನ್ನು ವಾಹನ(ಬಂಡಿಗಳು ಮತ್ತು ಸರಕು ಬಂಡಿಗಳು)ಗಳಿಂದ ಸುತ್ತುವರಿದಿದ್ದನು. ಬಾರ್ಬೋಸಾ, ''ಮೂರ್ ಅಧಿಪತಿಗಳು ಯುದ್ಧಕ್ಕೆ ಹೋಗುವಾಗ ಹತ್ತಿ ಬಟ್ಟೆಯಲ್ಲಿ ಮಾಡಿದ ಡೇರೆಗಳ ಸಮೇತ ಹೋಗುತ್ತಾರೆ'' ಎಂದಿದ್ದಾನೆ. ಇವು ಡೇರೆಗಳಿಗೆ ಬಳಸುತ್ತಿದ್ದ ಪರಿಕರಗಳಾಗಿವೆ.

೫.೧.೭ ರಣವಾದ್ಯಗಳು

ಪ್ರಾಚೀನ ಕಾಲದಿಂದಲೂ ಬಳಕೆಗೊಂಡ ರಣವಾದ್ಯಗಳನ್ನು ಕಾವ್ಯಗಳಲ್ಲಿ ಕಾಣಬಹುದು. ಬೆಟಗೇರಿ ಕೃಷ್ಣಶರ್ಮ, ಕೆ.ಶ್ರೀಕಂಠಯ್ಯ ಮತ್ತಿತರು ಮಧ್ಯಯುಗದ ಕಾವ್ಯಗಳಲ್ಲಿ ಉಲ್ಲೇಖವಾದ ಎಲ್ಲ ಬಗೆಯ ವಾದ್ಯಗಳನ್ನು ಪ್ರಸ್ತಾಪಿಸಿರುವುದರಿಂದ ಅವುಗಳ ಚರ್ಚೆಯು ಇಲ್ಲಿ ಅಪ್ರಸ್ತುತ. ವಿಜಯನಗರ ಮತ್ತಿತರ

ಮಧ್ಯಯುಗೀನ ಅರಸರು ಬಳಸುತ್ತಿದ್ದ ವಾದ್ಯಗಳನ್ನು ಈ ಕೆಳಗಿನಂತೆ ನೀಡಬಹುದು: ರಣಭೇರಿ, ದುಂದುಬಿ, ಹೆಬ್ಬರೆ, ಹರೆ, ಢಕ್ಕೆ, ಮೃದಂಗ, ಡಮಾಮಿ, ಚಂಬಕ, ಡವುಡೆ, ಡೋಳು, ಬರುಗು, ತಮಟೆ, ಕಹಳೆ, ನಗಾರಿ, ಬೊಂಬುಳಿ, ಕೊಂಬು, ತುತ್ತೂರಿ ಇನ್ನೂ ಮುಂತಾದವುಗಳನ್ನು ಯುದ್ಧಗಳಲ್ಲಿ ಬಳಸಿದ್ದರು.[೨೦] ಮಧುರಾವಿಜಯಂನಲ್ಲಿ ಕಾಣಬರುವಂತೆ,

"ಕುದುರೆಗಳು ಕೆನೆಯುತ್ತ ಗಜಯೂಥ ಬೃಂಹಿಸುತ
ತಿತ್ತಿರಿದಿಯುವ ಕಹಳೆ ಕೊಂಬುಗಳ ಮೇಳ
ಎಡೆಬಿಡದೆ ಭೋರ್ಗರೆದು ಮಾಡುತಿರುವಾ ಶಬ್ದ
ದಿಂದಾಯ್ತು ಬಹುದೊಡ್ಡ ಕೋಲಾಹಲ[೨೧]

ಮೋಹನ ತರಂಗಿಣಿಯು,

ಪಟಹ ದಿಂಡಿಮವಾದ್ಯ ಮುರಿತಾಪ ಬೇರಿತಂ
ಬಟದ ಮಾಮಿಗಳಾದಿಯಲಿ
ಲಟಕಟಿಸುವ ನಾನಾವಾದ್ಯ ಸಕಲದಿ
ಕ್ತಟ ಬಿರಿವಂತೆ ಗರ್ಜಿಸಿತು[೨೨]

ಸನತ್ಕುಮಾರ ಚರಿತೆಯು,

ಪಟಹ ಭೇರಿ ಮೃದಂಗ ಬಲುವಂ
ಭಟ ಕಹಳೆ ಡಿಂಡಿಮರವರಿ ಸಂ
ಘಟಿಸಿದುರಿ ಚೀರಣದ ಬೊಂಬುಳಿ ದೋಳು ಮೌವರಿಯ
ಪಟುವರ ಧ್ವನಿ ತೀವಿದುದು ದಿ
ಕ್ತಟಗಳನು ಧರಪನ ತನ ಭವವನು
ಕಟಕ ಸಹವೈತಂದು ಪೊಕ್ಕನು ಹಸ್ತಿನಾಪುರವ[೨೩]

ಕಂಠೀರವನರಸರಾಜ ವಿಜಯಂನಲ್ಲಿ,

ಕೊಂಬುಕಹಳೆ ರಾಯಭೇರಿ ತಂಬಟೆ ಹರೆ
ಚಂಬಕಂ ಮವುರಿ ತುತ್ತೂ
ಮುಂಬರಿದೆಸೆವ ನಾನಾವಾದ್ಯಗಳಾ
ಡಂಬರದೊಳಗೈತಂದ [೨೪]

ನ್ಯೂನಿಜ್ ರಾಯಚೂರು ಮುತ್ತಿಗೆ ಸಮಯದಲ್ಲಿ ರಣವಾದ್ಯಗಳಿಂದ ಹೊರಡುತ್ತಿದ್ದ ಶಬ್ದದ ಬಗೆಗೆ ಉದ್ಗಾರ ತೆಗೆದಿದ್ದಾನೆ: "ಯುದ್ಧದಲ್ಲಿ ಉಪಯೋಗಿಸಲು ತಂದಿದ್ದ ನಗಾರಿ, ಡಂಕ, ಡೋಳು, ಹರೆ ಮುಂತಾದ ವಾದ್ಯಗಳ ಕಥೆಯೇ ಬೇರೆ. ಇವುಗಳನ್ನೆಲ್ಲ ಉಪಯೋಗಿಸಿ ರಣಭೇರಿಯನ್ನು ಬಾರಿಸಿದಾಗ ಆಕಾಶವೇ ಕಳಚಿ ಬಿದ್ದಂತೆ ಶಬ್ದವಾಗುತ್ತಿತ್ತು" . ವಿಜಯನಗರದ ಯುದ್ಧಗಳಲ್ಲಿ ಯುದ್ಧಕ್ಕೆ ಹೊರಡುವಾಗ ಮತ್ತು ರಣರಂಗದಲ್ಲಿ ಈ

ಮೇಲೆ ಹೇಳಿರುವ ವಾದ್ಯಗಳನ್ನು ಮೊಳಗಿಸುತ್ತಿದ್ದರು. ಯುದ್ಧದ ಆರಂಭದಲ್ಲಿ ಒಂದು ವಾದ್ಯ ಬಳಸಿದರೆ, ಯುದ್ಧ ನಿಲ್ಲಿಸಲು ಬಳಸುತ್ತಿದ್ದ ವಾದ್ಯ ಮತ್ತೊಂದು. ಇವುಗಳಲ್ಲಿ ಯುದ್ಧಕಹಳೆ, ಧರ್ಮಕಹಳೆಗಳೆಂದು ಎರಡೂ ಕಡೆಯೂ ಸೈನ್ಯಗಳು ಯುದ್ಧ ಚಿಹ್ನೆಗಳಾಗಿ ಬಳಸುತ್ತಿದ್ದುದನ್ನು ಕಾಣಬಹುದು. 'ರಣಭೇರಿ'ಯು ಯುದ್ಧದ ಆರಂಭವನ್ನು, 'ಕೂಚುನಗಾರಿ'ಯು ಸೈನ್ಯವು ಮುಂದಕ್ಕೆ ಹೊರಡಬೇಕೆಂದು, ಧರ್ಮ ಕಹಳೆಯನ್ನು ಯುದ್ಧ ನಿಲ್ಲಿಸುವುದರ ಸೂಚಕಗಳಾಗಿ ಬಳಸಲಾಗಿದ್ದಿತು.

೫.೧.೮ ಯುದ್ಧಸ್ಥಿತಿ

ಯುದ್ಧಸಿದ್ಧತೆಯ ಬಳಿಕ ಸೇನೆಯನ್ನು ಪೌಜುಗಳಾಗಿ ವಿಭಾಗಿಸುವ, ಅವುಗಳಿಗೆ ದಳಪತಿಗಳನ್ನು ನೇಮಿಸುವ ಕಾರ್ಯಗಳು; ಯುದ್ಧ ಭೂಮಿಯನ್ನು ಗೊತ್ತುಪಡಿಸುವುದು; ಸೇನಾವ್ಯೂಹಗಳನ್ನು ರಚಿಸಿ ಹೋರಾಟಕ್ಕೆ ಅಣಿಗೊಳಿಸುವುದು; ಕದನದಲ್ಲಿ ಸೇನೆಯ ಹೋರಾಟದ ಬಗೆ-ಇವೇ ಮುಂತಾದವುಗಳನ್ನು ಯುದ್ಧಸ್ಥಿತಿಯು ಒಳಗೊಂಡಿದೆ.

ಶತ್ರುಸೈನ್ಯವು ತಮ್ಮ ಮೇಲೆ ಯುದ್ಧಕ್ಕೆ ಬರುತ್ತದೆಯೆಂಬ ಸುದ್ದಿ ತಿಳಿದ ಬಳಿಕ ಅರಸ ಅಥವಾ ಸೇನಾಮುಖಂಡರು ತಮ್ಮ ಸೇನೆಯನ್ನು ಪೌಜುಗಳಾಗಿ ವಿಭಾಗಿಸಿದುದನ್ನು ನಂಜುಂಡ ಕವಿಯು ವರ್ಣಿಸುವ ಬಗೆಯಿದು: "ಕರಿಘಟೆಯೊಳು ಕರಭವಾರು ತುರಗ ಸಾವಿರ ಹತ್ತು ಸಾವಿರ ಮಂದಿ ಇರಲು ಅದನೊಂದು ಪೌಜೆಂದು ಪೇಳ್ವರು ಬಲ್ಲಧರಣಿಪರು"[೨೦] ನ್ಯೂನಿಜ್ ಕೃಷ್ಣದೇವರಾಯನು ಆದಿಲ್ ಶಹನ ಸೈನ್ಯ ತನ್ನ ಮೇಲೆ ಯುದ್ಧಕ್ಕೆ ಹೊರಟಿದೆಯೆಂಬ ಸುದ್ದಿ ತಿಳಿದವನೇ ಏಳು ವಿಭಾಗಗಳಾಗಿ ಸೇನೆಯನ್ನು ವಿಭಜಿಸಿದನೆಂದು ಹೇಳುತ್ತಾನೆ.[೨೧] ಇದು ಸೇನೆಯ ವಿವಿಧ ಪೌಜುಗಳಾದರೆ ಈ ಪೌಜುಗಳಿಗೆ ಒಬ್ಬೊಬ್ಬ ದಳಪತಿಗಳನ್ನು ನೇಮಿಸಿದ್ದುದು ರಾಮನಾಥಚರಿತದಿಂದ ತಿಳಿದು ಬರುವುದು. ಅದರಲ್ಲಿ "ಸಾವಿರ ಕುದುರೆ ಮೂವತ್ತಾನೆ ಹದಿನೈದು ಸಾವಿರ ಕಾಲಾಳುಗಳಿಗೆ ಭಾವಸಂಗಮದೇವನೆಸೆದನು ರಾಯರ ದೇವನ ಬಲವಕ್ಕದೊಳಗೆ; ತುರಗ ಸಾವಿರ ಹದಿನೈದು ಸಾವಿರ ಮಂದಿ ಕರಿಗಳು ಮೂವತ್ತುವೆರಸು ಕರಮೆಸೆದನು ಕಂಪ ನೃಪನೆಡವಂಕದೊಳಿರದಣ್ಣ ಬೈರವದೇವ; ಕರಿಗಳೈವತಾಳೆಪ್ಪತ್ತು ಸಾವಿರ ತುರಗವೆರಡು ಸಾವಿರದೊಳು ಕರಮಸೆದನು ಕಾಟಣ್ಣ ಕಂಪಿಲಭೂವರನ ಮುಮ್ಮೊನೆಯ ಪೌಜಿನೊಳು[೨೨] ಎಂದು ವಿಸ್ತಾರವಾಗಿ ಹೇಳಲಾಗಿದೆ. ಕೃಷ್ಣದೇವರಾಯ ರಾಯಚೂರು ಕದನದಲ್ಲಿ ತನ್ನ ಸೇನೆಯನ್ನು ಏಳು ಪೌಜುಗಳಾಗಿ ವಿಭಾಗಿಸಿದ ಮೇಲೆ ಸೇನಾ ಮುಖಂಡರನ್ನು ನೇಮಿಸುತ್ತಾನೆ. ಅದರಲ್ಲಿ ತನ್ನ ಹತ್ತಿರದ ಸಂಬಂಧಿಯಾಗಿದ್ದ ಕುಮಾರ ವೀರಯ್ಯ(ಕುಮಾರ ವೀರ್ಯ)ನು ತನಗೆ ಮುಂಚೂಣಿ ಸೇನೆಯ ಪಟ್ಟ ಕಟ್ಟು ಎಂದು ಕೇಳಿದ್ದುದು, ಅದಕ್ಕೆ ರಾಯ ಒಪ್ಪಿದನೆಂದು ನ್ಯೂನಿಜ್ ಹೇಳುತ್ತಾನೆ.[೨೩]

೫.೧.೯ ವ್ಯೂಹ ರಚನೆ

ಸೇನೆಯನ್ನು ರಣರಂಗಕ್ಕೆ ನಡೆಸುವ ಮುನ್ನ ಯುದ್ಧಭೂಮಿಯನ್ನು ಗೊತ್ತುಪಡಿಸುತ್ತಿದ್ದುದೂ ಒಂದು ಬಗೆಯ ಯುದ್ಧ ತಂತ್ರವೇ ಸರಿ. ಕೌಟಲ್ಯನು, "ವ್ಯೂಹ ರಚನೆಗೆ ಯೋಗ್ಯವಾದ ಸ್ಥಳದಲ್ಲಿ ದಕ್ಷಿಣ ದಿಕ್ಕಿಗೆ ಅಭಿಮುಖವಾಗಿರುವುದು ಅಮಂಗಲವಾದ್ದರಿಂದ ದಕ್ಷಿಣೇತರ ದಿಕ್ಕಿಗೆ ಅಭಿಮುಖವಾಗುವಂತೆ ಸೂರ್ಯನಿಗೆ ಎದುರಾಗದೆ, ಅನುಕೂಲಕರ ಗಾಳಿಯುಳ್ಳ ಸ್ಥಳದಲ್ಲಿ ಸೈನ್ಯವನ್ನು ವ್ಯವಸ್ಥೆಗೊಳಿಸಬೇಕು"[೩೪] ಎಂದಿದ್ದಾನೆ. ಇಲ್ಲಿ ಸ್ಥಳದ ಜೊತೆಗೆ ಅನುಕೂಲಕರ ಗಾಳಿಯೂ ಮುಖ್ಯವೆಂಬುದಾಗಿ ಹೇಳಿರುವುದನ್ನು ಗಮನಿಸಬೇಕು. "ಯುದ್ಧಕ್ಕೆ ಅನುಕೂಲಕರ ಬಯಲನ್ನು ಆರಿಸಿಕೊಳ್ಳುವುದು ಒಂದು ಸಮರ ತಂತ್ರವಾಗಿದ್ದರೂ, ವೈರಿಯು ತನಗೆ ಅನುಕೂಲವಾಗುವಂತೆ ತಾನೇ ಆರಿಸಿದ ಸ್ಥಳದಲ್ಲಿ ಆತನನ್ನು ಸೋಲಿಸುವುದು ನಿಜವಾದ ವಿಜಯ"ವೆಂದು ಕುರುಳ್ ಗ್ರಂಥವು ಹೇಳಿದೆ.[೩೫] ವಿಜಯನಗರ ಮತ್ತು ಬಹಮನಿ ಸೇನೆಗಳೂ ಈ ಕ್ರಮಕ್ಕೆ ಹೊರತಾಗಿರಲಿಲ್ಲ.

ರಾಯಚೂರು ಕದನ ಸಮಯದಲ್ಲಿ ಬಿಜಾಪುರದ ಸೇನೆಯು ತಾನು ಬೀಡು ಬಿಟ್ಟ ನೆಲೆಯನ್ನು ಸಮರ್ಥಿಸಿಕೊಳ್ಳುವ ಬಗೆಯಿದು: "ಮತ್ತಾವುದೇ ಸ್ಥಳಕ್ಕಿಂತ ತಾನಿದ್ದ ಸ್ಥಳ ನದಿಯ ಸಹಾಯದಿಂದ ರಾಜನ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ಉತ್ತಮವಾದುದೆಂದು ಅವರು ನಿರ್ಧರಿಸಿದರು. ಏಕೆಂದರೆ ತೀರ ಸಮೀಪದಲ್ಲಿದ್ದ ಗಡುಬಿಟ್ಟರೆ ಮತ್ತೊಂದಿರಲಿಲ್ಲ"[೩೬] ಇದು ನದಿಯ ದಡದ ವಿಶಾಲ ಬಯಲಾಗಿದ್ದುದೂ ಕಾರಣವಾಗಿದೆ. ಅಲ್ಲದೆ ಸೈನ್ಯಕ್ಕೆ ಅಗತ್ಯವಾದ ನೀರು ನದಿಯಿಂದ ದೊರೆಯುತ್ತಿದ್ದು, ವೈರಿ ಸೇನೆಯು ಪಾರ್ಶ್ವಭಾಗಗಳಿಂದ ನಡೆಸುವ ಧಾಳಿಯನ್ನು ತಪ್ಪಿಸುವ ಉದ್ದೇಶವೂ ಆಗಿದ್ದಿತು. ಸೇನೆಗಳು ಯುದ್ಧಭೂಮಿಗೆ ಬಂದ ಬಳಿಕ ವ್ಯೂಹಗಳಾಗಿ ರಚಿಸುವ ಕ್ರಮವಿತ್ತು. ವ್ಯೂಹವನ್ನೂ ಭೂಲಕ್ಷಣ, ಕಾಲ ಮತ್ತು ಶತ್ರು ಪಡೆಯ ಬಲಾಬಲಗಳ ಆಧಾರದ ಮೇಲೆ ರಚಿಸಲಾಗುತ್ತಿತ್ತು. ವ್ಯೂಹಗಳಲ್ಲಿ ಅನೇಕ ವಿಧಗಳಿದ್ದುದನ್ನು ಕೌಟಲ್ಯ, ಕಾಮಂದಕ, ಶುಕ್ರ ಮುಂತಾದವರು ಹೇಳಿದ್ದಾರೆ. ಅವುಗಳಲ್ಲಿ ಮಕರ, ಗರುಡ, ಅರ್ಧಚಂದ್ರ, ವಜ್ರ, ಸರ್ಪ, ಶಕಟ, ದಂಡ, ಮಂಡಲ ಮತ್ತು ಸೂಜಿಗಳು ಮುಖ್ಯವಾಗಿವೆ. ವಿಜಯನಗರದಲ್ಲಿ ಇಂತಹುದೇ ವ್ಯೂಹ ರಚಿಸುತ್ತಿದ್ದರೆಂದು ಹೇಳಲಾಗದಿದ್ದರೂ ವ್ಯೂಹ ಪದ್ಧತಿಯಿದ್ದುದನ್ನು ದೃಢಪಡಿಸಬಹುದಾಗಿದೆ. ಎರಡನೆಯ ದೇವರಾಯ ಮತ್ತು ಫಿರೋಜ್ ಷಹರ ಸೈನ್ಯಗಳ ಮಧ್ಯೆ ನಡೆದ ಕದನವೊಂದರಲ್ಲಿ "ಇಸ್ಲಾಂ ಸೈನಿಕರ ನೇತೃತ್ವ ವಹಿಸಿದ ಮೀರ್-ಫಜಲ್-ಉಲ್ಲಾ ಕಾಫಿಕರ(ವಿಜಯನಗರ) ಮೇಲೆ ರಭಸದ ಅಕ್ರಮಣ ಮಾಡಿದ ಮತ್ತು ಅವರ ಮಧ್ಯವ್ಯೂಹವನ್ನು ಹೊಡೆದೋಡಿಸಿ ದಕ್ಷಿಣ ಪಾರ್ಶ್ವದ ಮೇಲೆ ಏರಿ ಹೋದನು" ಎನ್ನಲಾಗಿದೆ.[೩೬] ಇನ್ನೊಂದು ಕಡೆ ದೊರೆಯುವ ಮಾಹಿತಿಯಂತೆ, "ಇಡಲ್ ಕಾವ್ ನದಿ ದಾಟಿರುವನೆಂದು ಸುದ್ದಿಯನ್ನು ರಾಜನಿಗೆ ತರಲಾದೊಡನೆ ಅವನು ಎಲ್ಲರೂ ಸನ್ನದ್ಧರಾಗುವಂತೆ.... ವೈರಿ ತನ್ನ ಶಿಬಿರ ಹೂಡಿ ನೆಲೆ ಭದ್ರಗೊಳಿಸಿರುವನೆಂಬ ಸುದ್ದಿ ತರಲಾಗಿ, ಅವನು ತನ್ನೆಲ್ಲ

ಬಲಗಳ ಸಾಮೂಹಿಕ ಮುನ್ನಡೆಗೆ ಆಜ್ಞೆಯಿತ್ತ. ಅವನು ತನ್ನ ಸೈನ್ಯವನ್ನು ಏಳು ವಿಭಾಗಗಳಾಗಿ ವಿಭಜಿಸಿದ". ಇವುಗಳಲ್ಲಿ "ತನ್ನೆರಡು ಮುಂಭಾಗದ ವಿಭಾಗಗಳನ್ನು ಮುಂದುವರಿಯಲು ಆಜ್ಞೆಯಿತ್ತ"ನೆಂದು ಹೇಳಲಾಗಿದೆ.[೬೮] ನಂಜುಂಡ ಕವಿ ನೀಡುವ ವರ್ಣನೆ ಗಮನಿಸುವಂತದ್ದು:

ಕೆಲಬಲದೊಳು ಬಿಲ್ಲವರನವರ ಮುಂದೆ
ಬಲುಹರಿಗೆಯವರನವರ
ಕಲಹಕೆ ಕೈ ನೆರವಾಗಿ ಸಬಳಿಗರ
ಬಲಕೆ ನಾಯಕರ ಮಾಡಿದನು
ಅವರೆಡಬಲದೊಳು ರಾವುತರನು ಮ
ತ್ತವರ ಹಿಂಗಡೆಯೊಳಾನೆಗಳ
ಅವರ ಮುಂಗಡೆಯೊಳೊಲಿದು ಚೂಣಿ ಬಲು
ದವಕಿಗಳನು ನಿಲಿಸಿದನು.[೬೯]

ಮೂಲ ಸೈನ್ಯವನ್ನು ನಿಲ್ಲಿಸಿದಂತೆ ಮಾಂಡಲಿಕರ ಸೇನೆಯನ್ನು ಕುರಿತು, "ಮನ್ನೆಯರನು ಬಗೆಯರಿದು ನಿಲಿಸಿದನು" ಎಂದು ಹೇಳಲಾಗಿದೆ.[೭೦] ಅಂದರೆ ಸೇನೆಯನ್ನು ವಿವಿಧ ಭಾಗಗಳಾಗಿ ಹಾಗೂ ವ್ಯೂಹಗಳಾಗಿ ಹೋರಾಟಕ್ಕೆ ಸಜ್ಜುಗೊಳಿಸುವುದು ಯುದ್ಧ ತಂತ್ರಗಳಲ್ಲೊಂದಾಗಿದ್ದಿತು. ನಿರ್ಣಾಯಕ ಯುದ್ಧವಾದ ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ವಿಜಯನಗರ ಸೇನೆಯ ವ್ಯೂಹ ರಚನೆ ಹೀಗಿದೆ: "ಪಶ್ಚಿಮಕ್ಕಿರುವ ಹಿಂದೂ ಎಡಪಾರ್ಶ್ವವನ್ನು ತಿರುಮಲನ ಅಧಿಪತ್ಯಕ್ಕೆ ವಹಿಸಿಕೊಡಲಾಗಿತ್ತು; ರಾಮರಾಯ ಸ್ವತಃ ಮಧ್ಯದಲ್ಲಿದ್ದ ಮತ್ತು ಬಲಪಾರ್ಶ್ವ ವೆಂಕಟಾದ್ರಿಯ ಸೈನಿಕರಿಂದ ರಚಿತವಾಗಿತ್ತು".[೭೧] ಇದು ವಿಜಯನಗರ ಸೇನೆಯ ವ್ಯೂಹವಾದರೆ ಶಾಹಿ ಸುಲ್ತಾನರು ಶತ್ರು ಸೈನ್ಯಕ್ಕೆ ಸಮನಾಗಿ ಎದುರಿಗೆ ತುಕಡಿಗಳನ್ನು ನಿಲ್ಲಿಸಿದುದನ್ನು ಫೆರಿಸ್ತಾ ಹೇಳುತ್ತಾನೆ. "ತಿರುಮಲನಿಗೆ ಎದುರಾಗಿ ತಮ್ಮ ಸುಲ್ತಾನ ಅಲಿ ಆದಿಲ್‌ನ ನೇತೃತ್ವದ ಬಿಜಾಪುರದ ಪಡೆಗಳಿದ್ದವು; ಮುಸಲ್ಮಾನರ ಮಧ್ಯಭಾಗ ಹುಸೇನ ನಿಜಾಂ ಶಾಹನ ಅಧಿಪತ್ಯದಲ್ಲಿತ್ತು; ಮತ್ತು ವೆಂಕಟಾದ್ರಿಯ ಇದಿರಿನಲ್ಲಿದ್ದ ಮಿತ್ರ ಸೈನ್ಯದ ಎಡಪಾರ್ಶ್ವ ಅಹಮದಾಬಾದ ಮತ್ತು ಗೋಲ್ಕೊಂಡದಿಂದ ಅಲಿ ಬರೀದ್ ಮತ್ತು ಇಬ್ರಾಹಿಂ ಕುತುಬ್ ಸುಲ್ತಾರಿಬ್ಬರು ತಂದ ಬಲಗಳಿಂದ ಕೂಡಿತ್ತು."[೭೨]

ಇಲ್ಲಿ ಹೇಳಿರುವಂತೆ, ಸೈನ್ಯವನ್ನು ಮೂರು ವಿಭಾಗಗಳಾಗಿ ವಿಭಾಗಿಸಿ ವ್ಯೂಹ ರಚಿಸಿದ್ದು; ಅದರಲ್ಲಿ ಮುಖ್ಯ ಸೇನೆಯು ಮಧ್ಯದಲ್ಲಿರುತ್ತಿದ್ದುದು ಸಾಮಾನ್ಯವಾಗಿದ್ದಿತು. ಫಿರಂಗಿ ಪಡೆಯ ಪಾತ್ರವು ಸೈನ್ಯಗಳಲ್ಲಿ ಪರಿಣಾಮಕಾರಿಯಾಗಿದ್ದು, ಅವುಗಳನ್ನು ನಿಲ್ಲಿಸಿದ ಬಗೆ: ಮಿತ್ರ ಸೈನ್ಯಗಳು(ಸುಲ್ತಾನರ ಸೈನ್ಯ) ಮಧ್ಯದಲ್ಲಿ ಫಿರಂಗಿದಳ ಇಟ್ಟುಕೊಂಡು ಒಂದು ಉದ್ದ ಸಾಲಿನಲ್ಲಿ ಸನ್ನದ್ಧರಾಗಿ ನಿಂತರು... ನಿಜಾಮಶಾಹನ ಮುಂಭಾಗ ಮೂರು ಸಾಲುಗಳಲ್ಲಿ ನಿಲ್ಲಿಸಿದ ಆರುನೂರು ಫಿರಂಗಿಗಳಿಂದ ಮರೆಮಾಡಲ್ಪಟ್ಟಿತ್ತು. ಮೊದಲಿನ ಸಾಲಿನಲ್ಲಿ ಭಾರಿ

ಫಿರಂಗಿಗಳು, ಆಮೇಲೆ ಚಿಕ್ಕವುಗಳು, ಹಿಂಬದಿಯಲ್ಲಿ ಹಗುರವಾದ ತಿರುಗಣೆ ಫಿರಂಗಿಗಳಿದ್ದವು. ಈ ವ್ಯೂಹರಚನೆಯನ್ನು ಕಾಣದಂತಿಡಲು ಮುಂದೆ ಎರಡು ಸಾವಿರ ವಿದೇಶಿ ಬಿಲ್ಲುಗಾರರನ್ನು ನಿಲ್ಲಿಸಲಾಗಿತ್ತು.[೪೩] ಎಂದು ಫೆರಿಸ್ತಾ ಹೇಳುತ್ತಾನೆ. ರಾಯಚೂರು ಯುದ್ಧದಲ್ಲಿ ಶತ್ರುಗಳನ್ನು ಹತ್ಯೆಗೈಯುವುದಕ್ಕಾಗಿ ಫಿರಂಗಿದಳವನ್ನು ಸುಲ್ತಾನರು ಸನ್ನದ್ಧವಾಗಿರಿಸಿದ್ದುದನ್ನು ನ್ಯೂನಿಜ್ ಹೇಳುತ್ತಾನೆ.[೪೪] ಈ ಮೇಲಿನ ಎಲ್ಲ ವಿವರಗಳು ವಿಜಯನಗರ ಕಾಲದ ವ್ಯೂಹ ರಚನೆಯನ್ನು ಸಮರ್ಥಿಸುವಂಥವು.

೫.೧.೧೦ ಯುದ್ಧದ ಬಗೆಗಳು

ಅಧ್ಯಯನದ ದೃಷ್ಟಿಯಿಂದ ವಿಜಯನಗರ ಕಾಲದ ಯುದ್ಧಗಳನ್ನು,

೧. ಬಯಲು ಯುದ್ಧ
೨. ಕೋಟೆ ಕಾಳಗ
೩. ನೌಕಯುದ್ಧಗಳೆಂಬ ಮೂರು ವಿಭಾಗಗಳಲ್ಲಿ ಅಧ್ಯಯಿನಿಸಲಾಗಿದೆ.

೫.೧.೧೦.೧ ಬಯಲು ಯುದ್ಧ

ವಿಜಯನಗರದ ಅರಸರು ಬಯಲು ಹಾಗೂ ಕೋಟೆಕಾಳಗದಲ್ಲಿ ಪ್ರಾವಿಣ್ಯತೆ ಪಡೆದಿದ್ದರು. ಕೃಷ್ಣದೇವರಾಯನು ರಾಯಚೂರು ದಂಡೆಯಾತ್ರೆಯಲ್ಲಿ ಮೊದಲು ಗೊಬ್ಬೂರು ಬಳಿ, ಬಯಲು ಯುದ್ಧವನ್ನು ಮಾಡಿ ಅದರಲ್ಲಿ ಶತ್ರುಸೈನ್ಯವನ್ನು ಸೋಲಿಸುತ್ತಾನೆ. ಹಾಗೆಯೇ ರಾಯಚೂರು ಕೋಟೆ ಕಾಳಗದಲ್ಲಿ ಜಯಿಸಿ, ಅದನ್ನು ವಶಪಡಿಸಿಕೊಂಡುದ್ದನ್ನು ನೋಡಬಹುದು.

ಯುದ್ಧಕ್ಕೆ ಸೈನ್ಯಗಳನ್ನು ವ್ಯೂಹವಾಗಿ ರಚಿಸಿದ ಬಳಿಕ ಎರಡೂ ಕಡೆ ಹೋರಾಟ ಪ್ರಾರಂಭವಾಗುತ್ತಿತ್ತು. ಆರಂಭದ ಸೂಚನೆಯಾಗಿ ರಣವಾದ್ಯಗಳನ್ನು ಮೊಳಗಿಸುವುದು; ಸೇನಾಮುಖಂಡರು ಕೈಗಳನ್ನು ಬೀಸುತ್ತಿದ್ದುದು ಕ್ರಮವಾಗಿತ್ತು. "ವೀರಭಟರು ಪೊಕ್ಕರು ಸಿಂಗಭೂಪನ ಕರದ ಚವರದ ಸನ್ನೆಯಲಿ"; "ಬೀಸಿದ ಸನ್ನೆಯ ಚವರ ನಿಲ್ಲದ ಮುನ್ನೋಸರಿಸದೆ ಪಟುಭಟರು ಘಾಸಿಮಾಡಿದರು"; "ಸನ್ನೆಯ ಚವರಗಳಾಡಿತು ಕಾಕತಿಕುಲರನ್ನನ ಪೌಜುಗಳೊಳಗೆ ಭಿನ್ನವಾದ್ಯರವದಿಂ ಚೂಣಿಗಂಟಿಕ್ಕಿತುನ್ನತ ಶೌರ್ಯ ಮದದೊಳು"[೪೫] ಎಂದು ನಂಜುಂಡ ಕವಿಯು ವರ್ಣಿಸುವನು. ಎರಡೂ ಕಡೆಯಿಂದ ಸೈನಿಕರಿಗೆ ಮುಖಂಡರಿಂದ ಸೂಚನೆ ದೊರೆತ ಮೇಲೆ ಹೋರಾಟ ಪ್ರಾರಂಭವಾಗುತ್ತಿತ್ತು ಎಂಬುದು ನ್ಯಾಯಯುತ ಯುದ್ಧದ ಲಕ್ಷಣವಾದರೂ, ವಿಜಯನಗರ ಕೈಗೊಂಡ ಹಲವು ಯುದ್ಧಗಳು ಏಕಾ ಏಕಿ ಮುತ್ತಿದಂಥವಾಗಿದ್ದವು. ಕೃಷ್ಣದೇವರಾಯ ಒರಿಸ್ಸಾ ದಂಡಯಾತ್ರೆ ಕೈಗೊಂಡಾಗ ಮಾರ್ಗ ಮಧ್ಯದ ಕೋಟೆಗಳಾದ ವಿನುಕೊಂಡ, ಬೆಲ್ಲಮಕೊಂಡ, ಅದ್ದಂಕಿ, ಕೇತವರ, ತಂಗೇಡ, ನಾಗಾರ್ಜುನಕೊಂಡ,

ಉಂತ್ರಕೊಂಡ, ಕಂಡಿಕೋಟೆ, ನಲ್ಲಂಕೊಂಡ-ಇನ್ನು ಮುಂತಾದವುಗಳನ್ನು ಆಕ್ರಮಣಕಾರಿ ಯುದ್ಧಗಳಿಂದ ವಶಪಡಿಸಿಕೊಂಡಿದ್ದನು.[೪೬]

ಯುದ್ಧದ ಹೋರಾಟವನ್ನು ಕಾವ್ಯಗಳು ತುಂಬಾ ನೈಜವಾಗಿ ವರ್ಣಿಸಿವೆ. ಆದರೆ ಈ ಕಾವ್ಯಗಳು ಸಾರುವುದು ಹೆಚ್ಚಾಗಿ ಧರ್ಮಯುದ್ಧದ ನಿಯಮಗಳನ್ನು. ರಣ ಆವೇಶದಿಂದ ಹೊರಟ ಸೇನೆಗಳ ಕಾಳಗದಲ್ಲಿ,

"ಭೇರಿಯ ಭೋಂಕಾರ ಚಾಪದ ಠಂಕಾರ
ವೀರರ ಹುಂಕಾರ ಬಾಳ
ಘೋರ ಕ್ಷಣತ್ಕಾರವೆಸೆಯಲು ಭಯ ಬಲ
ಮೋರೊಂದರೊಳು ತಾಗಿದವು"[೪೭]

ಯುದ್ಧದಲ್ಲಿ ಸಮಬಲಗಳಲ್ಲಿ ಕಾದುತ್ತಿದ್ದುದೂ ಉಂಟು. ಕಾವ್ಯಗಳು ಆನೆಗೆ-ಆನೆ ಕುದುರೆಗೆ-ಕುದುರೆ, ಕಾಲಾಳುಗಳಿಗೆ-ಕಾಲಾಳುಗಳು ನಿಂತು ಹೋರಾಡುತ್ತಿದ್ದುದನ್ನು ಹೇಳುತ್ತವೆ. ಚೆನ್ನಬಸವಪುರಾಣವು ಯುದ್ಧ ನಡೆಯುತ್ತಿದ್ದ ಬಗೆಯನ್ನು,

"ಕುದುರೆಗಳೊಳೊತ್ತಿದುವು ಮುತ್ತಿದುವು
ಮದಗಜವನಾನೆಗಳ್ ತಾಕಿದುವು ನೂಂಕಿದುವು
ಪದಚರರ್ ಪದಚರರೊಳುರುಬಿದರ್ ತರುಬಿದರ್ ನಾನಾಯುಧಗಳಿಂದೆ
ಆದಟನಿಂ ರಥಿಕರೆಚ್ಚಾಡಿದರ್ ಮಾಡಿದರ್
ಸದಮರದ ಸಮರಮಂ ರಾವುತರ್ ಮಾವುತರ್
ಸದೆದಾಡಿದರ್ ಹತಾಹತಿಗಳಿಂ ಖತಿಗಳಿಂದು ಭಯ ಬಲಮೇನೆಂಬನು" ಎಂದು ಹೇಳಿದೆ.[೪೮]

ಗಂಗಾದೇವಿಯು ತನ್ನ ಕೃತಿಯಲ್ಲಿ ಮಧುರೆಯ ದಂಡಯಾತ್ರೆಯಲ್ಲಿ ನಡೆದ ಯುದ್ಧದಲ್ಲಿ,

"ಭುಗಿಲೆದ್ದ ಕೋಪದಲಿ ಕಾಲಾಳು ಕಾಲಾಳ
ದಂತಿ ಘಟೆ ದಂತಿ ಘಟೆಯಲಿ ಸೆಣಸಿತು
ತುರಗ ತುರಗದಳದಿಂ ಆವೇಶವೊತ್ತರಿಸಿ
ಇರಿದಾಡಿ ಕದನ ಬಹು ಭಾರೈಸಿತು"[೪೯] ಎನ್ನುತ್ತಾಳೆ.

ನಂಜುಂಡ ಕವಿಯು ತನ್ನ ವರ್ಣನೆಯಲ್ಲಿ,

"ಕರಿಕರಿಯೊಳು ಕಾಲಾಳು ಕಾಲಾಳೊಳು
ತುರಗ ತುರಗದೊಳು ಬಂದು
ಉರವಣೆಯಿಂತಾಗಿರವೆರಡುಂಬಲ
ಗಿರಿಗಿರಿಯೊಳು ತಾಗುವಂತೆ"[೫೦] ಎಂಬುದಾಗಿ ವರ್ಣಿಸಿದ್ದಾನೆ.

ಚಾರಿತ್ರಿಕ ಕಾವ್ಯವೆಂದೇ ಹೇಳಲಾದ ಕಂಠೀರವ ನರಸರಾಜವಿಜಯಂ ಕೃತಿಯಲ್ಲೂ,

"ಕುದುರೆಗೆ ಕುದುರೆ ಕಾಲಾಳಿಗೆ ಕಾಲಾಳು
ಮದಗಜಗಳಿಗೆ ಗಜಗಳು

ಕದುಬಿನ ಮನ್ನೆಯರಿಗೆ ಮನ್ನೆಯರುಗಳು
ಕದನದೊಳಿರಿದಾಡಿದರು"[೫೧] ಎಂದಿದೆ.

ಹೀಗೆ ಕಾವ್ಯಗಳಲ್ಲಿ ದೊರೆಯುವ ವಿವರಗಳೆಲ್ಲವೂ ಸಮಬಲದೊಡನೆ ಶತ್ರು ಬಲವನ್ನು ಎದುರಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಸಮಬಲದೊಡನೆ ಹೋರಾಡುವುದು ವೀರಲಕ್ಷಣವಾಗಿತ್ತು. ಇದು ಯುದ್ಧ ನಿಯಮವೂ ಆಗಿದ್ದುದನ್ನು ಗಮನಿಸಬಹುದು. ಇದು ಉಭಯ ಸೈನ್ಯದ ಆಯಾಯ ಪಡೆಗಳು ನಡೆಸುತ್ತಿದ್ದ ಹೋರಾಟವಾದರೆ, ಶಸ್ತ್ರಾಸ್ತ್ರಗಳನ್ನು ಬಳಸುತ್ತಿದ್ದ ವೈಖರಿ ಭಿನ್ನ ಬಗೆಯದು. ಚೆನ್ನಬಸವಪುರಾಣವು,

"ಅಸಿಗಳಿಂದೊರ್ಮೆ ಕುಂತದೊಳೊರ್ಮೆ ನೆಗಳ್ದ ಪ
ಟ್ಟಿಸಗಳಿಂದೊರ್ಮೆ ಗದೆಗಳಿಂದೊರ್ಮೆ ಘನತರದ
ಮುಸಲಂಗಳಿಂದೊರ್ಮೆ ಮುದ್ಗರದಿಂನೊರ್ಮೊರ್ಮೆ ಸುರಗಿಯಿಂದೊರ್ಮೆಯೊರ್ಮೆ
ಅಸಮ ಸಂಗ್ರಾಮದೊಳಗಿಂತುಭಯ ನಾಯಕರ್
ಮಸಕದಿಂ ಪೊಯ್ದಾಡಿದರ್ ಬಿಡದೆ"[೫೨] ಎಂದು ಹೇಳಿದರೆ, ರಾಮನಾಥ ಚರಿತದಲ್ಲಿ,

"ತಲೆವರಿಗೆಯಲಿ ಕವಿದರು ಕಾಲವರಾರ್ದು
ತಲೆವಿಲ್ಲುಗೊಂಡು ಬಿಲ್ಲವರು
ತೊಲಗು ತೊಲಗೆನುತ ಮುಸುಕಿದರು ಸಬಳದ
ಬಲುಗಡಿಯರು ಬಳಸಿದರು"[೫೩] ಎನ್ನಲಾಗಿದೆ.

ಈ ಮೇಲಿನ ವರ್ಣನೆಗಳು ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳುಗಳೆಂದು ಎರಡೂ ಕಡೆಯ ಸೇನೆಗಳ ಸಮ-ಸಮ ಬಲಗಳೊಡನೆ ಹೋರಾಡುವ ಚಿತ್ರಣ ನೀಡುತ್ತವೆ. ಆದರೆ ಸನತ್ಕುಮಾರ ಚರಿತೆಯ ವರ್ಣನೆ ಭಿನ್ನ ಸ್ವರೂಪದ್ದು. ಅದರಲ್ಲಿ,

"ಕೆಡಹಿದನು ತುರಗಗಳ ತಲೆಗಳ
ಕೆಡಹಿದನವ ರಾವುತರ ರಥಗಳ
ನೋಡೆಯ ಲೆಚ್ಚನು ರಥಿಕರೆದೆಯಲಿ ಕೀಲಿಸಿದ ಸರಳ
ಪೊಡವಿಗುರುಳಿಸಿದನು ಗಜಂಗಳ
ನಡೆಸಿದನು ಮಾರ್ಬಲವನೆಮಪುರ
ದೆಡೆಗೆ ಮಾಡಿದ ವೇತಾಳ ಸಂತತಿಗೆ"[೫೪] ಎಂದಿದೆ.

ಇಲ್ಲಿ ವೀರನೋರ್ವನು ಕುದುರೆಗಳು ಮತ್ತು ರಾವುತರನ್ನು ಹೊಡೆದುರುಳಿಸಿದುದಲ್ಲದೆ, ರಥದ ಮೇಲೆ ನಿಂತು ಹೋರಾಡುವವರು ಮತ್ತು ಆನೆಗಳನ್ನೂ ಹೊಡೆದು ಉರುಳಿಸಿದನೆಂದು ಹೇಳಿದೆ. ವಿಜಯನಗರದ ಯುದ್ಧಗಳಲ್ಲೂ ಸಾಮಾನ್ಯವಾಗಿ ಇದೇ ಬಗೆಯ ಹೋರಾಟವಿದ್ದುದು ನಿಜ. ಗಂಗಾದೇವಿಯು ಶತ್ರು ಸೈನ್ಯದ ಸೈನಿಕರು ರಣರಂಗ ಬಿಟ್ಟು ಓಡಿದುದನ್ನು,

"ಕೆಲಕೆಲರು ಭಯದಿಂದ ಎದ್ದುಬಿದ್ದೋಡಿದರು
ಆಯುಧದ ಹೊರೆಯಿಳಿಸಿ ಹಗುರಾಗುವ

ಇಂದಿನನುಭವದಿಂದ ಇನ್ನು ಮುಂದೆಂದಿಗೂ
ಕದನಕಿಳಿಯೆವು ಎಂದು ಮಾಡಿದರು ಶಪಥ''[೫೫]

ಎಂದು ಹೇಳುತ್ತಾಳೆ. ಇದು ಯುದ್ಧದಲ್ಲಿ ಸೋತ ಯಾವುದೇ ಸೈನ್ಯದ ನೈಜ ಚಿತ್ರಣವಾಗಿರುತ್ತದೆ. ಆದರೆ ಫಿರಂಗಿ, ಮದ್ದುಗುಂಡುಗಳ ಬಳಕೆಯು ಈ ಮೇಲೆ ಹೇಳಿದ ಕ್ರಮಗಳನ್ನು ನುಚ್ಚುನೂರು ಮಾಡಿತೆಂದು ಹೇಳಬಹುದು. ರಾಯಚೂರು ಯುದ್ಧದಲ್ಲಿ ವಿಜಯನಗರ ಸೈನ್ಯದ ಯೋಧರು ತಮ್ಮ ತಮ್ಮ ಆಯುಧಗಳಿಂದ ಹೋರಾಡಲು ಅನುವಾಗುತ್ತಿದ್ದಂತೆ ಮುಸ್ಲಿಮರು ಫಿರಂಗಿಗಳಿಂದ ಗುಂಡಿನ ದಾಳಿ ಮಾಡಿದರು. ಇದರಿಂದ ಅನೇಕ ಕುದುರೆ, ಕಾಲಾಳು ಮತ್ತು ಆನೆಗಳು ಸತ್ತು ವಿಜಯನಗರ ಸೈನ್ಯದಲ್ಲಿ ಬಹಳ ನಷ್ಟ ಉಂಟಾಗಿ ಹಿಂದೆ ಸರಿಯುವಂತಾಯಿತೆಂದು ನ್ಯೂನಿಜ್ ಹೇಳುತ್ತಾನೆ.[೫೬] ನ್ಯೂನಿಜ್ ಹೋಲಿಕೆಯನ್ನು ಗಮನಿಸಿದರೆ, ಕಾವ್ಯಗಳು ವ್ಯಕ್ತಪಡಿಸುವ ಹಿಂದಿನ ನ್ಯಾಯಯುತ ಹೋರಾಟದ ಕ್ರಮಗಳನ್ನು ಮದ್ದುಗುಂಡು ಮತ್ತು ಫಿರಂಗಿಗಳು ದೂರಸರಿಸಿ, ಅವು ಯುದ್ಧತಂತ್ರಗಳಲ್ಲಿ ಮಹತ್ತರ ಬದಲಾವಣೆ ಮಾಡಿದುದು ತಿಳಿದುಬರುತ್ತದೆ. ವಿಜಯನಗರ ವಿನಾಶಕ್ಕೆ ಕಾರಣವಾದ ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ಇದೇ ಬಗೆಯ ತಂತ್ರವನ್ನು ಶಾಹಿಸುಲ್ತಾನರು ಬಳಸಿದ್ದರು. ರಾಮರಾಯನ ಸೈನ್ಯದ ಎದುರಿಗಿದ್ದ ನಿಜಾಂಶಹನ ನೇತೃತ್ವದ ಪಡೆಯ ಮೂರು ಸಾಲುಗಳಲ್ಲಿ ನಿಲ್ಲಿಸಿದ ಆರು ನೂರು ಫಿರಂಗಿಗಳಿದ್ದು, ಅವುಗಳನ್ನು ಕಾಣದಂತಿಡಲು ಎರಡು ಸಾವಿರ ವಿದೇಶಿ ಬಿಲ್ಲುಗಾರರನ್ನು ನಿಲ್ಲಿಸಿದ್ದರು. ಇದನ್ನು ತಿಳಿಯದ ರಾಮರಾಯನ ಸೈನ್ಯವು ಹತ್ತಿರ ಬರುತ್ತಿದ್ದಂತೆ ಮುಂದೆ ನಿಲ್ಲಿಸಿದ್ದ ಸುಲ್ತಾನನ ಬಿಲ್ಲುಗಾರರ ಪಡೆ ಹಿಂದೆ ಸರಿದಿತು; ಹಾಗೂ ತಕ್ಷಣ ಫಿರಂಗಿಗಳನ್ನು ಹಾರಿಸಿ ಮಾರಣಾಂತಿಕ ಪರಿಣಾಮ ಉಂಟು ಮಾಡಿತು.[೫೭] ಆಕ್ರಮಣಕಾರಿ ಹಾಗೂ ಕಪಟತಂತ್ರಗಳಿಂದ ಕೂಡಿದ ಈ ಯುದ್ಧವನ್ನು ಡಾ.ಎಸ್. ಶ್ರೀಕಂಠಶಾಸ್ತ್ರಿ ಛದ್ಮಯುದ್ಧವೆಂದೇ ಕರೆದಿದ್ದಾರೆ.[೫೮] ಒಟ್ಟಿನಲ್ಲಿ ಫಿರಂಗಿಗಳ ಬಳಕೆಯು ಯುದ್ಧ ತಂತ್ರದ ಗತಿಯನ್ನು ಬದಲಿಸಿದವೆಂದೇ ಹೇಳಬಹುದು.

೫.೧.೧೦.೨ ಕೋಟೆ ಕಾಳಗ

ಕೋಟೆಯು ರಾಜ್ಯವ್ಯವಸ್ಥೆಯ ಏಳು ಅಂಗಗಳಲ್ಲಿ ಒಂದು. ಇದು ಮಧ್ಯಯುಗದ ಚರಿತ್ರೆಯಲ್ಲಿ ಮಹತ್ತರ ಪಾತ್ರ ವಹಿಸಿತ್ತು. ಪ್ರಾಚೀನ ರಾಜಕೀಯ ಚಿಂತಕರು ಕೋಟೆಯ ರಚನೆಗೆ ಹೆಚ್ಚು ಮಹತ್ವ ನೀಡಿದ್ದರು. ಕೋಟೆಯು ರಾಜಕೀಯವೆಂಬ ದೇಹದ ಪ್ರಮುಖ ಹಾಗೂ ಅನಿವಾರ್ಯವಾದ ಅಂಗವಾಗಿದ್ದಿತು. ಯವುದೇ ರಾಜ್ಯದ ರಾಜಧಾನಿಯು ದೇಹದಲ್ಲಿನ ಹೃದಯವಿದ್ದಂತೆ ರಾಜಧಾನಿಯನ್ನು ವಶಪಡಿಸಿಕೊಂಡರೆ, ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ಅಥವಾ ದುರ್ಗದ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಾಗಿತ್ತು. ಕೋಟೆಗಳ ಪ್ರಾಮುಖ್ಯತೆಯನ್ನು ಭಾರತೀಯರು ಹರಪ್ಪಾ-

ಮೊಹೆಂಜೋದಾರೋಗಳ ಕಾಲದಿಂದ ತಿಳಿದಿದ್ದುದು ಉತ್ಖನನ ವರದಿಗಳಿಂದ ಗೊತ್ತಾಗುತ್ತದೆ. ಅಲ್ಲದೆ ಪ್ರಾಚೀನ ಸಾಹಿತ್ಯ ಕೃತಿಗಳಾದ ಕೌಟಲ್ಯನ ಅರ್ಥಶಾಸ್ತ್ರ, ಕಾಮಂದಕನ ನೀತಿಸಾರ, ಶುಕ್ರನ ಶುಕ್ರನೀತಿಗಳಿಂದ ಕೋಟೆಯ ರಚನೆ, ಅದರ ಭಾಗಗಳು ಮತ್ತು ಅದನ್ನು ಕಟ್ಟುವ ಉದ್ದೇಶ ಇತ್ಯಾದಿ ಅಂಶಗಳು ತಿಳಿದುಬರುತ್ತವೆ. ಕರ್ನಾಟಕದ ಕೋಟೆ ಮತ್ತು ಕೋಟೆ ಕಾಳಗಗಳನ್ನು ಕುರಿತು ಹಲವು ಸಾಹಿತ್ಯ ಕೃತಿಗಳು ವರ್ಣಿಸಿವೆ. ವಿಜಯನಗರದ ಮಟ್ಟಿಗೆ ಹೇಳುವುದಾದರೆ ನಂಜುಂಡ ಕವಿಯ 'ರಾಮನಾಥ ಚರಿತ', ವಿರುಪಾಕ್ಷಪಂಡಿತನ 'ಚೆನ್ನಬಸವಪುರಾಣ', ಮೂರನೆಯ ಮಂಗರಸನ 'ಸಮ್ಯಕ್ತ್ವಕೌಮುದಿ', ಭೀಮ ಕವಿಯ 'ಬಸವಪುರಾಣ'ಗಳು ಮುಖ್ಯವಾಗಿವೆ. ಇವುಗಳಲ್ಲದೆ ವಿಜಯನಗರೋತ್ತರ ಕಾಲದ ಗೋವಿಂದವೈದ್ಯನ ಕಂಠೀರವ ನರಸರಾಜವಿಜಯಂ ಮತ್ತು ಕೆಳದಿ ಬಸವರಾಜು ಕೃತ ಶಿವತತ್ತ್ವರತ್ನಾಕರ ಕೃತಿಗಳು ಕೋಟೆ ಮತ್ತು ಕೋಟೆಕಾಳಗಗಳನ್ನು ಮನದಣಿಯೆ ವರ್ಣಿಸಿವೆ.

ಕೋಟೆಯನ್ನು ಕಟ್ಟುವ ಮೊದಲು ಸೂಕ್ತ ಸ್ಥಳದ ಆಯ್ಕೆಯು ಅಗತ್ಯವಾಗಿದ್ದಿತು. ಕೌಟಲ್ಯನು "ಜನಪದದ ತುದಿಯಲ್ಲಿ ನಾಲ್ಕು ಕಡೆಗೂ ವ್ಯಾಪಿಸಿಕೊಂಡಿರುವ, ಯುದ್ಧಕ್ಕೆ ಸ್ವಾಭಾವಿಕವಾಗಿ ವಿಷಮವಾಗಿರುವ ಸ್ಥಳವನ್ನು ದುರ್ಗವಾಗಿ ಆಶ್ರಯಿಸಬೇಕು"[೫೯] ಎಂದಿದ್ದಾನೆ. ಇದಲ್ಲದೆ ಕೋಟೆಯ ರಚನಾ ವಿಧಾನ, ಬಗೆಗಳು, ಕೋಟೆಕಾಳಗದ ತಂತ್ರಗಳನ್ನು ತನ್ನ ಕೃತಿಯಲ್ಲಿ ಪ್ರತ್ಯೇಕ ಅಧ್ಯಾಯಗಳಲ್ಲಿ ಹೇಳುತ್ತಾನೆ. ಈ ಬಗೆಗೆ ಶುಕ್ರನೀತಿ ಸಾರದಲ್ಲಿ, "ಅನೇಕ ರೀತಿಯ ಗಿಡಮರಗಳ ಪೊದರುಗಳಿಂದ ಕೂಡಿದ, ದನಕರುಗಳು ಹಕ್ಕಿಗಳು ಮತ್ತಿತರ ಪ್ರಾಣಿಗಳಿಂದ ಸಮೃದ್ಧವಾಗಿರುವ, ಒಳ್ಳೆಯ ಜಲಾಶಯವಿರುವ, ಧಾನ್ಯ ಸಮೃದ್ಧಿ ಇರುವ, ಬೆಟ್ಟ, ನೀರುಗಳಿಂದ ಆವೃತ್ತವಾಗಿರುವ ಪ್ರದೇಶಗಳಲ್ಲಿ ಕೋಟೆಗಳನ್ನು ನಿರ್ಮಿಸಬೇಕು"[೬೦] ಎಂದಿದೆ. ಇದು ಕೋಟೆಯು ಸ್ಥಳದ ಆಯ್ಕೆಯಾದರೆ ಕೋಟೆಯನ್ನು ಕಟ್ಟುವ ಉದ್ದೇಶವೂ ಮುಖ್ಯ. ಬೃಹಸ್ಪತಿಯು ರಾಜನೀತಿ ಪ್ರಕಾಶದಲ್ಲಿ, "ರಾಜನು ತನ್ನ ಪರಿವಾರ, ಜನರು ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಬೇಕು" ಎನ್ನುತ್ತಾನೆ.[೬೧] ಕೋಟೆಯು ಮಧ್ಯಯುಗದಲ್ಲಿ ಎಷ್ಟು ಅವಶ್ಯಕವಾಗಿತ್ತೆನ್ನುವುದನ್ನು ಹೇಳುತ್ತಾ, ಕೋಟೆಯಿಲ್ಲದಿರುವ ರಾಜನ ಸ್ಥಿತಿಯನ್ನು ಹೀಗೆ ವರ್ಣಿಸುತ್ತಾನೆ. "ದುರ್ಗಹೀನೋ ನರಪತಿಃ ವಾತಾಭ್ರಾವಯವೈಸ್ಸಮ" ಅಂದರೆ ಭದ್ರವಾದ ಕೋಟೆಯಿಲ್ಲದ ರಾಜನು ಬಿರುಗಾಳಿಯ ಮುಂದಿನ ಮೋಡದ ತುಂಡುಗಳಿಗೆ ಸಮಾನವೆಂದರ್ಥ.[೬೨] ಶಿವತತ್ತ್ವರತ್ನಾಕರದಲ್ಲೂ ಈ ಅಂಶವನ್ನು ಕಾಣಬಹುದು:

> ವಿಷಹೀನೋ ಯಥಾ ನಾಗೋ ಮದಹೀನೋ ಯಥಾ ಗಜಃ।
> ಸರ್ವೇಷಾಂ ವಶ್ಯತಾಂ ಯಾತಿ ದುರ್ಗಹೀನಸ್ತಥಾ ನೃಪಃ॥

ಅಂದರೆ ಕೋಟೆಯಿಲ್ಲದ ರಾಜನು ವಿಷವಿಲ್ಲದ ಹಾವಿನಂತೆ, ಮದವಿಲ್ಲದ ಆನೆಯಂತೆ ಎಲ್ಲರಿಗೂ ಸುಲಭವಾಗಿ ವಶನಾಗಿ ಬಿಡುವನು.[೬೩] ಯುದ್ಧ ಅಥವಾ ಕಾಳಗಗಳೆಂದರೆ ಶತ್ರುರಾಜನ ಸಾಮ್ರಾಜ್ಯದ ಭೂಭಾಗವನ್ನು

ವಶಪಡಿಸಿಕೊಳ್ಳುವುದರ ಜೊತೆಗೆ ಶತ್ರುರಾಜನ ಅರಮನೆ-ಸಂಪತ್ತು ಮೊದಲಾದವುಗಳನ್ನು ಆಕ್ರಮಿಸುವುದು; ಅಲ್ಲಿ ಹಾರಾಡುತ್ತಿದ್ದ ಶತ್ರುರಾಜ್ಯದ ಬಾವುಟ ಅಥವಾ ಧ್ವಜ ಉರುಳಿಸಿ ತಮ್ಮ ಧ್ವಜವನ್ನು ಹಾರಿಸುವುದೂ ಆಗಿತ್ತು. ಆದುದರಿಂದ ವಿಜಯನಗರ ಮತ್ತು ಅನಂತರದ ಅವಧಿಯಲ್ಲಿ ರಾಜರು ಮತ್ತು ಪಾಳೆಯಗಾರರು ತಮ್ಮ ಅರಮನೆಗಳ ಸುತ್ತ ಭದ್ರವಾದ ರಕ್ಷಣಾ ಕೋಟೆ-ಕೊತ್ತಲಗಳನ್ನು ನಿರ್ಮಿಸುತ್ತಿದ್ದರು.

ಕೋಟೆಯೆಂದಾಕ್ಷಣ ನೆನಪಿಗೆ ಬರುವ ಭಾಗಗಳೆಂದರೆ ಆಳವಾದ ಅಗಳು, ಅದನ್ನು ಬಳಸಿ ಕಟ್ಟಲಾದ ಎತ್ತರದ ಆಳ್ವೇರಿಗಳು, ಕೊತ್ತಲಗಳು, ತೆನೆಗಳು(ಚಿತ್ರ-೨೧) ಮುಗಿಲಟ್ಟಣೆಗಳು, ಹೆಬ್ಬಾಗಿಲು ಮತ್ತು ಧ್ವಜಕೇತುಗಳು. ಇವು ಕೋಟೆಯ ಮುಖ್ಯ ಭಾಗಗಳೂ ಹೌದು. ವಿಜಯನಗರ ಕಾಲದಲ್ಲೂ ಕೌಟಲ್ಯ ಮತ್ತಿತರರು ಹೇಳಿರುವಂತೆ, ನಾಲ್ಕು ಬಗೆಯ ಕೋಟೆಗಳಿದ್ದುದನ್ನು ರಾಯವಾಚಕಮು ಮತ್ತು ಶ್ರೀಕೃಷ್ಣದೇವರಾಯನ ದಿನಚರಿಗಳು ಪ್ರಸ್ತಾಪಿಸುತ್ತವೆ. ಕೃಷ್ಣದೇವರಾಯನು ಕಳಿಂಗ ದಂಡಯಾತ್ರೆ ಕೈಗೊಂಡ ಸಮಯದಲ್ಲಿ ಮಾರ್ಗ ಮಧ್ಯದ ಅನೇಕ ಕೋಟೆ-ಕೊತ್ತಲಗಳನ್ನು ವಶಪಡಿಸಿಕೊಂಡನು. ಈ ಕೋಟೆಗಳಲ್ಲಿ ಸ್ಥಳದುರ್ಗ, ಜಲದುರ್ಗ, ವನದುರ್ಗ ಹಾಗೂ ಗಿರಿದುರ್ಗಗಳಿದ್ದುದನ್ನು ಈ ಮೇಲಿನ ಕೃತಿಗಳು ಹೇಳುತ್ತವೆ. ವಿಜಯನಗರದ ಕೋಟೆ, ಅದರ ರಚನೆ, ವಿನ್ಯಾಸ, ವಿಸ್ತಾರಗಳನ್ನು ಪ್ರವಾಸಿಗರಾದ ನಿಕೊಲೊ ಕೊಂತಿ, ರಜಾಕ್ , ಪಾಯೇಸ್ , ಬಾರ್ಬೋಸಾ, ನ್ಯೂನಿಜ್ ಮತ್ತಿತರು ವರ್ಣಿಸಿದ ಕೋಟೆಯನ್ನು ಈಗಾಗಲೇ ಹೇಳಲಾಗಿದೆ.

ವಿಜಯನಗರದ ಕಾಲದಲ್ಲಿ ಬಯಲು ಕಾಳಗಗಳಿಗಿಂತ ಹೆಚ್ಚಾಗಿ ಕೋಟೆಕಾಳಗಗಳು ನಡೆದಿರುವುದನ್ನು ಕಾಣಬಹುದು. ಕೋಟೆಕಾಳಗಗಳು ನಡೆದಿರುವುದನ್ನು ಶಾಸನಗಳು ಕೋಟೆಗಳ ಹೆಸರನ್ನು ಮಾತ್ರ ಉಲ್ಲೇಖಿಸಿದರೆ ಸಾಹಿತ್ಯ ಕೃತಿ ಹಾಗೂ ಪ್ರವಾಸಿವರದಿಗಳು ಕಾಳಗದ ಪೂರ್ಣವಿವರಗಳನ್ನು ನೀಡುತ್ತವೆ. ಶಾಸನಗಳಲ್ಲಿ ತಿಳಿದು ಬರುವಂತೆ, ಕೃಷ್ಣದೇವರಾಯನು ತನ್ನ ಆಳ್ವಿಕೆಯ ಅವಧಿಯಲ್ಲಿ ವಶಪಡಿಸಿಕೊಂಡ ವಿವಿಧ ಬಗೆಯ ಕೋಟೆಗಳಿದ್ದವು; ಉದಯಗಿರಿ, ಅದ್ದಂಕಿ, ವಿನುಕೊಂಡ, ಬೆಲ್ಲಮಕೊಂಡ, ನಾಗಾರ್ಜುನಕೊಂಡ, ತಂಗೇಡ, ಕೇತವರ, ಕೊಂಡವೀಡು, ಧರಣಿಕೋಟೆ, ಕೊಂಡಪಲ್ಲಿ, ಅನಂತಗಿರಿ, ಉಂಡ್ರಕೊಂಡ, ಉರ್ಲಕೊಂಡ, ಅರುವಪಲ್ಲಿ, ಜಲ್ಲಿಪಲ್ಲಿ, ಗಂಡಿಕೋಟೆ, ಕಪ್ಪಲುವಾಯಿ, ನಲ್ಲಂಕೊಂಡ, ಕಂಬಮ್ಮೆಟ್ಟು, ಕನಕಗಿರಿ, ಶಂಕರಗಿರಿ, ಕಂದಕೂರು, ಬೆಜೆವಾಡ, ವಾರಂಗಲ್, ರಾಜಮಹೇಂದ್ರಿ, ಪನಗಲ್, ಗುಂಟೂರು ಇನ್ನೂ ಮುಂತಾದವು.[೬೪]

ಕರ್ನಾಟಕದ ಕೋಟೆಕಾಳಗಗಳನ್ನು ಕುರಿತು ಹಲವು ಸಾಹಿತ್ಯ ಕೃತಿಗಳಿದ್ದರೂ ಅವುಗಳಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಕೃತಿಗಳನ್ನು ಹೆಚ್ಚು ಬಳಸಿಕೊಂಡಿದ್ದು, ಉಳಿದವುಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕದ ಕೋಟೆಕಾಳಗಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಬೆಟಗೇರಿ ಕೃಷ್ಣಶರ್ಮರ 'ಕನ್ನಡಿಗರ ಕೋಟೆಕಾಳಗ' ಮುಖ್ಯವಾದುದು. ಅದು ಕೋಟೆಯ ವಿಧಗಳು, ಭಾಗಗಳು, ಶಸ್ತ್ರಾಸ್ತ್ರಗಳು, ಇನ್ನು

ಮುಂತಾದ ಅರ್ಥಪೂರ್ಣ ಸಂಗತಿಗಳನ್ನು ಕುರಿತಿದೆ. ಹಾಗೆಯೇ ಚಿದಾನಂದಮೂರ್ತಿ, ಶ್ರೇಷಾಶಾಸ್ತ್ರಿ, ಶ್ರೀಕಂಠಯ್ಯ ಮತ್ತಿತರರು ತಮ್ಮ ಅಧ್ಯಯನಗಳ ಉಪಭಾಗವಾಗಿ ಕೋಟೆಕಾಳಗವನ್ನು ಅಭ್ಯಸಿಸಿರುವರು.

ಕೋಟೆಕಾಳಗಕ್ಕೆ ಮೊದಲು ಶತ್ರು ಪಡೆಯು ದಾಳಿ ಮಾಡುವುದೆಂಬ ಸುದ್ದಿ ತಿಳಿದ ಅರಸರು ಕೋಟೆಯನ್ನು ಸಿದ್ಧಗೊಳಿಸುವುದು ರೂಢಿ. ಅಂತೆಯೇ ಕೋಟೆಯ ಭಾಗಗಳ ದುರಸ್ತಿ ಮತ್ತಿತರ ಕಾರ್ಯಗಳು ನಡೆಯುತ್ತಿದ್ದವು. ಶತ್ರುಪಡೆಯು ದಂಡೆತ್ತಿ ಬರುವುದೆಂಬ ಶಂಕೆಯಿಂದ ಕಂಪಿಲರಾಯನು ತನ್ನ ದಂಡನಾಯಕನಾದ ಬೈಚಪ್ಪನನ್ನು ಕುಮ್ಮಟದುರ್ಗದ ರಕ್ಷಣೆಗೆ ನೇಮಿಸುತ್ತಾನೆ. ಬೈಚಪ್ಪ ದಂಡನಾಯಕನು ಕೋಟೆಯನ್ನು ಸಿದ್ಧಗೊಳಿದ ಬಗೆಯನ್ನು ರಾಮನಾಥಚರಿತದಲ್ಲಿ,

''ದಳವಾಡಸಹಿತ ಬೈಚಪ್ಪ ದುರ್ಗವ ಹೊಕ್ಕು
ತಳವದದರ ಬಲಿಕೆಯನು
ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ
ದಲಸದೆ ಮಿಗೆ ಮಾಡಿಸಿದನು
ಅಗಳಾಳ್ವೇರಿ ಕೋಟೆ ಕೊತ್ತಳ ನೆಲ ದಿಡ್ಡಿ
ಮುಗಿಲಟ್ಟಳೆ ನೆಲಗುಮ್ಮ
ಪ್ರಗಿಸಿ ಕೊಯೊಳಗಾಗಿಸಿಕೊಂಬ ಪಲಪುಲಿ
ಮೊಗಗಳನನು ಮಾಡಿಸಿದನು'' ಎಂದು ಹೇಳಿದರೆ ಸಿದ್ಧಗೊಂಡ ಕೋಟೆಯನ್ನು,
''ಮುಂದಕೆ ನಡಯಿಸಿ ಪುಲಿಮೊಗವಿಕ್ಕುವ
ಬಂದರ ಕೂಡೆ ದೂರದೊಳು
ನಿಂದಿರಿದಾಡುವ ಬಲುಭದ್ರವೆಸಗುವ
ರಿಂದ ಕಣ್ಣೆಸೆದುದಾ ದುರ್ಗ''[೬೫]ವೆಂದು ನಂಜುಂಡ ಕವಿ ವರ್ಣಿಸಿದ್ದಾನೆ.

ಭೀಮಕವಿಯು ತನ್ನ ಬಸವಪುರಾಣದಲ್ಲಿ ವರ್ಣಿಸುವ ಪರಿಯಿದು.

ಎಸೆವ ಕೋಂಟೆಯ ತೆನೆಗಳಲಿ ಕ
ಟಿಸಿ ಪತಾಕೆಗಳಂ ಬಸಿದ ಬಲು
ದಸಿಗಳಂ ಮಲಗಿಸಿ ವಾರಂಗಳನಿರಿಸಿ ಎಡಗಡೆಗೆ
ಅಸಮ ಸದ್ಭಟರೆನಿಬರೋ ಎಂ
ದುಸುರುವೆರೆ ಪೊಸ ದುರ್ಗವಂ ಪಾ
ಟಿಸಿ ಪಿರಿಯ ಬಾವಿಗಳನ ಗುಳಿಸಿದನದರೊಳಗೆ[೬೬] ಎಂದಿದ್ದಾನೆ.

ಶ್ರೀ ಕೃಷ್ಣದೇವರಾಯನ ದಿನಚರಿಯಲ್ಲಿ ಕೋಟೆ-ಕೊತ್ತಲಗಳನ್ನು ನೋಡಿಕೊಳ್ಳಲು ಪಾರುಪತ್ಯೆಗಾರರೆಂಬ ಅಧಿಕಾರಿಗಳನ್ನು ನೇಮಕ ಮಾಡಿದುದು ಕಂಡುಬರುತ್ತದೆ. ಈ ಪಾರುಪತ್ಯೆಗಾರರು ಕೃಷ್ಣದೇವರಾಯ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಕೋಟೆಯನ್ನು ಸಿದ್ಧಗೊಳಿಸಿದ ಪರಿಯಿದು:

ಬಾಗಲ ಪಾರುಪತ್ಯೆಗಾರರು ಯೆಂಟುದಿನಗಳಿಂದಲೂ ನಿದ್ರಾಹಾರಗಳು ಯಿಲ್ಲದೆ। ಮೊದಲ ದೊರೆ ಯಾವಾಗ ಬಂದು ನೋಡಿಯೆನೋ ಯೆಂದು। ಭಯದಿಂದ। ಜಾಗರೂಕರಾಗಿ। ಕೋಟೆ ಕೊತ್ತಲಗಳ ಚೆನ್ನಾಗಿ ಮಾಡಿಸಿ। ಫಿರಂಗಿಗಳು ಜಬರಜಂಗಿಗಳು। ಕೈಗಲ್ಲುಗಳು। ಲಗ್ಗೆಯ ಕೊರಡುಗಳು। ಹುಲಿತಲೆಗಳು। ಕೋಟೆಯ ಹೊರಗೆ ಕುದುರೆಗಳು ನಿಲ್ಲುವಂಥ ಕಲ್ಲುಗಳನ್ನು ಹಾಕಿಸುವುದನ್ನು ಹಾಕಿಸಿದ।. ಇಲ್ಲಿ ವಿಜಯನಗರ ಕಾಲದ ಕೋಟೆ ಮತ್ತು ಅಂದಿನ ಕೋಟೆ ಕಾಳಗದಲ್ಲಿ ಬಳಸುತ್ತಿದ್ದ ಫಿರಂಗಿ ಮೊದಲಾದ ವಿನೂತನ ಸಾಧನಗಳನ್ನು ಕಾಣಬಹುದು.[೬೭] ಕೋಟೆ-ಕೊತ್ತಲಗಳನ್ನು ಕಟ್ಟಿಸಿ ಸಿದ್ಧಗೊಳಿಸುವುದರ ಜೊತೆಗೆ, ಕೋಟೆಯ ಸುತ್ತಲೂ ಹಾಕಿದ ಕಲ್ಲುಗುಂಡುಗಳ ವಿವರವನ್ನು ಭೀಮಕವಿಯೂ ಹೀಗೆ ನೀಡಿದ್ದಾನೆ :

"ಇತ್ತರದೊಳುದ್ದಕ್ಕೆ ಕೋಂಟೆಯ
ಕೊತ್ತಳಂಗಳ ಸಂಧಿ ಸಂಧಿಯೊ
ಳೆತ್ತಿಸಿದನಟ್ಟಣೆಗಳಂ ಡೆಂಕಣಿಗಳಂ ಹಲವ
ಮುತ್ತಿಗೆಗೆಯೊಳಗಾಗದಂತಹ
ರೊತ್ತಿನಲಿ ಕಲುಗುಂಡುಗಳನುಂ
ಸುತ್ತಿವರೆ ಹಾಕಿಸಿದವನವಗಡವಾಗೆ ದಾರಿಯಲಿ[೬೮]

ಕೋಟೆಯ ಮುತ್ತಿಗೆಗೆ ಶತ್ರುಗಳು ಬರುವ ಮುನ್ನ ಕೋಟೆಗಳನ್ನು ಭದ್ರಪಡಿಸಿ, ಎಲ್ಲ ಬಗೆಯ ಪರಿಕರಗಳನ್ನು ಸಜ್ಜುಗೊಳಿಸುತ್ತಿದ್ದುದು ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಸಂಗತಿ. ಆದರೆ ಭೀಮಕವಿಯು ಕೋಟೆಯ ಹೊರಭಾಗದಲ್ಲಿ ಸುತ್ತಲೂ ಕಲ್ಲು-ಗುಂಡುಗಳನ್ನು ಹಾಕಿಸುತ್ತಿದ್ದ ವಿವರ ನೀಡಿರುವುದು ಗಮನಿಸಬೇಕಾದ ಅಂಶ. ಈ ಕಲ್ಲುಗುಂಡುಗಳ ಬಗೆಗೆ ಅಬ್ದುಲ್ ರಜಾಕ್ ವಿಜಯನಗರದ ಕೋಟೆ ವರ್ಣನೆ ಮಾಡುವಾಗ, "ಒಂದನೆಯ ದುರ್ಗದ ಸುತ್ತ ಒಬ್ಬ ಮನುಷ್ಯನಷ್ಟು ಎತ್ತರವಿರುವ ಕಲ್ಲುಗಳಿವೆ. ಅವುಗಳ ಅರ್ಧಭಾಗ ಭೂಮಿಯೊಳಗೆ ಹೂಳಲಾಗಿದ್ದು, ಉಳಿದರ್ಧ ಮೇಲೆ ಹಾಯ್ದಿವೆ. ಇವುಗಳನ್ನು ಒಂದಕ್ಕೊಂದು ಯಾವ ರೀತಿ ನಿಲ್ಲಿಸಲಾಗಿದೆಯೆಂದರೆ ಯಾವ ಅಶ್ವಾರೋಹಿಯಾಗಲಿ, ಕಾಲಾಳಾಗಲಿ ಧೈರ್ಯವಾಗಿ ಇಲ್ಲವೆ ಸುಲಭವಾಗಿ ದುರ್ಗದ ಹತ್ತಿರಕ್ಕೆ ಬರುವಂತಿರಲಿಲ್ಲ" ಎನ್ನುತ್ತಾನೆ.[೬೯] ಶ್ರೀಕೃಷ್ಣ ದೇವರಾಯನ ದಿನಚರಿಯಲ್ಲಿ ಈ ಮೇಲೆ ಉಲ್ಲೇಖಿಸಿದಂತೆ "ಕೋಟೆಯ ಹೊರಗೆ ಕುದುರೆಗಳು ನಿಲ್ಲುವಂತ ಕಲ್ಲುಗಳನ್ನು" ಪಾರುಪತ್ಯೆಗಾರರು ಹಾಕಿಸಿದುದನ್ನು ಕಾಣಬಹುದು. ಭೀಮಕವಿ, ರಜಾಕ್ ಮತ್ತು ದಿನಚರಿಯಲ್ಲಿ ಹೇಳುವ ಕಲ್ಲುಗುಂಡುಗಳು ಯುದ್ಧತಂತ್ರದ ಬೆಳವಣಿಗೆಯನ್ನು ಪ್ರತಿನಿಧಿಸುವ ಕುದುರೆಗಲ್ಲುಗಳಾಗಿವೆ. ಕೋಟೆಯ ರಕ್ಷಣೆಯಲ್ಲಿ ಕುದುರೆಕಲ್ಲುಗಳು ಸಹಕಾರಿಯಾಗುತ್ತಿದ್ದವು. ವಿಜಯನಗರ ಕೋಟೆಯ ಹೊರಭಾಗದಲ್ಲಿ ಕುದುರೆಗಲ್ಲುಗಳಿದ್ದವೆಂದು ರಜಾಕ್ ಹೇಳುತ್ತಾನೆ. ಆದರೆ ಈಗ ಅವು ಎಲ್ಲೂ ಕಾಣಬರುವುದಿಲ್ಲ. ಆದರೆ ಕುಮ್ಮಟದುರ್ಗದ ಹೊರಬದಿಯಲ್ಲಿ ನೂರಾರು ಕುದುರೆಗಲ್ಲುಗಳನ್ನು ಇಂದಿಗೂ ಕಾಣಬಹುದು.[೭೦]

ಈ ಮೇಲಿನ ವಿವರಗಳು ಕೋಟೆಯ ವಿವಿಧ ಭಾಗಗಳನ್ನು ಸಿದ್ಧಪಡಿಸಿದುದನ್ನು ಕುರಿತವು. ಆದರೆ ಕೋಟೆಯಲ್ಲಿ ಸಜ್ಜುಗೊಳಿಸುತ್ತಿದ್ದ ಆಯುಧ ಪರಿಕರಗಳು ಇನ್ನು ಮುಂತಾದ ಕೋಟೆಕಾಳಗದಲ್ಲಿ ಬಳಸುತ್ತಿದ್ದ ವಸ್ತುಗಳನ್ನು ಕುರಿತು ಕಾವ್ಯಗಳು ಹೀಗೆ ವರ್ಣಿಸಿವೆ :

ಚೆನ್ನಬಸವಪುರಾಣವು, ''ಸಾಲ ಮುಗಿಲಟ್ಟಣೆಯ, ಡೆಂಕಣಿಯ, ಪಂದಿದೆಲೆಯೋಳಿಗಳ, ಮರುಳಕೈಗಳ, ತೂಗುದೊಲೆಯ ಧ್ವಜಾಳಿಗಳ, ನೆಟ್ಟ ಸಬಳಗಳ, ನಿಡುಗುಂಡುಗಳ, ಸಂದಣಿಯ ಸನ್ನಾಹದ ಸ್ಥೂಲಮಾಗಿರ್ದ ತೆನೆಗಳು; ಹುರಿವಮಳಲಿನ, ಕಾಸುವಂಬಲಿಯ, ಬಿಸಿಯೆಣ್ಣೆವರವಿಗಳ ಪುದಿದ ಪುಲ್ದೊಂದೆಗಳ, ತರತದೊಳಿ ಸಿರ್ದ ಬಲ್ಪೊಲೆಯ ಡೆಂಕಣಿಯ ಮರುಳಕೈಗಳ, ನೆಟ್ಟ ಬಲ್ಲಸಿಗಳ, ಪರಿಪರಿಯ ಗುಂಡುಗೋವಿಗಳ, ಕುದಿವ ಸುಣ್ಣಗಳ, ಪಿರಿದಾದ ಗುಂಡುಗಳ, ಕವಣೆಗಳ, ಸಬಳಗಳ, ಸುರಿದ ಕಲ್ಗಳ ಪಂದಿದಲೆಯ-ಮೊತ್ತಂಗಳಾಳ್ವೇರಿಯೋಳ್ ಮೆರೆದುವಂದು''[೨೧] ಎಂದಿದೆ. ಮೂರನೆಯ ಮಂಗರಸನು ಕೂಡ ಕೋಟೆಯಲ್ಲಿ ವ್ಯವಸ್ಥೆಗೊಳಿಸಿದ ಪರಿಕರಗಳನ್ನು,

ನೆಲಕೆ ಬಾಗಿಸಿದ ಪಲವರಿಯ ಡೆಂಕಣಿ, ಕವಣೆ
ತೊಲೆ, ಸಬಳ, ಹೇರಿಟ್ಟ, ದಸಿ, ಗುಂಡ, ಕಾಸವಂ
ಬಲಿ ಸಾರಮಾರಿ, ನೆಲಗುಮ್ಮ, ಬಿಸಿಯೆಣ್ಣೆ, ಹುರಿಮಳಲು ಹಾವಿನ ಹೇಳಿಗೆ
ಬಲು ಹುಲ್ಲದೊಂದೆ, ಬಿಲ್ , ಅಂಬು, ಕತ್ತರಿ, ಪಂದಿ
ದಲೆ, ಹಾರೆ, ಬಿರಿಕೊರಡು, ಪೆಟಲು, ತರುಗಣೆ, ಬೀಸು
ವಲೆ, ತಳಿಯ ಮರದ ಗೊಂದಣದ ಸಂವರಣೆಯಿಂದಾ ಕೋಟೆ ಕಣ್ಗೊಪ್ಪಿತು[೨೨] ಎಂದು

ಕೋಟೆಕಾಳಗಕ್ಕೆ ಬೇಕಾದ ಶಸ್ತ್ರಾಸ್ತ್ರಗಳು, ಇನ್ನೂ ಮುಂತಾದ ವಸ್ತುಗಳ ಪೂರ್ಣವಿವರ ನೀಡುತ್ತಾನೆ. ಇವು ಕಾವ್ಯಗಳಲ್ಲಿ ಕಾಣಬರುವ ವರ್ಣನೆಯಾದರೆ ಪ್ರವಾಸಿ ನ್ಯೂನಿಜ್ ರಾಯಚೂರು ಕೋಟೆಯಲ್ಲಿ ವಿಜಯನಗರ ಸೇನೆಯನ್ನು ಎದುರಿಸುವ ಸಲುವಾಗಿ ಸಿದ್ಧಗೊಳಿಸಿದ ಬಗೆಯನ್ನು ಈ ರೀತಿ ಹೇಳುತ್ತಾನೆ : ''ಕೋಟೆಯ ರಕ್ಷಣೆಗೆ ಎಂಟು ಸಾವಿರ ಯೋಧರು, ನಾಲ್ಕು ನೂರು ಕುದುರೆಗಳು, ಇಪ್ಪತ್ತು ಆನೆಗಳು ಇದ್ದವು. ಜೊತೆಗೆ ಮೂವತ್ತು ಕವಣೆಯಂತ್ರಗಳಿದ್ದವು. ಇವುಗಳಿಂದ ಎಸೆದ ಕಲ್ಲುಗಳು ಶತ್ರುಸೈನ್ಯದಲ್ಲಿ ಅಪಾರ ನಷ್ಟವನ್ನು ಉಂಟು ಮಾಡುತ್ತಿದ್ದವು. ಕೋಟೆಯ ಮಧ್ಯೆ ಇನ್ನೂರು ಫಿರಂಗಿಗಳನ್ನು ಅಳವಡಿಸಿದ್ದರು.[೨೩] ನ್ಯೂನಿಜ್ ಹೇಳುವ ಕವಣೆಯಂತ್ರಗಳನ್ನು ಗಂಗಾದೇವಿ ತನ್ನ ಕೃತಿಯಲ್ಲಿ,

''ಯಂತ್ರಬೀರುವ ಕಲ್ಲುಗುಂಡುಗಳು ಉರುಳುತ್ತ
ನೃಪನ ಕಾಲಡಿಯಲ್ಲಿ ಕೆಡೆಯುವಾಗ
ಕೋಟೆಯೊಳಗಡಿಯಿಡಲು ಸುಂಕ ಕೊಡಬೇಕೆಂದು
ಕೇಳಬಂದಾಯ್ತು ದುರ್ಗದೂತ''[೨೪] ಎಂದಿದ್ದಾಳೆ.

ಹೀಗೆ ಕೋಟೆಯ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಂಡ ಮೇಲೆ ಅರಸರು ಕಾಳಗಕ್ಕೆ ಸಿದ್ಧವಾಗುತ್ತಿದ್ದರು. ಶತ್ರು ಪಡೆಯು ಕೋಟೆಯ ಬಳಿ ಬಂದೊಡನೆ ಕಾಳಗ ಪ್ರಾರಂಭವಾಗುತ್ತಿತ್ತು. ಕೋಟೆ ಕಾಳಗದ ಘಟನೆಯು

ಭೀಕರವಾಗಿರುತ್ತಿತ್ತು. ಕೋಟೆಯ ಒಳಭಾಗದಲ್ಲಿ ನಿಂತು ಹೋರಾಟ ನಡೆಸುವ ಚಿತ್ರಣ ಒಂದು ಬಗೆಯದಾದರೆ, ಹೊರಭಾಗದಲ್ಲಿ ನಡೆಸುತ್ತಿದ್ದವರ ಹೋರಾಟ ಮತ್ತೊಂದು ಬಗೆಯದು. ಕೋಟೆಯ ಒಳಭಾಗದವರು ಶತ್ರುಸೈನ್ಯವು ಕೋಟೆಯನ್ನು ಮುತ್ತದಿರಲು, ಕೋಟೆಗೆ ಯಾವುದೇ ಅಪಾಯ ಮಾಡುವುದನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದರೆ, ಹೊರಭಾಗದ ಸೇನೆ ಕೋಟೆಯನ್ನು ತಮ್ಮ ಕೈವಶಮಾಡಿಕೊಳ್ಳಬೇಕಾದ ಯುದ್ಧತಂತ್ರಗಳನ್ನು ಬಳಸುತ್ತಿದ್ದರು. ಕಾಳಗದಲ್ಲಿ ಹೊರಗಿನ ಪಡೆಯು, ''ಕೆಲರ್ ತಲೆವರಿಗೆಯಿಂದೆ ಅಗಳ ಸರಿಸದೊಳ್ ತಲೆದೋರಿದರ್ ಮಾವುತರ್ ಬಿಗಿದ ರೆಂಜಿಗಳ ಮರೆಯೊಳಡಗಿ, ಬೇಗದಿಂದೆ ಪುಲಿಮುಖಕೆ ನೂಂಕಿದರೆ, ಆಗ ಅಸುರಭಟರು ಅಸಿ ಮುಸುಂಡಿ ಮುದ್ಗರ ಗದಾವಳಿಯಿಂದ ಸುರಭಟರನು ಹೂಣಲಿಡುತಿರ್ದರ್''[೨೫] ಎಂದು ವಿರೂಪಾಕ್ಷಪಂಡಿತನು ಸುರಾಸುರರ ಕಾಳಗದ ಸಂದರ್ಭವನ್ನು ವರ್ಣಿಸಿದ್ದಾನೆ. ಕಾಳಗದಲ್ಲಿ ಸೈನಿಕರು, ''ಕೇಸುರಿಯಿಂದ ಮೋರೆ ಸುಟ್ಟು ಇಳೆಗುರುಳಿದರು, ತೊಲೆಗಳು ಉರುಳುರುಳಿ ಬೀಸಲು ಕೈಕಾಲು ಮುರಿದು ಕೆಡೆದರು. ಪಂದಿದಲೆಯ ತಾಕಲು ಜರ್ಜರಿತ ತನುಗಳಾದರು, ದೊಡ್ಡ ದೊಡ್ಡ ದಸಿಗಳು ಮೈಯೊಳಗೆ ನಾಂಟಲು ಕಳವಳಿಸಿದರು, ಹೋರಾಟ ಮುಂದುವರಿದು ಸುರಗಿಯಿಂದ ಇರಿದು ಶೂಲದಿಂದ ತಿವಿದರು. ಖಡ್ಗದಿಂದ ಇರಿದು ಕತ್ತರಿಸಿ, ಕೊಡಲಿಗಳಿಂದ ಕಡಿದು, ಮುದ್ಗರದಿಂದ ಪೋದಿ ಮುಸಲದೊಳಿಟ್ಟು, ಗದೆಗಳಿಂದಪ್ಪಳಿಸಿ, ಸಬಳದಿಂದ ಶಿರವನಿರದತ್ತಿ ಚಕ್ರದಿನರಿದ್ದು ಮಿಕ್ಕ ಪರಿಕರಗಳಿಂದ ಕೊಲುತಿರ್ದರು''[೨೬]. ಈ ಕಾಳಗದಲ್ಲಿ ಬಳಸಲಾದ ಪರಿಕರಗಳ ಕಾರ್ಯವೈಖರಿಯನ್ನೂ, ''ಡೆಂಕಣಿಗಳ ಅಲ್ಲಲ್ಲೆ ಆಡಿದವು. ಮರುಳಕ್ಕೈ ನೀಡಿದವು, ಕವಣೆಗಲ್ ಸೂಸಿದವು ಕಾಯ್ದೆಣ್ಣೆಗೂಡಿ ಮಳಲೂ-ಅರಗುಗಳೂ, ಸಾಸಿವೆ ಗದಡು, ಸುಣ್ಣ, ಕಲು, ಅಂಬಲಿಗಳು ಸುರಿದವು, ಪೆಟಲುಗಳು ಹೂಡಿದವು, ಇಕ್ಕುವದಸಿಗಳು ಓಲಾಡಿದವು ಪೇರೆತ್ತು ಗುಂಡುಗಳ್ ಭರದೊಳ್ ಒಕ್ಕಾಡಿದವು''[೨೭] ಎಂಬುದಾಗಿ ಕಾವ್ಯಗಳು ವರ್ಣಿಸಿವೆ.

ಕೃಷ್ಣದೇವರಾಯ ಕೈಗೊಂಡ ಕೋಟೆ ಕಾಳಗದ ಚಿತ್ರಣವನ್ನು ನ್ಯೂನಿಜ್ ರಾಚೋಲ್ ಕೋಟೆಯೊಳಗೆ ಈ ಮುತ್ತಿಗೆ(ವಿಜಯನಗರ)ಯನ್ನು ಎದುರಿಸಲು ಸಿದ್ಧರಾಗಿದ್ದ ಯೋಧರು ಫಿರಂಗಿಯಿಂದ ಗುಂಡುಗಳನ್ನು ಹಾರಿಸಿ, ಕೋವಿಗಳಿಂದ ಮದ್ದು ಹೊಡೆದು, ಬಿಲ್ಲುಗಳಿಂದ ಬಾಣಗಳನ್ನು ಎಸೆದು ಕೃಷ್ಣರಾಯನ ಸೈನ್ಯದ ಅನೇಕರನ್ನು ಆಹುತಿ ತೆಗೆದುಕೊಂಡರು''[೨೮] ಎಂದಿದ್ದಾನೆ. ಇದು ಕೋಟೆಯೊಳಗಿನ ಸೈನ್ಯಗಳ ಧಾಳಿಯಾಗಿದೆ. ಕೋಟೆಯ ಹೊರಗೆ ನಿಲ್ಲಿಸಿದ ಕೃಷ್ಣದೇವರಾಯನ ಸೈನ್ಯದಲ್ಲಿ ಬಳಕೆಗೊಂಡ ಯುದ್ಧತಂತ್ರವಿದು. ಸೇನೆಯು ಶತ್ರುಧಾಳಿಗೆ ಸಿಕ್ಕಿ ಪರದಾಡುತ್ತಿದ್ದಾಗ ಪೋರ್ಚುಗೀಸ್ ಪಡೆಯು ನೆರವಿಗೆ ಬಂದುದನ್ನು ನ್ಯೂನಿಜ್ ಹೇಳುತ್ತಾನೆ: ''ಕ್ರಿಸ್ಟಾಂವ್-ದ-ಫಿಗ್ಯೆರೆಡೊ ತನ್ನವರೊಡನೆ ಹೊರಟು ರಾಯಚೂರು ಕೋಟೆಗೆ ಬಹು ಸಮೀಪಕ್ಕೆ ಹೋಗಿ ಕೋವಿಗಳಿಂದ ಗುಂಡು ಹೊಡೆದನು. ಕೋಟೆಯಲ್ಲಿದ್ದವರಿಗೆ ಈ ತರಹ ಕೋವಿಯ ಗುಂಡುಗಳ ಅನುಭವವಿರಲಿಲ್ಲ. ಆದ್ದರಿಂದ

ಅನೇಕ ಜನರು ಮಡಿದರು. ಕೋಟೆಯನ್ನು ಬಿಟ್ಟು ಹಿಂಜರಿಯಲಾರಂಭಿಸಿದರು. ಆಗ ರಾಯನ ಕಡೆಯ ಹಿಂದೂ ಸೈನಿಕರು ಕೋಟೆಯ ಬುಡದವರೆಗೂ ಅಪಾಯವಿಲ್ಲದೆ ಹೋಗಿ ಕೋಟೆ ಕಲ್ಲುಗಳನ್ನು ಕಿತ್ತು ಗೋಡೆಯನ್ನು ಹಾರೆ-ಪಿಕಾಸಿಗಳಿಂದ ಸಡಿಲಿಸಲು ಅನುಕೂಲವಾಯಿತು[೭೯]. ವಿಜಯನಗರ ಸೇನೆಯಲ್ಲಿ ಪೋರ್ಚುಗೀಸ್‌ರ ಮೂಲಕ ಹೊಸ ಹೊಸ ತಂತ್ರಗಳು ಬಳಕೆಗೆ ಬಂದದ್ದು ಇಲ್ಲಿ ಗೊತ್ತಾಗುತ್ತದೆ. ಇದುವರೆಗೆ ವಿಜಯನಗರ ಮತ್ತು ಬಹಮನಿಯವರು ಬಳಸುತ್ತಿದ್ದ ಬಂದೂಕುಗಳಿಗಿಂತ ನವೀನ ಮಾದರಿಯ ಅಸ್ತ್ರಗಳನ್ನು ಪೋರ್ಚುಗೀಸರು ರಾಯಚೂರು ಕಾಳಗದ ಮೂಲಕ ಪರಿಚಯಿಸಿದುದನ್ನು ಇಲ್ಲಿ ಕಾಣಬಹುದು.

ವಿಜಯನಗರ ಪೂರ್ವದ ಸಾಂಪ್ರಾದಾಯಿಕ ಅಸ್ತ್ರಗಳಿಗೆ ಪ್ರತಿಯಾಗಿ ವಿಜಯನಗರ ಕಾಲದ ಆಯುಧಗಳು ಯುದ್ಧದ ಗತಿ ಹಾಗೂ ತಂತ್ರ-ವಿಧಾನಗಳಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ಉಂಟುಮಾಡಿದವೆನ್ನಬಹುದು.

೫.೧.೧೦.೩ ನೌಕಾಯುದ್ಧ

ನೌಕಾಪಡೆಯು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ಪುರಾತತ್ವ ಹಾಗೂ ಸಾಹಿತ್ಯ ಆಕರಗಳಿಂದ ವ್ಯಕ್ತಗೊಳ್ಳುತ್ತದೆ.[೮೦] ಕರ್ನಾಟಕದಲ್ಲಿ ಬಾದಾಮಿ ಚಾಳುಕ್ಯ ಅರಸರಾದ ಮಂಗಳೇಶ ಮತ್ತು ಇಮ್ಮಡಿ ಪುಲಿಕೇಶಿ ಅನೇಕ ದ್ವೀಪಗಳನ್ನು ನೌಕಾಸೈನ್ಯದ ಸಹಾಯದಿಂದ ಗೆದ್ದುದು ಐಹೊಳೆ ಶಾಸನದಿಂದ ತಿಳಿದುಬರುವುದು. ಇಮ್ಮಡಿ ಪುಲಕೇಶಿಯು ನೂರು ನೌಕೆಗಳ ನೆರವಿನಿಂದ ಪುರಿಯ ಪ್ರಾಬಲ್ಯವನ್ನು ಅಡಗಿಸಿ, ರೇವತಿ ಮತ್ತಿತರ ದ್ವೀಪಗಳನ್ನು ವಶಪಡಿಸಿಕೊಂಡುದಾಗಿಯೂ ಹೇಳಿದೆ.[೮೧] ಪ್ರಾಚೀನ ನೌಕಾಪರಂಪರೆಯ ಅಡಿಪಾಯದ ಮೇಲೆ ಅನಂತರ ಬಂದ ಪಲ್ಲವರು ಮತ್ತು ಚೋಳರು ನೌಕಾಪಡೆಗಳ ಮೂಲಕ ಸಾಗರದಾಚೆಯ ದಿಗ್ವಿಜಯ ಸಾಧಿಸಿದ್ದುದನ್ನು ಸಂಗಮ್ ಸಾಹಿತ್ಯದಲ್ಲಿ ವರ್ಣಿಸಲಾಗಿದೆ.[೮೨] ರಾಜರಾಜ ಚೋಳನು ಲಕ್ಷದ್ವೀಪ, ಶ್ರೀಲಂಕಾ, ಮಾಲ್ಡೀವ್ಸ್ ಮತ್ತೀತರ ಆಗ್ನೇಯ ಏಷ್ಯಾದ ದ್ವೀಪಗಳನ್ನು ಗೆದ್ದುದಾಗಿ ಶಾಸನದಲ್ಲಿ ಹೇಳಲಾಗಿದೆ.[೮೩]

ವೀರಗಲ್ಲಿನಲ್ಲಿ ಬಹು ಅಪರೂಪವೆನ್ನುವಂತೆ ದೋಣಿಯ ಚಿತ್ರವಿರುವ ವೀರಗಲ್ಲನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಕಾಣಬಹುದು. ಇದರಲ್ಲಿ ಸೈನಿಕನೋರ್ವನು ನೌಕ ಯುದ್ಧದಲ್ಲಿ ಹೋರಾಡಿ ಮಡಿದ ವಿವರವಿದೆ. ಇದರಲ್ಲಿ ದೋಣಿ, ಉಟ್ಟುಗಳ ಚಿತ್ರಣವು ಸ್ಪಷ್ಟವಾಗಿದೆ. ಇದರಿಂದ ಪ್ರಾಚೀನ ಕಾಲದಲ್ಲಿ ನೌಕೆಗಳ ಬಳಕೆಯಿದ್ದು, ಕರ್ನಾಟಕದ ಅರಸರು ಸಮುದ್ರದಾಚೆಯ ಪ್ರದೇಶಗಳತ್ತ ಗಮನಹರಿಸಿದ್ದುದು ದೃಢಪಡುತ್ತದೆ. ವಿಜಯನಗರ ಕಾಲದಲ್ಲಿ ನೌಕಾಪಡೆಯ ವಿವರಗಳು ಸಾಕಷ್ಟು ದೊರೆಯದಿದ್ದರೂ ನೌಕಾಯುದ್ಧಗಳನ್ನು ಕೈಗೊಂಡ ಉಲ್ಲೇಖಗಳಿವೆ. ಶಾಸನಗಳು, ಸಾಹಿತ್ಯ ಹಾಗೂ ಪ್ರವಾಸಿಗರ ವರದಿಗಳಿಂದ ನೌಕಾಯುದ್ಧದ ಚಿತ್ರಣವನ್ನು ನೀಡಲು ಪ್ರಸ್ತುತ ಅಧ್ಯಯನದಲ್ಲಿ ಯತ್ನಿಸಲಾಗಿದೆ. ಅಬ್ದುಲ್

ರಜಾಕ್ ವಿಜಯನಗರದ ವಿಸ್ತಾರವನ್ನು, ''ರಾಜ್ಯ(ವಿಜಯನಗರ) ಸೆರೆನ್ ದಿಬ್ (ಸಿಂಹಳ) ಗಡಿಯಿಂದ ಕಲ್ಬೆರ್ಗಾದ ಕೊಟ್ಟಕೊನೆಯವರೆಗೆ ಸಾವಿರ ಪರಸಾಂಗುಗಳಷ್ಟು ವಿಸ್ತರಿಸಿದೆ" ಎಂದಿದ್ದಾನೆ. ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಬಂದರುಗಳ ಸಂಖ್ಯೆಯನ್ನು, ''ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ'' ಎನ್ನುತ್ತಾನೆ.[೮೪] ಈ ಅಂಶಗಳು ವಿಜಯನಗರವು ಸಮುದ್ರ ವ್ಯಾಪಾರದಲ್ಲಿ ಸಾಧಿಸಿದ ಹಿಡಿತವನ್ನು ಸಮರ್ಥಿಸುತ್ತವೆ.

ವಿಜಯನಗರ ಕಾಲದ ನೌಕಾಪಡೆಯು ಶ್ರೀಲಂಕಾದ ಮೇಲೆ ವೀರ ಕಂಪಣರಾಯನ ನೇತೃತ್ವದಲ್ಲಿ ದಂಡೆತ್ತಿ ಹೋದುದಾಗಿ ನೀಲಕಂಠಶಾಸ್ತ್ರಿಯವರು ಹೇಳುತ್ತಾರೆ.[೮೫] ಆದರೆ ಇದಕ್ಕೆ ಸರಿಯಾದ ಪುರಾವೆಗಳು ದೊರೆಯುತ್ತಿಲ್ಲ. ವೀರಕಂಪಣರಾಯನ ದಿಗ್ವಿಜಯವನ್ನು ಸಾರುವ 'ಮಧುರಾ ವಿಜಯಂ' ಕೃತಿಯಲ್ಲೂ ಶ್ರೀಲಂಕಾ ದಂಡಯಾತ್ರೆ ಕುರಿತು ಸ್ಪಷ್ಟವಾಗಿ ಹೇಳುತ್ತಿಲ್ಲ. ಅದರಲ್ಲಿ ೫ನೆಯ ಸರ್ಗದ ೯ನೆಯ ಪದ್ಯವೊಂದರಲ್ಲಿ ಸಿಂಹಳವು ವಿಜಯನಗರದ ಅಧೀನ ರಾಜ್ಯವಾಗಿದ್ದಿತೆಂದು ಹೇಳಿದೆ. ಆದರೆ ಇದರಿಂದ ಶ್ರೀಲಂಕಾವನ್ನು ಕಂಪಣ ಜಯಿಸಿದ್ದನೇ, ಇಲ್ಲವೇ ಎಂಬುದನ್ನು ಹೇಳುವುದು ಕಷ್ಟ. ಕ್ರಿ.ಶ.೧೩೭೮ರ ವಿಜಯನಗರವನ್ನು ಫೆರಿಸ್ತಾ ವರ್ಣಿಸುತ್ತಾ, ''ಮಲಬಾರ್, ಸಿಲೋನ್ ಮತ್ತು ಇತರ ದ್ವೀಪಗಳ ರಾಯರು ಅವನ(ಒಂದನೆಯ ಬುಕ್ಕ) ದರಬಾರಿನಲ್ಲಿ ರಾಯಭಾರಿಗಳನ್ನು ಇಟ್ಟಿದ್ದರು ಮತ್ತು ಪ್ರತಿವರ್ಷ ಕಾಣಿಕೆ ಸಲ್ಲಿಸುತ್ತಿದ್ದರು.''[೮೬] ಎನ್ನುತ್ತಾನೆ. ಫೆರಿಸ್ತಾನು ತನ್ನ ವರದಿಯನ್ನು ಬರೆದುದು ವಿಜಯನಗರೋತ್ತರ ಕಾಲದಲ್ಲಿ. ಆದುದರಿಂದ ಇಲ್ಲಿ ದಂಡಯಾತ್ರೆ ಕೈಗೊಂಡ ವಿಚಾರ ಬರುವುದಿಲ್ಲ. ಆದರೆ ಶ್ರೀಲಂಕಾ ಅಧೀನವಾದ ಅಂಶವನ್ನು ಈ ಮೇಲಿನ ಎರಡೂ ಹೇಳಿಕೆಗಳು ನೀಡುವುದರಿಂದ ವಿಜಯನಗರವು ನೌಕಾಪಡೆಯನ್ನು ಹೊಂದಿದ್ದಿತೆಂದು ಹೇಳಬಹುದು.

ಆದರೆ ಎರಡನೆಯ ಹರಿಹರನ ಕಾಲದಲ್ಲಿ ಯುವರಾಜನಾಗಿದ್ದ ಎರಡನೆಯ ವಿರೂಪಾಕ್ಷನು ವೀರಕಂಪಣನ ಮರಣದ ನಂತರ ತುಂಡೀರ, ಚೋಳ, ಪಾಂಡ್ಯ ರಾಜ್ಯಗಳನ್ನು ಜಯಿಸಿ ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈ ರಾಜ್ಯಗಳ ದಿಗ್ವಿಜಯದ ನಂತರ ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡನೆಂದು ಅರಿಯೂರು ತಾಮ್ರ ಶಾಸನದಿಂದ ತಿಳಿದು ಬರುತ್ತದೆ. ಸಿಂಹಳವನ್ನು ವಿರೂಪಾಕ್ಷನು ವಿಜಯಗಳಿಸಿದುದರ ನೆನಪಿಗಾಗಿ ವಿಜಯಸ್ತಂಭವನ್ನು ನೆಟ್ಟ ವಿವರವನ್ನು ಈ ಶಾಸನದಲ್ಲಿ ಹೇಳಲಾಗಿದೆ.[೮೭] ನಾರಾಯಣಿ ವಿಲಾಸಂ ಕೃತಿಯಲ್ಲೂ ಇದರ ಪ್ರಸ್ತಾಪವಿದೆ.[೮೮] ಕ್ರಿ.ಶ.೧೩೮೬ರ ಸೊರೈಕ್ಕವೂರು ತಾಮ್ರಶಾಸನದಲ್ಲಿ ತುಂಡೀರ, ಚೋಳ ಮತ್ತು ಪಾಂಡ್ಯ ರಾಜ್ಯಗಳನ್ನು ವಿರೂಪಾಕ್ಷನು ವಶಪಡಿಸಿಕೊಂಡ ವಿವರವಿದ್ದು, ಅದರಲ್ಲಿ ಶ್ರೀಲಂಕಾದ ದಿಗ್ವಿಜಯವನ್ನು ಪ್ರಸ್ತಾಪಿಸಿಲ್ಲ.[೮೯] ಇದರಿಂದ ವಿರೂಪಾಕ್ಷನು ಶ್ರೀಲಂಕಾದ ಮೇಲೆ ದಂಡೆತ್ತಿ ಹೋದುದು ೧೩೮೬ರ ನಂತರವೆಂಬುದು ಸ್ಪಷ್ಟವಾಗುತ್ತದೆ. ನೀಲಕಂಠಶಾಸ್ತ್ರಿಯವರು ಅರಿಯೂರು ಮತ್ತು ಸೊರೈಕ್ಕವೂರು ತಾಮ್ರಶಾಸನಗಳು ನೀಡುವ ವಿವರದ ಹಿನ್ನೆಲೆಯಲ್ಲಿ ಎರಡನೆಯ ವಿರೂಪಾಕ್ಷನು ಶ್ರೀಲಂಕಾದ ಉತ್ತರ ಭಾಗ ಮತ್ತು ಜಾಪ್ನಾ

ದ್ವೀಪವನ್ನು ವಶಪಡಿಸಿ ಂಡಿರಬೇಕೆಂದು ಹೇಳಿದ್ದಾರೆ. ಈ ದ್ವೀಪಗಳ ವಿಜಯದ ಸಂಕೇತವಾಗಿ ರಾಮೇಶ್ವರದ ರಾಮನಾಥದೇವರಿಗೆ ದಾನ ನೀಡಿದನೆಂದು ದೃಢಪಡಿಸುವರು.[೬೦] ಎರಡನೆಯ ವಿರೂಪಾಕ್ಷನು ದಕ್ಷಿಣದ ದಂಡಯಾತ್ರೆಯ ವೇಳೆಯಲ್ಲಿ ಶ್ರೀಲಂಕಾ ಮತ್ತಿತರ ದ್ವೀಪಗಳನ್ನು ವಶಪಡಿಸಿಕೊಂಡು ವಿಜಯಸ್ತಂಭವನ್ನು ನೆಟ್ಟುದುದು ವಿಜಯನಗರದ ಅಂದಿನ ನೌಕಾಸೇನೆಯ ಬಲಿಷ್ಠತೆಯನ್ನು ಪ್ರತಿನಿಧಿಸುತ್ತದೆ.

ವಿರೂಪಾಕ್ಷನ ನಂತರ ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡ ವಿಜಯನಗರ ಅರಸನೆಂದರೆ ಎರಡನೆಯ ದೇವರಾಯ. ಕ್ರಿ.ಶ.೧೪೩೫ರಲ್ಲಿ ದೇವರಾಯ ತನ್ನ ದಂಡನಾಯಕ ಲಕ್ಕಣ್ಣ ದಂಡೇಶನನ್ನು ದಕ್ಷಿಣ ದಂಡಯಾತ್ರೆಗೆಂದು ಸೈನ್ಯ ಸಮೇತ ಕಳುಹಿಸಿದ್ದನು. ಲಕ್ಕಣ್ಣನು ದಕ್ಷಿಣ ದಂಡಯಾತ್ರೆಯಲ್ಲಿ ಯಶಸ್ಸನ್ನು ಸಾಧಿಸಿದ ಬಳಿಕ ಶ್ರೀಲಂಕಾದ ಮೇಲೆ ದಂಡೆತ್ತಿ ಹೋದನು. ಶ್ರೀಲಂಕಾದ ರಾಜ ಆರನೆಯ ಪರಾಕ್ರಮಬಾಹುವನ್ನು ಸೋಲಿಸಿ ಯಾಳಪಾಣಂ(yalapanam), ನಾಪಟಮಣ Napatamanam) ಮತ್ತು ಈಳಂ (Ilam)ಗಳನ್ನು ಗೆದ್ದುಕೊಂಡನೆಂದು ಶಾಸನದಲ್ಲಿ ಹೇಳಲಾಗಿದೆ.[೬೧] ಲಕ್ಕಣ್ಣ ದಂಡೇಶನು ಈ ವಿಜಯದ ನೆನಪಿಗಾಗಿ 'ದಕ್ಷಿಣ ಸಮುದ್ರಾಧಿಪತಿ' ಎಂಬ ಗೌರವಕ್ಕೆ ಪಾತ್ರನಾದನೆಂಬುದು ಶಾಸನಗಳಲ್ಲಿ ವ್ಯಕ್ತಗೊಳ್ಳುವ ಅಂಶವಾಗಿದೆ.[೬೨] ಈ ದಿಗ್ವಿಜಯದ ಹಿನ್ನೆಲೆಯಲ್ಲಿ ಎರಡನೆಯ ದೇವರಾಯನು 'ಈಳಂ ತಿರೈಕೊಂಡ'ನೆಂದು ಕರೆದುಕೊಂಡಿದ್ದುದನ್ನು ಕ್ರಿ.ಶ.೧೪೪೦ರ ಶಾಸನವು ಹೇಳುತ್ತದೆ.[೬೩] ಇದಲ್ಲದೆ 'ದಕ್ಷಿಣ ಸಮುದ್ರಾಧೀಶ್ವರ'ನೆಂದು ದೇವರಾಯನನ್ನು ಕರೆಯಲಾಗಿದೆ. ವಿಜಯನಗರದ ಆರಂಭದ ಅರಸರಲ್ಲಿ ಹರಿಹರನು 'ಪೂರ್ವಪಶ್ಚಿಮ ಸಮುದ್ರಾಧಿಪತಿ'ಯೆಂದು, ಬುಕ್ಕರಾಯನು 'ಚತುಸಮುದ್ರಾಧಿಪತಿ'ಯೆಂದೂ ಕರೆದುಕೊಂಡಿದ್ದಾರೆ.[೬೪] ಒಂದನೆಯ ದೇವರಾಯನೂ, 'ಪೂರ್ವಪಶ್ಚಿಮ ದಕ್ಷಿಣೋತ್ತರ ಚತುಸಮುದ್ರಾಧಿಪತಿ' ಎಂಬ ಬಿರುದನ್ನು ಧರಿಸಿದ್ದುದು ಶಾಸನದಿಂದ ತಿಳಿದುಬರುವುದು.[೬೫] ಈ ಬಿರುದುಗಳು ವಿಜಯನಗರ ಆರಂಭದ ಅರಸರು ಸಮುದ್ರದ ಮೇಲೆ ಸಾಧಿಸಿದ ಹಿಡಿತ ಸಂಕೇತಗಳೇನೋ ನಿಜ. ಆದರೆ ಅವುಗಳನ್ನು ಯಾರೊಂದಿಗೆ ಮತ್ತು ಯಾವಾಗ ಯುದ್ಧ ಕೈಗೊಂಡರೆಂಬ ವಿವರ ತಿಳಿದುಬರುತ್ತಿಲ್ಲ. ಲಕ್ಕಣ್ಣ ದಂಡೇಶನು ಶ್ರೀಲಂಕಾದ ಮೇಲೆ ದಂಡಯಾತ್ರೆ ಕೈಗೊಂಡ ವಿವರವನ್ನು ಈ ಮೇಲಿನ ಶಾಸನಗಳು ಸ್ಪಷ್ಟವಾಗಿ ನಮೂದಿಸುವುದಲ್ಲದೆ ಕಾಲವನ್ನು ಕ್ರಿ.ಶ.೧೪೩೫ಯೆಂದು ಹೇಳುತ್ತವೆ. ಆದರೆ ಸಿ.ಹಯವದನರಾವ್‌ರು ಶ್ರೀಲಂಕಾ ದಂಡಯಾತ್ರೆಯು ಕ್ರಿ.ಶ.೧೪೪೨ ರನವೆಂಬರ್ ಮತ್ತು ೧೪೪೩ರ ಏಪ್ರಿಲ್ ತಿಂಗಳ ನಡುವೆ ನಡೆಯಿತೆನ್ನುವರು.[೬೬] ಆದರೆ ಇವರ ಅಭಿಪ್ರಾಯವು ಶಾಸನಗಳ ಹಿನ್ನೆಲೆಯಲ್ಲಿ ಲಕ್ಕಣ ದಂಡೇಶನು ಕೈಗೊಂಡ ಎರಡನೆಯ ದಂಡೆಯಾತ್ರೆಯಿರಬಹುದೇನೋ? ನ್ಯೂನಿಜ್, ಎರಡೆನೆಯ ದೇವರಾಯನಿಗೆ "ಕೌಲ್ಲಾವ್ (ಕೈಲಾನ್), ಸಿಲೋನ್, ಪೆಲಿಕಾಟ(ಪುಲಿಕಾಟ್), ಪೆಗು, ತನಸರಿ(ತೆನ್ನಾಸರಿ) ಮತ್ತು ಇತರ ರಾಜರುಗಳು ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು"ಎಂದು ಹೇಳಿದ್ದಾನೆ. ಇದು ವಿಜಯನಗರ ಅರಸರು ಶ್ರೀಲಂಕಾವನ್ನಲ್ಲದೆ ಸಮುದ್ರದಾಚೆಯ ಹಲವು ದ್ವೀಪಗಳನ್ನು ನೌಕಾಪಡೆಯ ಮೂಲಕ ಯಶಸ್ಸು ಸಾಧಿಸಿದ್ದುದರ ಸಮರ್ಥನೆಯಾಗಿದೆ.

ಎರಡನೆಯ ದೇವರಾಯನ ನಂತರ ಸಿಗುವ ಆಕರ ವಾರ್ಥೆಮಾನ ವರದಿ. ಇವನು ಕ್ರಿ.ಶ.೧೫೦೩ ರಿಂದ ೧೫೦೮ರ ಅವಧಿಯ ವಿಜಯನಗರವನ್ನು ಕುರಿತು ಹೇಳುವಾಗ ಈ ಸಾಮ್ರಾಜ್ಯವು ಶ್ರೀಲಂಕಾದವರೆಗೂ ವಿಸ್ತರಿಸಿದ್ದಿತೆನ್ನುತ್ತಾನೆ. ಇದರಿಂದ ಎರಡನೆಯ ದೇವರಾಯನ ಆಳ್ವಿಕೆಯಲ್ಲಿ ಶ್ರೀಲಂಕಾವು ಅಧೀನದಲ್ಲಿದ್ದ ಕಾರಣ ಕಪ್ಪಕಾಣಿಕೆಗಳನ್ನು ನೀಡುವುದನ್ನು ಶ್ರೀಲಂಕಾದ ರಾಜರು ಮುಂದುವರಿಸಿದ್ದುದನ್ನು ಕಾಣಬಹುದು. ಇದು ಕ್ರಿ.ಶ.೧೫೨೨ರವರೆಗೂ ಮುಂದುವರಿಯಿತೆನ್ನಬಹುದು. ಕ್ರಿ.ಶ.೧೫೨೨ರಲ್ಲಿ ಕೃಷ್ಣದೇವರಾಯನು ಶ್ರೀಲಂಕದಲ್ಲಾದ ಗಲಭೆಯನ್ನು ಹತ್ತಿಕ್ಕಿದ್ದುದು ಪಿರಾನ್‌ಮಲೈ ಶಾಸನದಿಂದ ತಿಳಿದುಬರುತ್ತದೆ.[೯೭] ಕೊಪ್ಪಳ ತಾಲ್ಲೂಕಿನ ಕಿಡಿದಾಳು ಗ್ರಾಮದ ಶಾಸನದಲ್ಲಿ ಕೃಷ್ಣದೇವರಾಯ ಅಂಗ, ವಂಗ, ಕಳಿಂಗ, ಗೂರ್ಜರ, ಮಗಧ, ಲಾಟ, ಕರ್ನಾಟ, ಗೌಳ, ಮಾಳವ, ರೇವಣ, ಕೊಂಕಣ, ಬಡಗಣ, ಮೂಡಣ, ಪಾಂಚಾಳ, ಕೇರಳ, ಹಮ್ಮೀರ ದೇಶಗಳಲ್ಲದೇ, ಸಿಂಹಳವನ್ನು ಗೆದ್ದುದಾಗಿಯೂ ಹೇಳಲಾಗಿದೆ. ಶಾಸನದಲ್ಲಿ ಸಿಂಹಳವನ್ನು ಶಿಂಹಲಾಳ ಎಂದು ಕರೆದಿದೆ.[೯೮] ಕೃಷ್ಣದೇವರಾಯನ ಕಾಲದಲ್ಲಿ ಇಬ್ಬರು ನಾವಿಕ ಮುಖಂಡರಿದ್ದುದನ್ನು ಬಾರ್ಬೋಸಾ ಹೇಳುತ್ತಾನೆ: "ಈ ರಾಜ್ಯದ ಅಧಿಪತಿಯ(ಕೃಷ್ಣದೇವರಾಯ) ಆಶ್ರಯದಲ್ಲಿ ಇಬ್ಬರು ಕಡಲುಗಳ್ಳ ನಾಯಕರಿದ್ದರು. ಒಬ್ಬನ ಹೆಸರು ತಿಮ್ಮೊಜ(ತಿಮ್ಮೋಜ); ಮತ್ತೊಬ್ಬನ ಹೆಸರು ರಾವ್‌ಜಿ (ಮಾಧವರಾವ್). ಪ್ರತಿಯೊಬ್ಬರ ಬಳಿಯಲ್ಲಿ ಸುಸಜ್ಜಿತವಾದ ಐದಾರು ಹಡಗುಗಳಿರುತ್ತಿದ್ದವು. ಇವರು ಸಮುದ್ರದ ಮೇಲೆ ಹೋಗಿ ಮಲಬಾರೀ ಹಡಗುಗಳನ್ನು ಬಿಟ್ಟು ಉಳಿದೆಲ್ಲ ಹಡಗುಗಳನ್ನು ಕೊಳ್ಳೆಹೊಡೆಯುತ್ತಿದ್ದರು."[೯೯] ಇದರಲ್ಲಿ ತಿಮ್ಮೋಜ ಮತ್ತು ರಾವ್‌ಜಿಯನ್ನು ಕಡಲುಗಬಳ್ಳರ ನಾಯಕರೆಂದು ಹೇಳಿದ್ದರೂ, ಇಲ್ಲಿ ವ್ಯಕ್ತಗೊಳ್ಳುವ ಸುಸಜ್ಜಿತ ಹಡಗು ಪಡೆಗಳಿದ್ದುದನ್ನು ಗಮನಿಸಬೇಕು. ಇದು ವಿಜಯನಗರ ಕಾಲದಲ್ಲಿ ಸಮುದ್ರಾಚೆಯ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಬೇಕಾದ ಸೇನೆಯನ್ನು ಕೊಂಡೊಯ್ಯಲು ಸಾಕಷ್ಟು ಹಡಗುಗಳನ್ನು ಬಳಸಿಕೊಂಡಿದ್ದರೆಂದು ಹೇಳಬಹುದು.

ಅಚ್ಯುತರಾಯ ಮತ್ತು ಸದಾಶಿವರಾಯರ ಕಾಲದಲ್ಲೂ ವಿಜಯನಗರದ ಸೇನೆ ಶ್ರೀಲಂಕಾದ ಮೇಲೆ ದಂಡೆತ್ತಿ ಹೋಗಿದ್ದುದು ತಿಳಿದುಬರುತ್ತದೆ.[೧೦೦] ಕ್ರಿ.ಶ.೧೫೪೪ರಲ್ಲಿ ಅಚ್ಯುತರಾಯನು ಈಳಂ(ಶ್ರೀಲಂಕಾ) ಮೇಲೆ ಜಯ ಸಾಧಿಸಿದುದಾಗಿ ತಂಜಾವೂರಿನ ರಾಜಗೋಪಾಲ ಪೆರುಮಾಳ್ ದೇವಾಲಯದ ಶಾಸನವು ತಿಳಿಸುತ್ತದೆ.[೧೦೧] ಒಟ್ಟಿನಲ್ಲಿ ವಿಜಯನಗರವು ಆರಂಭದ ಅರಸರಿಂದ ಹಿಡಿದು ಸದಾಶಿವರಾಯನವರೆಗೆ ಶ್ರೀಲಂಕಾ ಮತ್ತಿತರ ದ್ವೀಪಗಳ ಮೇಲೆ ಹಡಗುಗಳ ಮೂಲಕ ಸೇನೆಯನ್ನು ಕೊಂಡೊಯ್ದು ನೌಕಾಯುದ್ಧಗಳನ್ನು ಕೈಗೊಂಡಿದ್ದರು; ಹಾಗೂ ಅವರು ಕೈಗೊಂಡ ಯುದ್ಧಗಳಲ್ಲಿ ಜಯಗಳಿಸಿ ಕೊನೆಯವರೆಗೂ ದ್ವೀಪಗಳ ಮೇಲೆ ತಮ್ಮ ಹಿಡಿತ ಸಾಧಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

೫.೧.೧೧ ಯುದ್ಧಾನಂತರ

ಯುದ್ಧಾನಂತರದ ರಣರಂಗದ ಚಿತ್ರಣವು ಅತಿ ಗಂಭೀರವಾದದ್ದು. ಎರಡೂ ಕಡೆಯ ಸೈನ್ಯಗಳ ಸಾವು-ನೋವುಗಳು ಒಂದೆಡೆಯಾದರೆ, ಗೆದ್ದ ಸೈನ್ಯಗಳು ಸೋತವರನ್ನು ಮತ್ತು ಅವರ ರಾಜ್ಯಗಳನ್ನು ಕಾಣುತ್ತಿದ್ದ ಬಗೆ ಊಹೆಗೂ ಮೀರಿದುದು. ಯುದ್ಧದಲ್ಲಿ ಹೋರಾಡಿ ರಕ್ತದ ಮಡುವಿನ ಸತ್ತು ಬಿದ್ದ ಯೋಧರು, ವಿವಿಧ ಅಂಗಗಳನ್ನು ಕಳೆದುಕೊಂಡ ಸೈನಿಕರು, ಕುದುರೆ ಮತ್ತು ಆನೆಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದ ಯುದ್ಧ ಶಸ್ತ್ರಾಸ್ತ್ರಗಳು ರಣರಂಗದಲ್ಲಿ ಕಾಣಬರುವುದು ಸಹಜವಾಗಿತ್ತು. ರಣರಂಗದ ಭಯಾನಕ ಚಿತ್ರವನ್ನು ರಾಮನಾಥ ಚರಿತವು ವಿವರವಾಗಿ ವರ್ಣಿಸಿದೆ. ಹಾಗೆಯೇ ಪ್ರವಾಸಿಗರ ವರದಿಗಳು ವಿಜಯನಗರ ನಡೆಸಿದ ಯುದ್ಧಗಳ ನಂತರದ ಸ್ಥಿತಿಯನ್ನು ಕುರಿತು ಕೆಲವು ಮಾಹಿತಿಗಳನ್ನು ಒದಗಿಸಿವೆ. ನಂಜುಂಡಕವಿಯು, ನೇಮಿಯ ಪರಾಜಯ ಸಂದರ್ಭದ ವರ್ಣನೆಯಲ್ಲಿ ರಣರಂಗದ ಭೀಕರತೆಯ ಚಿತ್ರಣವನ್ನು ನೀಡಿದ್ದಾನೆ :

"ಕೆಡೆದ ಭಟರ ಕೆದರಿದ ಹಾರಗಳ ಕಡಿ
ವಡೆದ ಪದಕಗಳ ಮುರಿದ
ಉಡಿದಾರಗಳ ವಂಗಡದಿಂದಾ ರಣ
ದೆಡೆ ರಾಜಿಸಿತು ಕಣ್ಗಳಿಗೆ",
"ಉಡಿದ ಖಂಡೆಯದ ತುಂಡಿಸಿದ ಬಲ್ಲೆಯದರೆ
ಗಡಿದ ಪಕ್ಕರೆಯ ಖಂಡಿಸಿದ
ತಡಿಯ ಮುರಿದ ಮಿಸಿಕಿಯ ಹೇರಾಳದಿಂ
ಬಿಡದೆಸೆದುದು ರಣಭೂಮಿ"[೧೦೨]ಯೆನ್ನುತ್ತಾನೆ.

ಕುಮಾರವ್ಯಾಸನು ಈ ವಿಷಯ ಕುರಿತು,

"ಕಡಿದ ಹಕ್ಕರಿಕೆಗಳ ಸೀಳಿದ
ದಡಿಯ ನೆಗ್ಗಿದ ಗುಳದ ರೆಂಚೆಯ
ಸಿಡಿದ ಸೀಸಕ ಬಾಹುರಕ್ಷೆಯ ಜೋಡು ಮೊಚ್ಚೆಯದ
ಉಡಿದ ಮಿಣಿ ಮೊಗರಂಬ ಗದ್ದುಗೆ
ಬಡಿಗೆಗಳ ಸೂತ್ರಿಕೆಯ ಕಬ್ಬಿಯ
ಕಡಿಯಣದ ಕುಸುರಿಗಳಲೆಸೆದುದು ಕೂಡೆ ರಣಭೂಮಿ"[೧೦೩] ಎಂದಿರುವನು

ಇದು ಯೋಧರು ಧರಿಸಿದ ವಸ್ತ್ರಗಳು, ರಕ್ಷಾಕವಚಗಳು ಮತ್ತು ಆಯುಧಗಳ ಸ್ಥಿತಿಯಾದರೆ ಆನೆ-ಕುದುರೆಗಳ ಸ್ಥಿತಿ ಮತ್ತೊಂದು ಬಗೆಯಾದ್ದಾಗಿದೆ.

"ಹರಿದ ಹೊರಜೆಗಳ ಮುರಿದ ರೆಂಚೆಯಗಳ
ತರಿದ ಬಲ್ಮೊಗರಂಭಗಳ
ಹರಿಹಂಚಾದ ಹಕ್ಕರಿಕೆಗಳೊಟ್ಟಿಲು
ಮೆರೆದುದು ರಣಭೂಮಿಯೊಳು"[೧೦೪]

ಎಂಬ ವರ್ಣನೆಯಲ್ಲಿ ಆನೆ ಕುದುರೆಗಳಿಗೆ ಹಾಕಿದ್ದ ಜೀನು, ಮುಖವಾಡ, ಕವಚಗಳ ಸ್ಥಿತಿಯಾಗಿದೆ. ರಣರಂಗದಲ್ಲಿ ಹೊರಳಾಡುತ್ತಾ ನರಳುತ್ತಿದ್ದ ಆನೆ-ಕುದುರೆ-ರಾವುತರನ್ನು ಕುರಿತು.

"ಪೊರಳ್ವ ವಾಜಿಗಳಿಂದ ನರಳ್ವ ರಾವುತರಿಂ
ದುರಳ್ವ ಕರಿಗಳಿಂದ ಕಣ್ಗೆ
ಕರಮೆಸೆದುದು"[೧೦೫]

"ಕೊರೆದ ಕೊರಳು, ಹರಿದ ಪಂದಲೆ, ಮುರಿದ ಮೂಳೆಗಳು; ಉಡಿದ ತೊಡೆ ಸಿಡಿದ ಕಣ್ಣುಗಳಿಂದ ಕೆಡೆದ ಮುಂಡಗಳಿಂ ಕೆದರಿದ ತೊಡಿಗೆಗಳಿಂದ ತುಂಡಿಸಿದ ತೋಳಗಳಿಂದ; ಕಣೆವೋದ ಕಾಲಿನ ಕಯ್ವೋದ ತೋಳಿನ ಪಣೆವೋದ ಮೊಗದ ಸುಭಟರ; ಕತ್ತರಿಸಿದ ತಲೆ ಬೊಬ್ಬಿಡುತಿರೆ ಕೈಯೊಳೊತ್ತಿ ಪಿಡಿದ ಖಡ್ಗದಿಂದ ಹೊತ್ತು ಹೊಯ್ದಾಡಿ ಕೆಡೆದವಟ್ಟೆಗಳು ರಣ ದೊತ್ತರಂಬರವನೇನೆಂಬೆ"[೧೦೬] ಎಂಬುದಾಗಿ ರಣರಂಗದ ಕಾಲಾಳುಗಳ ನರಳುವ, ಚೀರುವ ರಕ್ತಪಾತದ ದೃಶ್ಯವನ್ನು ನಂಜುಂಡಕವಿ ನೈಜವಾಗಿ ಚಿತ್ರಿಸಿದ್ದಾನೆ. ನಂಜುಂಡ ಕವಿಯ ಈ ಬಗೆಯ ವರ್ಣನೆ ವಿಜಯನಗರ ಕಾಲದ ಯುದ್ಧ ಚಿತ್ರಣವೆಂಬುದನ್ನು ಮರೆಯುವಂತಿಲ್ಲ. ಪ್ರವಾಸಿಗರ ವರದಿಗಳು ವಿಜಯನಗರ ಮತ್ತು ಬಹಮನಿಯವರಿಗೆ ನಡೆದ ಯುದ್ಧಗಳಲ್ಲಿ ನಂಜುಂಡ ಕವಿ ನೀಡುವಂತಹ ಭೀಕರ ಹತ್ಯೆಗಳು ನಡೆದಿರುವುದನ್ನು ಹೇಳುತ್ತವೆ.

ರಾಯಚೂರು ಕೋಟೆಯ ಮುತ್ತಿಗೆಯಲ್ಲಿ ಕೋಟೆಯೊಳಗಿದ್ದ ಯೋಧರು ಫಿರಂಗಿಯಿಂದ ಗುಂಡುಗಳನ್ನು ಹಾರಿಸಿ ಕೃಷ್ಣರಾಯನ ಸೈನ್ಯದ ಅನೇಕ ಜನರನ್ನು ಆಹುತಿ ತೆಗೆದುಕೊಂಡುದುದು; ರಾಯನ ಸೈನ್ಯವೂ ಶತ್ರು ಸೈನ್ಯದ ಮೇಲೆ ಬಿದ್ದು ಅನೇಕರನ್ನು ಧ್ವಂಸ ಮಾಡಿದುದು; ಆಗ ಯದುಲ್ ಖಾನನ ಆಜ್ಞೆಯಂತೆ ಫಿರಂಗಿ ಧಾಳಿ ನಡೆದು ರಾಯನ ಸೈನ್ಯದ ಅನೇಕ ಯೋಧರು, ಆನೆ ಕುದುರೆಗಳೂ ಸತ್ತುದದನ್ನೂ ನ್ಯೂನಿಜ್ ಹೇಳುತ್ತಾನೆ. ಹಾಗೆಯೇ ರಾಯನ ಸೈನ್ಯವನ್ನು ಅರ್ಧ ಹರಿದಾರಿಗಳಷ್ಟು ದೂರ ಅಟ್ಟಿಸಿಕೊಂಡು ಸೈನಿಕರನ್ನು ವಧೆ ಮಾಡಲಾಯಿತೆಂದು; ಈ ಯುದ್ಧದಲ್ಲಿ ರಾಯನ ಕಡೆಯ ಹದಿನಾರು ಸಾವಿರಕ್ಕಿಂತಲೂ ಹೆಚ್ಚು ಯೋಧರು ಸತ್ತರೆಂದು ಹೇಳಲಾಗಿದೆ.[೧೦೭] ರಕ್ಕಸಗಿ-ತಂಗಡಿಗಿ ಯುದ್ಧದಲ್ಲೂ ಅಪಾರ ಸಾವುನೋವುಗಳುಂಟಾದ್ದವು. ವಿಜಯನಗರ ಸೇನೆಯು ಈ ಕದನದ ಆರಂಭದಲ್ಲಿ ಮಿತ್ರ ಸೈನ್ಯ(ಶಾಹಿ ಸುಲ್ತಾನರ ಸೈನ್ಯ)ವನ್ನು ಫಿರಂಗಿಗಳು ಮತ್ತು ಆಕಾಶಬಾಣಗಳಿಂದ ವಿಧ್ವಂಸಕ ಗುಂಡಿನಾಕ್ರಮಣ ಮಾಡಿದುದರಿಂದ ಅನೇಕರು ಸತ್ತರು. ಆಗ ಮಿತ್ರಸೈನ್ಯವು ಬಳಸಿದ ತಂತ್ರ ತಾಮ್ರದ ನಾಣ್ಯಗಳನ್ನು ಫಿರಂಗಿಗಳಲ್ಲಿ ತುಂಬಿ ಉಡಾಯಿಸಿದುದು. ಇದು ಎಷ್ಟು ವಿನಾಶಕಾರಿಯಾಯಿತೆಂದರೆ ರಣರಂಗದಲ್ಲಿ ಫಿರಂಗಿಪಡೆಯ ಮುಂಬದಿಯಿದ್ದ ೫೦೦೦ ಜನ ಹಿಂದೂಗಳು ಸತ್ತು ಬಿದ್ದರೆಂದು ಸಿವೆಲ್ ಹೇಳುತ್ತಾನೆ.[೧೦೮] ಇವು ಯುದ್ಧದ ಸಾವು ನೋವುಗಳಾದರೆ, ಗೆದ್ದ ಪಡೆಯು ಸೋತ ಸೇನೆ

ಮತ್ತು ರಾಜ್ಯಗಳನ್ನು ಕಾಣುತ್ತಿದ್ದ ರೀತಿ-ನೀತಿಗಳನ್ನು ನ್ಯೂನಿಜ್‌ನಿಂದ ಅರಿಯಬಹುದು. ವಿಜಯಗಳಿಸಿದ ಬಳಿಕ ಸೋತವರ ರಾಜ್ಯದ ಸಂಪತ್ತನ್ನು ಕೊಳ್ಳೆಹೊಡೆಯುವ ಪದ್ಧತಿಯನ್ನು ವಿಜಯನಗರದವರೂ ಮುಂದುವರಿಸಿದ್ದರು.

ಕೃಷ್ಣದೇವರಾಯನು ಬಿಜಾಪುರ ಇಸ್ಮಾಯಿಲ್ ಆದಿಲ್ ಶಹನನ್ನು ರಾಯಚೂರು ಕದನದಲ್ಲಿ ಸೋಲಿಸಿದ ನಂತರ ದೊರೆತ ಯುದ್ಧ ಕೊಳ್ಳೆಯನ್ನು ನ್ಯೂನಿಜ್ ಹೀಗೆ ಹೇಳಿದ್ದಾನೆ: ರಾಯಚೂರು ಯುದ್ಧದ ನಂತರ ಮೂರರಿಗೆ ಸೇರಿದುದನ್ನೆಲ್ಲ ಕೊಳ್ಳೆ ಹೊಡೆಯುವ ಕೆಲಸ ಪ್ರಾರಂಭವಾಯಿತು..... ರಾಯನಿಗೆ ಓರ್ಮಸಿನ ನಾಲ್ಕು ಸಾವಿರ ಕುದುರೆಗಳು, ನೂರು ಆನೆಗಳು ನಾನೂರು ಭಾರಿ ಫಿರಂಗಿಗಳೂ, ಇವನ್ನು ಹೊರುವ ಒಂಬೈನೂರು ಗಾಡಿಗಳೂ, ಅನೇಕ ಗುಡಾರ-ಡೇರೆಗಳೂ ಸಿಕ್ಕಿದುವು. ಇವುಗಳಲ್ಲದೆ ಸಣ್ಣ-ಪುಟ್ಟ ಕುದುರೆಗಳು, ಎತ್ತು-ಕತ್ತೆಗಳು, ಹೆಣ್ಣು-ಗಂಡುಗಳು, ಮಕ್ಕಳು-ಮರಿಗಳು ಎಷ್ಟೋ''[೧೦೯] ಎಂದಿದ್ದಾನೆ. ಇದು ಯಾವುದೇ ಯುದ್ಧದ ಬಳಿಕ ಅಲ್ಲಿನ ಎಲ್ಲ ಬಗೆಯ ವಸ್ತುಗಳೂ ವಿಜಯೀರಾಜನ ಪಾಲಾಗುತ್ತಿದ್ದವು. ಅಲ್ಲದೆ ಶತ್ರು ರಾಜ್ಯದ ಮೇಲೆ ಧಾಳಿ ಮಾಡಿ ಸಂಪತ್ತನ್ನು ದೋಚುವುದು ಸಾಮಾನ್ಯವಾಗಿತ್ತು. ಇದು ಕೃಷ್ಣದೇವರಾಯನ ಸೈನ್ಯವು ಕೈಗೊಂಡ ಲೂಟಿಯಾದರೆ, ಇನ್ನೊಂದು ಕಡೆ ಕೃಷ್ಣದೇವರಾಯನು ಸೋತ ಶತ್ರುಗಳ ಬಗೆಗೆ ಸಂಯಮದಿಂದ ಇದ್ದು, ಕೊಲೆ-ಸುಲಿಗೆಗಳು, ಲೂಟಿಗಳು ನಡೆಸಕೂಡದೆಂದು ಎಚ್ಚರಿಸಿದರೂ, ರಾಯನ ಕಣ್ಣು ತಪ್ಪಿಸಿ ಅವು ನಡದೇ ನಡೆದವು. ಈ ವಿಚಾರ ರಾಜನ ಕಿವಿಗೆ ಬಿದ್ದಾಗ ಅವರಿಗೆ ಛೀಮಾರಿ ಹಾಕಿದ್ದುದನ್ನು ನ್ಯೂನಿಜ್ ಹೇಳುತ್ತಾನೆ.[೧೧೦] ಯುದ್ಧದಲ್ಲಿ ''ಸೆರೆಸಿಕ್ಕಿದ ಹೆಂಗಸರನ್ನು ಬಿಟ್ಟು ಬಿಡುವಂತೆ ರಾಯನು ಆಜ್ಞಾಪಿಸಿದನು; ನಿರ್ದೋಷಿಗಳ ಹತ್ಯೆಯಾಗುತ್ತಿದ್ದುದನ್ನು ಕಂಡ ರಾಯನು ಕೇವಲ ಕರುಣೆಯಿಂದ ಈ ಹತ್ಯೆಯನ್ನು ನಿಲ್ಲಿಸಿರೆಂದು ಆಜ್ಞೆಮಾಡಿದನು''[೧೧೧] ಎನ್ನುವ ಮಾತುಗಳು ಕೃಷ್ಣದೇವರಾಯನ ಮಾನವೀಯ ಗುಣವನ್ನು ಪ್ರತಿನಿಧಿಸುತ್ತವೆ. ಕೃಷ್ಣದೇವರಾಯನ ಹೊರತಾಗಿ ಉಳಿದ ಅರಸರ ಸಮಯದಲ್ಲಿ ಕೊಲೆ ಸುಲಿಗೆಗಳು, ಲೂಟಿಗಳು ಸಾಮಾನ್ಯವಾಗಿದ್ದುದನ್ನು ಫೆರಿಸ್ತಾ, ಪಾಯೇಸ್, ನ್ಯೂನಿಜ್ ಮತ್ತಿತರರು ತಮ್ಮ ವರದಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಹಾಗೆಯೇ ಬಹಮನಿ ಮತ್ತು ಶಾಹಿ ಸುಲ್ತಾನರು ಕೂಡ ಇದಕ್ಕೆ ಹೊರತಾಗಿರಲಿಲ್ಲ.

೫.೧.೧೨ ಯುದ್ಧದ ಪ್ರೇರಣೆ

ಯುದ್ಧದ ಆಶಯವನ್ನು ಜನರಲ್ಲಿ ಮೂಡಿಸುತ್ತಿದ್ದವರು ಆಳುವ ವರ್ಗದವರು. ಅವರು ತಮ್ಮ ರಕ್ಷಣೆ ಮತ್ತು ನೆರವಿಗಾಗಿ ಜನಸಾಮಾನ್ಯರನ್ನು ಅವಲಂಬಿಸಿದ್ದುದೇನೋ ನಿಜ. ಆದರೆ ಇವರು ಸಮಾಜದಲ್ಲಿ ತಮ್ಮ ಆಶಯಗಳಿಗಾಗಿ ಜನರಲ್ಲಿ ರಾಜ್ಯ ಮತ್ತು ರಕ್ಷಣೆಯ ಹೆಸರಿನಲ್ಲಿ ಜನಸಾಮಾನ್ಯರನ್ನು ಬಲಿಪಶುಗಳಾಗಿ ಮಾಡುತ್ತಿದ್ದುದನ್ನು ಕಾಣಬಹುದು. ಅವುಗಳಿಗೆ ಧಾರ್ಮಿಕ, ಲೌಕಿಕ, ಅಲೌಕಿಕ ಕಲ್ಪನೆಗಳನ್ನು ಸೃಷ್ಟಿಸಿ, ಸೈನ್ಯಕ್ಕೆ ಯೋಧರು ಹೆಚ್ಚಾಗಿ ಸೇರುವಂತೆ ಪ್ರೇರೇಪಿಸುತ್ತಿದ್ದುದೂ ಉಂಟು. ಇದು ಹಿಂದಿನಿಂದಲೂ ಬಂದ ಪದ್ಧತಿ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಯುದ್ಧಮಾಡಲು ಪ್ರಚೋದಿಸಿದ ಬಗೆಯಿದು: "ಯುದ್ಧದಲ್ಲಿ ಧರ್ಮವು ಅನೇಕ ಮುಖಿ, ಧರ್ಮಾಚರಣೆಯಲ್ಲಿ ದಯೆಗೆ ಜಾಗವಿರುವಂತೆ ಗಟ್ಟಿ ಮನಸ್ಸಿಗೂ ಜಾಗವಿರುತ್ತದೆ. ಕರ್ಮವು ಪುರುಷಾಯತ್ತ, ಫಲವು ದೈವಾಯತ್ತ. ಕರ್ಮ(ಯುದ್ಧ) ಮಾಡಿಯೂ ದೋಷವನ್ನು ಅಂಟಿಸಿಕೊಳ್ಳದಿರುವುದೇ ಕೌಶಲ. ಅಮಾನುಷಕ್ಕೆ ಒಳಗಾಗಬೇಡ. ಹೃದಯ ದೌರ್ಬಲ್ಯವನ್ನು ನೀಗಿ ಎಚ್ಚೆತ್ತು ಶತ್ರುಗಳನ್ನು ಸದೆಬಡಿ", "ಯುದ್ಧವು ತಾನಾಗಿ ಬಂದದ್ದು, ಅದು ಪಾಪವಾಗಲಾರದು. ಯುದ್ಧ ಮಾಡದೆ ಹೋದರೆ ಪಾಪವಾಗುತ್ತದೆ ಹಾಗೂ ಅಪಕೀರ್ತಿಗೆ ಒಳಗಾಗಬೇಕಾಗುತ್ತದೆ"[೧೧೨] ಎನ್ನುವ ಮಾತುಗಳಿಂದ ಯೋಧರನ್ನು ಹೇಗೆ ಧಾರ್ಮಿಕ ನಂಬಿಕೆಗಳಿಂದ ಪ್ರೇರೇಪಿಸುತ್ತಿರೆಂಬ ಸಂಗತಿ ವ್ಯಕ್ತಗೊಳುತ್ತದೆ. ಇದು ಶ್ರೀಕೃಷ್ಣನ ಮಾತುಗಳಾದರೂ ನಂತರ ಕಾಲದ ಅರಸರು ಬಳಸಿದ್ದ ತಂತ್ರಗಳು ಇದೇ ಬಗೆಯವೇ. ಇದನ್ನು ಹೀಗೂ ಹೇಳಬಹುದು : ಅರಸರು ಕೂಡ ಜನರಲ್ಲಿ ಯುದ್ಧಕ್ಕೆ ಸೇರಲು ಅನೇಕ ಮಾರ್ಗಗಳನ್ನು ಅನುಸರಿಸಿದ್ದರು. ಅವರು ಸೈನ್ಯಕ್ಕೆ ಸೇರುವಂತೆ ಮಾಡಲು ವೀರತ್ವ ಮತ್ತು ಶೌರ್ಯವನ್ನು ಮೌಲ್ಯವಾಗಿಸಲು ಹಲವಾರು ಶಾಸ್ತ್ರ-ಧರ್ಮಗಳನ್ನು ಹೆಣೆದರು; ಸಂಪ್ರದಾಯಗಳನ್ನು ಸೃಷ್ಟಿಸಿದರು; ಇಹಲೋಕ ಸುಖದ ಹತ್ತುಪಟ್ಟು ಹೆಚ್ಚಿರುವ ಪರಲೋಕದ ಸುಖ-ಸಂತೋಷಗಳ ಆಮಿಷ ಒಡ್ಡಿದರೆಂದು ಹೇಳಬಹುದು.[೧೧೩] ಶಾಸನಗಳು ಈ ಹಿನ್ನೆಲೆಯಲ್ಲಿಯೇ

> "ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ
> ಕ್ಷಣವಿಧ್ವಂಸಿನೀ ಕಾಯೇ ಕೌ ಚಿಂತಾಮರಣೇ ರಣೆ [೧೧೪] ಎಂದಿರುವುದು.

ಇದರರ್ಥ ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ, ಸತ್ತರೆ ದೇವಲೋಕದ ಅಪ್ಸರೆಯರು, ಕ್ಷಣದಲ್ಲಿ ನಾಶವಾಗುವ ಈ ದೇಹಕ್ಕಾಗಿ ಚಿಂತಿಸಬಾರದು. ಈ ಬಗೆಯ ನಂಬಿಕೆಗಳನ್ನು ಜನರಲ್ಲಿ ತುಂಬುತ್ತಿದ್ದವರು ಅರಸ ಮತ್ತಿತರ ಆಳುವ ವರ್ಗವೇ. ದೇಹ ಅಶಾಶ್ವತ, ಕೀರ್ತಿ ಶಾಶ್ವತ; ಗೆದ್ದರೆ ಭೋಗಪ್ರಾಪ್ತಿ, ಸತ್ತರೆ ಸ್ವರ್ಗ, ರಾಜನ ಸಂಬಳದ ಋಣದ ತೀರಿಕೆ ಒಟ್ಟಿನಲ್ಲಿ ಯುದ್ಧದಂತೆ ಒಳ್ಳೆಗತೆಯನ್ನು ಕೊಡುವಂಥದ್ದು ಮತ್ತೇನೂ ಇಲ್ಲ; ಶೂರರ ಮೈಯಿಂದ ರಕ್ತಬಂದಾಗ ಅವರು ಪಾಪವನ್ನು ಕಳೆದುಕೊಳ್ಳುವರು. ಯುದ್ಧದಲ್ಲಿ ಹೊಡೆತ ಮುಂತಾದ ದುಃಖವನ್ನು ತಡೆದುಕೊಳ್ಳುವುದೇ ತಪಸ್ಸು ಎನ್ನುವ ನಂಬಿಕೆಗಳು ಜನರು ಸೈನ್ಯಕ್ಕೆ ಸೇರಲು ಪ್ರೇರೇಪಿಸಿದವು. ಹಾಗೆಯೇ ಸತ್ತ ವೀರರಿಗಾಗಿ ವೀರಗಲ್ಲುಗಳನ್ನು ನೆಡುವ, ಅವುಗಳನ್ನು ಪೂಜಿಸುತ್ತಿದ್ದ ಕ್ರಮವು ಕೂಡ ಪ್ರೇರಣೆಯ ಶಕ್ತಿಯಾಯಿತು. ಸಂಗಮ್ ಸಾಹಿತ್ಯದಲ್ಲಿ ಕಾಣಬರುವಂತೆ, "ಸೋತು ತಮ್ಮ ಮಗ್ಗುಲಲ್ಲಿ ಓಡಿಹೋಗುತ್ತಿದ ದಂಡುಗಳನ್ನು ಕಂಡು ವೀರಗಲ್ಲುಗಳು ಪರಿಹಾಸ್ಯ ಮಾಡುತ್ತಿದ್ದವು."[೧೧೫] ಈ ಬಗೆಯ ನಂಬುಗೆ-ಆಚರಣೆಗಳು ಸಮಾಜದಲ್ಲಿ ಬಲವಾಗಿ ಬೇರುಬಿಡುವಂತೆ ವ್ಯವಸ್ಥಿತವಾಗಿ ನಿಯೋಜಿಸಿದ್ದುದು ಆಳುವ ವರ್ಗದವರೇ.

ಯುದ್ಧಕ್ಕೆ ಮುನ್ನ, ಯುದ್ಧಸಮಯ ಮತ್ತು ಯುದ್ಧಾನಂತರದಲ್ಲಿ ನೀಡುತ್ತಿದ್ದ ವೀಳೆಯ, ಬಹುಮಾನ, ಬಿರುದು-ಬಾವಲಿಗಳು, ದಾನ-ದತ್ತಿಗಳು ಕೂಡ ಯುದ್ಧ ಅಥವಾ ಹೋರಾಟಕ್ಕೆ ಪ್ರಚೋದಕ ಶಕ್ತಿಗಳಾಗಿದ್ದುದನ್ನು ಮರೆಮಾಚುವಂತಿಲ್ಲ.

ವಿಜಯನಗರ ಅರಸರು ಈ ಬಗೆಯ ನಿಯಮಗಳಿಗೆ ಹೊರತಾಗಿರಲಿಲ್ಲ. ಅವರು ಕೂಡ ಇದೇ ಪದ್ಧತಿಯನ್ನು ಮುಂದುವರಿಸಿದ್ದರೆಂದು ಹೇಳಬಹುದು. ಇದರ ಬಗೆಗೆ ಖಚಿತ ಮಾಹಿತಿಗಳು ದೊರೆಯದಿದ್ದರೂ ಕೆಲವು ಸಂಗತಿಗಳು ಯುದ್ಧಪ್ರೇರಣೆಯನ್ನು ಬಿಂಬಿಸುತ್ತವೆ. ವೀಳೆಯ ನೀಡುವ ಪದ್ಧತಿಯು ಯುದ್ಧಪ್ರೇರಕ ಶಕ್ತಿಯೇ ಸರಿ. ರಾಮನಾಥಚರಿತದಲ್ಲಿ ಮಾತಂಗಿಯು, ''ಓಡಿದು ತಂದೊಪ್ಪಿಸುವನು ರಾಮನಾಥನ ಕೊಡು ವೀಳೆಯವ ನೀನು" ಎನ್ನುವ ಹಾಗೂ ಕೃಷ್ಣದೇವರಾಯನ ಅಮರನಾಯಕನಾಗಿದ್ದ ಪೆಮ್ಮಸಾನಿರಾಮಲಿಂಗ ನಾಯಕನು ರಾಯನಿಂದ ವೀಳೆಯವನ್ನು ಕೇಳಿ ಯುದ್ಧಕ್ಕೆ ಹೋದ ಸಂಗತಿಯನ್ನು ರಾಯವಾಚಕಮುವಿನಲ್ಲಿ ಹೇಳಲಾಗಿದೆ.[೧೧೬] ಇದು ರಣವೀಳೆಯ ನೀಡುವ ಪ್ರೇರಣೆಯಾದರೆ, ರಣರಂಗದ ಹೋರಾಟದಲ್ಲಿ ಶತ್ರುಸೈನ್ಯವನ್ನು ಸೋಲಿಸುವುದು ಕಷ್ಟವೆಂದು ತಿಳಿದಾಗ ರಾಜರು ಅನುಸರಿಸುತ್ತಿದ್ದ ತಂತ್ರ ಬಹುಮಾನ-ಉಡುಗೊರೆಗಳು ಹಾಗೂ ಹಣದ ಆಸೆ ಮೂಡಿಸುತ್ತಿದ್ದುದು.

ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳುವುದು ಕಷ್ಟವೆಂದು ತಿಳಿದ ಕೃಷ್ಣದೇವರಾಯ ಮತ್ತು ಅವನ ಮಂತ್ರಿಗಳು ಕೋಟೆಗೋಡೆಯ ಕಲ್ಲುಗಳನ್ನು ಕಿತ್ತುತಂದವರಿಗೆ ಕಲ್ಲಿನ ಗಾತ್ರಕ್ಕನುಗುಣವಾಗಿ ಹಣವನ್ನು ನೀಡುವುದಾಗಿ ಘೋಷಿಸಿದ್ದುದನ್ನು ಕಾಣಬಹುದು.[೧೧೭] ಶಿವತತ್ತ್ವರತ್ನಾಕರದಲ್ಲಿ ಯುದ್ಧ ಘೋಷಣೆಯ ನಂತರ ಅರಸನು ಸೈನಿಕ ಯೋಧರನ್ನು ಹುರಿದುಂಬಿಸಿದ ಬಗೆಯಿದು: ''ರಾಜನನ್ನು ಕೊಂದವನಿಗೆ ಹತ್ತುಲಕ್ಷ (ಸುವರ್ಣ ನಾಣ್ಯಗಳು) ಕೊಡುತ್ತೇನೆ. ರಾಜಕುಮಾರನನ್ನು ಕೊಂದವರಿಗೆ ಲಕ್ಷ ಕೊಡುತ್ತೇನೆ. ಅವನ ಸಾಮಂತರು, ಜಿಲ್ಲಾ ಅಧ್ಯಕ್ಷರು -ಇವರನ್ನು ಕೊಂದವರಿಗೆ ಹತ್ತು ಸಾವಿರ ಕೊಡುತ್ತೇನೆ. ಆನೆಗಳ ವ್ಯೂಹವನ್ನು ಭೇದಿಸಿದಂಥವರಿಗೆ ಎರಡು ಸಾವಿರ ಕೊಡುತ್ತೇನೆ. ರಥ ಸಮೂಹವನ್ನು ನಾಶಮಾಡಿದವರಿಗೆ ಒಂದು ಸಾವಿರ ಕೊಡುತ್ತೇನೆ. ಅಶ್ವರೋಹಿಗಳನ್ನು ಕೊಂದವರಿಗೆ ಐನೂರು ಕೊಡುತ್ತೇನೆ. ಸತ್ತವನ ತಲೆ ತಂದವರಿಗೆ ನೂರು ಕೊಡುತ್ತೇನೆ ಎಂದು ಹೇಳಿ ಸೈನಿಕರನ್ನು ಮರಳುಗೊಳಿಸಿ ಯುದ್ಧಕ್ಕೆ ಹೊರಡಬೇಕು''[೧೧೮] ರಕ್ಕಸಗಿ- ತಂಗಡಿಗಿ ಯುದ್ಧದಲ್ಲಿ ರಾಮರಾಯ ತನ್ನ ಸೈನ್ಯವೆಲ್ಲವನ್ನೂ ರಣರಂಗದಲ್ಲಿ ಸಜ್ಜುಗೊಳಿಸಿ ಸೇನಾ ನಾಯಕರು, ದಳವಾಯಿ ಮತ್ತಿತರ ಮುಖಂಡರನ್ನು ಕರೆಸಿ, ಅವರಿಗೆ ಬಹುಮಾನ, ಹಾರ, ತುರಾಯಿ, ವಸ್ತ್ರಗಳಿಂದ ಗೌರವಿಸಿ ''ಮುಸಲಮಾನ ಪಾದಶಾಹನವರು ನಡೆದು ನಮ್ಮ ಮೇಲೆ ಬರುತ್ತಾಯಿದ್ದಾರೆ. ಅವರ ಸಂಗಾತ ಯುದ್ಧ ಮಾಡಲಿಕೆ ಯುದ್ಧ ಸಾಮಗ್ರಿಯನ್ನು ತೆಗೆದುಕೊಂಡು ಹೋಗಿ ಚೆರಿನಾ ಯುದ್ಧ ಮಾಡಿರಿ''[೧೧೯] ಯುದ್ಧ ಸಮಯ ಅಂದರೆ ರಣರಂಗದಲ್ಲಿ

ರಾಮರಾಯ ತನ್ನ ಸೈನಿಕರಿಗೆ ಹಣ-ಅಧಿಕಾರದ ಆಸೆ ತೋರಿದುದನ್ನು ಬುಸಾತಿನೆ ಸಲಾತಿನದಲ್ಲಿ ಹೀಗೆ ಹೇಳಿದೆ: ಯಾರು ಶೂರತನದಿಂದ ಕಾದಿ ನನ್ನ ಹತ್ತಿರ ಬರುವರೋ ಅವರಿಗೆ ಈ ಮುತ್ತುರತ್ನಗಳನ್ನು ತುಂಬಿದ ತಟ್ಟೆಯನ್ನು ಕೊಡುವೆನು. ಅವರ ಅಂತಸ್ತು ಹಾಗೂ ಪದಾಧಿಕಾರಗಳನ್ನು ಎತ್ತರಿಸುವೆನು. ಈ ರೀತಿಯ ಘೋಷಣೆಗಳಿಂದ ಸೈನಿಕರನ್ನು ಯುದ್ಧದಲ್ಲಿ ಹೋರಾಡುವಂತೆ ಹುರಿದುಂಬಿಸಿದ್ದನು ಕಾಣಬಹುದು.

ಯುದ್ಧಪ್ರೇರಣೆಗೆ ಧಾರ್ಮಿಕ ನಂಬುಗೆಗಳನ್ನೂ ಬಳಸಿದ್ದರು. ಒಂದನೆಯ ಬುಕ್ಕರಾಯನು ಬಹಮನಿಯ ಮಹಮ್ಮದನ ಸೈನ್ಯವನ್ನು ಸೋಲಿಸಲು ತನ್ನ ಸೈನಿಕರಿಗೆ ಪ್ರಚೋದನೆ ನೀಡಿದ ಬಗೆಯಿದು; ಅವನು ತನ್ನ ಸೈನಿಕರಿಗೆ ಮಹಮ್ಮದೀಯರನ್ನು ಕೊಲ್ಲುವುದರಿಂದ ಬರುವ ಪುಣ್ಯ ಕುರಿತು ದಿನಾಲು ಪ್ರವಚನ ನೀಡುವಂತೆ ಬ್ರಾಹ್ಮಣರಿಗೆ ಆಜ್ಞೆಯಿತ್ತ. ನಿಜಭಕ್ತರು(ಮುಸ್ಲಿಮರು) ಎಸಗಿದ ಗೋಹತ್ಯೆ, ಪವಿತ್ರ ವಿಗ್ರಹಗಳಿಗೆ ಅವಮಾನ ಮತ್ತು ದೇವಾಲಯಗಳ ಧ್ವಂಸವನ್ನು ಬಣ್ಣಿಸುವಂತೆ ಅವರಿಗೆ ಆಜ್ಞೆಯಿತ್ತ"ನೆಂದು ಫೆರಿಸ್ತಾ ಹೇಳಿದ್ದಾನೆ.[೧೨೦] ಇದು ಆಡಳಿತವರ್ಗ ತನ್ನ ಉಳಿವಿಗೆ ಏನೆಲ್ಲಾ ತಂತ್ರಗಳನ್ನು ಬಳಸುತ್ತಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇಂದಿನ ಆಧುನಿಕ ಯುಗದಲ್ಲೂ ಆಡಳಿತ ವರ್ಗವು ತಮ್ಮ ಗುರಿ ಸಾಧಿಸಲು ಬಳಸುವ ಅಸ್ತ್ರಗಳಲ್ಲಿ ಇದೂ ಒಂದಾಗಿರುವುದು ಗಮನಿಸಬೇಕಾದ ಸಂಗತಿ. ವಿಜಯನಗರದ ಸೇನೆಯಲ್ಲಿ ಮುಸ್ಲಿಮರ ಸಂಖ್ಯೆ ಎರಡನೆಯ ದೇವರಾಯನ ಅವಧಿಯಲ್ಲಿ ಹೆಚ್ಚಿಸಿದ್ದುದರಿಂದ ತದನಂತರ ನಡೆದ ಯುದ್ಧಗಳಲ್ಲಿ ಮತೀಯ ದೃಷ್ಟಿಯಿರುವುದು ಅಷ್ಟಾಗಿ ಕಾಣಬರುವುದಿಲ್ಲ. ಬಹಮನಿ ಮತ್ತು ವಿಜಯನಗರಗಳಿಗೆ ಯುದ್ಧಗಳು ನಡೆದುದು ಹೆಚ್ಚಾಗಿ ರಾಯಚೂರು ದೋಅಬ್ ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕಾಗಿ. ಆದುದರಿಂದ ಮತೀಯ ದೃಷ್ಟಿಗಿಂತ ಪ್ರಭುತ್ವವನ್ನು ಸ್ಥಾಪಿಸುವ ಸಲುವಾಗಿ ನಡೆದ ಯುದ್ಧಗಳೇ ಹೆಚ್ಚಾಗಿವೆ.

ಶೌರ್ಯಸಾಹಸ ಪ್ರತೀಕದ ಮಾತುಗಳೂ ಕೂಡ ಯುದ್ಧಗಳಲ್ಲಿ ಹೋರಾಡುವಂತೆ, ಸೈನಿಕರನ್ನು ಆಕರ್ಷಿಸಿದ ಘಟನೆಗಳೂ ಇವೆ. ರಾಯಚೂರು ಮುತ್ತಿಗೆಯ ಆರಂಭದಲ್ಲಿ ಸುಲ್ತಾನರ ಸೇನೆಯು ಕೃಷ್ಣದೇವರಾಯನ ಸೈನ್ಯವನ್ನು ಹಿಮ್ಮೆಟ್ಟಿಸಿದಾಗ ಸೈನಿಕರು ಓಡಿಹೋಗಲಾರಂಭಿಸಿದ್ದರು. ಆಗ ರಾಯನು ಸೈನಿಕರನ್ನು ಉದ್ದೇಶಿಸಿ, "ಹೇ ಹೇಡಿಗಳಿರಾ, ಎಲ್ಲಿಗೆ ಓಡುವಿರಿ! ಈ ಪ್ರಪಂಚದಲ್ಲಿ ಎಲ್ಲರೂ ಸಾಯಲೇಬೇಕು. ಯುದ್ಧದಲ್ಲಿ ಮಡಿದರೆ ವೀರಸ್ವರ್ಗ. ಆದ್ದರಿಂದ ಎಲ್ಲರೂ ನನ್ನೊಡನೆ ಬನ್ನಿ; ಹೇಡಿಗಳಾಗಬೇಡಿ" ಎನ್ನುತ್ತಾನೆ. ಅಲ್ಲದೆ "ರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕನೊಬ್ಬನಿಗೆ ಕೊಟ್ಟು, ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ, ಅದನ್ನು ನೋಡಿ ಅವರು ಚಿತೆಯೇರುವರೆಂದೂ ಹೇಳಿದನು".[೧೨೧]ಸ್ವತಃ ಯುದ್ಧದಲ್ಲಿ ಅರಸರೇ ಪ್ರಾಣ ಒತ್ತೆಯಿಟ್ಟು ಹೋರಾಡುವನೆಂಬ ಸಂಗತಿ ತಿಳಿದ ರಾಯನ ಸೈನಿಕರು ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡಿ ಜಯಗಳಿಸಿದ್ದುದನ್ನು ಕಾಣುತ್ತೇವೆ.

ಹೀಗೆ ರಾಜ ಅಥವಾ ಆಡಳಿತ ವರ್ಗವು ಜನರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳುವಾಗ, ಯುದ್ಧಸಂದರ್ಭಗಳಲ್ಲಿ ಹೋರಾಟದ ಕೆಚ್ಚನ್ನು ತುಂಬಲು ಅವರನ್ನು ಅನೇಕ ರೀತಿಯ ತಂತ್ರ, ಉಪಾಯಗಳು, ಆಸೆ-ಆಮಿಷಗಳು, ಧಾರ್ಮಿಕ ಆಚರಣೆಗಳು, ಇಹ-ಪರವೆಂಬ ನಂಬಿಕೆಗಳನ್ನು ತುಂಬಿ ಯುದ್ಧಕ್ಕೆ ಅಣಿಗೊಳಿಸುತ್ತಿದ್ದುದನ್ನು ಕಾಣಬಹುದು.

೩.೧.೧೩. ಬಿರುದಾವಳಿಗಳು

ಶೌರ್ಯ, ಪರಾಕ್ರಮ ಹಾಗೂ ಸಾಹಸ ಪ್ರವೃತ್ತಿಗಳು ಮಾನವನ ಸಹಜ ಗುಣಗಳು. ಮಾನವನ ಸ್ವಭಾವಗಳಲ್ಲಿ ಇತರರಿಗಿಂತ ತಾನು ಭಿನ್ನವೆಂಬುದು, ಇತರರು ಮಾಡಲಾರದ ಕಾರ್ಯಗಳಲ್ಲಿ ತೊಡಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಿದುದು ಪದ್ಧತಿ. ಈ ಪ್ರವೃತ್ತಿಯು ರಾಜಮಹಾರಾಜರಿಂದ ಹಿಡಿದು ಸಾಮಾನ್ಯ ಯೋಧರವರೆಗೂ ಭಿನ್ನವಾದ ನೆಲೆಗಳಲ್ಲಿ ವ್ಯಕ್ತಗೊಳ್ಳುತ್ತಿದ್ದಿತು. ವಿಜಯನಗರ ಸಾಮ್ರಾಜ್ಯಾವಧಿಯ ಅಸಂಖ್ಯಾತ ಶಾಸನಗಳು, ವೀರಗಲ್ಲುಗಳು ಸಾಹಿತ್ಯ ಮತ್ತಿತರ ಆಕರಗಳಲ್ಲಿ ಈ ಬಗೆಯ ಶೌರ್ಯ-ಪರಾಕ್ರಮಗಳನ್ನು ಪ್ರತಿಬಿಂಬಿಸುವ ಹಲವು ಬಿರುದಾವಳಿಗಳು ಉಲ್ಲೇಖವಾಗಿವೆ. ಶಾಸನಗಳಲ್ಲಿ ರಾಜ ಅಥವಾ ದಾನ ನೀಡಿದ ವ್ಯಕ್ತಿಯ ಹೆಸರಿನೊಂದಿಗೆ ಅವನು ಗಳಿಸಿದ ಬಿರುದುಗಳನ್ನು ವಿಶೇಷವಾಗಿ ಹೆಸರಿಸಲಾಗುತ್ತಿದ್ದಿತು. ಈ ಬಿರುದುಗಳನ್ನು ಸಾಮಾನ್ಯವಾಗಿ ಅರಸರು, ಮಾಂಡಲಿಕರು ಹೆಚ್ಚಾಗಿ ಹೊಂದಿರುತ್ತಿದ್ದರು. ಇವರಲ್ಲದೆ ಸಾಮಾನ್ಯ ಯೋಧರು ಹಾಗೂ ಯೋಧ ಮುಖಂಡರು ಕೂಡ ರಾಜ್ಯ ರಕ್ಷಣೆಯ ಸಮಯದಲ್ಲಿ ಕೈಗೊಂಡ ಕಾರ್ಯವೈಖರಿಗಳ ಹಿನ್ನೆಲೆಯಲ್ಲಿ ಅರಸರು ಬಿರುದುಗಳನ್ನು ನೀಡಿ ಗೌರವಿಸುತ್ತಿದ್ದುದು ವಾಡಿಕೆ.

ಬಿರುದಾವಳಿಗಳು ಸಾಮಾನ್ಯವಾಗಿ ಅರಸರು, ಮಾಂಡಲಿಕರು, ಮತ್ತಿತರ ಅಧಿಕಾರಿಗಳ ಗುಣವಿಶೇಷಗಳನ್ನು, ವ್ಯಕ್ತಿತ್ವ-ಸಾಧನೆಗಳನ್ನು ಪ್ರತಿನಿಧಿಸುತ್ತವೆ. ಅಲ್ಲದೆ ಆಯಾಯ ಅರಸುಮನೆತನದ ಹಕ್ಕು, ಪರಮಾಧಿಕಾರ, ಸ್ಥಾನ-ಮಾನಗಳನ್ನು ಸಾರುವುದರ ಜೊತೆಗೆ ಅರಸರ ಕೀರ್ತಿ, ಪ್ರತಿಷ್ಠೆಗಳನ್ನು ಎಲ್ಲೆಡೆ ಹರಡುತ್ತಿದ್ದವು. ಆ ಮೂಲಕ ಪ್ರಜೆಗಳಲ್ಲಿ ಅರಸರ ಬಗೆಗೆ ವಿಧೇಯತೆ, ನಿಷ್ಠೆ, ಗೌರವ ಹಾಗೂ ಅಭಿಮಾನಗಳನ್ನು ಮೂಡಿಸಿ ರಾಜ ಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶವೂ ಇವುಗಳದಾಗಿತ್ತು.

೩.೧.೧೩.೧ ಅರಸರ ಬಿರುದಾವಳಿಗಳು

ವಿಜಯನಗರದ ಅರಸರು ತಮ್ಮ ಹಿಂದಿನ ಅರಸು ಮನೆತನಗಳಂತೆಯೇ ರಾಜ್ಯಾಡಳಿತದಲ್ಲಿ ಮಹತ್ವದ ಪಾತ್ರವಹಿಸಿದ್ದು, ತಮ್ಮ ಶೌರ್ಯ, ಪರಾಕ್ರಮಗಳಿಂದ ಅನೇಕ ಸಮಕಾಲೀನ ಅರಸರನ್ನು ಹತ್ತಿಕ್ಕಿ, ಸಾಮ್ರಾಜ್ಯದಲ್ಲಿ ಶಾಂತಿ-ಸುವ್ಯವಸ್ಥೆಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದರು. ಈ ಯಶಸ್ಸುಗಳನ್ನು ಅವರು ಧರಿಸಿದ ಬಿರುದುಗಳಲ್ಲಿ

ಕಾಣಬಹುದು. ಬಿರುದುಗಳು ಆಯಾಯ ರಾಜರ ವ್ಯಕ್ತಿತ್ವಗಳನ್ನು ಪ್ರತಿಬಿಂಬಿಸುವುದರ ಜೊತೆಗೆ ಒಂದೊಂದು ಕೂಡ ಮಹತ್ವದ ಸಂಗತಿ ಅಥವಾ ಘಟನೆಗಳನ್ನು ಒಳಗೊಂಡಿವೆ. ವಿಜಯನಗರದ ಅರಸರು ಹೊಂದಿದ್ದ ಬಿರುದುಗಳಲ್ಲಿ ಸಾಮಾನ್ಯವಾಗಿ ಅರಂಭದ ಅರಸರು ಗಳಿಸಿದವುಗಳನ್ನೇ ನಂತರದವರೂ ಧರಿಸಿರುವುದನ್ನು ಕಾಣಬಹುದು. ಈ ಪದ್ಧತಿ ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ಅವುಗಳ ಜೊತೆಗೆ ಪ್ರತಿಯೊಬ್ಬ ಅರಸನೂ ತಮ್ಮ ತಮ್ಮ ಅವಧಿಯ ಕಾರ್ಯ ಚಟುವಟಿಕೆಗಳಿಂದ ಹೊಸ ಹೊಸ ಬಿರುದುಗಳನ್ನು ಸೇರಿಸುತ್ತಾ ಹೋಗಿದ್ದಾರೆ. ಆರಂಭದ ಅರಸ ಹರಿಹರನಿಂದ ಹಿಡಿದು ಸದಾಶಿವರಾಯನವರೆಗೂ ಹೊಸ ಹೊಸ ಬಿರುದುಗಳನ್ನು ಹೊಂದಿದ್ದುದು ಗಮನಿಸಬೇಕಾದ ಸಂಗತಿ.

ವಿಜಯನಗರದ ಸಾಮ್ರಾಜ್ಯ ಸ್ಥಾಪಕನೂ, ಉತ್ತಮಯೋಧನೂ, ಸಾಮ್ರಾಜ್ಯ ಸಂಘಟಕನೂ ಆದ ಒಂದನೆಯ ಹರಿಹರನು ಸಾಮ್ರಾಜ್ಯ ಕಟ್ಟುವಲ್ಲಿ ಶ್ರಮವಹಿಸಿರುವುದಂತೂ ನೈಜನೀಯ. ಇವನ ಸಹೋದರರು ಕೂಡ ಈ ನಿಟ್ಟಿನಲ್ಲಿ ಶ್ರಮಿಸಿರುವುದು ಆಕರಗಳಿಂದ ತಿಳಿದು ಬರುತ್ತದೆ. ಹರಿಹರನು ಕ್ರಿ.ಶ.೧೩೩೬ರಿಂದ೫೬ರವರೆಗೆ ಆಳ್ವಿಕೆ ನಡೆಸಿದ್ದು, ಈ ಅವಧಿಯಲ್ಲಿ ವಿವಿಧ ಪ್ರದೇಶ ಹಾಗೂ ರಾಜ್ಯಗಳೊಂದಿಗೆ ಹೋರಾಡಿ ಸಾಮ್ರಾಜ್ಯವನ್ನು ವಿಸ್ತರಿಸಿದ್ದನು. ಹೊಯ್ಸಳರ ಅವಧಿಯಲ್ಲಿ ಮಹಾಮಂಡಲೇಶ್ವರನಾಗಿ[೧೨]ದ್ದ ಹರಿಹರನು ಮೂರನೆಯ ಬಲ್ಲಾಳನ ಅಂತಿಮ ಕಾಲದ ಹೊತ್ತಿಗೆ ಸ್ವತಂತ್ರವಾಗಿ ಆಳ್ವಿಕೆ ನಡೆಸಿದನು. ಅವನು ಸ್ವತಂತ್ರನಾದ ಮೇಲೂ, "ಮಹಾಮಂಡಲೇಶ್ವರ"ನೆಂದೇ ಕರೆದುಕೊಂಡಿದ್ದಾನೆ. ಈ ಮಹಾಮಂಡಲೇಶ್ವರನೆಂಬುದು ಪದವಿಯೂ ಹೌದು, ಬಿರುದೂ ಹೌದು. ಇದನ್ನು ಸದಾಶಿವರಾಯನವರೆಗೂ ಧರಿಸಿದ್ದುದನ್ನು ಶಾಸನಗಳಲ್ಲಿ ಕಾಣಬಹುದು.[೧೩] ಮಹಾಮಂಡಲೇಶ್ವರನಾಗಿದ್ದ ಹರಿಹರನು ಸ್ವತಂತ್ರನಾಗಿ ಸಾಮ್ರಾಜ್ಯ ವಿಸ್ತರಿಸಿದ ವಿವರಗಳನ್ನು ಅವನ ಬಿರುದುಗಳಿಂದ ತಿಳಿದು ಕೊಳ್ಳಬಹುದು. ಹರಿಹರನು ಹೊಂದಿದ್ದ ಬಿರುದುಗಳೆಂದರೆ 'ಪೂರ್ವಪಶ್ಚಿಮ ಸಮುದ್ರಾಧಿಪತಿ', 'ಭಾಷೆಗೆ ತಪ್ಪುವ ರಾಯರ ಗಂಡ', 'ಅರಿರಾಯ ವಿಭಾಡ'ಗಳಲ್ಲದೆ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ ಮತ್ತು ಮಹಾರಾಯನೆನ್ನುವ ರಾಜತ್ವದ ಬಿರುದುಗಳೂ ಸೇರಿವೆ.[೧೪]ಈ ಬಿರುದುಗಳಿಂದ ಹರಿಹರನ ಸಾಮ್ರಾಜ್ಯ ವಿಸ್ತಾರ ಹಾಗೂ ಶೌರ್ಯ ಪರಾಕ್ರಮಗಳು ವ್ಯಕ್ತಗೊಳ್ಳುತ್ತವೆ. 'ಪೂರ್ವ ಪಶ್ಚಿಮ ಸಮುದ್ರಾಧಿಪತಿ'ಯು ಕರಾವಳಿ ಪ್ರದೇಶಗಳಾದ ಮಲಬಾರ ಮತ್ತು ಕೋರಮಂಡಲಗಳ ಮೇಲೆ ಹಿಡಿತ ಸಾಧಿಸಿದುದರ ಪ್ರತೀಕವಾಗಿದೆ. ಅಂತೆಯೇ 'ಭಾಷೆಗೆ ತಪ್ಪುವ ರಾಯರ ಗಂಡ'ನೆಂಬುದು ಸಮಕಾಲೀನ ಅರಸರು, ಸಾಮಂತರನ್ನು ಹತ್ತಿಕ್ಕಿ ಸಾಮ್ರಾಜ್ಯ ವಿಸ್ತಾರಗೊಳಿಸಿದುದನ್ನು ದೃಢಪಡಿಸುವುದು. 'ಅರಿರಾಯ ವಿಭಾಡ'ವು ಕೂಡ ಇದೇ ಅರ್ಥವನ್ನು ಪ್ರತಿಧ್ವನಿಸುವುದು.

ಹರಿಹರನು ಧರಿಸಿದ ಇತರ ಬಿರುದುಗಳಾದ 'ಮಹಾರಾಜಾಧಿರಾಜ', 'ರಾಜಪರಮೇಶ್ವರ', 'ವೀರಪ್ರತಾಪ'ಗಳು ರಾಜತ್ವದ ಸಂಕೇತಗಳಾಗಿದ್ದು, ಸ್ವತಂತ್ರನಾಗಿ ಆಳ್ವಿಕೆ ನಡೆಸುತ್ತಿದ್ದುದನ್ನು ಸಮರ್ಥಿಸುತ್ತವೆ. ಇವು ವಿಜಯನಗರದ ಎಲ್ಲಾ ಅರಸರ ಹೆಸರುಗಳ ಮುಂದೆ ಉಲ್ಲೇಖವಾಗಿವೆ.

ಈ ಮೇಲಿನ ಅಂಶಗಳು ಹರಿಹರನಿಗೆ ಸಂಬಂಧಿಸಿದ್ದರೆ. ಇವನ ನಂತರ ಬಂದ ಒಂದನೆಯ ಬುಕ್ಕರಾಯನು ಹರಿಹರನಿಗಿಂತ ಪ್ರಬಲ ಅರಸನಾಗಿದ್ದುದು ಅವನ ಬಿರುದುಗಳಿಂದ ಗೊತ್ತಾಗುತ್ತದೆ. ಬುಕ್ಕನು ತನ್ನ ಅಣ್ಣನ ಆಳ್ವಿಕೆಯಲ್ಲಿ ಪ್ರಾಂತ್ಯಾಧಿಕಾರಿಯಾಗಿ ಸ್ವತಃ ಯುದ್ಧಗಳಲ್ಲಿ ಭಾಗವಹಿಸಿದ್ದು, ಆಡಳಿತದಲ್ಲಿ ನೈಪುಣ್ಯತೆ ಪಡೆದಿದ್ದನು. ಇವನು ಕೂಡ ಹಲವು ಬಿರುದುಗಳನ್ನು ಹೊಂದಿದ್ದನು. ಈ ಹಿಂದೆ ತನ್ನ ಅಣ್ಣ ಧರಿಸಿದ 'ಪೂರ್ವ ಪಶ್ಚಿಮ ಸಮುದ್ರಾಧಿಪತಿ', 'ಭಾಷೆಗೆ ತಪ್ಪುವ ರಾಯರ ಗಂಡ', 'ಅರಿರಾಯ ವಿಭಾಡ'ಗಳಲ್ಲದೆ ತನ್ನ ಪರಾಕ್ರಮದಿಂದ ಹೊಸ ಬಿರುದುಗಳನ್ನು ಸೇರಿಸಿಕೊಂಡಿದ್ದಾನೆ. ಅವುಗಳೆಂದರೆ 'ಹಿಂದೂರಾಯ ಸುರತ್ರಾಣ', 'ಶ್ರೀ ವೀರಸಂಗಮೇಶ್ವರ ರಾಯಬಾಹು'[೧೨೫], 'ಕರ್ನಾಟಕ ಕ್ಷಿತಿನಾಥ'[೧೨೬], 'ವೈದಿಕ ಮಾರ್ಗ ಪ್ರವರ್ತಕ'[೧೨೭], 'ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ',[೧೨೮] 'ಚತುಸಮುದ್ರಾಧಿಪತಿ'[೧೨೯]ಗಳು ಮುಖ್ಯವಾಗಿವೆ. ಇವುಗಳಲ್ಲಿ ಹಿಂದೂರಾಯ ಸುರತ್ರಾಣವು ಹಿಂದೂ ಧರ್ಮದ ರಕ್ಷಕನೆಂಬುದನ್ನು ಹೇಳಿದರೆ, ಶ್ರೀವೀರಸಂಗಮೇಶ್ವರ ಬಾಹುವು ಸಂಗಮ ಮನೆತನದ ಪರಾಕ್ರಮಿಯೆಂದು ವರ್ಣಿಸಿದೆ. ಕರ್ನಾಟ ಕ್ಷಿತಿನಾಥವು ಮಧ್ಯಯುಗದಲ್ಲಿ ಕರ್ನಾಟಕವನ್ನು ಉಲ್ಲೇಖಿಸುವುದಲ್ಲದೆ, ಅದರ ಭೂಭಾಗದ ಒಡೆಯನಾಗಿದ್ದನೆಂದು ಹೇಳುತ್ತದೆ. ಸಾಯಣ ಮತ್ತು ಮಾಧವರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯವನ್ನು ಬರೆಯಿಸಿದ ಕಾರಣ ಬುಕ್ಕನು ವೇದಮಾರ್ಗ ಪ್ರವರ್ತಕನಾಗಿದ್ದಾನೆ. ಇದು ಅವನ ಸಾಹಿತ್ಯಕ ಚಟುವಟಿಕೆಗಳಿಗೆ ನೀಡಿದ ಪ್ರೋತ್ಸಾಹದ ಸಂಕೇತ. ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡನೆಂಬ ಶೌರ್ಯಯುತ ಬಿರುದಿನಿಂದ ಬುಕ್ಕರಾಯನು ಎಷ್ಟೊಂದು ಪ್ರಬಲ ಅರಸನಾಗಿದ್ದನೆಂಬುದರ ಅರಿವಾಗುತ್ತದೆ. ಈ ಬಿರುದು ಸಾಕಷ್ಟು ಮಾಹಿತಿಗಳನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ಇದರಲ್ಲಿ 'ಹೊನ್ನು' ಅಂದಿನ ನಾಣ್ಯವಾದರೆ, ಈ ಹೊನ್ನನ್ನು ಅರಬ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಕುದುರೆಗಳಿಗೆ ಪ್ರತಿಯಾಗಿ ನೀಡುತ್ತಿದ್ದರು. ಕುದುರೆಯು ವಿಜಯನಗರದ ಸೈನ್ಯದ ಪ್ರಮುಖ ಅಂಗಗಳಲ್ಲಿ ಒಂದಾಗಿದ್ದುದನ್ನು ಇದು ಸಮರ್ಥಿಸುತ್ತದೆ. ಅಲ್ಲದೆ ಕುದುರೆಗೆ ಅಂದು ತುಂಬಾ ಬೇಡಿಕೆಯಿದ್ದುದನ್ನು ಇಲ್ಲಿ ಗಮನಿಸಬಹುದು. ಹರಿಹರನು ಪೂರ್ವ ಪಶ್ಚಿಮ ಸಮುದ್ರಾಧಿಪತಿಯಾದರೆ, ಬುಕ್ಕರಾಯನು ಚತುಸಮುದ್ರಾಧಿಪತಿಯೆಂದು ಕರೆದುಕೊಂಡಿದ್ದಾನೆ. ಇದು ಸ್ವಲ್ಪ ಉತ್ಪ್ರೇಕ್ಷೆಯೇ ಸರಿ.

ಬುಕ್ಕರಾಯನ ಬಳಿಕ ಅಧಿಕಾರ ವಹಿಸಿಕೊಂಡ ಅರಸ ಎರಡನೆಯ ಹರಿಹರ ಕ್ರಿ.ಶ.೧೩೭೭ ರಿಂದ ೧೪೦೪ರವರೆಗೆ ಆಳ್ವಿಕೆ ನಡೆಸಿದನು. ಇವನನ್ನು ಶಾಸನಗಳಲ್ಲಿ ಹರಿಯಪ್ಪ ಒಡೆಯ, ವೀರ ಹರಿಹರ, ವೀರ ಹರಿಹರೇಶ್ವರನೆಂಬುದಾಗಿ ಕರೆಯಲಾಗಿದೆ. ಇವನು ಸಹ ತಂದೆಯಂತೆ ಹಿಂದಿನ ಬಿರುದುಗಳ ಜೊತೆಗೆ 'ವೈದಿಕಮಾರ್ಗ ಸ್ಥಾಪನಾಚಾರ್ಯ', 'ಕರ್ನಾಟಕ ವಿದ್ಯಾವಿಲಾಸ' ಎಂಬಂತಹ ಸಾಹಿತ್ಯ ಪೋಷಕ ಹಾಗೂ ಅವನ ಜ್ಞಾನವನ್ನು ಬಿಂಬಿಸುವ ಬಿರುದುಗಳನ್ನು ಹೊಂದಿದ್ದನು. ಹರಿಹರನ ಪರಾಕ್ರಮವನ್ನು ಸಾರುವ 'ತುರುಷ್ಕರಾಯ

ಶಿರಾಹಕಂಡುಕ ಕ್ರೀಡಾ ವಿನೋದ', 'ಚೋಳರಾಯ ಅಂಧಕಾರ ಘರ್ಮಕಿರಣ',[೧೩೦] 'ಏಕಾಂಗವೀರ', 'ಕಠಾರಿತ್ರಿನೇತ್ರ'[೧೩೧]ಗಳೂ ಪ್ರಮುಖವಾಗಿವೆ. ವಿಜಯನಗರದ ಅರಸರಿಗೆ ಶತ್ರುಗಳ ಶಿರಗಳನ್ನು ಚೆಂಡಾಡುತ್ತಿದ್ದುದು ಒಂದು ಬಗೆಯ ಕ್ರೀಡೆಯಾಗಿದ್ದಿತು. 'ತುರುಷ್ಕರಾಯ ಶಿರಾಹ ಕಂಡುಕ ಕ್ರೀಡಾ ವಿನೋದ'ವು ಬಹಮನಿಯವರೊಂದಿಗೆ ನಡೆದ ಯುದ್ಧದಲ್ಲಿ ಸೈನಿಕರ ತಲೆಗಳನ್ನು ಚೆಂಡಾಡಿದರೆಂಬುದಾಗಿ ಹೇಳಿದೆ. ಇದನ್ನು ಅಂದು ಕೈಗೊಂಡ ನರಹತ್ಯೆಯ ಪ್ರತೀಕವೆನ್ನಬಹುದು. ಹರಿಹರನು ಚೋಳರನ್ನು ಸೋಲಿಸಿದ ವಿವರವನ್ನು ಚೋಳ ಹೇಳಾಪಹರಣ ಭಾಳಲೋಚನವು ನೀಡುತ್ತದೆ. ಅಲ್ಲದೆ ಸಮಕಾಲೀನ ಅರಸರನ್ನು ಮಟ್ಟ ಹಾಕಿ 'ಹಮ್ಮೀರಾಯ ಅಂಧಕಾರ ಘರ್ಮಕಿರಣನಾಗಿಯೂ' ಪ್ರಸಿದ್ಧಿ ಹೊಂದಿದ್ದನು. ಹರಿಹರನು ಕಠಾರಿಯಲ್ಲಿ ವಿಶೇಷವಾಗಿ ಪರಿಣತಿ ಹೊಂದಿ ಕಠಾರಿ ತ್ರಿನೇತ್ರನಾಗಿಯೂ, ಯುದ್ಧಗಳಲ್ಲಿ ತನ್ನ ಪಡೆಯ ಮುಂದಾಳತ್ವ ವಹಿಸಿ ಏಕಾಂಗವೀರನಾಗಿ ಹೆಸರುವಾಸಿಯಾಗಿದ್ದನು. ಹೀಗೆ ಹರಿಹರನ ಬಿರುದುಗಳಿಂದ ಅವನ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ.

ಹರಿಹರನಂತೆಯೇ ಒಂದನೆಯ ದೇವರಾಯ ಉತ್ತಮ ಆಡಳಿತಗಾರನೂ ಸಾಹಿತ್ಯ ಮತ್ತು ಸಂಗೀತ ಪ್ರಿಯನೂ, ಸ್ವತಃ ವೀರಯೋಧನೂ ಆಗಿದ್ದನು. ಇವನು ಹಿಂದಿನ ಅರಸರು ಹೊಂದಿದ್ದ ಬಿರುದುಗಳಲ್ಲದೆ 'ಸಂಗೀತ ವಿದ್ಯಾಸಾಗರ', 'ಸಾಹಿತ್ಯ ವಿದ್ಯಾ ಕಲಾ ವಿಶಾಲಾವತಾರ', 'ರಣಮುಖ ರಾಮ', 'ಗಜಮುಖ ಭೀಮ', 'ಮಗಧೆಯರಾಯ ಮಧಮರ್ಧನ'[೧೩೨] ಎಂಬ ತನ್ನವೇ ಬಿರುದುಗಳನ್ನು ಧರಿಸಿದನು.

ಇವುಗಳಲ್ಲಿ ಮೊದಲಿನ ಎರಡು ಸಂಗೀತ, ಸಾಹಿತ್ಯಗಳಲ್ಲಿ ದೇವರಾಯ ಸಾಧಿಸಿದ ಜ್ಞಾನವನ್ನು ಪ್ರತಿನಿಧಿಸುತ್ತವೆ. ಯುದ್ಧನಿಪುಣನೂ ಪರಾಕ್ರಮಿಯೂ ಆಗಿದ್ದುದನ್ನು ರಣಮುಖರಾಮ, ಗಜಮುಖಭೀಮ ಎಂಬವು ಸಮರ್ಥಿಸುತ್ತವೆ. ಹಾಗೆಯೇ ಮಗಧೆಯ ಅರಸನ ಮಾನ ಹಾಗೂ ಗರ್ವಗಳನ್ನು ಅಡಗಿಸಿದ್ದುದನ್ನು ಹೇಳುವ ಬಿರುದು ಮಗಧೆಯರಾಯ ಮಾನ ಮಧಮರ್ಧನ', ಆದರೆ ಇಲ್ಲಿ ಉಲ್ಲೇಖವಾಗುವ ಮಗಧ ಅರಸ ಯಾರೆಂಬುದನ್ನು ಗುರುತಿಸಬೇಕಾಗಿದೆ.

ಒಂದನೆಯ ದೇವರಾಯನ ನಂತರ ಬಂದ ಅರಸ ಪ್ರೌಢ ದೇವರಾಯ ಅಥವಾ ಎರಡನೆಯ ದೇವಾರಾಯ ಇವನು ಸಂಗಮವಂಶದ ಪ್ರಸಿದ್ಧ ದೊರೆ. ಇವನನ್ನು 'ವಿಜಯನಗರದ ಪುರವರಾಧೀಶ್ವರ'ನೆಂದು ಶಾಸನವೊಂದರಲ್ಲಿ ಬಣ್ಣಿಸಲಾಗಿದ.[೧೩೩] ಸಿಲೋನಿನ ಮೇಲೆ ನಡೆಸಿದ ದಂಡಯಾತ್ರೆಯ ಪರಿಣಾಮವಾಗಿ ಇವನನ್ನು 'ಈಳಂ ತಿರ್ರೈಕೊಂಡ'[೧೩೪] 'ದಕ್ಷಿಣ ಸಮುದ್ರಾಧೀಶ್ವರ'ನೆಂದು ಕರೆಯಲಾಗಿದೆ.[೧೩೫] ಈ ದಿಗ್ವಿಜಯದ ರೂವಾರಿಯಾಗಿದ್ದ ಲಕ್ಕಣ್ಣ ದಂಡನಾಯಕನನ್ನೂ ಶಾಸನಗಳು 'ದಕ್ಷಿಣ ಸಮುದ್ರಾಧಿಪತಿ'[೧೩೬] ಯೆಂದು ಬಣ್ಣಿಸಿವೆ. ಪ್ರೌಢ ದೇವರಾಯನನ್ನು ತೆಲುಗು ಕವಿ ಶ್ರೀನಾಥನು 'ಕರ್ನಾಟ ಕ್ಷಿತಿಪಾಲ'ನೆಂದು ಕರೆದಿದ್ದು, ವಿಜಯನಗರವನ್ನು 'ಕನ್ನಡ

ರಾಜ್ಯಲಕ್ಷ್ಮಿ'ಯೆಂದಿದ್ದಾನೆ.[೧೩೭] ಇವಲ್ಲದೆ ರಾಯನನ್ನು 'ಅಶ್ವಪತಿ', 'ನರಪತಿ', 'ತುರುಕ ಮಹಾಹಯ ಪ್ರಬಲ ಸೈನ್ಯ ವಿದಾರಿ'[೧೩೮] 'ಗಜ ಬೇಟೆಕಾರ', 'ಅರಿರಾಯ ಮಾನಮರ್ಧನ', 'ಶರಣಾಗತರಾಯ ಸ್ಥಾಪನಾಚಾರ್ಯ'[೧೩೯] ನೆಂದೂ ವರ್ಣಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುದು ತುರುಕ ಮಹಾಹಯ ಪ್ರಬಲ ಸೈನ್ಯ ವಿದಾರಿ. ಬಹಮನಿ ಸುಲ್ತಾನರು ಸಾಮಾನ್ಯವಾಗಿ ಅಶ್ವದಳದಲ್ಲಿ ಪ್ರಬಲತೆಯನ್ನು ಸಾಧಿಸಿದ್ದರು. ಅವರು ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಲು ಆರಂಭಿಸಿದಂದಿನಿಂದ ಅಶ್ವದಳವು ಸೈನ್ಯದಲ್ಲಿ ಬಹುಮುಖ್ಯ ಪಾತ್ರ ವಹಿಸಿತೆನ್ನಬಹುದು. ಬಹಮನಿಯ ಇಂತಹ ಪ್ರಬಲ ಅಶ್ವಸೈನ್ಯವನ್ನು ದೇವರಾಯ ಹಿಮ್ಮೆಟ್ಟಿಸಿದನೆಂದು ಸಾರುವುದೇ ಈ ಬಿರುದಿನ ಹಿಂದಿನ ಉದ್ದೇಶ. ಹಾಗೆಯೇ ಆನೆಯ ಬೇಟೆಯಲ್ಲಿ ನಿಷ್ಣಾತನಾಗಿದ್ದುದನ್ನು 'ಗಜಬೇಟೆಕಾರ'ವು ಹೇಳುತ್ತದೆ. ಪ್ರೌಢ ದೇವರಾಯನು ಶತ್ರುಗಳನ್ನು ಧಮನ ಮಾಡಿದುದು ಮಾತ್ರವಲ್ಲ. ಅವನು ಶರಣಾಗಿ ಬಂದವರನ್ನು ಮನ್ನಿಸುತ್ತಿದ್ದನೆಂದು 'ಶರಣಾಗತರಾಯ ಸ್ಥಾಪನಾಚಾರ್ಯ'ದಿಂದ ತಿಳಿದುಬರುತ್ತದೆ.

ಪ್ರೌಢದೇವರಾಯನ ನಂತರ ಕ್ರಿ.ಶ.೧೪೬೪ ರಿಂದ ೮೫ ರವರೆಗೆ ಆಳ್ವಿಕೆ ನಡೆಸಿದ ಮೂರನೆಯ ವಿರೂಪಾಕ್ಷನು ಹಿಂದಿನವರಂತೆ ಅಷ್ಟೇನೂ ಸಮರ್ಥ ಅರಸನಾಗಿರಲಿಲ್ಲ. ಇವನ ದುರ್ಬಲ ಆಡಳಿತದಿಂದ ಬೇಸತ್ತ ಚಂದ್ರಗಿರಿಯ ಅಧಿಪತಿ ಸಾಳುವ ನರಸಿಂಹನು ಮುಂದೆ ಸಂಗಮ ಮನೆತನವನ್ನು ಮೂಲೆತಳ್ಳಿ ಸಾಳುವ ಮನೆತನದ ಸ್ಥಾಪಕನಾಗುತ್ತಾನೆ. ವಿರೂಪಾಕ್ಷನ ವೈಯಕ್ತಿಕ ಬಿರುದುಗಳಲ್ಲಿ 'ಕರುಣ್ಯೈಕ ಸಿಂಧು' [೧೪೦] ಮುಖ್ಯವಾಗಿದೆ. ಇದರಿಂದ ಹರಿಹರನು ಯಶಸ್ವಿ ದೊರೆಯಾಗಿರದೆ ಕರುಣಾಮಯಿಯಾಗಿದ್ದನೆಂದು ಹೇಳಬಹುದು.

ಈ ಮೇಲಿನ ಬಿರುದುಗಳು ಸಂಗಮ ಮನೆತನದ ಅರಸರ ಸಾಧನೆ, ವ್ಯಕ್ತಿತ್ವಗಳನ್ನು ವ್ಯಕ್ತಪಡಿಸಿದರೆ, ಸಾಳುವ ಮನೆತನದ ನರಸಿಂಹನು 'ಕಠಾರಿ ಸಾಳುವ'ನೆಂದೇ ಪ್ರಸಿದ್ಧಿಯಾಗಿದ್ದನು.[೧೪೧] ಇದಲ್ಲದೆ 'ಮೇದಿನಿ ಮೀಸರ ಗಂಡ'ನೆಂದೂ ಕರೆದುಕೊಂಡಿದ್ದಾನೆ. ಇದರರ್ಥ ಭೂ ಒಡೆತನ ಹೊಂದಿದ ಮಾಂಡಲಿಕರ ಅಧಿಪತಿಯೆಂಬುದಾಗಿದೆ.

ಸಾಳುವ ನರಸಿಂಹನ ತರುವಾಯ ತುಳು ಮನೆತನವು ವಿಜಯನಗರದ ಸಾರಥ್ಯವನ್ನು ವಹಿಸುತ್ತದೆ. ವಿಜಯನಗರ ಸಾಮ್ರಾಜ್ಯದ ಗತಿಯೇ ಈ ಮನೆತನದ ಅವಧಿಯಲ್ಲಿ ಬದಲಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಈ ಮನೆತನದ ಪ್ರಸಿದ್ಧ ದೊರೆ ಕೃಷ್ಣದೇವರಾಯನು ಹೊಂದಿದ ಬಿರುದಾವಳಿಗಳು ಅನೇಕ. ಹಿಂದಿನ ಯಾವ ಅರಸನನ್ನೂ ವರ್ಣಿಸದಷ್ಟು ಬಿರುದುಗಳಿಂದ ಕೃಷ್ಣದೇವರಾಯನನ್ನು ಶಾಸನ-ಸಾಹಿತ್ಯಗಳು ಬಣ್ಣಿಸಿವೆ. ಇವನು ತನ್ನ ಶೌರ್ಯ, ಪರಾಕ್ರಮ, ಮತ್ತು ಆಡಳಿತದ ಕಾರ್ಯವೈಖರಿಗಳಿಂದ ಗಳಿಸಿದ ಬಿರುದುಗಳು ಹಲವು. ಅವುಗಳಲ್ಲಿ 'ಕಂಡನಾಡು ಕೊಂಡು ಕೊಂಡನಾಡ ಕೊಡದ ಪೂರ್ವದಕ್ಷಿಣ ಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ',[೧೪೨] 'ಯವನರಾಜ್ಯ ಸ್ಥಾಪನಾಚಾರ್ಯ'ಗಳು[೧೪೩] ಮುಖ್ಯವಾಗಿವೆ. ಮೊದಲಿನದು ಅವನು ಎಷ್ಟು ಬಲಿಷ್ಟನಾಗಿದ್ದನೆಂದರೆ

ಯಾವುದೇ ರಾಜ್ಯದ ಮೇಲೆ ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನೆಂಬುದು ಗೊತ್ತಾಗುತ್ತದೆ. ಇದು ಅವನಲ್ಲಿದ್ದ ಛಲವನ್ನು ವ್ಯಕ್ತಪಡಿಸುವುದು. ಬಿಜಾಪುರದ ಸುಲ್ತಾನನ್ನು ಹಿಮ್ಮೆಟಿಸಿದ ಕೃಷ್ಣದೇವರಾಯನು ಬಹಮನಿಯ ಸುಲ್ತಾನನನ್ನು ಪುನಃ ಅಧಿಕಾರಕ್ಕೆ ತಂದ ನೆನಪಿಗಾಗಿ ಧರಿಸಿದ ಬಿರುದು 'ಯವನರಾಜ್ಯ ಸ್ಥಾಪನಾ ಚಾರ್ಯ'.[೧೪೪] ಹಾಗೆಯೇ ಒರಿಸ್ಸಾದ ಗಜಪತಿಯನ್ನು ಸೋಲಿಸಿ 'ಗಜಪತಿ ವಿಭಾಡ' [೧೪೫]ನಾದನು. ಇವುಗಳಲ್ಲದೆ 'ದುಷ್ಟಶಾರ್ದೂಲಮರ್ಧನ', 'ಪರರಾಯ ಭಯಂಕರ', 'ರೋಷಕೃತ ಪ್ರತಿಪಾರ್ಥಿವ', ದಂಡಶೇಷಭುಜ ಕಿತಿರಕ್ಷಣಪಾರಃ'[೧೪೬]ನೆಂಬ ಬಿರುದುಗಳು ಕೃಷ್ಣದೇವರಾಯನ ನಡೆ, ನುಡಿ, ವ್ಯಕ್ತಿತ್ವಗಳನ್ನು ಅಭಿವ್ಯಕ್ತಿಸುತ್ತವೆ. ಈ ಮೇಲಿನವು ಅವನ ಪರಾಕ್ರಮ ಕುರಿತವುಗಳಾದರೆ 'ಕನ್ನಡ ರಾಜ್ಯ ರಮಾರಮಣ', 'ಕರ್ನಾಟ ರಾಜ್ಯ ರಕ್ಷಾಮಣಿ', 'ಕರ್ನಾಟ ರಾಜ್ಯ ಲಕ್ಷ್ಮೀ ಮನೋಹರ'[೧೪೭] ಎಂಬುವು ಮಧ್ಯಯುಗದ ಕನ್ನಡನಾಡು, ಕರ್ನಾಟಕವನ್ನು ನೆನಪಿಸುತ್ತವೆ. ಈ ಬಿರುದುಗಳಲ್ಲಿ ಸ್ಪಷ್ಟವಾಗಿ ಕರ್ನಾಟಕದ ಒಡೆಯನೆಂದು ಕರೆದಿರುವುದರಿಂದ ಕೃಷ್ಣದೇವರಾಯನು ಕನ್ನಡ ಮೂಲದವನೆಂದು ನಿಖರವಾಗಿ ಹೇಳಬಹುದಾಗಿದೆ.

ಕೃಷ್ಣದೇವರಾಯನ ನಂತರ ಬಂದ ಅಚ್ಯುತರಾಯ ಹಾಗೂ ಸದಾಶಿವರಾಯರು ತಮ್ಮ ಪೂರ್ವಜರು ಹೊಂದಿದ ಬಿರುದುಗಳನ್ನೇ ಧರಿಸಿದ್ದರು. ಅಚ್ಚುತರಾಯನು 'ಅಷ್ಟದಿಕ್ಕುರಾಯ', 'ಅಕ್ಷವೀರರಾಯ ಮನೋಭಯಂಕರ'ನೆಂದು ಕರೆದುಕೊಂಡರೆ, ಸದಾಶಿವರಾಯನನ್ನು 'ಕೇತವರಂ ಭೂಪತಿ'ಯೆಂದು ಅವನು ಕೇತವರಂ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಕರೆಯಲಾಗಿದೆ.

ಸದಾಶಿವರಾಯನ ಆಳ್ವಿಕೆಯಲ್ಲಿ ಮುಖ್ಯ ಪಾತ್ರವಹಿಸಿದ ಹಾಗೂ ರಕ್ಕಸಗಿ-ತಂಗಡಿಗಿ ನಿರ್ಣಾಯಕ ಯುದ್ಧದ ರೂವಾರಿಯಾದ ರಾಮರಾಯನನ್ನು ಶಾಸನಗಳು 'ಮಹಾಮಂಡಲೇಶ್ವರ'ನೆಂಬುದಾಗಿ ಕರೆದಿವೆ. ಇದನ್ನು ಬಿಟ್ಟರೆ ಬೇರೆ ಅರಸರು ಧರಿಸಿದ ಯಾವುದೇ ಬಿರುದುಗಳನ್ನು ಇವನು ಹೊಂದಿದ ಉಲ್ಲೇಖಗಳಿಲ್ಲ. ಈ ಅಂಶ ಅವನು ರಾಜಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ ಸಲುವಾಗಿ ಇರಬಹುದೇನೋ?

೫.೧.೧೩.೨ ಮಂತ್ರಿ, ಮಾಂಡಲಿಕ, ಮತ್ತಿತರ ಅಧಿಕಾರಗಳ ಬಿರುದಾವಳಿಗಳು

ವಿಜಯನಗರದ ಅರಸರಿಗಲ್ಲದೆ ಮಾಂಡಲಿಕರು, ದಂಡನಾಯಕರು ಹಾಗೂ ಯೋಧರಿಗೂ ಬಿರುದುಗಳಿದ್ದವು. ಅವರು ಯುದ್ಧಗಳಲ್ಲಿ ತೋರಿಸಿದ ಯಶಸ್ವಿ ಕಾರ್ಯಗಳಿಂದ ಬಿರುದುಗಳಿಗೆ ಪಾತ್ರರಾಗಿದ್ದರು. ಕೆಲವು ಮುಖ್ಯ ಬಿರುದುಗಳನ್ನು ಇಲ್ಲಿ ಕಾಣಬಹುದು.

ಕ್ರಿ.ಶ.೧೩೬೨ರ ಬನ್ನೇರುಗಟ್ಟದ ಶಾಸನವು ಮಹಾಮಾಂಡಲಿಕ ಮಲ್ಲಪ್ಪ ಒಡೆಯನನ್ನು 'ದೇಶಕ್ರಾಂತಿ ಮಾಡುವ ರಾಹುತರ ಗಂಡ'[೧೪೮]ನೆಂದು ಕರೆದಿದೆ. ಇದು ಕುದುರೆಯ ಸವಾರರಾದ ರಾಹುತರು ಕೊಡುತ್ತಿದ್ದ ಕಿರುಕುಳವನ್ನು

ಹತ್ತಿಕ್ಕಿದ ಘಟನೆಯನ್ನು ನೆನಪಿಸುವುದು. ಎರಡನೆಯ ಕಂಪಣನ ಮಹಾಪ್ರಧಾನ ಸೋಮಯದಂಡನಾಯಕನ ಮಗನಾದ ಮಾದನಾಯಕನನ್ನು ಕ್ರಿ.ಶ.೧೩೬೩ರ ಶಾಸನವು 'ಗಂಡರಗೂಳಿ' ಎಂದಿದೆ. ಇದು ಒಬ್ಬ ಶೂರ ಸೇನಾನಿಗೆ ನೀಡುವ ಬಿರುದು. ೧೩೭೯ರ ಶಾಸನವು ನಾಗಣ್ಣ ಒಡೆಯನನ್ನು 'ಕ್ರಾಂತಿಕ್ಕಾರ ರಾಯರ ಗಂಡ'[೧೪೯]ನೆಂದು ಹೇಳಿದೆ. ಇದೇ ಬಿರುದನ್ನು ದೇವಪ್ಪ ಒಡೆಯನೆಂಬ ಅಧಿಕಾರಿಯೂ ಹೊಂದಿದ್ದನು.[೧೫೦] ಪೋಚೆಯ ನಾಯಕನೆಂಬ ಸೇನಾಧಿಪತಿಯನ್ನು(ತೆಲುಗಿನಲ್ಲಿ) 'ಪೆಕ್ಕಡ್ರ ರಾಜುಲ ಒಕ್ಕೆಟ್ಟು ಗಂಡ'ನೆಂದು, 'ಚೋಳ-ಕಟಕಚ್ಚಾರೆಕಾರ'[೧೫೧]ನೆಂದು ಕರೆಯಲಾಗಿದೆ. ಪೋಚೆಯ ನಾಯಕನು ಚೋಳ ಮತ್ತು ಕಟಕ ಪ್ರದೇಶಗಳ ಮೇಲೆ ನಿಗಾ ಇಟ್ಟು ಆಡಳಿತ ನಡೆಸುವ ಗೂಢಾಚಾರನಾಗಿದ್ದನೆಂಬುದು ಚೋಳ ಕಟಕಚ್ಚಾರೆಕಾರವು ದೃಢಪಡಿಸುತ್ತದೆ. ಇಮ್ಮಡಿ ಹರಿಹರನ ಮಂತ್ರಿ ಗುಂಡಪ ದಣಾಯಕನನ್ನು 'ಮೂವರ ರಾಯರ ಗಂಡ'ನೆಂದೂ, ಎರಡನೆಯ ದೇವರಾಯನ ದಂಡನಾಯಕ ಲಕ್ಕಣ್ಣನನ್ನು ಸಿಲೋನ್ ವಿಜಯದ ಸಂಕೇತವಾಗಿ 'ದಕ್ಷಿಣ ಸಮುದ್ರಾಧಿಪತಿ'ಯೆಂದೂ ಗೌರವಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು.[೧೫೨] ೧೪೨೭ರ ವೀರಗಲ್ಲಿನ ಶಾಸನವೊಂದು ವೀರನೋರ್ವನನ್ನು 'ಹಠದ ನಾಯಕರ ಗಂಡ'ನೆಂದು ಪ್ರಶಂಸಿಸಿದೆ. ಸಾಳುವ ನರಸಿಂಹನ ಶಾಸನದಲ್ಲಿ ಆದವಾನಿಯ ಕಾಚಪ್ಪನಾಯಕನ ಬಿರುದುಗಳನ್ನು ಮುಂದೆ ಕಾಣಬಹುದು. ಅವುಗಳೆಂದರೆ 'ಪ್ರಬಲ ಉದ್ದಂಡವ ನುಡಿವ ಮಾಂಡಲಿಕರ ಗಂಡ', 'ಸ್ವಾಮಿಗೆ ಸ್ವಾಮಿದ್ರೋಹರ ಗಂಡ', 'ಗಜಪತಿಗಳ ಮಿಂಡ', 'ಆಲಸರಿಗಜಾಂಕುಶ'ಗಳು[೧೫೩]. ಇವು ಕಾಚಪ್ಪನಾಯಕನ ಶೌರ್ಯ, ಅವನು ನಡೆಸಿದ ಕಾರ್ಯಾಚರಣೆ ಹಾಗೂ ಯುದ್ಧಗಳನ್ನು ಬಿಂಬಿಸುವಂಥವು. ಅಲ್ಲಪ್ಪನಾಯಕ ದಂಡನಾಯಕನು ಹೊಂದಿದ್ದ ಬಿರುದುಗಳು ಮೈಪುಳಕಗೊಳಿಸುವಂಥವು. ಅವನನ್ನು 'ಮುಗಿಲ ಕೆಳಗೆ ತೋಳ ಬೀಸಿ ನಡೆವ ಮಾಂಡಲಿಕರ ಗಂಡ' ಹಾಗೂ 'ಕರಿಯ ಮಡಕೆಯಲಿ ಬಿಳಿಯ ಕೂಳನ ಉಂಬ ಮಾಂಡಲಿಕರ ಗಂಡ' ನೆಂಬುದಾಗಿಯೂ ಶಾಸನ ವರ್ಣಿಸಿದೆ.[೧೫೪] ಕೆಳದಿಯ ಅಮರನಾಯಕನಾಗಿದ್ದ ಸದಾಶಿವನಾಯಕನು ಕೃಷ್ಣದೇವರಾಯನೊಂದಿಗೆ ಗುಲ್ಬರ್ಗ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ತೋರಿದ ಸಾಹಸದಿಂದ, ರಾಯನು ಅವನನ್ನು 'ಕೋಟೆ ಕೋಲಾಹಲ'ನೆಂಬ ಬಿರುದಿತ್ತು ಗೌರವಿಸಿದನು.[೧೫೫] ಮಾಂಡಲಿಕರು, ದಂಡನಾಯಕರು ತಮಗೆ ವಹಿಸಿದ ಕಾರ್ಯಗಳಲ್ಲಿ ಯಶಸ್ಸನ್ನು ದೊರಕಿಸಿಕೊಟ್ಟಾಗ ರಾಜ ಅಥವಾ ಸಮಾಜವು ಅವರನ್ನು ಗೌರವಿಸುವ ರೀತಿಯಿದು.

ಹೀಗೆ ವಿಜಯನಗರ ಕಾಲದಲ್ಲಿ ಅರಸರು, ಮಾಂಡಲಿಕರು, ದಂಡನಾಯಕರು ಹಾಗೂ ಸೇನಾಯೋಧರು ಯುದ್ಧ ಮತ್ತಿತರ ಕಾರ್ಯಾಚರಣೆಗಳಲ್ಲಿ ತೋರಿದ ಶೌರ್ಯ-ಪರಾಕ್ರಮಗಳ ಪ್ರತೀಕವಾಗಿ ಬಿರುದಾವಳಿಗಳನ್ನು ಧರಿಸಿರುವುದು ಸ್ಪಷ್ಟಗೊಳ್ಳುವ ಸಂಗತಿ. ಬಿರುದಾವಳಿಗಳು ಆಯಾಯ ಕಾಲದ ಘಟನೆಗಳನ್ನು ಹೇಳುವ ಮೂಲಕ ಚರಿತ್ರೆಯ ನಿರ್ಮಾಣಕ್ಕೆ ಮಹತ್ವದ ಸಂಗತಿಗಳನ್ನು ಒದಗಿಸುವ ಮೂಲಕ ಚರಿತ್ರೆಯ ಪುನಾರಚನೆಯಲ್ಲಿ ಪ್ರಮುಖ ಪಾತ್ರವಹಿಸುವುದರಲ್ಲಿ ಸಂದೇಹವಿಲ್ಲ.

೫.೨ ಯುದ್ಧೋಪಕರಣಗಳು

ಪ್ರಾಚೀನ ಕಾಲದಿಂದ ಮಾನವನು ಆಹಾರ ಸಂಪಾದನೆ ಮತ್ತು ರಕ್ಷಣೆಗೆಂದು ತಯಾರಿಸಿಕೊಂಡ ಆಯುಧಗಳೇ ಮುಂದೆ ಯುದ್ಧದ ಉಪಕರಣಗಳಿಗೆ ನಾಂದಿಯಾಗಿವೆ. ಮೊದಮೊದಲು ಆದಿ ಮಾನವ ತನ್ನ ವಿವೇಚನಾ ಶಕ್ತಿಯನ್ನು ಉಪಯೋಗಿಸಿಕೊಂಡು ಸುತ್ತಲೂ ದೊರಕುತ್ತಿದ್ದ ಕಲ್ಲಿನ ಚೂರುಗಳನ್ನು ಬಂಡೆಗಲ್ಲುಗಳ ಮೇಲೆ ಉಜ್ಜಿ, ಹರಿತವಾದ ಕಲ್ಲಿನ ಆಯುಧಗಳನ್ನು ತಯಾರಿಸಿದನು. ಬೆಂಕಿಯನ್ನು ಕಂಡುಕೊಂಡ ಬಳಿಕ ಲೋಹವನ್ನು ತಿಳಿದ. ಅದು ಕಲ್ಲಿಗಿಂತಲೂ ಗಟ್ಟಿಯಾಗಿದ್ದು, ತಾಳಿಕೆ-ಬಾಳಿಕೆಗಳಲ್ಲಿ ಉತ್ತಮವಾದುದರಿಂದ ಆಯುಧಗಳಿಗೆ ಬಳಸಿದ. ಅಂತೆಯೇ ಈಟಿ, ಭರ್ಜಿ, ಕೊಡಲಿ, ಬಿಲ್ಲು-ಬಾಣಗಳ ಬಳಕೆಯಾಯಿತು. ಕಾಲಾನಂತರದಲ್ಲಿ ತನ್ನ ವಿವೇಚನಾ ಶಕ್ತಿ ಹಾಗೂ ಹಿಂದಿನ ಅನುಭವ ಮತ್ತು ಪ್ರಯೋಗಗಳಿಂದ ವೈಜ್ಞಾನಿಕ ಅರಿವನ್ನು ಪಡೆದು ಮಧ್ಯಯುಗದಲ್ಲಿ ಮದ್ದುಗುಂಡು, ಫಿರಂಗಿ ಮತ್ತಿತರ ಉಡಾವಣಾ ಅಸ್ತ್ರಗಳನ್ನು ಕಂಡುಕೊಂಡ. ಸಿಡಿಮದ್ದಿನ ಉಪಯೋಗದ ನಂತರ ಶಸ್ತ್ರಾಸ್ತ್ರಗಳಲ್ಲಿ ಗಮನಾರ್ಹ ಬದಲಾವಣೆಯಾಗಿ ಆಧುನಿಕ ಯುಗದ ಹೊತ್ತಿಗೆ ಅನೇಕ ಆವಿಷ್ಕಾರ ಮತ್ತು ಪ್ರಯೋಗಗಳ ಮೂಲಕ ಅಣುಶಕ್ತಿ ಆಧಾರಿತ ಅಸ್ತ್ರಗಳ ಹಂತಕ್ಕೆ ತಲುಪಿರುವುದು ಚರಿತ್ರೆಯಲ್ಲಿ ಕಾಣಬರುವ ಸಂಗತಿ.

ಯುದ್ಧೋಪಕರಣಗಳನ್ನು ಕುರಿತು ಅನೇಕ ಸಾಹಿತ್ಯ ಕೃತಿಗಳು, ವೀರಗಲ್ಲುಗಳು, ಶಾಸನಗಳು, ಪ್ರವಾಸಿ ವರದಿಗಳು ಸಾಕಷ್ಟು ಮಾಹಿತಿ ನೀಡುತ್ತವೆ. ಸಾಹಿತ್ಯ ಕೃತಿಗಳಲ್ಲಿ ಅತ್ಯಂತ ಪ್ರಮುಖವಾದದು ಕೌಟಲ್ಯನ ಅರ್ಥಶಾಸ್ತ್ರ. ಇದಲ್ಲದೆ ಶುಕ್ರನೀತಿಸಾರ, ಅಗ್ನಿಪುರಾಣ, ಅನಂತನಾಥ ಪುರಾಣ, ವಿವೇಕ ಚಿಂತಾಮಣಿ, ಪಂಪಭಾರತ ಮೊದಲಾದವು ಮುಖ್ಯವಾಗಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ ಕೃತಿಗಳನ್ನಾಧರಿಸಿ ಬೆಟಗೇರಿ ಕೃಷ್ಣಶರ್ಮ, ಎಂ.ಚಿದಾನಂದಮೂರ್ತಿ, ಆರ್ .ಶೇಷಾಶಾಸ್ತ್ರಿ, ಕೆ.ಶ್ರೀಕಂಠಯ್ಯ ಮೊದಲಾದವರು ನಡೆಸಿದ ಅಧ್ಯಯನ ಕೃತಿಗಳಲ್ಲಿ ಪ್ರಾಚೀನ ಕರ್ನಾಟಕದ ಶಸ್ತ್ರಾಸ್ತ್ರಗಳನ್ನು ವಿವರವಾಗಿ ಅಭ್ಯಸಿಸಿರುವುದನ್ನು ಕಾಣಬಹುದು.

ಕೌಟಲ್ಯನ ಅರ್ಥಶಾಸ್ತ್ರದಲ್ಲಿ ಯುದ್ಧೋಪಕರಣಗಳನ್ನು ನಾಲ್ಕು ವಿಧಗಳಾಗಿ ವಿಭಾಗಿಸಿದ್ದಾನೆ. ಅವುಗಳನ್ನು ೧.ಯಂತ್ರ ೨.ಆಯುಧ ೩. ಆವರಣ ೪.ಉಪಕರಣಗಳೆಂದು ಕರೆದಿರುವನು.[೧೫] ಅಂದಿನ ಯಂತ್ರವು ಕಲ್ಲುಗಳನ್ನು ಬೀರುವ ಅಸ್ತ್ರವಾದರೆ, ಆಯುಧವು ಖಡ್ಗ, ಗದೆ, ಕೊಡಲಿ, ಬಿಲ್ಲು-ಬಾಣ, ಭರ್ಜಿ, ಈಟಿ, ಶೂಲ ಮೊದಲಾದ ಮಾರಕಾಸ್ತ್ರಗಳನ್ನು ಒಳಗೊಂಡಿದೆ. ಆವರಣವು ದೇಹರಕ್ಷಣೆಯ ಪರಿಕರಗಳಾದ ಗುರಾಣಿ, ಶಿರಸ್ತ್ರಾಣ, ಕವಚಗಳನ್ನೂ ಉಪಕರಣವು, ಆನೆ-ಕುದುರೆ, ರಥ, ದಳಗಳಿಗೆ ಅವಶ್ಯಕವಾದ ಅಂಕುಶ, ಚಾಟಿ, ಸನ್ನಾಹ, ವಿಷಧೂಮಾದಿಗಳ ಪ್ರಯೋಗ, ಪ್ರತೀಕಾರ ಮೊದಲಾದ ಕೆಲಸಗಳಿಗೆ ಬೇಕಾದ ಪರಿಕರಗಳ ಸಮೂಹವಾಗಿದೆ.

ಅಗ್ನಿಪುರಾಣವು ಆಯುಧಗಳನ್ನು ಅಸ್ತ್ರ ಮತ್ತು ಶಸ್ತ್ರಗಳೆಂಬ ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿದೆ. ಅವುಗಳಲ್ಲಿ ಅಸ್ತ್ರವನ್ನು ೧.ಯಂತ್ರ ಮುಕ್ತ ೨.ಪಾಣಿಮುಕ್ತ ೩.ಮಂತ್ರಮುಕ್ತ ಮತ್ತು ೪.ಮುಕ್ತ ಸಂಧಾರಿತಗಳೆಂದೂ, ಶಸ್ತ್ರವನ್ನು ೧. ಖಡ್ಗಾದಿಕಂ ಮತ್ತು ೨.ವಿಗಾಯುಧಂಗಳಾಗಿಯೂ ವಿಭಾಗಿಸಿದೆ[೧೫೭]. ವಿಜಯನಗರ ಪೂರ್ವದಲ್ಲಿ ಜೀವಿಸಿದ್ದ ಕವಿ ಜನ್ನನು ತನ್ನ ಅನಂತನಾಥ ಪುರಾಣದಲ್ಲಿ ಆಯುಧಗಳನ್ನು ವಿಂಗಡಿಸಿದ ಬಗೆಯಿದು: ೧.ಇಸುವ ೨.ಇಡುವ ೩.ಇರಿವ ಮತ್ತು ೪.ಪೊಯ್ಯ ಆಯುಧಗಳು[೧೫೮]. ಶುಕ್ರ ಮತ್ತು ವೈಶಂಪಾಯನರೂ ಕೂಡ ಇದೇ ಬಗೆಯಲ್ಲಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸಿ ವಿಂಗಡನೆಯಲ್ಲಿ ತೊಡಗಿದ್ದಾರೆ. ವಿಜಯನಗರ ಕಾಲದಲ್ಲಿ ಈ ಮೇಲಿನ ವಿಭಾಗಗಳಿದ್ದುದನ್ನು ಕಾವ್ಯಗಳಲ್ಲಿ ಕಾಣಬಹುದು. ರಾಮನಾಥ ಚರಿತದಲ್ಲಿ ಇಂತಹ ಕೆಲವು ಬಗೆಗಳನ್ನು,

"ಎಸೆವ ಬಿಲ್ಲಿಡುವ ಸೆಲ್ಲೆಹ ಮಿಗೆ ಪೊಯ್ವ ಕೂ
ರಸಿ ಮೋದುವ ಗದೆ ತಿವಿವ
ಮುಸಲ ಕಡಿವ ಖಂಡೆಯಗಳನಾ ರಾಮ
ಕುಸುರಿದರಿದನು ರಣದೊಳು"[೧೫೯]

ಇನ್ನೊಂದು ಪದ್ಯದಲ್ಲಿ,

"ಪೊಡೆವ ಲೌಡಿಗೆ ಪೊಯ್ವ ಕತ್ತಿಗೆ ಮಿಗೆ ಸೀ
ಳ್ದಿಡುವ ಖಡ್ಗಕೆ ಕರವಾಳ್ಗೆ
ನಡುವ ಕೊಂತಕೆ ಶಲ್ಲೆಹಕೆ ಪಿಂಡಿವಾಳಕೆ
ಸೆಡೆಯದವರು ಕಾದಿದರು"[೧೬೦]

ಎನ್ನುವ ವಾಕ್ಯಗಳಲ್ಲಿ ಜನ್ನನ ಆಯುಧ ಪ್ರಕಾರಗಳನ್ನು ಗುರುತಿಸಬಹುದು. ಅಂತೆಯೇ ಆಯುಧಗಳನ್ನು ಬಳಸುತ್ತಿದ್ದ ರೀತಿಯನ್ನು ಚೆನ್ನಬಸವಪುರಾಣದಲ್ಲಿ

"ಸುರಗಿಯಿಂದಿರಿದು, ಶೂಲದಿ ತಿವಿದು, ಖಡ್ಗದಿಂ
ದಿರದೆ ಕತ್ತರಿಸಿ, ಕೊಡಲಿಗಳಿಂದೆ ಕಡಿದು, ಮು
ದ್ಗರದಿಂದ ಮೋದಿ, ಮುಸಲದೊಳಿಟ್ಟು, ಗದೆಗಳಿಂದಪ್ಪಳಿಸಿ ಸಬಳದಿಂದ
ಶಿರವ ನಿರಿದೆತ್ತಿ, ಚಕ್ರದಿನರಿದು"ಎಂದಿದೆ[೧೬೧]

ಈ ಮೇಲೆ ಹೇಳಲಾದ ನಂಜುಂಡ ಮತ್ತು ವಿರೂಪಾಕ್ಷ ಪಂಡಿತರು ನೀಡುವ ಆಯುಧಗಳ ಪ್ರಯೋಗಗಳಲ್ಲಿ ಎಸೆವ, ಇಡುವ, ಪೊಯ್ವ, ಒಡೆವ, ತಿವಿವ, ಕಡಿವ ಆಯುಧಗಳಿದ್ದುದನ್ನು ಕಾಣಬಹುದು. ಆಯುಧದ ಬಗೆಗಳನ್ನು ಅವುಗಳ ಸ್ವಭಾವ, ರೂಪ,ಗುಣ-ಲಕ್ಷಣ ಮತ್ತು ಪ್ರಯೋಗಗಳ ಆಧಾರದ ಮೇಲೆ ವಿಭಾಗಿಸಲಾಗುತ್ತಿತ್ತೆಂದು ಹೇಳಬಹುದು. ಇವು ಶಸ್ತ್ರಾಸ್ತ್ರಗಳ ವಿಭಾಗಗಳಾದರೆ, ಒಂದೊಂದು ವಿಭಾಗದಲ್ಲೂ ಅನೇಕ ವಿಧದ ಆಯುಧಗಳಿದ್ದವು. ಬೆಟಗೇರಿ ಕೃಷ್ಣಶರ್ಮರು ಗುರುತಿಸಿರುವಂತೆ, ಕತ್ತಿಯಲ್ಲಿ ಕೈಗತ್ತಿ, ಖಂಡೆಯ, ಸೊರಟಿಯ ಕತ್ತಿ, ಬಾಳಕತ್ತಿ, ಕಠಾರಿ, ಸುರಗಿ, ಕೈಸುರಗಿ, ಬಾಕು, ಕೊಂಬುಕತ್ತಿಗಳಿದ್ದರೆ, ಈಟಿಯಲ್ಲಿ ಭಲ್ಲೆಯ, ನೇಜಯ ಕುಂತ, ಕೊಂತ, ಸಬಳ, ಇಟ್ಟಿ, ಹೇರಿಟ್ಟಿ, ಸಿಲುಕಟ್ಟಿ ಎಂಬ ನಾಮರೂಪಗಳಿದ್ದವು.[೧೬೨]

ಈ ಮೇಲಿನ ಎಲ್ಲಾ ವಿಂಗಡನೆಗಳನ್ನು ಅನುಸರಿಸಿ ವಿಶಾಲಾರ್ಥದಲ್ಲಿ ೧.ಅಪರಾಧಾತ್ಮಕ ಅಥವಾ ಆಕ್ರಮಣಕಾರಿ ಆಯುಧಗಳು (Offensive Arms) ೨. ರಕ್ಷಣಾತ್ಮಕ ಅಥವಾ ಸಂರಕ್ಷಕ ಸಾಧನಗಳು (Defensive Arms) ಎಂಬುದಾಗಿ ಪ್ರಸ್ತುತ ಅಧ್ಯಯನದಲ್ಲಿ ಅಭ್ಯಸಿಸಲಾಗಿದೆ.

೫.೨.೧ ಅಪರಾಧಾತ್ಮಕ ಅಥವಾ ಆಕ್ರಮಣಕಾರಿ ಆಯುಧಗಳು ಅಪರಾಧಾತ್ಮಕ ಆಯುಧಗಳಲ್ಲೂ ವಿವಿಧ ಬಗೆಗಳಿವೆ. ಅವುಗಳಲ್ಲಿ

ಅ) ದೂರದಿಂದ ಆಕ್ರಮಣ ಮಾಡುವ ಆಯುಧಗಳು: ಇವುಗಳಲ್ಲಿ ಬಿಲ್ಲು-ಬಾಣ, ಬಂದೂಕು,ಫಿರಂಗಿಗಳು, ಕಲ್ಲು ಬೀರುವ ಯಂತ್ರಗಳು ಸೇರಿವೆ.

ಆ) ಮುಖಾಮುಖಿಯಾಗಿ ಹೋರಾಡುವ ಆಯುಧಗಳು: ಕತ್ತಿ, ಕೊಡಲಿ, ಕಠಾರಿ, ಚಾಕು, ಈಟಿ, ಭರ್ಜಿ, ಗದೆ ಇನ್ನು ಮುಂತಾದವು.

ಪ್ರಾಚೀನ ಕಾಲದ ಯುದ್ಧ ಶಸ್ತ್ರಾಸ್ತ್ರಗಳಿಗೂ, ಮಧ್ಯಕಾಲೀನ ಶಸ್ತ್ರಾಸ್ತ್ರಗಳಿಗೂ ತುಂಬಾ ಅಂತರವಿದೆ. ಅಲ್ಲದೆ ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ವೇದಕಾಲಗಳಿಂದ ಕ್ರಿ.ಶ.೧೩ನೆಯ ಶತಮಾನದವರೆಗೆ ಒಂದೇ ಬಗೆಯ ಆಯುಧಗಳು ಬಳಕೆಯಲ್ಲಿದ್ದವು. ಇವುಗಳಲ್ಲಿ ಬದಲಾವಣೆಯಿಲ್ಲವೆಂದೇ ಹೇಳಬೇಕು. ಆದ್ದರಿಂದ ಯುದ್ಧತಂತ್ರಗಳಲ್ಲೂ ಒಂದೇ ಬಗೆಯ ಕಾರ್ಯಾಚರಣೆಯನ್ನು ಕಾಣಬಹುದು. ಸಾಂಪ್ರದಾಯಿಕ ಆಯುಧಗಳಾದ ಕತ್ತಿ, ಕೊಡಲಿ, ಕಠಾರಿ, ಈಟಿ, ಭರ್ಜಿ, ಗದೆ ಮುಂತಾದ ಆಯುಧಗಳು ಮುಖಾಮುಖಿಯಾಗಿ ನಿಂತು ಹೋರಾಡಲು ಬಳಸುತ್ತಿದ್ದ ಆಯುಧಗಳು. ಮುಖಾಮುಖಿ ಯುದ್ಧ ತಂತ್ರವು ಕ್ರಿ.ಶ.೧೩ನೆಯ ಶತಮಾನದವರೆಗೂ ಮುಂದುವರೆದು ತದನಂತರವೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದ್ದುದನ್ನು ಕಾಣಬಹುದು. ಆದರೆ ಕ್ರಿ.ಶ.೧೪ನೆಯ ಶತಮಾನದಲ್ಲಿ ಒಂದು ವಿಶೇಷ ಅಸ್ತ್ರ ಬಳಕೆಗೆ ಬಂದಿತು. ಅದೆಂದರೆ ಸಿಡಿಮದ್ದು. ಇದರ ಬಳಕೆ ಮತ್ತು ಬೆಳವಣಿಗೆ ಕುರಿತಂತೆ ಫಿರಂಗಿದಳ ವಿಭಾಗದಲ್ಲಿ ಈಗಾಗಲೇ ಚರ್ಚಿಸಲಾಗಿದೆ. ಸಿಡಿಮದ್ದಿನ ಉಪಯೋಗದಿಂದ ಯುದ್ಧ ತಂತ್ರದಲ್ಲಿ ಮಹತ್ವದ ಬದಲಾವಣೆಯಾಯಿತೆಂದರೆ ತಪ್ಪಾಗಲಾರದು. ಸಿಡಿಮದ್ದಿನ ಉಪಕರಣಗಳಾದ ಬಂದೂಕು, ಫಿರಂಗಿಗಳು ಇದುವರೆಗಿನ ಯುದ್ಧವ್ಯವಸ್ಥೆಯನ್ನೇ ಬುಡಮೇಲು ಮಾಡಿದವೆಂದು ಹೇಳಬಹುದು. ಕ್ರಿ.ಪೂ.ಕಾಲದಿಂದ ಹಿಡಿದು ಕ್ರಿ.ಶ.೧೩ನೆಯ ಶತಮಾನದ ಮಧ್ಯಭಾಗದವರೆಗೆ ಒಂದೇ ಬಗೆಯ ಆಯುಧಗಳು ಬಳಕೆಯಿದ್ದುದರಿಂದ ತಟಸ್ಥವಾದಂತಹ ಯುದ್ಧತಂತ್ರವನ್ನು ಕಾಣುತ್ತೇವೆ. ಆದರೆ ಸಿಡಿಮದ್ದಿನ ಉಪಕರಣಗಳು ಬಳಕೆಗೊಂಡ ಇದುವರೆಗಿನ ಮುಖಾಮುಖಿ ಕಾಳಗದ ಬದಲಾಗಿ ಕೆಲವು ಫರ್ಲಾಂಗುಗಳಷ್ಟು ದೂರದಿಂದಲೆ ಆಕ್ರಮಣ ಮಾಡುವಂತಹ ಶಕ್ತಿಯನ್ನು ಹಾಗೂ ಶತ್ರು ಸೈನ್ಯದ ಬಹುಭಾಗವನ್ನು ಕೆಲವೇ ಯೋಧರು ನಾಶ ಮಾಡುವ ಸಾಮರ್ಥ್ಯವನ್ನು ಹೊಂದಿದ್ದವು.

ಭಾರತದಲ್ಲಿ ಸಿಡಿಮದ್ದಿನ ಬಳಕೆ ಕುರಿತಂತೆ ವಿದ್ವಾಂಸರಲ್ಲಿ ಅನೇಕ ವಾದವಿವಾದಗಳಿವೆ. ಇದು ಕ್ರಿ.ಪೂ. ಕಾಲದಿಂದಲೂ ಭಾರತದಲ್ಲಿ ಬಳಕೆಯಲ್ಲಿತ್ತೆಂದೂ, ಕೆಲವು ಸಾಂಪ್ರದಾಯಿಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅವರಲ್ಲಿ ಗುಸ್ಟಾವ್ ಒಪರ್ಟ್, ವಿಲ್‌ಸನ್, ದಿಕ್ಷಿತರ್ ಮೊದಲಾದವರು ಸೇರಿದ್ದಾರೆ. ಇನ್ನು ಕೆಲವರು ಕ್ರಿ.ಶ.೧೪ನೆಯ ಶತಮಾನದ ನಂತರ ಭಾರತಕ್ಕೆ ಪಾಶ್ಚಾತ್ಯರ ಮೂಲಕ ಬಳಕೆಗೆ ಬಂದಿತೆಂಬ ಅಭಿಪ್ರಾಯವನ್ನು ಮುಂದಿಡುತ್ತಾರೆ. ಇವರು ಉತ್ತರ ಭಾರತದಲ್ಲಿ ಸಿಡಿಮದ್ದು ಇಲ್ತುಮಷ್ ಅಥವಾ ಅಲ್ಲಾವುದ್ದೀನರ ಕಾಲಕ್ಕೆ ಬಳಕೆಗೊಂಡಿತ್ತೆಂದು ಹೇಳುತ್ತಾರೆ[೧೬೩]. ದಕ್ಷಿಣ ಭಾರತದಲ್ಲಿ ೧೩೫೮ರ ಹೊತ್ತಿಗೆ ಬಳಕೆಯಾಗಿತ್ತೆಂದು ಫೆರಿಸ್ತಾ ಹೇಳುತ್ತಾನೆ. ಇದು ವಿಜಯನಗರ ಮತ್ತು ಬಹುಮನಿ ಸೇನೆಗಳೆರಡರಲ್ಲೂ ಬಳಕೆಯಲ್ಲಿದ್ದುದಾಗಿ ತಿಳಿದುಬರುತ್ತದೆ.[೧೬೪] ಒಟ್ಟಿನಲ್ಲಿ ಸಿಡಿಮದ್ದು ಕಂಡುಹಿಡಿದ ಬಗೆಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಮಧ್ಯಯುಗದ ಹೊತ್ತಿಗೆ ಸಾಕಷ್ಟು ಬಳಕೆಯಲ್ಲಿತ್ತೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ವಿಜಯನಗರದವರಿಗೆ ಸಿಡಿಮದ್ದಿನ ಪ್ರಭಾವ ಉತ್ತರ ಭಾರತದ ಸಂಬಂಧವನ್ನು ಇಟ್ಟುಕೊಂಡಿದ್ದ ಬಹಮನಿಯವರಿಂದ ಬಂದಿತೆನ್ನಬಹುದು. ಅದರ ಬಳಕೆ ಹೆಚ್ಚಾಗುತ್ತಾ ಹೋದಂತೆ ಶಸ್ತ್ರಾಸ್ತ್ರಗಳ ವಿನ್ಯಾಸಗಳಲ್ಲೂ ಬದಲಾವಣೆ ಕಂಡುಬಂದಿತು. ಇದಲ್ಲದೆ ಪೋರ್ಚುಗೀಸರ ಪ್ರಭಾವ ವಿಜಯನಗರದವರ ಮೇಲೆ ಗಾಢವಾಗಿ ಪರಿಣಾಮ ಬೀರಿರುವುದನ್ನು ಕಾಣಬಹುದು. ರಾಯಚೂರು ಕೋಟೆಯ ಮುತ್ತಿಗೆಯಲ್ಲಿ ಪೋರ್ಚುಗಲ್ಲಿನ ಫಿಗೈರೆಡೋ ಬಳಸಿದ ಬಂದೂಕುಗಳು ವಹಿಸಿದ ಪಾತ್ರ ಮಹತ್ವದ್ದು. ನ್ಯೂನಿಜ್ ''ಕೋಟೆಯಲ್ಲಿದ್ದವರಿಗೆ ಈ ತರಹ ಕೋವಿಯ ಗುಂಡುಗಳ ಅನುಭವವಿರಲಿಲ್ಲ. ಆದ್ದರಿಂದ ಅನೇಕ ಜನರು ಮಡಿದರು''[೧೬೫] ಎಂದಿರುವುದು ಪೋರ್ಚುಗೀಸರ ಆಗಮನದ ಬಳಿಕ ಯುದ್ಧ ಶಸ್ತ್ರಾಸ್ತ್ರ ಹಾಗೂ ಯುದ್ಧತಂತ್ರಗಳಲ್ಲೂ ಹೊಸ ಮಾರ್ಪಾಟುಗಳಾಗಿದ್ದುದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ವಿಜಯನಗರ ಕಾಲವು ಹಿಂದಿನಿಂದ ಬಂದಂತಹ ಪಾರಂಪರಿಕ ವ್ಯವಸ್ಥೆಯಿಂದ ಪಾಶ್ಚಾತ್ಯ ಪ್ರಭಾವ ಪಡೆದುದನ್ನು ಅಂದಿನ ಶಸ್ತ್ರಾಸ್ತ್ರಗಳಿಂದ ಅರಿಯಬಹುದು.

ವಿಜಯನಗರ ಕಾಲದ ಆಯುಧಗಳನ್ನು ಕುರಿತು ಶಿಲ್ಪಗಳು, ವೀರಗಲ್ಲುಗಳು, ಸಾಹಿತ್ಯ ಕೃತಿಗಳು ಮತ್ತು ಪ್ರವಾಸಿಗರ ವರದಿಗಳು ವಿಪುಲ ಮಾಹಿತಿ ನೀಡುತ್ತವೆ. ನಿಕೋಲೊಕೊಂತಿ ಅಂದಿನ ಆಯುಧಗಳನ್ನು ಕುರಿತು ''ಯುದ್ಧ ಮಾಡುವಾಗ ಭಲ್ಲೆ, ಕತ್ತಿ ಮತ್ತು ದುಂಡಾದ ಗುರಾಣಿಗಳನ್ನು, ಬಿಲ್ಲುಗಳನ್ನೂ ಉಪಯೋಗಿಸುತ್ತಾರೆ. ಮಧ್ಯ ಇಂಡಿಯಾದ ಜನರು ಗುಂಡುಗಳನ್ನು ಸಿಡಿಸುವ ಯಂತ್ರವನ್ನೂ, ಸಿಡಿಗುಂಡುಗಳನ್ನೂ.....ಅಲ್ಲದೆ ನಗರಗಳಿಗೆ ಮುತ್ತಿಗೆ ಹಾಕಲು ಬೇಕಾದ ಆಯುಧಗಳನ್ನು ಉಪಯೋಗಿಸುತ್ತಾರೆ''ಎಂದಿರುವನು[೧೬೬]. ಬಾರ್ಬೋಸಾ, ''ದೇಶದ ಜನರೆಲ್ಲಾ.....ಒಳ್ಳೆಯ ಯೋಧರು ಹಾಗೂ ಕುದುರೆ ಸವಾರರು. ಇವರು ನಾನಾ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾಗಿದ್ದಾರೆ. .....ಭರ್ಜಿ, ಕತ್ತಿ, ಉಕ್ಕಿನ ಮುಳ್ಳುಗದೆ, ಗಂಡುಕೊಡಲಿ- ಇವು ಇವರ

ಆಯುಧಗಳು''[೧೬೭]ಎನ್ನುತ್ತಾನೆ. ಪಾಯೇಸ್ ನವರಾತ್ರಿ ಉತ್ಸವದಲ್ಲಿ ಸೈನಿಕರು ಧರಿಸಿದ್ದ ಉಡುಗೆ-ತೊಡಿಗೆಗಳನ್ನು ವರ್ಣಿಸುತ್ತಾ, ರಾವುತರು ನಡುವಿಗೆ ಗಂಡುಗೊಡಲಿಯನ್ನು ಸಿಕ್ಕಿಸಿ ಕೈಯಲ್ಲಿ ಭರ್ಜಿಗಳನ್ನು ಹಿಡಿದಿದ್ದರು. ....ಆನೆಯ ಅಂಬಾರಿಯಲ್ಲಿ ಭಲ್ಲೆ-ಭರ್ಜಿಗಳಿಂದ ಸಜ್ಜಿತರಾದ ಯೋಧರು ಕುಳಿತಿದ್ದರು. .....ಕಾಲ್ದಳದವರು ಕತ್ತಿ-ಗುರಾಣಿಗಳನ್ನು....ಬಿಲ್ಲುಗಾರರು ಬಿಲ್ಲುಬಾಣಗಳನ್ನು, ಇವುಗಳಲ್ಲದೆ, ಈಟಿ, ಗಂಡುಗೊಡಲಿ, ಬಂದೂಕು, ಸಣ್ಣಬಂದೂಕು ಇತ್ಯಾದಿ ಆಯುಧಗಳನ್ನು ಹೊಂದಿದ್ದರೆಂದು ಹೇಳಿರುವನು.[೧೬೮]

ನ್ಯೂನಿಜ್ ಕೂಡ ಬಿಲ್ಲು-ಬಾಣ, ಕತ್ತಿ-ಗುರಾಣಿ, ಭಲ್ಲೆ-ಭರ್ಜಿಗಳು, ಕೋವಿಗಳು ಮತ್ತು ಫಿರಂಗಿಗಳನ್ನು ಹಾಗೂ ಪೋರ್ಚ್‌ಗೀಸರು ಬಳಸಿದ ವಿನೂತನ ಬಂದೂಕುಗಳ ವಿವರ ನೀಡುತ್ತಾನೆ. ಇದು ವಿಜಯನಗರದ ಸೈನಿಕರು ಬಳಸುತ್ತಿದ್ದ ಯುದ್ಧ ಶಸ್ತ್ರಾಸ್ತ್ರಗಳಾದರೆ, ಬಹಮನಿಯವರೂ ಇದೇ ಬಗೆಯ ಆಯುಧಗಳನ್ನು ಹೊಂದಿದ್ದುದು ತಿಳಿದುಬರುತ್ತದೆ. ಆದಿಲ್ ಶಾಹನ ಸೈನ್ಯದ ಯೋಧರ ಧಾಳಿಯನ್ನು ಕುರಿತು, ''ರಾಚೋಲ್ ಕೋಟೆಯೊಳಗೆ ಈ ಮುತ್ತಿಗೆ (ವಿಜಯನಗರ)ಯನ್ನು ಎದುರಿಸಲು ಸಿದ್ಧರಾಗಿದ್ದ ಯೋಧರು ಫಿರಂಗಿಯಿಂದ ಗುಂಡುಗಳನ್ನು ಹಾರಿಸಿ, ಕೋವಿಗಳಿಂದ ಮದ್ದುಗಳನ್ನು ಹೊಡೆದು, ಬಿಲ್ಲುಗಳಿಂದ ಬಾಣಗಳನ್ನು ಎಸೆದು ಕೃಷ್ಣರಾಯನ ಸೈನ್ಯದ ಅನೇಕ ಜನರನ್ನು ಆಹುತಿ ತೆಗೆದುಕೊಂಡರು''ಎಂದಿದ್ದಾನೆ.[೧೬೯] ರಕ್ಕಸಗಿ-ತಂಗಡಗಿ ಯುದ್ಧದ ವಿವರವುಳ್ಳ ರಾಮರಾಜನ ಬಖೈರು ಅನೇಕ ಬಗೆಯ ಆಯುಧಗಳನ್ನು ವಿಜಯನಗರದ ಸೈನಿಕರು ಬಳಸುತ್ತಿದ್ದುದನ್ನು ಹೇಳುತ್ತದೆ. ಅದರಲ್ಲಿ ಉಲ್ಲೇಖಗೊಂಡ ಆಯುಧಗಳಿವು: ಖಡ್ಗ, ಕತ್ತಿ, ಬಿಲ್ಲಂಬು, ನಾಗ, ಪಿಂಡಿವಾಳ, ತೋಮರ, ಪಾಶ, ಗದೆ, ಅಂಕುಶ ಮೊದಲಾದ ಮೂವತ್ತೆರಡು ಆಯುಧಗಳಿದ್ದವು.

ವಿವೇಕ ಚಿಂತಾಮಣಿಯಲ್ಲಿ ಬರುವ ಬತ್ತೀಸಾಯುಧದ ಕಲ್ಪನೆಯು ವಿಜಯನಗರದಲ್ಲೂ ಮುಂದುವರಿದಿತ್ತೆನ್ನುವುದನ್ನು ಈ ಬಖೈರು ದೃಢಗೊಳಿಸುತ್ತದೆ. ಅಲ್ಲದೆ ಇದರಲ್ಲಿ ಸಿಡಿಮದ್ದಿನ ಅಸ್ತ್ರಗಳಾದ ಬಂದೂಕು ಮತ್ತು ತೋಪು(ಫಿರಂಗಿ)ಗಳ ಉಲ್ಲೇಖವೂ ಇದೆ. ಈ ತೋಪುಗಳು ವಿವಿಧ ಗಾತ್ರ ಹಾಗೂ ಶಕ್ತಿಯನ್ನು ಹೊಂದಿದ್ದವು. ಅವುಗಳನ್ನು ಐದು ಮಣುವಿನ ಗುಂಡುಹೊಡೆಯುವ ತೋಪುಗಳು, ಎರಡು ಮಣುವಿನ ಗುಂಡು ತೋಪುಖಾನೆಗಳು, ಚಿಕ್ಕತೋಪುಗಳು, ಹಿರೇತೋಪುಗಳೆಂದು ಕರೆಯಲಾಗಿದೆ. ಇವುಗಳಲ್ಲದೆ ಗುರುತಿಸಲಾಗದ ಅನೇಕ ಬಗೆಯ ಅಯುಧಗಳನ್ನೂ ಹೇಳಲಾಗಿದೆ. ವೋಷ್ಟ್ರ, ಪಾಲಖೀ, ಸುತರನಾಲೀ, ರೆಖಲೀ, ಹತರನಾಲಿ, ಜಜಾಲು, ತಪಟೆ, ತಾರಾಮಂಡಲ, ಭೂಚಕ್ರ, ಮತಾಪು-ಇನ್ನು ಮುಂತಾದ ಆಯುಧಗಳು ವಿಜಯನಗರ ಮತ್ತು ಸುಲ್ತಾನರ ಸೇನೆಗಳಲ್ಲಿದ್ದವೆಂದು ಬಖೈರಿನಲ್ಲಿ ಹೇಳಲಾಗಿದೆ.[೧೭೦] ಆದರೆ ಇವುಗಳಲ್ಲಿ ಕೆಲವು ಆಯುಧಗಳ ಕಾರ್ಯವೈಖರಿಗಳು ತಿಳಿದುಬರುವುದಿಲ್ಲ. ಶಿಲ್ಪಗಳು ಮತ್ತು ವೀರಗಲ್ಲುಗಳಲ್ಲಿ ಕಾಣಬರುವ ಸಾಮಾನ್ಯ ಚಿತ್ರಣವೆಂದರೆ ಕತ್ತಿ-ಗುರಾಣಿ, ಬಿಲ್ಲು-ಬಾಣ, ಈಟಿಗಳನ್ನು ಹಿಡಿದು ಹೋರಾಡುತ್ತಿರುವ ಯೋಧರವು. ಇಂತಹ

ವೀರಗಲ್ಲುಗಳನ್ನು ಕರ್ನಾಟಕದಾದ್ಯಂತ ಕಾಣಬಹುದು(ಚಿತ್ರ-೨,೭,೮). ಕ್ರಿ.ಶ.೧೪-೧೫ನೆಯ ಶತಮಾನದ ಪೂರ್ವದಲ್ಲಿ ನಿರ್ಮಾಣವಾದ ವೀರಗಲ್ಲುಗಳಲ್ಲಿ ಕಾಣಬರುವ ಆಯುಧಗಳೆಂದರೆ ಕತ್ತಿ-ಗುರಾಣಿ, ಬಿಲ್ಲು-ಬಾಣ, ಈಟಿಗಳೇ ಆಗಿವೆ. ಆದರೆ ೧೫ನೆಯ ಶತಮಾನ ನಂತರದ ವೀರಗಲ್ಲುಗಳು ವಿಶಿಷ್ಟ ಬಗೆಯ ಆಯುಧವೊಂದನ್ನು ಪರಿಚಯಿಸುತ್ತದೆ. ಅಂತಹ ಆಯುಧವೆಂದರೆ ಬಂದೂಕು. ಬಂದೂಕನ್ನು ಹಿಡಿದು ನಿಂತ ಚಿತ್ರಣವಿರುವ ವೀರಗಲ್ಲುಗಳು ಹಾವೇರಿಯ ಗುತ್ತಲ, ಕೊಪ್ಪಳದ ನಿಟ್ಟಾಲಿ, ರಾಯಚೂರು, ಹೊಸಪೇಟೆಯ ಇಂಗಳಗಿ, ಕೆ.ಆರ್.ಪೇಟೆಯ ಸಾಸಲು ಮೊದಲಾದೆಡೆಗಳಲ್ಲಿ ಇವೆ(ಚಿತ್ರ-೧೭,೨೪). ಇವುಗಳಿಂದ ಆಯುಧಗಳಲ್ಲಾದ ಬದಲಾವಣೆ ಹಾಗೂ ಸಿಡಿಮದ್ದಿನ ಬಳಕೆಯ ಕಾಲವನ್ನು ಗುರುತಿಸಲು ಸಹಾಯಕವಾಗಿದೆ. ಕ್ರಿ.ಶ.೧೫ನೆಯ ಶತಮಾನದವರೆಗಿನ ವೀರಗಲ್ಲುಗಳಲ್ಲಿ ಬಂದೂಕಿನ ಚಿತ್ರಣಗಳು ಕಂಡುಬರುವುದೇ ಇಲ್ಲ. ಇದರಿಂದ ಸಿಡಿಮದ್ದಿನ ಬಳಕೆ ಕ್ರಿ.ಶ.೧೪ನೆಯ ಶತಮಾನದ ಮಧ್ಯಭಾಗದಲ್ಲಿ ಆಯಿತೆಂಬ ಅಭಿಪ್ರಾಯಕ್ಕೆ ಸಮರ್ಥನೆ ದೊರೆತಂತಾಗಿದೆ. ಹೀಗೆ ವಿವಿಧ ಮೂಲಗಳಿಂದ ಸಾಂಪ್ರದಾಯಿಕ ಹಾಗೂ ವಿನೂತನ ಮಾದರಿಯ ಆಯುಧಗಳು ಬಳಕೆಯಲ್ಲಿದ್ದುದನ್ನು ಕಾಣಬಹುದು. ಸಿಡಿಮದ್ದು ವಿಜಯನಗರ ಕಾಲದಲ್ಲಿ ಅತ್ಯಂತ ಪರಿಣಾಮಕಾರಿ ಅಸ್ತ್ರ. ಇದರ ಬಳಕೆಯಿಂದ ರೂಪುಗೊಂಡ ಬಂದೂಕು ಮತ್ತು ಫಿರಂಗಿಗಳು ಸೈನ್ಯ ಮತ್ತು ಯುದ್ಧವ್ಯವಸ್ಥೆಗಳ ತಂತ್ರ ಹಾಗೂ ನೀತಿಗಳನ್ನು ಬದಲಿಸಿದವೆಂದೇ ಹೇಳಬೇಕು. ಸಿಡಿಮದ್ದಿನ ಪ್ರಯೋಗ ಮುಂದೆ ಅಣ್ವಸ್ತ್ರಗಳ ತಯಾರಿಕೆಗೂ ನಾಂದಿಯಾಯಿತೆನ್ನುವುದರಲ್ಲಿ ಸಂಶಯವಿಲ್ಲ.

೫.೨.೨ ರಕ್ಷಣಾತ್ಮಕ ಅಥವಾ ಸಂರಕ್ಷಕ ಸಾಧನಗಳು

ಯುದ್ಧದ ಹೋರಾಟದಲ್ಲಿ ತೊಡಗಿದ ಸೈನಿಕರು ತಮ್ಮ ದೇಹವನ್ನು ಮಾರಕಾಸ್ತ್ರಗಳಿಂದ ಅಪಾಯವಾಗದಂತೆ ರಕ್ಷಿಸಿಕೊಳ್ಳಲು ಬಳಸುತ್ತಿದ್ದ ಪರಿಕರಗಳೇ ರಕ್ಷಣಾತ್ಮಕ ಸಾಧನಗಳು. ಸೈನಿಕರಲ್ಲದೆ ಅವರು ಹೊಂದಿದ ಆನೆ-ಕುದುರೆಗಳಿಗೂ ರಕ್ಷಣೆಗೆಂದು ರಕ್ಷಾಕವಚಗಳನ್ನು ತೊಡಿಸುತ್ತಿದ್ದುದುಂಟು.

ಸೈನಿಕರು ಧರಿಸುತ್ತಿದ್ದ ಸಂರಕ್ಷಕ ಪರಿಕರಗಳೆಂದರೆ ಕೈಯಲ್ಲಿ ಗುರಾಣಿ, ತಲೆಗೆ ಶಿರಸ್ತ್ರಾಣ ಅಥವಾ ಠೌಳಿ, ಎದೆಗೆ ಕವಚ, ತೋಳುಗಳಿಗೆ ಬಾಹುರಕ್ಷೆ, ಕೈಗಳಿಗೆ ಚರ್ಮ-ಹತ್ತಿಗಳಿಂದ ಮಾಡಿದ ಚೀಲಗಳು, ಕಾಲುಗಳಿಗೆ ಚರ್ಮದ ಜೋಡುಗಳು ಸಾಮಾನ್ಯವಾಗಿದ್ದವು.

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಹೇಳುವ 'ಆವರಣ' ವಿಭಾಗವು ದೇಹರಕ್ಷಣೆಗೆ ಸಂಬಂಧಿಸಿದ ಸಾಧನಗಳನ್ನು ಒಳಗೊಂಡಿರುವಂಥದು. ಅವುಗಳಲ್ಲಿ ಲೋಹಪಟ್ಟಿ, ಲೋಹಜಾಲಿಕಾ, ಲೋಕಕವಚಗಳು ಲೋಹದಿಂದ ತಯಾರಿಸಿದ ಶರೀರ ರಕ್ಷಣೆಯ ಸಾಧನಗಳಾಗಿವೆ. ಸೂತ್ರಕಂಠವೆಂಬುದು ಹತ್ತಿ ಮೊದಲಾದ ನೂಲಿನಿಂದ

ತಯಾರಿಸಿದ ಕವಚ. ಶಿರಸ್ತ್ರಾಣ, ಕಂಠತ್ರಾಣ, ಕೂರ್ಪಾಸ, ಕಂಚುಕ, ವಾರವಾಣ, ಪಟ್ಟ, ನಾಗೋದರಿಕವೆಂಬ ಪ್ರಾಣಿಗಳ ಚರ್ಮ, ಗೊರಸು, ಕೊಂಬುಗಳಿಂದ ಮಾಡಿದ ಕವಚಗಳು ದೇಹರಕ್ಷಣೆಯ ಮುಖ್ಯ ಸಾಧನಗಳೆಂದು ಹೇಳಿರುವನು.[೧೭೧]

ವಿಜಯನಗರ ಕಾಲದಲ್ಲೂ ಅನೇಕ ಬಗೆಯ ರಕ್ಷಣಾತ್ಮಕ ಸಾಧನಗಳು ಬಳಕೆಯಲ್ಲಿದ್ದವು. ಅಂದು ಬಳಸುತ್ತಿದ್ದ ಪರಿಕರಗಳಲ್ಲಿ ಗುರಾಣಿ ಅತಿ ಮುಖ್ಯವಾದುದು. ಇದಲ್ಲದೆ ಸೈನಿಕರು ಶಿರಸ್ತ್ರಾಣ, ಎದೆಕವಚ, ರಕ್ಷಾಕವಚಗಳನ್ನು, ಆನೆ-ಕುದುರೆಗಳು ಲೋಹವಕ್ಕರಿಕೆಯೆಂಬ ಮೈಕವಚ ಹಾಗೂ ಮೊಗರಂಭವೆನ್ನುವ ಮುಖವಾಡಗಳನ್ನು ಧರಿಸಿದ್ದುದು ತಿಳಿದುಬರುತ್ತದೆ.

ರಾಮನಾಥ ಚರಿತದಲ್ಲಿ ಇವುಗಳನ್ನು,

“ಮಿಸುನಿಯ ಪಕ್ಕರೆ ಜೋಡು ಸವಗ ಠೌಳಿ
ಮಿಸುಪ ಖಂಡೆಯ ಖೇಡಯಗಳ”[೧೭೨] ಎಂದೂ, ಇನ್ನೊಂದು ಪದ್ಯದಲ್ಲಿ,
“ಖೇಡಯ ನೂಲಹರಿಗೆ ಬದ್ದರ ಠೌಳಿ
ಜೋಡುಸವಗ ವಕ್ಕರಗಳು
ಕೂಡೆ ಕೊಲ್ಲಾರದ ಮೇಲೆ ತೆರಳಿದವಾ
ಗಾಡಿಕಾಡಿಯ ದಂಡಿನೊಳಗೆ”[೧೭೩] ಎಂದು ಹೇಳಲಾಗಿದೆ.

ಸೈನ್ಯದಲ್ಲಿ ಯೋಧರು ಮತ್ತು ಆನೆ-ಕುದುರೆಗಳಿಗೆ ಬಳಸಲಾಗುತ್ತಿದ್ದ ಎಲ್ಲ ಸಂರಕ್ಷಕ ಸಾಧನಗಳನ್ನು ಇಲ್ಲಿ ಕಾಣಬಹುದು. ಇವುಗಳಲ್ಲಿ ಗುರಾಣಿ, ಶಿರಸ್ತ್ರಾಣ, ಮೈಕವಚಗಳು ಮತ್ತು ಆನೆ-ಕುದುರೆಗಳ ಕವಚಗಳನ್ನು ವಿವರವಾಗಿ ಈ ಕೆಳಗೆ ನೋಡಲಾಗಿದೆ.

ಗುರಾಣಿ : ಗುರಾಣಿಯು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ರಕ್ಷಣಾ ಸಾಧನವಾಗಿದೆ. ಇದನ್ನು ಸಂಸ್ಕೃತದಲ್ಲಿ ಆವರಣ, ಕರ್ಮ(Carma), ಫಲಗಳೆಂದು ಕರೆದರೆ, ಅರೇಬಿಕ್‌ನಲ್ಲಿ ಸಿಪಾರ್ (Sipar)ಎಂದೂ, ಹಿಂದಿಯಲ್ಲಿ ಡಾಲು ಎಂದೂ ಹೆಸರಿಸಲಾಗಿದೆ. ಕಾವ್ಯಗಳಲ್ಲಿ ಗುರಾಣಿಯನ್ನು ಹರಿಗೆ, ಖೇಟಕ, ಖೇಡಯ,ಹಲಗೆ, ಪರಿಗೆಗಳೆಂದೂ, ವೀರಗಲ್ಲುಗಳು ಅಡ್ಡಣವೆಂದೂ ಕರೆದಿವೆ. ಈ ಮೇಲಿನ ಪದಗಳು ಗುರಾಣಿಯ ವಿವಿಧ ಬಳಕೆಗಳಾಗಿದ್ದು, ಇವುಗಳಿಗೆ ಬಳಸುತ್ತಿದ್ದ ವಸ್ತುಗಳೂ ಬೇರೆ ಬೇರೆಯಾಗಿದ್ದವು. ಆದರೆ ಇವುಗಳನ್ನು ಕೈಯಲ್ಲಿ ಹಿಡಿಯುತ್ತಿದ್ದುದು ಸಾಮಾನ್ಯವಾಗಿತ್ತು. ವಿಜಯನಗರ ಕಾಲದ ಅನೇಕ ವೀರಗಲ್ಲುಗಳಲ್ಲಿ ವೀರರು ಯುದ್ಧ ಮತ್ತಿತರ ಹೋರಾಟಗಳಲ್ಲಿ ಹೆಚ್ಚಾಗಿ ಬಳಸಿರುವುದು ಕತ್ತಿ ಮತ್ತು ಗುರಾಣಿಗಳನ್ನೆ. ಗುರಾಣಿಯನ್ನು ರಕ್ಷಣೆಗೆ ಹಿಡಿದು ಹೋರಾಡುತ್ತಿರುವ ಚಿತ್ರಣವನ್ನು ಹಂಪೆಯ ಅನೇಕ ಸ್ಮಾರಕಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ(ಚಿತ್ರ-೩, ೪) ಹಾಗೂ ವೀರಗಲ್ಲುಗಳಲ್ಲಿ(ಚಿತ್ರ-೭) ಕಾಣಬಹುದು. ಅಲ್ಲದೇ ಕತ್ತಿ-ಗುರಾಣಿಗಳನ್ನು ಹಿಡಿದು ಹೋರಾಡುವ ಬಗೆಯನ್ನು ಈ ಉಬ್ಬುಶಿಲ್ಪಗಳಲ್ಲಿ ಕಾಣಬಹುದು. ಗಾರೆಗಚ್ಚು ಶಿಲ್ಪಗಳಲ್ಲೂ ಈ ಬಗೆಯ

ಚಿತ್ರಣಗಳಿವೆ. ಬಾಲಕೃಷ್ಣ ದೇವಾಲಯದ ಮುಖ್ಯ ದ್ವಾರಗೋಪುರದಲ್ಲಿ ಕೃಷ್ಣದೇವರಾಯ ಉದಯಗಿರಿ ದಂಡೆಯಾತ್ರೆ ಕೈಗೊಂಡಾಗ ಹೊರಟ ಸೈನ್ಯವನ್ನು ಚಿತ್ರಿಸಲಾಗಿದೆ. ಇದರಲ್ಲಿ ಕತ್ತಿ- ಗುರಾಣಿಗಳನ್ನು ಹಿಡಿದು ಹೊರಟ ಸೈನಿಕರು, ಕುದುರೆ ಸವಾರರನ್ನು ಕಾಣಬಹುದು. ಇದರಲ್ಲಿರುವ ಗುರಾಣಿಗಳು ವೃತ್ತಾಕರವಾಗಿದ್ದು, ಅಗಲವಾಗಿದೆ. ಗುರಾಣಿಗಳನ್ನು ಬಿದಿರು,ಮರ, ಲೋಹ, ಚರ್ಮ ಮತ್ತಿತರ ವಸ್ತುಗಳನ್ನು ಬಳಸಿ ತಯಾರಿಸಲಾಗುತ್ತಿತ್ತು. ಇದನ್ನು ಕುರಿತು ಕಾವ್ಯಗಳು ಅನೇಕ ಬಗೆಗಳಲ್ಲಿ ವರ್ಣಿಸಿವೆ. ರಾಮನಾಥ ಚರಿತದ ಹಲವು ಪದ್ಯಗಳಲ್ಲಿ ಇದರ ಉಲ್ಲೇಖವನ್ನು ಕಾಣಬಹುದು.

''ಕುಸುರಿವೆಸದ ಮಿಸುನಿಯ ಹಕ್ಕರಿಕೆ ಕಯ್ಯ
ಮಸೆದ ಖಂಡೆಯ ಕಟ್ಟಿ ನೇಲ್ವ
ಹೊಸ ಹೊನ್ನ ಖೇಡಯವೆಸವ ರಾವುತರವ
ರಸಮಭಟರು ರಾಜಸುತರು''[೧೭೪] ಎಂದಿದೆ.

ಇಲ್ಲಿ ಗುರಾಣಿಯನ್ನು ದೇಹಕ್ಕೆ ಕಟ್ಟಿಕೊಳ್ಳುತ್ತಿದ್ದುದಾಗಿ ಹೇಳಿರುವುದು ವಿಶೇಷ ಸಂಗತಿ. ಸಾಮಾನ್ಯವಾಗಿ ಗುರಾಣಿ ಹಿಡಿಯುವುದು ಕೈಗಳಲ್ಲಿ. ಚೆನ್ನಬಸವಪುರಾಣದಲ್ಲಿ ಹರಿಗೆ, ಹಲಗೆಗಳ ಉಲ್ಲೇಖವಿದ್ದು,[೧೭೫] ಹರಿಗೆಯು ಲೋಹದಿಂದ ರಚಿತವಾದುದೆಂದೂ, ಹಲಗೆಯು ಮರದ ಸಾಧನವಾಗಿದ್ದುದು ವ್ಯಕ್ತವಾಗುತ್ತದೆ. ಬಸವಪುರಾಣದಲ್ಲೂ ಗುರಾಣಿಯನ್ನು ಹರಿಗೆಯೆಂದೇ ಕರೆದಿದೆ.[೧೭೬] ಗುರಾಣಿಯನ್ನು 'ನೂಲಹರಿಗೆ'ಯೆಂದು ಕರೆದಿರುವುದನ್ನು ರಾಮನಾಥಚರಿತದಲ್ಲಿ ನೋಡಬಹುದು.[೧೭೭] ತೊಲೆತಳವರ ನೂಲಹರಿಗೆ ಬದ್ದರ ಬಂಡಿ'ಯೆಂಬ ಹಾಗೂ 'ಖೇಡಯ ನೂಲಹರಿಗೆ ಬದ್ದರ ಠೌಳಿ'ಗಳೆಂದು ನಂಜುಂಡಕವಿ ಹೇಳುತ್ತಾನೆ. ಇದು ಕೌಟಲ್ಯನು ಹೇಳಿರುವಂತೆ ಹತ್ತಿ, ರೇಷ್ಮೆ ಮೊದಲಾದ ನೂಲುಗಳಿಂದ ಮಾಡಿದ ಗುರಾಣಿಯಾಗಿದೆ. ಇವು ಕಾವ್ಯಗಳ ಉಲ್ಲೇಖಗಳಾದರೆ ಪ್ರವಾಸಿಗರ ವರದಿಗಳೂ ಗುರಾಣಿ ಬಳಸಿದ್ದುದನ್ನು ಸ್ಪಷ್ಟಪಡಿಸುತ್ತವೆ. ನಿಕಟಿನ್ ವಿಜಯನಗರದ ಸೈನಿಕರನ್ನು ಕುರಿತು, ''ಹಿಂದೂಗಳೆಲ್ಲ ಬರಿಗಾಲಿನಲ್ಲಿ ನಡೆಯುತ್ತಾರೆ. ಎಲ್ಲರೂ ಬೆತ್ತಲೆ. ಒಂದು ಕೈಯಲ್ಲಿ ಭರ್ಜಿಯನ್ನೂ ಇನ್ನೊಂದು ಕೈಯಲ್ಲಿ ಗುರಾಣಿಯನ್ನೂ ಹಿಡಿದಿರುತ್ತಾರೆ'' ಎಂದಿದ್ದಾನೆ.[೧೭೮] ಆದರೆ ಪಾಯೇಸ್ ಗುರಾಣಿಯನ್ನು ಮನಮೋಹಕವಾಗಿ ಚಿತ್ರಿಸಿದ್ದಾನೆ: ''ಕತ್ತಿ-ಗುರಾಣಿಗಳು ಅಲಂಕಾರ ಅಧ್ಭುತವಾಗಿತ್ತು. ಕೆಲವು ಗುರಾಣಿಗಳ ಮೇಲೆ ಚಿನ್ನ ಬೆಳ್ಳಿಯ ಹೂವುಗಳು, ಕೆಲವಕ್ಕೆ ಮೇಲೆ ಸುಂದರವಾದ ಬೆಳ್ಳಿಯ ರೇಶಿಮೆ ಕೆಲಸ. ಮತ್ತೆ ಕೆಲವಕ್ಕೆ ವಿವಿಧ ವರ್ಣಗಳ ಲೇಪನ. ಇನ್ನೂ ಕೆಲವಕ್ಕೆ ಕಪ್ಪಾದ ಮೆರಗುಗೊಟ್ಟ ಕನ್ನಡಿಯ ಹೊಳಪು ಬರುವಂತೆ ಮಾಡಿರುವ ಕೆಲಸ.[೧೭೯] ಪಾಯೇಸ್ ವರ್ಣಿಸುವ ಗುರಾಣಿಯನ್ನು ಎಲ್ಲ ಸೈನಿಕರು ಬಳಸುತ್ತಿದ್ದರೆಂದು ಹೇಳಬರುವುದಿಲ್ಲ. ಈ ವರ್ಣನೆ ನವರಾತ್ರಿ ಉತ್ಸವದ ಸಂದರ್ಭವಾಗಿರುವುದರಿಂದ ಕೆಲವು ಪಡೆಗಳು ಇಂತಹ ಅಲಂಕಾರಿಕ ಗುರಾಣಿಗಳನ್ನು ಹೊಂದಿರುವ ಸಾಧ್ಯತೆಯಿದೆ. ಅಲ್ಲದೆ ಇಲ್ಲಿನದು ಮೂಲ ಸೈನ್ಯದ ವರ್ಣನೆಯಾಗಿರುವುದರಿಂದ ಅರಸರು ತನ್ನ

ವೈಯಕ್ತಿಕ ಸೈನ್ಯಕ್ಕೆ ವಿಶೇಷ ಸವಲತ್ತುಗಳು, ಪರಿಕರಗಳನ್ನು ನೀಡುತ್ತಿದ್ದುದು ಸಹಜ. ನ್ಯೂನಿಜ್ ಗುರಾಣಿಯ ಕಾರ್ಯವೈಖರಿಯನ್ನು ಕುರಿತು, "ಗುರಾಣಿ ಶರೀರವನ್ನೆಲ್ಲಾ ರಕ್ಷಣೆ ಮಾಡುವಷ್ಟು ದೊಡ್ಡದಾಗಿರುವುದರಿಂದ ರಕ್ಷಾಕವಚದ ಅವಶ್ಯಕತೆ ಇರಲಿಲ್ಲ"[೧೮೦]ವೆನ್ನುತ್ತಾನೆ. ಇದು ಗುರಾಣಿ ಹಿಡಿದ ಯೋಧರು ದೇಹಕ್ಕೆ ಕವಚಗಳನ್ನು ಧರಿಸುತ್ತಿದ್ದುದು ಅಪರೂಪವೆಂಬ ಅಂಶವನ್ನು ಒತ್ತಿ ಹೇಳುತ್ತದೆ. ಈ ಎಲ್ಲ ಸಂಗತಿಗಳಿಂದ ವಿಜಯನಗರದಲ್ಲಿ ಅಪಾರ ಸೇನಾ ಸಮೂಹಕ್ಕೆ ಒದಗಿಸಬಹುದಾಗಿದ ಸಾಧನ ಗುರಾಣಿಯಾಗಿತ್ತೆಂಬುದನ್ನು ಮನಗಾಣಬಹುದು.

ಶಿರಸ್ತ್ರಾಣ : ಸೈನಿಕರು ಧರಿಸುತ್ತಿದ್ದ ರಕ್ಷಣಾ ಸಾಧನಗಳಲ್ಲಿ ಶಿರಸ್ತ್ರಾಣವೂ ಒಂದು. ಇದನ್ನು ಠವುಳಿ, ಠೌಳಿಯೆಂದು ಕಾವ್ಯಗಳಲ್ಲಿ ಕರೆಯಲಾಗಿದೆ. ರಾಮನಾಥ ಚರಿತವು 'ಠೌಳಿ'[೧೮೧] ಎಂದು ಕರೆದರೆ, ಕಂಠೀರವನರಸರಾಜ ವಿಜಯಂನಲ್ಲಿ 'ತಲೆಠೌಳಿ'[೧೮೨]ಯೆಂಬುದಾಗಿ ಸ್ಪಷ್ಟಪಡಿಸಿದೆ. ಇದರ ಬಗೆಗೆ ಪಾಯೇಸ್, "ತಲೆಗೆ ಕುತ್ತಿಗೆಯವರೆಗೂ ಬರುವ ಶಿರಸ್ತ್ರಾಣಗಳನ್ನು ಹಾಕಿಕೊಂಡಿದ್ದರು. ಮುಖವನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾದ ರಕ್ಷಣೋಪಾಯ ಸಲಕರಣೆಯನ್ನು ಒದಗಿಸಿಕೊಂಡಿದ್ದರು. ಕುತ್ತಿಗೆಯಲ್ಲಿ ಚಿನ್ನದ ಗಿಲೀಟಿನ ಇಲ್ಲವೆ ಕನ್ನಡಿಯಂತೆ ಪ್ರಕಾಶಮಾನವಾದ ಉಕ್ಕಿನ ಕೊರಳಾಪುಗಳನ್ನು ಧರಿಸಿದ್ದರು" ಎಂದಿದ್ದಾನೆ.[೧೮೩] ಇದು ಶಿರಸ್ತ್ರಾಣದ ನೈಜ ಚಿತ್ರಣ. ಶಿರಸ್ತ್ರಾಣವು ಇಡೀ ತಲೆಯನ್ನು ಬಳಸಿರುವುದಲ್ಲದೆ ಕುತ್ತಿಗೆಯವರೆಗೂ ಹಾಗೂ ಮುಖದ ರಕ್ಷಣೆಗೆ ಬೇಕಾದ ವಿನ್ಯಾಸವನ್ನು ಅದು ಹೊಂದಿತ್ತೆಂಬುದು ವ್ಯಕ್ತವಾಗುತ್ತದೆ. ವಿಜಯನಗರದ ಸೈನಿಕರು ಧರಿಸುತ್ತಿದ್ದ ಶಿರಸ್ತ್ರಾಣವನ್ನು ನಿಕೋಲೊ ಕೊಂತಿ, ಬಾರ್ಬೋಸಾ, ನ್ಯೂನಿಜ್ ಮತ್ತಿತರು ತಮ್ಮ ವರದಿಗಳಲ್ಲೂ ಹೇಳಿರುವರು.

ಕವಚ : ಶರೀರವನ್ನು ಆಯುಧಗಳಿಂದ ರಕ್ಷಿಸುವ ಸಲುವಾಗಿ ಎದೆ ಕವಚ ಮತ್ತು ಮೈಕವಚಗಳನ್ನು ಸೈನಿಕರು ಧರಿಸುತ್ತಿದ್ದರು. ಇದನ್ನು ದಗಲೆ, ತನುತ್ರ, ಜೋಡುಸವಗ, ವಕ್ಕರಿಕೆ ಇನ್ನು ಮುಂತಾಗಿ ಕರೆಯಲಾಗಿದೆ. ನಂಜುಂಡ ಕವಿಯು, 'ಮಿಸುನಿಯ ಪಕ್ಕರೆ ಜೋಡುಸವಗ', 'ಖೇಡಯ ನೂಲಹರಿಗೆ ಬದ್ಧರ ಠೌಳಿ ಜೋಡುಸವಗ ವಕ್ಕರೆ'ಯೆಂದು ಶಿರಸ್ತ್ರಾಣಗಳ ಜೊತೆಗೆ ಯೋಧರು ಧರಿಸಿದ್ದ ಮೈಕವಚಗಳನ್ನು ಹೇಳುತ್ತಾನೆ.[೧೮೪] ಇನ್ನೊಂದು ಪದ್ಯದಲ್ಲಿ, 'ತೊಟ್ಟ ವಜ್ರಾಂಗಿಯ ಜೋಡುಸವಗ'[೧೮೫]ವೆಂದಿರುವುದು ದೇಹಕ್ಕೆ ಧರಿಸುತ್ತಿದ್ದ ಅಂಗಿ ರೂಪದ ಕವಚವೆಂಬುದು ಸ್ಪಷ್ಟವಾಗುತ್ತದೆ. ಪಾಯೇಸ್‌ನು ರಾವುತರ ರಕ್ಷಾಕವಚಗಳನ್ನು ವರ್ಣಿಸುವ ಪರಿಯಿದು: "ಚರ್ಮದ ಹಾಗೂ ಕಿಂಕಾಪು ಮತ್ತು ಮಕಮಲ್ಲಿನಿಂದ ತಯಾರಾದ ಅಂಗಿಗಳನ್ನು ಮೈಗೆ ಹಾಗೂ ತಲೆಗೆ ಶಿರಸ್ತ್ರಾಣಗಳನ್ನು ಮತ್ತು ಮುಖಕ್ಕೆ ರಕ್ಷಣೋಪಾಯ ಸಲಕರಣೆಗಳನ್ನು ಧರಿಸಿದ್ದರು."[೧೮೬] ಇಲ್ಲಿ ಸೈನಿಕರು ಲೋಹದ ಕವಚಗಳನ್ನಲ್ಲದೆ ಚರ್ಮ, ಹತ್ತಿ ಮುಂತಾದ ವಸ್ತುಗಳಿಂದ ತಯಾರಿಸಿದ ಅಂಗಿಗಳಿದ್ದುದು ದೃಢವಾಗುತ್ತದೆ. ನ್ಯೂನಿಜ್, ಸವಾರರು ಗಂಡುಡುಪನ್ನು ಧರಿಸಿದ್ದರೆಂದೂ ಹೇಳಿರುವನು. ಕರ್ನಾಟಕದಲ್ಲಿ ದೊರೆತ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಯೋಧರು ಕವಚ ಧರಿಸಿರುವುದು ಕಂಡುಬರುವುದಿಲ್ಲ. ಅಪರೂಪವೆನ್ನುವಂತೆ

ಹಾನಗಲ್ಲ ತಾಲ್ಲೂಕಿನ ತಲಕೇರಿ ಗ್ರಾಮದ ವೀರಗಲ್ಲಿನಲ್ಲಿ ವೀರನು ದೇಹಕ್ಕೆ ಕವಚ ಧರಿಸಿರುವುದು ಕಂಡುಬರುತ್ತದೆ. ಈ ಕವಚವು ಸೊಂಟದಿಂದ ಕುತ್ತಿಗೆಯವರೆಗೂ ಇದ್ದು ಸರಪಳಿಗಳಿಂದ ಮಾಡಿರುವಂತಿದೆ. ವೀರನು ಕೈಯಲ್ಲಿ ಬಿಲ್ಲು-ಬಾಣಗಳನ್ನು ಹಿಡಿದಿದ್ದು, ತಲೆಗೆ ಶಿರಸ್ತ್ರಾಣ ಧರಿಸಿರುವುದು ಪ್ರಾಚೀನ ಕಾಲದ ದೇಹ ರಕ್ಷಣೆಯ ಪರಿಕರಗಳನ್ನು ಪ್ರತಿನಿಧಿಸುತ್ತದೆ.[೧೮೭] ಹೀಗೆ ಸೈನಿಕರು ಯುದ್ಧ ಸಮಯದಲ್ಲಿ ತಲೆ-ದೇಹ-ಮತ್ತಿತರ ಅಂಗಗಳನ್ನು ರಕ್ಷಿಸಲು ಪ್ರತ್ಯೇಕವಾದ ಸಾಧನಗಳನ್ನು ವಿಜಯನಗರದ ಕಾಲದಲ್ಲಿ ಬಳಸುತ್ತಿದ್ದುದಾಗಿ ಹೇಳಬಹುದು.

ಆನೆ-ಕುದುರೆಗಳ ಕವಚ : ಆನೆ ಮತ್ತು ಕುದುರೆಗಳಿಗೂ ಕವಚಗಳನ್ನು ಹೊದಿಸಲಾಗುತ್ತಿತ್ತು. ಕಾವ್ಯಗಳಲ್ಲಿ ಬರುವ ಲೋಹ ವಕ್ಕರೆ, ಮೊಗರಂಭಗಳು ಆನೆ-ಕುದುರೆಗಳ ಮೈ ಮತ್ತು ತಲೆಗೆ ಹಾಕುತ್ತಿದ್ದ ಕವಚಗಳಾಗಿದ್ದವು. ''ಆನೆಗಳಿಗೆ ಕೌದಿಗಳನ್ನು ಹೊದಿಸಿ ಅಂಬಾರಿ ಬಿಗಿದಿದ್ದು''ದನ್ನು ನ್ಯೂನಿಜ್ ಹೇಳಿದ್ದರೆ,[೧೮೮] ಪಾಯೇಸ್, ''ಆನೆಗಳಿಗೂ ಮಕಮಲ್ಲು ಮುಂತಾದ ಬೆಲೆಯ ಬಟ್ಟೆಗಳನ್ನು ಹೊದಿಸಿ ಗಂಟೆಸರಗಳನ್ನು ಕಟ್ಟಿದ್ದರು'' ಎಂದಿದ್ದಾನೆ.[೧೮೯] ಇವು ಹತ್ತಿಯಿಂದ ತಯಾರಿಸಿದ ಕವಚಗಳಾದರೆ ನಿಕಿಟಿನ್, ಲೋಹದ ಕವಚಗಳನ್ನು ಹೇಳುತ್ತಾನೆ. ಅವನು ''ಆನೆಗಳಿಗೆ ಅಲಂಕರಿಸಿದ ಉಕ್ಕಿನ ತಗಡುಗಳನ್ನು ಹೊದಿಸಿ ಅವುಗಳ ಸೊಂಡಿಲಿಗೂ ಮತ್ತು ಕೋರೆಗಳಿಗೂ ದೊಡ್ಡ ಕೋಲ್ಕತ್ತಿಗಳನ್ನು ಸಿಕ್ಕಿಸುತ್ತಾರೆ. ಬೆನ್ನಿಗೆ ಅಂಬಾರಿಗಳನ್ನು ಬಿಗಿದು ಅದರೊಳಗೆ ಬಂದೂಕು, ಬಿಲ್ಲು-ಬಾಣಗಳನ್ನು ಹಿಡಿದು ರಕ್ಷಾಕವಚಗಳನ್ನು ಧರಿಸಿದ ಹನ್ನೆರಡು ಜನರು ಇರುತ್ತಾರೆ'' ಎಂದಿದ್ದಾನೆ.[೧೯೦] ಗಂಗಾದೇವಿಯು 'ಅಂಬಾರಿ ಕಟ್ಟಿರುವ ಗಜಯೂಥ'ಗಳನ್ನು ಹಾಗೂ

''ಮಣಿಗಂಟೆಗಳ ಕಟ್ಟಿದಗಲ ಗಂಡಸ್ಥಳದ
ಅಂಚುವರೆಗಿಳಿಯುತಿಹ ಮದಜಲದ ಧಾರೆ
ಯೊಡಗೂಡಿ ನೂರಾರು ಸಂಖ್ಯೆಯಲಿ ಆನೆಗಳ
ಥಟ್ಟುಗಳ ಎಡೆವಿಡಿದು ಸಾಲು ಸಾಲು''[೧೯೧]

ಎಂದು ಆನೆಗಳ ಮೇಲಿನ ಅಂಬಾರಿ ಹಾಗೂ ಕೊರಳಲ್ಲಿ ಕಟ್ಟುತ್ತಿದ್ದ ಗಂಟೆಸರಗಳನ್ನು ಹೇಳಿದ್ದಾಳೆ. ಇದು ಯುದ್ಧದ ಆನೆಯ ಚಿತ್ರಣವಾದರೆ, ಯುದ್ಧಾಶ್ವಗಳ ಸಿದ್ಧತೆ ಪರಿಣಾಮಕಾರಿಯಾದುದು. ಕುದುರೆಗೆ ಹಾಕುತ್ತಿದ್ದ ಕವಚಗಳನ್ನು ನಂಜುಂಡ ಕವಿಯು,

''ಲೋಹವಕ್ಕರೆ ಝುಲ್ಲಿ ಮೊಗರಂಭ ಮೊದಲಾ
ದಾಹವ ಸನ್ನಾಹವೆಸೆಯ
ಗಾಹುಗದುಕನುಳಿದೇರಿದರಶ್ವಾ
ರೋಹಕರಾ ಸಮಯದಲ್ಲಿ''[೧೯೨] ಎಂದು ವರ್ಣಿಸಿದ್ದಾನೆ.

ಇಲ್ಲಿ ಕುದುರೆಗಳ ಮೈಗೆ ಲೋಹದ ಕವಚವನ್ನು, ಮುಖಕ್ಕೆ ಮೊಗರಂಭವೆಂಬ ಮುಖವಾಡವನ್ನು ಹಾಕುತ್ತಿದ್ದುದು ತಿಳಿದುಬರುತ್ತದೆ. ಗಂಗಾದೇವಿಯು ಅಶ್ವದಳದ ವರ್ಣನೆಯನ್ನು ಮಾಡಿದ ಬಗೆಯಿದು:

"ಕಚ್ಚಿದ್ದ ಹಾವಂತೆ ಬಾಯಲಿರೆ ಕಡಿವಾಣ
ಚಿತ್ತಾರಗೊಂಡ ಪಕ್ಕರೆ ರೆಕ್ಕೆಯಂತೆ
ದೇಹರೂಪದಿ ಕೂಡ ಹೋಲಿಕೆಯ ತೋರಿಸಿತು
ದಿವ್ಯ ತುರಗವು ತಾನು ಗರುಡನಂತೆ"[೧೯೩]

ಗಂಗಾದೇವಿಯು ಹೇಳುವ ಪಕ್ಕರೆಯು ಕುದುರೆಯ ಮೈಗೆ ಹಾಕುವ ಕವಚವೇ ಆಗಿದೆ. ಪ್ರವಾಸಿ ನ್ಯೂನಿಜ್ 'ಕುದುರೆಗಳಿಗೆ ವಸ್ತ್ರಗಳನ್ನು ಹೊದಿಸಿದ್ದರು"ಎಂದಿದ್ದಾನೆ.[೧೯೪] ಪಾಯೇಸ್ "ಕುದುರೆಗಳಿಗೆ ಮುಖಕ್ಕೆ ಸರ್ಪ ಮುಂತಾದ ದೊಡ್ಡ ಪ್ರಾಣಿಗಳ ತಲೆಗಳಂಥ ಮುಖವಾಡ ತೊಡಿಸಿದ್ದು"ದಾಗಿ ಹೇಳುತ್ತಾನೆ.[೧೯೫] ವೀರಗಲ್ಲುಗಳಲ್ಲಿಯೂ ಕುದುರೆಗಳಿಗೆ ಮೈತುಂಬ ಕವಚವನ್ನು ಕಡೆದಿರುವ ಚಿತ್ರಣಗಳನ್ನು(ಚಿತ್ರ-೧೦)ಕಾಣಬಹುದು.

ಹೀಗೆ ರಕ್ಷಣಾತ್ಮಕ ಅಥವಾ ಸಂರಕ್ಷಕ ಸಾಧನಗಳು ಯುದ್ಧದಲ್ಲಿ ಶತ್ರುಗಳ ಪ್ರತಿರೋಧವನ್ನು ಸೈನಿಕರು, ಆನೆ-ಕುದುರೆಗಳು ಮೆಟ್ಟಿನಿಲ್ಲುವಲ್ಲಿ ಮಹತ್ವದ ಪರಿಕರಗಳೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ವಿಜಯನಗರದ ಕಾಲದ ಸೇನೆಯ ಅಗಾಧತೆಯನ್ನು ಗಮನಿಸಿದರೆ ಎಷ್ಟರ ಮಟ್ಟಿಗೆ ಎಲ್ಲ ಸೈನಿಕರು, ಕುದುರೆ-ಆನೆಗಳಿಗೆ ಕವಚಗಳನ್ನು ಒದಗಿಸಿದ್ದರೆಂಬುದು ಪ್ರಶ್ನೆಯಾಗಿ ನಿಲ್ಲುತ್ತದೆ. ನಿಕಿಟಿನ್ "ಹಿಂದೂಗಳೆಲ್ಲ ಬರಿಗಾಲಿನವರು, ಎಲ್ಲರೂ ಬೆತ್ತಲೆ, ಒಂದು ಕೈಯಲ್ಲಿ ಭರ್ಚಿಯನ್ನು, ಇನ್ನೊಂದು ಕೈಯಲ್ಲಿ ಗುರಾಣಿಯನ್ನೂ ಹಿಡಿದಿರುತ್ತಾರೆ"[೧೯೬] ಎನ್ನುವ ಈ ಹಿಂದೆ ಪ್ರಸ್ತಾಪಿಸಲಾದ ಮಾತು ವಿಜಯನಗರ ಸೈನ್ಯದ ಸಂಖ್ಯೆಯನ್ನು ಗಮನಿಸಿದಾಗ ಸತ್ಯವೆನಿಸುತ್ತದೆ.

ಟಿಪ್ಪಣಿಗಳು

೦೧. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಪು.೨೯-೩೦

೦೨. ಅದೇ, ಪು.೨೭

೦೩. ಪ್ರ.ಕಂ.ಇಂ., ಸಂ-೨, ಪು.೨೯

೦೪. War in Ancient India, P.8; ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ ಪು.೧೪೫

೦೫. ಕರ್ನಾಟಕ ಚರಿತ್ರೆ, ಸಂ-೪, ಪು.೩

೦೬. ಪಾಟೀಲ್ ಸಿ.ಎಸ್., ಮುದಗಲ್ಲು ಮತ್ತು ರಾಯಚೂರು ಕೋಟೆಗಳು, ದಿಕ್ಸೂಚಿ (ಮಾಸ ಪತ್ರಿಕೆ), ೧೯೯೩ ಸೆಪ್ಟೆಂಬರ್ ಮತ್ತು ಅಕ್ಟೋಬರ್

೦೭. The Art of war in Medieval India, J.N.Sarkar, P.30

೦೮. ಅದೇ, ಪು.೧೫

೦೯. ರಾಮನಾಥ ಚರಿತ, ೧೧-೭೨

೧೦. ಅದೇ, ೧೪-೮೪

೧೧. ಮೋಹನತರಂಗಿಣಿ, ಪು.೪೮೧, ಪದ್ಯ. ೪೧

೧೨. ಮಧುರಾವಿಜಯಂ, ೪-೨೮

೧೩. Further sources of Vijayanagar History, Ramarajana Bakhair, P.274

೧೪. ಪ್ರ.ಕಂ.ಇಂ., ಸಂ-೨, ಪು.೩೯೮

೧೫. E.C., Vol-VIII, Ti.26, 1275

೧೬. ಅದೇ, Sa.85, 1282

೧೭. ರಾಮನಾಥ ಚರಿತ, ೪೧-೪೧೧

೧೮. SII., Vol-I, No-153

೧೯. ಮೋಹನತರಂಗಿಣಿ, ಪು.೨೪, ಪದ್ಯ. ೧೩

೨೦. ಶ್ರೀ ಕೃಷ್ಣದೇವರಾಯನ ದಿನಚರಿ, ಪು.೪೦

೨೧. Further sources of Vijayanagar History, Ramarajana Bakhair, P.278

೨೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೫೬

೨೩. ಪ್ರ.ಕಂ.ಇಂ., ಸಂ-೨, ಪು.೨೯೭

೨೪. ಅದೇ, ಪು.೩೯೮-೩೯೯

೨೫. ಕರ್ನಾಟಕ ಜನಜೀವನ, ಪು.೬೨; ಕರ್ನಾಟಕದ ವೀರಗಲ್ಲುಗಳು, ಪು.೧೬೭-೮

೨೬. ಮಧುರಾವಿಜಯಂ, ೪-೨೬

೨೭. ಮೋಹನತರಂಗಿಣಿ, ಪು.೪೯೦, ಪದ್ಯ. ೯

೨೮. ಸನತ್ಕುಮಾರ ಚರಿತೆ, ೧೨-೬೪

೨೯. ಕಂಠೀರವ ನರಸರಾಜವಿಜಯಂ, ಪದ್ಯ. ೩೮, ಪು.೩೧

೩೦. ರಾಮನಾಥಚರಿತ, ೪೧-೬೩; ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನಚಿತ್ರ, ಪು.೧೭೯

೩೧. ಮ.ಹೋ.ಮ.ವಿ., ನ್ಯೂನಿಜ್, ಪು.೩೫೮

೩೨. ರಾಮನಾಥಚರಿತ, ೧೨-೭,೮,೯

೩೩. ಮ.ಹೋ.ಮ.ವಿ., ನ್ಯೂನಿಜ್, ಪು.೩೫೮

೩೪. ಕೌಟಲ್ಯನ ಅರ್ಥಶಾಸ್ತ್ರ, ಪು.೫೪೫

೩೫. ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ, ಪು.೧೯೦-೧

೩೬. ಮ.ಹೋ.ಮ.ವಿ., ನ್ಯೂನಿಜ್, ಪು.೩೫೬

೩೭. ಅದೇ, ಪು.೭೦

೩೮. ಅದೇ, ನ್ಯೂನಿಜ್, ಪು.೩೫೯

೩೯. ರಾಮನಾಥಚರಿತ, ೨೦-೩,೪; ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೧೫೩

೪೦. ಅದೇ, ೨೦-೫

೪೧. ಮ.ಹೋ.ಮ.ವಿ., ಪು.೨೧೯

೪೨. ಅದೇ

೪೩. ಅದೇ

೪೪. ಅದೇ, ನ್ಯೂನಿಜ್, ಪು.೩೫೯

೪೫. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು.೧೭೬

೪೬. Inscriptions of Krishnadevaraya's Time, 1984, P.175. No.77; SII, Vol-xvi, No.9,57

೪೭. ರಾಮನಾಥಚರಿತ, ೧೨-೫೧

೪೮. ಚೆನ್ನಬಸವಪುರಾಣ, ೨೫-೫, ಪು.೩೭೦

೪೯. ಮಧುರಾವಿಜಯಂ, ೪-೫೩

೫೦. ರಾಮನಾಥಚರಿತ, ೧೨-೫೨

೫೧. ಕಂಠೀರವ ನರಸರಾಜವಿಜಯಂ, ೧೮-೧೦೦, ಪು.೩೪೨

೫೨. ಚೆನ್ನಬಸವಪುರಾಣ, ಪು.೨೪೮

೫೩. ರಾಮನಾಥಚರಿತ, ೧೫-೬೯

೫೪. ಸನತ್ಕುಮಾರ ಚರಿತೆ, ೮-೧೯

೫೫. ಮಧುರಾವಿಜಯಂ, ೪-೬೩

೫೬. ಮ.ಹೋ.ಮು.ವಿ., ನ್ಯೂನಿಜ್, ಪು.೩೫೯

೫೭. ಅದೇ, ಪು.೨೧೯

೫೮. ಸಂಶೋಧನ ಲೇಖನಗಳು, ಡಾ.ಎಸ್.ಶ್ರೀಕಂಠಶಾಸ್ತ್ರೀ, ಪು.೧೪೪

೫೯. ಕೌಟಲ್ಯನ ಅರ್ಥಶಾಸ್ತ್ರ, ಪು.೧೦೩

೬೦. ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಎಸ್.ಕೆ.ಜೋಶಿ, (ಸೂರ್ಯಕೀರ್ತಿ: ಸೂರ್ಯನಾಥ ಕಾಮತ್ ಅಭಿನಂದನ ಗ್ರಂಥ, ಪು.೧೪೬)

೬೧. ರಾಜನೀತಿ ಪ್ರಕಾಶ, ಪು.೨೦೨, ವಾರಣಾಸಿ, ೧೯೧೬

೬೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೮೬

೬೩. ಶಿವತತ್ತ್ವರತ್ನಾಕರ, ೫.೬.೪೬, ಪು.೨೬೮-೯

೬೪. SII,vol-xvi, No.52,53,57; Inscriptions of Krishnadevaraya's Time(Ed,)Vijayaraghava charya, No.66-68,77

೬೫. ರಾಮನಾಥಚರಿತ, ೩೭-೫೧,೫೨,೬೩

೬೬. ಬಸವಪುರಾಣ (ಭೀಮಕವಿ) ಪು.೨೨೩, ೧೫-೧೧

೬೭. ಶ್ರೀಕೃಷ್ಣದೇವರಾಯನ ದಿನಚರಿ, ಪು.೨೦-೨೧

೬೮. ಬಸವಪುರಾಣ (ಭೀಮಕವಿ) ಪು.೨೨೨, ೧೫-೧೦

೬೯. ಮ.ಹೋ.ಮ.ವಿ., ಪು.೯೫

೭೦. ಹೆಚ್ಚಿನ ವಿವರಗಳಿಗೆ: C.S.patil, ‘Kummata’, Vijayanagara progress of Research, 1987-88, P.199-216

೭೧. ಚೆನ್ನಬಸವಪುರಾಣ, ೪೨-೨೨, ೧೧

೭೨. ಕರ್ನಾಟಕ ಜನಜೀವನ, ಪು.೧೯

೭೩. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೩೯೮

೭೪. ಮಧುರಾವಿಜಯಂ, ಪು.೩೫

೭೫. ಕರ್ನಾಟಕ ಜನಜೀವನ, ಪು.೪೧

೭೬. ಚೆನ್ನಬಸವಪುರಾಣ, ೪೨-೪೦

೭೭. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ. ಪು.೧೬೩

೭೮. ಮ.ಹೋ.ಮ.ವಿ., ನ್ಯೂನಿಜ್, ಪು.೩೯೯

೭೯. ಅದೇ, ಪು.೪೦೨

೮೦. ಲೋಥಲ್ ಮತ್ತು ಸಿಂಧೂ ನಾಗರೀಕತೆ, ಡಾ.ಎಸ್.ಆರ್.ರಾವ್

೮೧. E.I., Vol-VI, P.10

೮೨. ಸಂಗಮ್ ಕಾಲದ ಸಾಮಾಜಿಕ ರಾಜಕೀಯ ವ್ಯವಸ್ಥೆ, ಪು.೧೭೭

೮೩. E.I., Vol-XVIII, P.152

೮೪. ಪ್ರ.ಕಂ.ಇಂ., ಸಂ-೨, ಪು.೧೫೪

೮೫. Quoted: South India and Srilanka, K.K.pillay, P.105

೮೬. ಮ.ಹೋ.ಮ.ವಿ., ಪು.೪೫

೮೭. Indian Antiquary, vol-xxxviii, P.12

೮೮. Sources of Vijaynagar History, P.53

೮೯. E.I., Vol-VIII, P.300-301; ಅದೇ, Vol-III, P. 228

೯೦. Quoted: South India and Srilanka, K.K.pillry, P.105-6

೯೧. SII., Vol-vii., No.778

೯೨. ಅದೇ, ಸಂಖ್ಯೆ. ೪೨೮

೯೩. ARE, 144 of 1916; Quoted: South India and Srilanka, P.107

೯೪. ಹೆಚ್ಚಿನ ವಿವರಗಳಿಗೆ : (ಬಿರುದಾವಳಿಗಳು) ಉಪಶೀರ್ಷಿಕೆಯನ್ನು ನೋಡಿ

೯೫. SII., Vol-ix-ii, No.429

೯೬. Mysore Gazetteer, New Edition, P.1581

೯೭. Indian Antiquary, Vol-XLIII, P.45; MER of 1904, No.149; EI, Vol-XXI, 1931-32

೯೮. ಕನ್ನಡ ವಿ.ವಿ. ಶಾಸನ ಸಂಪುಟ-೨, ಸಂಖ್ಯೆ-೧೩೮, ಪು.೧೩೪

೯೯. ಪ್ರ.ಕಂ.ಇಂ., ಸಂ-೨, ಬಾರ್ಬೋಸಾ, ಪು.೨೮೧

೧೦೦. Indian Antiquary, Vol-xiv. P.230, Note.

೧೦೧. ಅದೇ, Vol-XLIII, P.186; MER of 1897, No.40;49-50 of 1900

೧೦೨ ರಾಮನಾಥ ಚರಿತ, ೨೦-೪೩,೪೪

೧೦೩. ಕರ್ಣಾಟ ಭಾರತ ಕಥಾಮಂಜರಿ, ಕರ್ಣಪರ್ವ ೧೬: ೩೧

೧೦೪. ರಾಮನಾಥ ಚರಿತ, ೨೦-೪೫

೧೦೫. ಅದೇ, ೨೦-೫೨

೧೦೬. ಅದೇ, ೧೨-೮೦ ರಿಂದ ೮೫

೧೦೭. ಪ್ರ.ಕಂ.ಇಂ., ಸಂ-೨, ಪು.೩೯೯-೪೦೨

೧೦೮. ಮ.ಹೋ.ಮ.ವಿ., ಪು.೨೨೦

೧೦೯. ಪ್ರ.ಕಂ.ಇಂ., ಸಂ-೨, ಪು.೪೦೧-೪೦೨

೧೧೦. ಅದೇ, ಪು.೪೦೩

೧೧೧. ಅದೇ, ಪು.೪೦೧-೨

೧೧೨. ಯುದ್ಧ ಮತ್ತು ಭಗವದ್ಗೀತೆ- ಸಿ.ಎಂ.ವೀರಭದ್ರಯ್ಯ, ಸಾಪ್ತಾಹಿಕ ಸೌರಭ, ಸಂಯುಕ್ತಕರ್ನಾಟಕ ದಿ.೧೮-೦೭-೯೯

೧೧೩. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಪು.೬೩

೧೧೪. EC., Vol-VII, S.K.60; EC.,Vol- VI, Cm.122; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೪೯

೧೧೫. ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ, ಪು.೧೫೬

೧೧೬. ವೀಳೆಯ ಪದ್ಧತಿ ನೋಡಿ

೧೧೭. ಪ್ರ.ಕಂ.ಇ., ಸಂ-೨, ನ್ಯೂನಿಜ್, ಪು.೨೯೯

೧೧೮. ಶಿವತತ್ತ್ವರತ್ನಾಕರ, ೫.೧೪.೧೯-೨೫, ಪು.೩೩೨

೧೧೯. Ramarajana Bakhair, Further sources of Vijayanagar History P.278

೧೨೦. ಮ.ಹೋ.ಸಾ.ವಿ., ಪು.೩೬

೧೨೧. ಪ್ರ.ಕಂ.ಇಂ., ನ್ಯೂನಿಜ್, ಪು.೪೦೦-೧

೧೨೨. A History of Karnataka, P.329

೧೨೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಸಂಖ್ಯೆ-೧ ಮತ್ತು ೧೬

೧೨೪. ಬಾದಾಮಿ ಮತ್ತು ಕರ್ನೂಲಿನ ಅಟಕಲಗುಂಡು ಶಾಸನಗಳು, A.History of Karnataka, P.330,(Ed) P.B.Desai, 2982

೧೨೫. E.C. Vol-III, Malavalli-22

೧೨೬. History of Karnataka, P.335

೧೨೭ ಅದೇ, P.337

೧೨೮. EC., Vol-XI, Dg.120, Hallihalu, Harihar(T)

೧೨೯. SII., Vol-IX-ii, No.410

೧೩೦. SII., Vol-XX No.231

೧೩೧. Vijayanagar Inscriptions, Vol-III, KN.2522

೧೩೨. SII., Vol-IX-ii, No.433

೧೩೩. Karnataka Inscriptions Vol-I, No.48

೧೩೪. ARIE, 144 of 1916

೧೩೫. A History of Karnataka, P.354

೧೩೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪು.೧೨೧, ಸಂಖ್ಯೆ. ೬೩,

೧೩೭. A History of Karnataka, P.335

೧೩೮. Vijayanagar Inscriptions, Vol-I, KN.422

೧೩೯. SII., Vol-IX-ii P.457, No.447

೧೪೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪು.೮೮, ಸಂಖ್ಯೆ.೭೧,

೧೪೧. SII., Vol-IX-ii, No.463, 466

೧೪೨. SII., Vol-IX-ii, No.510 ; ಅದೇ, Vol-IV, No.249

೧೪೩. Kannada Inscriptions of Andhra Pradesh, No.285, P. 80

೧೪೪. Nellore District Inscriptions, No.27, P.536, Kandakur,

೧೪೫. Kannada Inscriptions of Andhra Pradesh, No.285, P. 80

೧೪೬. SII., Vol-IV, No.254-255

೧೪೭. A History of Karnataka, P.335

೧೪೮. Vijayanagar Inscriptions, Vol-I, KN.4

೧೪೯. ಅದೇ, KN.153

೧೫೦. ಅದೇ, KN.157

೧೫೧. ಅದೇ, Vol-iii, KN.2272,

೧೫೨. SII., Vol-VII, No.428

೧೫೩. SII., Vol-IX-ii, P.489, N-474

೧೫೪. Vijayanagar Inscriptions Vol-I, KN.259

೧೫೫. ಕೆಳದಿ ನೃಪವಿಜಯಂ: ಪ್ರಥಮಾಶ್ವಾಸ, ೨೧-೪೯, ಪು.೩೩-೩೮

೧೫೬. ಕೌಟಲ್ಯನ ಅರ್ಥಶಾಸ್ತ್ರ, ಪು.೧೭೬

೧೫೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೭೨; The art of war in Ancient India, Date, P.10-11

೧೫೮. ಅನಂತನಾಥ ಪುರಾಣ, ೧೪-೧

೧೫೯. ರಾಮನಾಥ ಚರಿತ, ೧೩-೧೩೫, ಪು.೨೪೨

೧೬೦. ಅದೇ, ೧೦-೪೩

೧೬೧. ಉಲ್ಲೇಖ: ಕರ್ನಾಟಕ ಜನಜೀವನ, ಪು.೪೪

೧೬೨. ಅದೇ, ಪು.೫೭

೧೬೩. The Art of war in Ancient India, J.N.sarkar, pp.126-129

೧೬೪. ಫಿರಂಗಿದಳ ವಿಭಾಗವನ್ನು ನೋಡಿ

೧೬೫. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೪೦೨

೧೬೬. ಅದೇ, ನಿಕೊಲೊ ಕೊಂತಿ, ಪು.೧೪೨

೧೬೭. ಅದೇ, ಬಾರ್ಬೋಸಾ, ಪು.೩೦೨

೧೬೮. ಅದೇ, ಪಾಯೇಸ್, ಪು.೩೭೮-೩೮೦

೧೬೯. ಅದೇ, ನ್ಯೂನಿಜ್, ಪು.೩೯

೧೭೦. Further Sources of Vijayanagar History, Ramarajana Bakhair, Pp.278-280

೧೭೧. ಕೌಟಲ್ಯನ ಅರ್ಥಶಾಸ್ತ್ರ, ಪು.೧೭೭

೧೭೨. ರಾಮನಾಥ ಚರಿತ, ೩೯-೬೫

೧೭೩. ಅದೇ, ೪೧-೫೦

೧೭೪. ಅದೇ, ೧೪-೧೩೬

೧೭೫. ಚೆನ್ನಬಸವಪುರಾಣ-೨, ಪು.೪೧-೫೩

೧೭೬. ಬಸವಪುರಾಣ, ೬೦-೬೫

೧೭೭. ರಾಮನಾಥ ಚರಿತ, ೪೧-೫೦; ೪೨-೩೭

೧೭೮. ಪ್ರ.ಕಂ.ಇಂ., ಸಂ-೨, ನಿಕಿಟಿನ್, ಪು.೧೭೭

೧೭೯. ಅದೇ, ಪಾಯೇಸ್, ಪು.೩೭೯

೧೮೦. ಅದೇ, ನ್ಯೂನಿಜ್, ಪು.೩೯೭

೧೮೧. ರಾಮನಾಥ ಚರಿತ, ೩೯-೬೯; ೪೧-೫೦; ೧೨-೮೭

೧೮೨. ಕಂಠೀರವ ನರಸರಾಜವಿಜಯಂ, ೧೮-೩೩

೧೮೩. ಪ್ರ.ಕಂ.ಇಂ., ಸಂ-೨, ಪಾಯೇಸ್, ಪು.೩೭೮

೧೮೪. ರಾಮನಾಥ ಚರಿತ, ೩೯-೬೫; ೪೧-೫೦

೧೮೫. ಅದೇ, ೧೨-೮೭

೧೮೬. ಪ್ರ.ಕಂ.ಇಂ., ಸಂ-೨, ಪಾಯೇಸ್, ಪು.೩೭೮

೧೮೭. ಕನ್ನಡ ಶಾಸನಶಿಲ್ಪ, ಪು.೨೧೮-೯

೧೮೮. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೩೯೭

೧೮೯. ಅದೇ, ಪಾಯೇಸ್, ಪು.೩೭೮

೧೯೦. ಅದೇ, ನಿಕಿಟಿನ್, ಪು.೧೭೭

೧೯೧. ಮಧುರಾವಿಜಯಂ, ೪-೮, ಪು.೨೬

೧೯೨. ರಾಮನಾಥ ಚರಿತ, ೧೨-೮೮

೧೯೩. ಮಧುರಾವಿಜಯಂ, ೪-೨೫, ಪು.೨೮

೧೯೪. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೩೯೭

೧೯೫. ಅದೇ, ಪಾಯೇಸ್, ಪು.೩೭೮

೧೯೬. ಅದೇ, ನಿಕಿಟಿನ್, ಪು.೧೭೭

ಅಧ್ಯಾಯ ೬

ಯುದ್ಧನೀತಿ ಮತ್ತು ಪರಿಣಾಮಗಳು

೬.೧ ಯುದ್ಧ ನೀತಿ

ಯುದ್ಧವು ಹಿಂಸೆಯ ಪ್ರಕಟರೂಪ; ಸರ್ವವಸ್ತುಗಳ ಜನಕ; ಪಾಳೆಯಗಾರೀ ಮನಸ್ಸಿನ ಅಭಿವ್ಯಕ್ತರೂಪ; ಸಂಪಾದನೆ, ಜಗಳಗಂಟತನ, ಗರ್ವ, ಯಜಮಾನ್ಯರ ಆಸೆಗಳ ಪ್ರತಿರೂಪ-ಇನ್ನೂ ಮುಂತಾಗಿ ವ್ಯಾಖ್ಯಾನಿಸಲಾಗಿದೆ. ಯುದ್ಧದಲ್ಲಿ ಜಯಾಪಜಯ, ಸಾವು-ನೋವುಗಳು ಅನಿವಾರ್ಯ. ಇದು ಕೊಲೆ, ಸುಲಿಗೆ, ದರೋಡೆ, ದ್ವೇಷ, ಪ್ರತೀಕಾರಗಳನ್ನು ಒಳಗೊಂಡಿರುವುದು ನಿಜ. ಆದರೆ ನಿರ್ಮೂಲ ಅಥವಾ ನಾಶಮಾಡುವುದೇ ಇದರ ಗುರಿಯಲ್ಲ. ಯುದ್ಧವು ಸತ್ಯ ಮತ್ತು ಹಕ್ಕುಗಳ ಪ್ರತಿಪಾದನೆಗೆ ರಕ್ಷಣಾತ್ಮಕವಾಗಿ ಅತ್ಯಗತ್ಯವಾಗಿದೆ. ಸ್ವ-ರಕ್ಷಣೆಯ ದೃಷ್ಟಿಯಿಂದಲೂ ಇದು ಅನಿವಾರ್ಯವಾಗುತ್ತದೆ.

ಯುದ್ಧಕ್ಕೆ ಕೆಲವು ನೈತಿಕ ಚೌಕಟ್ಟನ್ನು ಪ್ರಾಚೀನ ಕಾಲದಿಂದಲೂ ರೂಪಿಸುತ್ತಾ ಬಂದಿರುವುದನ್ನು ಈಗಾಗಲೇ ಗಮನಿಸಲಾಗಿದೆ. ವೇದ ಮತ್ತು ಮಹಾಕಾವ್ಯಗಳ ಕಾಲದಿಂದಲೂ ಯುದ್ಧದ ನೀತಿ-ನಿಯಮಗಳು ಬಳಕೆಯಲ್ಲಿದ್ದುದು ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಇವುಗಳಿಗೆ ಹಲವು ಹೊಸ ಹೊಸ ಅಂಶಗಳು, ಕಾಲ-ದೇಶಗಳಿಗೆ ಅನುಗುಣವಾಗಿ ಸೇರ್ಪಡೆಯಾಗುತ್ತಾ ಬಂದವು. ಯುದ್ಧ ಸಮಯದಲ್ಲಿ ಯಾರೊಂದಿಗೆ ಯುದ್ಧ ಕೈಗೊಳ್ಳಬೇಕು, ಯಾರೊಂದಿಗೆ ಮಾಡಬಾರದು, ಯಾರನ್ನು ಕೊಲ್ಲಬೇಕು-ಕೊಲ್ಲಬಾರದು ಎಂಬ ನಿಯಮಗಳನ್ನು ಎರಡೂ ಪಕ್ಷದ ಸೈನ್ಯವು ಅನುಸರಿಸಬೇಕಿದ್ದಿತು. ಪ್ರಾಚೀನ ಯುದ್ಧಗಳು ನಡೆಯುತ್ತಿದ್ದುದು ಎರಡೂ ಕಡೆಯ ರಾಜರು ಮತ್ತು ಅವರ ಸೈನ್ಯಗಳ ನಡುವೆಯೇ ಹೊರತು ಸಮಾಜದ ಜೊತೆಯಲ್ಲಲ್ಲ. ಮೆಗಾಸ್ತನೀಸನು ಭಾರತದ ಯುದ್ಧ

ಸ್ಥಿತಿಯನ್ನು, ''ಉಳಿದ ದೇಶಗಳಲ್ಲಿ ಯುದ್ಧವಾದಾಗ ಶತ್ರುಗಳು ಹೊಲಗಳನ್ನು ನಾಶಪಡಿಸುವುದು ರೂಢಿ. ಇಲ್ಲಾದರೋ ಯುದ್ಧವು ನಡೆಯುತ್ತಿರುವಾಗ ರೈತರು ನಿರಾತಂಕವಾಗಿ ತಮ್ಮ ಕೆಲಸಗಳನ್ನು ತಾವು ಮಾಡಿಕೊಂಡು ಹೋಗುತ್ತಿರುತ್ತಾರೆ''[೧] ಎಂದಿದ್ದಾನೆ. ಆದರೆ ಇದೇ ಕ್ರಮ ಮುಂದುವರಿಯಿತೆಂದು ಹೇಳುವುದು ಕೂಡ ಕಷ್ಟ. ಪ್ರಾಚೀನ ಮತ್ತು ಮಧ್ಯಯುಗೀನ ಕರ್ನಾಟಕದಲ್ಲಿ ತುರುಕಾಳಗ, ಪೆಣ್ಬುಯಿಲು, ಊರಳಿವು, ಗಡಿಯುದ್ಧಗಳಲ್ಲಿ ಜನಸಾಮಾನ್ಯರು ಮತ್ತು ಅವರ ಆಸ್ತಿ ಪಾಸ್ತಿಗಳಿಗೇ ಹೆಚ್ಚು ಹಾನಿಯಾಗುತ್ತಿದ್ದಿತು.

ಉಪನಿಷತ್ತುಗಳು ಮತ್ತು ಬೌದ್ಧ ನೀತಿಗಳು ದಮ(self control), ದಯೆ, ದಾನ, ಅಹಿಂಸೆ ಮತ್ತು ಧರ್ಮಗಳನ್ನು ಹಾಗೂ 'ಸತ್ಯಮೇವ ಜಯತೆ ಸನ್ರಿತಂ' ಎಂದು ಸಾರುವ ಕಾಲವಾಗಿದ್ದಿತೆಂದೂ ಹೇಳುತ್ತವೆ.[೨] ಹಾಗಿದ್ದೂ ಹಿಂಸಾತ್ಮಕ ಮತ್ತು ಅನಿಷ್ಟ ಯುದ್ಧಗಳು ಪ್ರಾಚೀನ ಕಾಲದಿಂದಲೂ ನಡೆದು ಬಂದವು. ಶೂರತ್ವದ ಪ್ರತೀಕವಾದ ಅಂದಿನ ಯುದ್ಧಗಳು ಎರಡೂ ಕಡೆಯಲ್ಲೂ ಸಮ ಸಮ ಬಲಗಳೊಂದಿಗೆ ನಡೆಯುತ್ತಿದ್ದವು. ಪ್ರಾಚೀನ ಕಾಲದ ಯುದ್ಧನೀತಿಗಳು ಸಾಮಾನ್ಯವಾಗಿ ಧರ್ಮಯುದ್ಧಗಳಿಗೆ ಹೆಚ್ಚು ಸಂಬಂಧಿಸಿದ್ದವು. ಧರ್ಮಯುದ್ಧದ ಪ್ರಕಾರ ಕೆಲವು ಆಯುಧಗಳನ್ನು ಯುದ್ಧದಿಂದ ಬಹಿಷ್ಕರಿಸಲಾಗಿತ್ತು. ಅವುಗಳಲ್ಲಿ ವಿಷಪೂರಿತ ಬಾಣಗಳು, ಶೂಲಗಳು ಸೇರಿದ್ದವು.

ರಣರಂಗದಲ್ಲಿ ಯುದ್ಧ ಮಾಡುತ್ತಿರುವಾಗ ಯೋಧರು ಹೇಗೆ ನಡೆದುಕೊಳ್ಳಬೇಕು ಎಂಬುದು ಧರ್ಮಶಾಸ್ತ್ರ, ಶುಕ್ರನೀತಿ, ಮತ್ತಿತರ ಸಾಹಿತ್ಯ-ಶಾಸನಗಳಿಂದ ತಿಳಿದುಬರುತ್ತದೆ. ಇವುಗಳ ಪ್ರಕಾರ ಈ ಕೆಳಗಿನವರನ್ನು ಕೊಲ್ಲಬಾರದೆಂಬುದು ಯುದ್ಧನಿಯಮವಾಗಿತ್ತು: ವಿವಿಧ ಮೂಲಗಳಿಂದ ತಿಳಿದು ಬರುವಂತೆ, ವೀರರಲ್ಲದವರು, ಪಲಾಯನ ಪಠಿಸುವವರು, ಗಾಯಗೊಂಡವರು, ಮುದುಕರು, ಮಕ್ಕಳು, ರಣರಂಗದಲ್ಲಿ ಹುಲ್ಲುಕಚ್ಚಿದವರು, ಕೆದರಿದ ತಲೆಯವರು, ಭೀತರು, ನೀರನ್ನು ಹೊಕ್ಕವರು, ಶಿವಲಿಂಗ ಅಪ್ಪಿದವರು, ಹುತ್ತವನ್ನು ಏರಿದವರು, ನಿರಾಯುಧರು, ಬರಿಮೈಯಲ್ಲಿರುವವರು, ಬೆನ್ನು ತೋರಿಸುವವರು, ನಾನು ನಿಮ್ಮವನೆನ್ನುವವರು, ನೀರು ಕುಡಿಯುವವರು, ಊಟ ಮಾಡುತ್ತಿರುವವರು, ನರ್ತಕರು, ಹಾಡುಗಾರರು, ಸಂಗೀತಗಾರರು, ಸನ್ಯಾಸಿಗಳು ಮತ್ತಿತರರು.[೩]

ಒಟ್ಟಿನಲ್ಲಿ ಯುದ್ಧ ಸ್ಥಿತಿಯಲ್ಲಿ ಇಲ್ಲದ ಯಾವುದೇ ವ್ಯಕ್ತಿಯನ್ನು ಕೊಲ್ಲಕೊಡದೆಂಬುದು ಯುದ್ಧನೀತಿಗಳಲ್ಲೊಂದು. ಇಸ್ಲಾಂನಲ್ಲೂ ಇದೇ ಬಗೆಯ ನಿಯಮಗಳಿದ್ದುವು. ಅಬುಬಕ್ರ್ ಎಂಬ ಸಂತನು ಸಿರಿಯಾ ಯುದ್ಧಕ್ಕೆ ಹೊರಟ ತಮ್ಮ ಕಡೆಯ ಸೈನಿಕರನ್ನು ಕುರಿತು ಹೇಳುವ ಮಾತುಗಳಿವು: ಯುದ್ಧ ಸಮಯದಲ್ಲಿ,

೧) ಖಜಾನೆಯನ್ನು ವಶಪಡಿಸಿಕೊಳ್ಳಬಾರದು ೨) ಧರ್ಮಯುತವಾಗಿ ನಡೆಯಬೇಕು ೩) ಅಂಗ ಊನ ಮಾಡಬಾರದು. ೪) ಮಕ್ಕಳು, ಮುದುಕರು ಮತ್ತು ಹೆಂಗಸರನ್ನು ಕೊಲ್ಲಕೂಡದು. ೫) ತಾಳೆಮರಗಳನ್ನು ನಾಶ

ಮಾಡಬಾರದು ೭) ಫಲವನ್ನೀಯುವ ಮರಗಳನ್ನು ಕಡಿಯಬಾರದು ೭) ದನ, ಕುರಿ ಮತ್ತು ಒಂಟೆಗಳನ್ನು ಕೊಲ್ಲಬಾರದು ೮) ಸನ್ಯಾಸಿಗಳನ್ನು ಕೊಲ್ಲಬಾರದು ೯) ಊಟ ಮತ್ತಿತರ ಕಾರ್ಯನಿರತ ವ್ಯಕ್ತಿಗಳನ್ನು ಕೊಲ್ಲಬಾರದು ೧೦) ಊಟಕ್ಕೆ ಮುನ್ನ ಅಲ್ಲಾನನ್ನು ಮರೆಯದೆ ನೆನೆಯಬೇಕು[೪]

ಈ ಮೇಲಿನ ಪ್ರಾಚೀನ ಭಾರತದ ಮತ್ತು ಮುಸ್ಲಿಂ ಕಾನೂನುಗಳು ಧರ್ಮ ಅಥವಾ ನ್ಯಾಯಯುತ ಯುದ್ಧಗಳನ್ನು ಪ್ರತಿಪಾದಿಸುವಂಥವು. ಇವುಗಳಿಂದ ಯುದ್ಧಗಳು ಎರಡೂ ಕಡೆಯ ರಾಜರು ಮತ್ತು ಅವರ ಸೈನ್ಯಗಳ ನಡುವೆ ನಿಯಮನುಸಾರ ನಡೆಯಬೇಕೇ ಹೊರತು ಸಮಾಜದೊಂದಿಗೆ ಅಲ್ಲವೆಂಬುದು ಸ್ಪಷ್ಟವಾಗುತ್ತದೆ.

ಇದು ಪ್ರಾಚೀನ ಕಾಲದ ಯುದ್ಧನೀತಿಗಳಾದರೆ ವಿಜಯನಗರ ಕಾಲದಲ್ಲೂ ಅರಸರು ಕೆಲವು ಯುದ್ಧನಿಯಮಗಳನ್ನು ಅಳವಡಿಸಿಕೊಂಡಿದ್ದರು. ಆದರೆ ಈ ನೀತಿ-ನಿಯಮಗಳು ಆಯಾಯ ಅರಸರು ಅಥವಾ ಆಡಳಿತವರ್ಗವನ್ನು ಅವಲಂಬಿಸಿದ್ದವು. ವಿಜಯನಗರದ ಅರಸರು ಯುದ್ಧಸಮಯಗಳಲ್ಲಿ ಕರುಣೆ ತೋರಿದ, ಕ್ಷಮಿಸಿದ, ಭಯಗ್ರಸ್ತರನ್ನು ಕಾಪಾಡಿದ, ಶತ್ರುರಾಜ್ಯದ ಮಹಿಳೆಯನ್ನು ಗೌರವಿಸಿದ ಹಾಗೂ ಯುದ್ಧಕೊಳ್ಳೆಗಳನ್ನು ತಡೆದ ಉಲ್ಲೇಖಗಳಿವೆ. ಹಾಗೆಯೇ ಶತ್ರುಗಳನ್ನು ಹಿಂಸಿಸಿದ ಘಟನೆಗಳೂ ಇವೆ.

ರಾಮನಾಥಚರಿತದಲ್ಲಿ ಕುಮಾರರಾಮ ಮತ್ತು ಬೈಚಪ್ಪದಂಡನಾಯಕರು ಮುಸ್ಲಿಂ ಸೈನ್ಯವನ್ನು ಸದೆ ಬಡಿದಾಗ ಖಾನನು ರಾಮನಾಥನ ಮೊರೆ ಹೋದಾಗ ಕ್ಷಮಿಸಿದ ಬಗೆಯಿದು:

ಮರೆಗೆ ಬಂದವ ಮಡದಿಯರಂತಲ್ಲದೆ
ಮರೆಯೇನು ಬೇರೊಂದಿಲ್ಲ
ಮೊರೆಹೊಕ್ಕವರ ಕಾಯ್ವರೆಂದೆಂಬ ಬಿರಿದಿನ
ಹೊರೆಗೆಯ್ದೀಗ ಕರೆಯಿಸಿ
ಭೀತಗಭಯ ಕಯ್ಯಾಂತು ಬೇಡಿದ ವಂದಿ
ವ್ರಾತಕೆ ಕೊಡದೆ ದನವನು
ಭೂತಳಾಧಿಪನೆಂದೆನಿಸಿಕೊಂಬುದಿದು ಬಲು
ಬೂತಾಟವೆನೆ ರಾಮನಾಥ.[೫]

ಅರಸರು ಈ ಹಿನ್ನೆಲೆಯಲ್ಲಿಯೇ 'ಮೆರೆಹೊಕ್ಕವರ ಕಾವ' ಎಂಬ ಬಿರುದನ್ನು ಧರಿಸುತ್ತಿದ್ದುದು. ವಿಜಯನಗರದ ಅರಸರಲ್ಲಿ ಎರಡನೆಯ ದೇವರಾಯನು 'ಶರಣಾಗತರಾಯ ಸ್ಥಾಪನಾಚಾರ್ಯ''ನೆಂದೂ ಮೂರನೆಯ ವಿರುಪಾಕ್ಷನು 'ಕರುಣೈಕ ಸಿಂಧುಃ' ವಾಗಿಯೂ, ಕೃಷ್ಣದೇವರಾಯ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಮತ್ತು 'ಹಿಂದೂರಾಯ ಸುರತ್ರಾಣ'ನೆಂದೂ ಕರೆದುಕೊಂಡಿದ್ದಾರೆ.[೬] ಈ ಬಿರುದುಗಳ ಹಿಂದೆ ಮೇಲೆ ಹೇಳುವಂತಹ ಘಟನೆಗಳಿವೆ. ಇವೆಲ್ಲವೂ ತಿಳಿಸುವುದು ಮೊರೆ ಹೊಕ್ಕವರು, ಶರಣಾಗಿ ಬಂದವರನ್ನು ರಕ್ಷಿಸಬೇಕೆಂಬ ನೀತಿಯನ್ನು.

ಭಯಗ್ರಸ್ತರಾದವರನ್ನು ರಕ್ಷಿಸಿದ ಉಲ್ಲೇಖಗಳಿವೆ. ಎರಡನೆಯ ಹರಿಹರನು ಚೋಳ, ಕೇರಳ ಮತ್ತು ಪಾಂಡ್ಯರ ಮೇಲೆ ದಂಡೆತ್ತಿ ಹೋಗಿ ಅವರನ್ನು ಹತ್ತಿಕ್ಕಿದನೆಂದೂ,[೭] ಅಂತೆಯೇ ಇನ್ನೊಂದು ಶಾಸನದಲ್ಲಿ ಭಯಗ್ರಸ್ತರಾದ

ಸೌರಾಷ್ಟ್ರರು, ಅಂಗರು, ಕಳಿಂಗರು, ವಂಗರು ಮತ್ತು ಯವನರನ್ನು ಕಾಪಾಡಿದನೆಂದು ಹೇಳಿದೆ.[೮] ಇದರಿಂದ ಶತ್ರುಗಳಿಗೆ ಮಣ್ಣು ಮುಕ್ಕಿಸುವುದು ಒಂದೆಡೆಯಾದರೆ, ಇನ್ನೊಂದೆಡೆ ತಮ್ಮ ಆಶ್ರಯ ಬಯಸಿದವರಿಗೆ ರಕ್ಷಣೆ ನೀಡುವುದು ಯುದ್ಧನಿಯಮವಾಗಿತ್ತು.

ಶತ್ರು ರಾಜ್ಯದ ಮೇಲೆ ದಂಡೆತ್ತಿ ಹೋದಾಗ ಯುದ್ಧದಲ್ಲಿ ಸೆರೆ ಸಿಕ್ಕವರನ್ನು ಗೌರವದಿಂದ ಕಾಣುವ ಕ್ರಮವು ಕೃಷ್ಣದೇವರಾಯನಿಂದ ತಿಳಿದುಬರುತ್ತದೆ. ಅವನು ತನ್ನ ಆಮುಕ್ತಮಾಲ್ಯದ ಗ್ರಂಥದಲ್ಲಿ ಸೋತ ಶತ್ರುವಿನ ಅಂತಃಪುರ ಒಂದು ಪಕ್ಷ ನಿಮ್ಮ ವಶವಾದರೆ, ಆಗ ನೀವು ಆ ಹೆಂಗಸರು ತಾವು ತಮ್ಮ ತಂದೆ-ತಾಯಿಗಳ ರಕ್ಷಣೆಯಲ್ಲಿ ಇದ್ದೇವೆಂಬ ಭಾವನೆಯನ್ನು ಉಂಟು ಮಾಡಬೇಕು ಎಂದಿದ್ದಾನೆ.[೯] ಕೃಷ್ಣದೇವರಾಯ ತಾನು ಹೇಳಿದಂತೆ ಸ್ವತಃ ಅದನ್ನು ಕಾರ್ಯಗತಗೊಳಿಸಿದ್ದನು. ಅವನು ಕೈಗೊಂಡ ಉದಯಗಿರಿ ದಂಡಯಾತ್ರೆಯಲ್ಲಿ ಸೆರೆಸಿಕ್ಕ ಒರಿಸ್ಸಾದ ಗಜಪತಿಯ ಚಿಕ್ಕಮ್ಮಳನ್ನು ಗೌರವಯುತವಾಗಿ ನೋಡಿಕೊಂಡನೆಂದು ನ್ಯೂನಿಜ್ ಹೇಳುತ್ತಾನೆ. ಕೊಂಡವೀಡನ್ನು ವಶಪಡಿಸಿಕೊಂಡಾಗಲೂ ಅನೇಕ ಜನ ಉನ್ನತ ದರ್ಜೆಯ ಅಧಿಕಾರಿಗಳು ಮತ್ತು ರಾಜನ ಪತ್ನಿ-ಪುತ್ರರನ್ನು ಸೆರೆಹಿಡಿದು ವಿಜಯನಗರಕ್ಕೆ ಸಾಗಿಸಿ, ನಂತರ ಕರಾರಿನ ಮೇಲೆ ಅವರನ್ನು ಬಿಡುಗಡೆ ಮಾಡಿದನೆಂಬುದೂ ನ್ಯೂನಿಜ್‌ನಿಂದ ವ್ಯಕ್ತಗೊಳ್ಳುತ್ತದೆ.[೧೦] ಇದು ಯುದ್ಧದಲ್ಲಿ ಸೆರೆಸಿಕ್ಕವರನ್ನು ಕಾಣುತ್ತಿದ್ದ ಕ್ರಮವಾಗಿದೆ.

ಇವುಗಳಲ್ಲದೆ ಯುದ್ಧದ ಆರಂಭಕ್ಕೆ ಮುನ್ನ ಯುದ್ಧ ನಡೆಯುವ ಸ್ಥಳ ಮತ್ತು ಸಮಯವನ್ನು ಎರಡೂ ಪಡೆಗಳವರು ಪರಸ್ಪರ ನಿರ್ದಿಷ್ಟಗೊಳಿಸಿ ರಾಯಭಾರಿಗಳು ಅಥವಾ ದೂತರ ಮೂಲಕ ತಿಳಿದುಕೊಳ್ಳುವ, ಯುದ್ಧಘೋಷಣೆಯ ಸಮಯದಲ್ಲಿ ರಣಭೇರಿ ಮುಂತಾದ ವಾದ್ಯಗಳನ್ನು ಬಾರಿಸುವ ಕ್ರಮವಿತ್ತು. ನೂನಿಜ್ ರಾಯಚೂರು ಯುದ್ಧದ ಸಂದರ್ಭದಲ್ಲಿ ಎರಡೂ ಕಡೆಯವರು ರಣವಾದ್ಯಗಳನ್ನು ಬಾರಿಸಿದಾಗ ಆಕಾಶವೇ ಕಳಚಿ ಬಿದ್ದಂತೆ ಶಬ್ದವಾಗುತ್ತಿತ್ತೆಂದು ಹೇಳಿದ್ದಾನೆ.[೧೧] ಯುದ್ಧದ ಆರಂಭದಂತೆ, ನಿಲ್ಲಿಸುವಾಗಲೂ ವಾದ್ಯವನ್ನು ಬಳಸುತ್ತಿದ್ದರು. ಅದನ್ನು ಧರ್ಮಗಹಳೆಯೆಂದು ರಾಮನಾಥಚರಿತದಲ್ಲಿ ಕರೆಯಲಾಗಿದೆ. ಅದರಲ್ಲಿ,

ಮುರಿಯಲಿರಿದು ಪಾಳೆಯ ಪರಿಯಂತರ
ಒರಲಿಸಿ ಧರ್ಮಗಹಳೆಯ
ನೆರೆಗಲಿ ರಾಮ ತಿರುಗಿದನೊಯ್ಯನೆ ತ
ನ್ನುರುವ ಭಟರ ಮೋಹದೊಳು.[೧೨]

ಹುಳಿಹೇರು ಕಾಳಗದ ಸಂದರ್ಭದಲ್ಲೂ ಈ ವಾದ್ಯವನ್ನು ಬಳಸಿದುದ್ದನ್ನು,

ಓಡಿಯಿಸಿದನು ಧರ್ಮಗಹಳೆಯ ಭೇರಿಯ
ಪೊಡೆಯಿಸಿದನು ಗೋಳೆಯುವ
ನಡೆಯಿಸಿದನು ಪಿಂತೆ ತೆರಳಿದನೊಯ್ಯನೆ
ಸಡಗರದಿಂದಾ ಕುವರ[೧೩]

ಹೀಗೆ ಯುದ್ಧವನ್ನು ನಿಲ್ಲಿಸುವುದಕ್ಕೂ ಒಂದು ಕ್ರಮವನ್ನು ಅನುಸರಿಸಿದ್ದರು. ಶತ್ರುಗಳು ಶರಣಾಗಿದ್ದೇವೆಂದು ಹೇಳಲು ಕೆಲವು ಸಂಕೇತಗಳನ್ನು ಬಳಸಿದ್ದರು. ಅವುಗಳಲ್ಲಿ ಬಿಳಿ ಬಾವುಟವೂ ಒಂದು. ಕೃಷ್ಣದೇವರಾಯನು ಇಸ್ಮಾಯಿಲ್ ಆದಿಲ್‌ಖಾನ್‌ನನ್ನು ಸೋಲಿಸಿ ರಾಯಚೂರು ಕೋಟೆಯನ್ನು ಮುತ್ತಿ ವಿಜಯದ ಹಂತ ತಲುಪಿದಾಗ, ''ಯಾದುಲ್ ಖಾನನ್ನು ಸೋಲಿಸಿದ ಇಪ್ಪತ್ತು ದಿನಗಳ ನಂತರ, ನಗರದ ನಿವಾಸಿಗಳು ಕೋಟೆಯ ಹೆಬ್ಬಾಗಿಲನ್ನು ತೆರೆದು, ಬಿಳೀ ಬಾವುಟವನ್ನು ಕೈಯಲ್ಲಿ ಹಿಡಿದು, ಕೈಗಳನ್ನು ಮೇಲೆತ್ತಿ ರಾಜನ ಗುಡಾರದ ಕಡೆಗೆ ನಡೆದರು''[೧೪] ಎಂದು ನ್ಯೂನಿಜ್ ಹೇಳಿರುವನು. ಆಗ ರಾಯ ಅವರಿಗೆ ಅಭಯ ನೀಡಿದುದನ್ನು ಕಾಣಬಹುದು.

ಮಧ್ಯಯುಗೀನ ಅವಧಿಯಲ್ಲಿ ಯುದ್ಧಗಳು ನಡೆದ ಬಳಿಕ ಸೋತ ಸೇನೆಯ ಹಾಗೂ ರಾಜ್ಯದ ಆಸ್ತಿಪಾಸ್ತಿಗಳನ್ನು ಲೂಟಿಮಾಡುವುದು ಮತ್ತು ಹಿಂಸಾಕೃತ್ಯವೆಸಗುವುದು ಸರ್ವೇಸಾಮಾನ್ಯವಾಗಿದ್ದಿತು. ಪ್ರಾಚೀನ ಕಾಲದ ಯುದ್ಧನೀತಿಯಲ್ಲಿ ಹೇಳಲಾದ ಯುದ್ಧ ಸ್ಥಿತಿಯಲ್ಲಿಲ್ಲದ ವ್ಯಕ್ತಿಯನ್ನು ಕೊಲ್ಲಕೂಡದೆಂಬ ತತ್ವ ಬಹಳಷ್ಟು ಹಿಂದೆ ಸರಿದಿತ್ತು. ಇದನ್ನು ವಿಜಯನಗರ ಮತ್ತು ಬಹಮನಿ ಅರಸರೂ ಮುಂದುವರಿಸಿದರೆನ್ನಬಹುದು. ವಿಜಯನಗರದ ಒಂದನೆಯ ಬುಕ್ಕರಾಯನು ಕೈಗೊಂಡ ಯುದ್ಧದಲ್ಲಿ ಬಹಮನಿಯವರಿಂದ ಮುದಗಲ್ ಕೋಟೆಯು ವಶವಾಗಲು ಅಲ್ಲಿಯ ಸೈನ್ಯವು ಸಪರಿವಾರ ಸಮೇತ ಖಡ್ಗಕ್ಕೆ ಆಹುತಿಯಾಯಿತೆಂದು ಹೇಳಲಾಗಿದೆ. ಇದಕ್ಕುತ್ತರವಾಗಿ ಎರಡನೆಯ ಮಹಮ್ಮದನು ೧೩೬೭ರಲ್ಲಿ ಒಂದು ಲಕ್ಷ ವಿಜಯನಗರದ ಜನಸಾಮಾನ್ಯರನ್ನು ಕೊಲೆ ಮಾಡಿದನೆಂದೂ ಫೆರಿಸ್ತಾ ಹೇಳುತ್ತಾನೆ.[೧೫] ಈ ಎರಡು ಘಟನೆಗಳು ನಡೆದುದನ್ನು ಎರಡೂ ರಾಜ್ಯಗಳ ಮಂತ್ರಿಪರಿಷತ್ತುಗಳು ಪರಿಶೀಲಿಸಿ ನರಹತ್ಯೆಯನ್ನು ತಡೆಯಲು ಪ್ರಯತ್ನಿಸಿದವು. ರಾಯಭಾರಿಗಳು ಎರಡೂ ರಾಜ್ಯಗಳು ನೆರೆಹೊರೆಯವರಾದುದರಿಂದ ಪರಸ್ಪರ ಸಂಬಂಧಗಳನ್ನು ಕಹಿಗೊಳಿಸುವ ಅನಾವಶ್ಯಕ ಕ್ರೌರ್ಯಗಳನ್ನು ತಪ್ಪಿಸುವುದು ಒಳಿತೆಂದು ಮಹಮ್ಮದ ಶಹನಿಗೆ ಆಗ್ರಹಪಡಿಸಿದ್ದರು. ಇದರಿಂದ ''ಮಹಮ್ಮದ ಶಹ ಅವರ ವಿಚಾರಗಳಿಂದ ಪ್ರಭಾವಿತನಾದ, ಮತ್ತು ಇನ್ನು ಮುಂದೆ ವಿಜಯದ ನಂತರ ಒಬ್ಬ ಶತ್ರುವನ್ನೂ ಕೊಲ್ಲುವುದಿಲ್ಲವೆಂದೂ, ತನ್ನ ಉತ್ತರಾಧಿಕಾರಿಗಳನ್ನು ಅದೇ ಕರುಣೆ ಆಚರಿಸುವಂತೆ ಬದ್ಧರನ್ನಾಗಿಸುವುದಾಗಿಯೂ ಪ್ರತಿಜ್ಞೆಗೈದ''[೧೬] ಈ ನೀತಿಯನ್ನು ಬುಕ್ಕರಾಯನೂ ಅನುಸರಿಸಿದನು. ಇದನ್ನು ಮುಂದೆ ಕ್ರಿ.ಶ.೧೪೨೨ರವರೆಗೂ ಅನುಸರಿಸಿಕೊಂಡು ಬಂದುದನ್ನು ಕಾಣಬಹುದು. ಆದರೆ ೧೪೨೩ರಲ್ಲಿ ಮತ್ತೆ ಒಂದನೆಯ ದೇವರಾಯ ಮತ್ತು ಸುಲ್ತಾನ ಫಿರೋಜ್ ಶಹರ ಕಾಲದಲ್ಲಿ ನರಹತ್ಯೆ ಮುಂದುವರಿಯಿತು. ಮುಂದೆ ಎರಡನೆಯ ದೇವರಾಯನು ತನ್ನ ಸೇನೆಯ ಸೋಲಿಗೆ ಕಾರಣಗಳನ್ನು ಕೇಳಿ ಮುಸ್ಲಿಂ ಯೋಧರ ಚಾಣಾಕ್ಷತೆಯನ್ನು ತಿಳಿದು ಅವರಿಗೆ ರಾಜ್ಯ ಹಾಗೂ ಸೈನ್ಯದಲ್ಲಿ ಸ್ಥಾನಗಳನ್ನು ಮೀಸಲಿರಿಸಿದನು. ಅಲ್ಲದೆ ಅವರಿಗೆ ತಮ್ಮ ಧರ್ಮಾನುಸಾರವಾಗಿ ನಡೆದು ಕೊಳ್ಳುವಂತೆ ಮಾಡಿದನೆಂದು ಈಗಾಗಲೇ ಹೇಳಲಾಗಿದೆ. ಇದರಿಂದ ಧಾರ್ಮಿಕವಾದ ನರಹತ್ಯೆಗಳು ಎರಡನೆಯ ದೇವರಾಯನ ಕಾಲದಲ್ಲಿ ನಡೆಯಲಿಲ್ಲ. ಆದರೆ ಪ್ರಾದೇಶಿಕವಾದ ಯುದ್ಧಗಳು ಮುಂದುವರಿದ್ದವು. ರಾಮರಾಯನ

ಆಳ್ವಿಕೆಯಲ್ಲಿ ಇಂತಹ ಹಿಂಸಾತ್ಮಕ ಘಟನೆಗಳು ಮರುಕಳಿಸಿದವು. ೧೫೫೮ರಲ್ಲಿ ಕೈಗೊಂಡ ಕಲ್ಯಾಣಿ ಯುದ್ಧದಲ್ಲಿ ಶತ್ರು ಪಡೆಯನ್ನು ಸೋಲಿಸಿದ ಬಳಿಕ ವಿಜಯನಗರದ ಸೈನಿಕರು ಎಲ್ಲ ರೀತಿಯ ಕ್ರೌರ್ಯ ಬಳಸಿದರು. ಅವರು ಮುಸಲ್ಮಾನ ಮಹಿಳೆಯರ ಮಾನಭಂಗ ಮಾಡಿದರು. ಮಸೀದಿಗಳನ್ನು ನಾಶಮಾಡಿದರು ಮತ್ತು ಪವಿತ್ರ ಕುರಾನನ್ನು ಸಹ ಗೌರವದಿಂದ ಕಾಣಲಿಲ್ಲವೆಂದು ಫೆರಿಸ್ತಾ ಹೇಳುತ್ತಾನೆ.[೧೭]

ಈ ಬಗೆಯ ಹಿಂಸಾಕೃತ್ಯಗಳು ಕೃಷ್ಣದೇವರಾಯನ ಕಾಲದಲ್ಲೂ ನಡೆದಿದ್ದವು. ಈ ಬಗೆಗೆ ನ್ಯೂನಿಜ್, "ಅಸಂಖ್ಯಾತ ಜನರ ಹತ್ಯೆಯಾಯಿತು. ನಿರ್ದೋಷಿಗಳ ಹತ್ಯೆಯಾಗುತ್ತಿದ್ದುದನ್ನು ಕಂಡ ರಾಯನು ಕೇವಲ ಕರುಣೆಯಿಂದ ಈ ಹತ್ಯೆಯನ್ನು ನಿಲ್ಲಿಸಿರೆಂದು ಆಜ್ಞೆ ಮಾಡಿದನು. ಈ ಆಜ್ಞೆಯನ್ನು ಶಿರಸಾವಹಿಸಿ ದಳಪತಿಗಳು, ಸೈನಿಕರು ಹಿಂತಿರುಗಿದರು"[೧೮] ಇಲ್ಲಿ ಯುದ್ಧದ ಬಳಿಕ ಜನಸಾಮಾನ್ಯರ ಹತ್ಯೆ ಸಾಮಾನ್ಯವಾಗಿದ್ದ ವಿಚಾರ ತಿಳಿಯುವುದಲ್ಲದೆ, ಇಂತಹ ಹತ್ಯೆಯನ್ನು ಕಂಡ ರಾಯ ಕರುಣೆಯಿಂದ ನಿಲ್ಲಿಸಿದುದನ್ನು ಕಾಣಬಹುದು. ಇದು ಕೃಷ್ಣದೇವರಾಯನ ಔದಾರ್ಯತೆಯನ್ನು ವ್ಯಕ್ತಪಡಿಸುತ್ತದೆ. ಹೀಗೆ ಮಾನವೀಯ ಅಂತಃಕರಣದಿಂದ ಬಹಮನಿ ಮತ್ತು ವಿಜಯನಗರದ ಅರಸರು ಕೆಲವು ಯುದ್ಧನೀತಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಹಿಂಸಾಕೃತ್ಯಗಳನ್ನು ತಡೆದರು.

ಹಿಂಸಾಕೃತ್ಯದಂತೆ ಯುದ್ಧಕೊಳ್ಳೆಯೂ ಅಂದಿನ ಯುದ್ಧಾನಂತರದ ಘಟನೆಗಳಲ್ಲೊಂದು. ಇದು ಆರಂಭದಿಂದ ಕೊನೆಯ ಯುದ್ಧಗಳವರೆಗೂ ನಡೆದೇ ಇತ್ತು. ಯುದ್ಧದಲ್ಲಿ ಸೋತ ಅರಸನ ಯುದ್ಧಸಾಮಗ್ರಿಗಳು ಗೆದ್ದ ಅರಸನಿಗೆ ಸೇರುತ್ತಿದ್ದುದು. ಇದನ್ನು ಯುದ್ಧಕೊಳ್ಳೆಯೆಂದು ಕರೆಯಲಾಗಿತ್ತು; ಅಲ್ಲದೆ ಸೋತ ರಾಜ್ಯದ ಆಸ್ತಿಪಾಸ್ತಿಗಳನ್ನು ಲೂಟಿ ಮಾಡುವುದು ಅಂದು ಸಾಮಾನ್ಯವಾಗಿದ್ದಿತು.

ಕೃಷ್ಣದೇವರಾಯನಿಗೆ ರಾಯಚೂರು ದಂಡಯಾತ್ರೆಯ ಮೊದಲ ಯುದ್ಧ(ಗೊಬ್ಬೂರು ಯುದ್ಧ)ದಲ್ಲಿ ಆದಿಲ್ ಶಹನ ಸೈನ್ಯವನ್ನು ಸೋಲಿಸಿದ ಬಳಿಕ ಕೈಗೊಂಡ ಯುದ್ಧಕೊಳ್ಳೆಯಿಂದ ದೊರೆತ ಸಾಮಗ್ರಿಗಳು ಅಪಾರ. ನ್ಯೂನಿಜ್ ಪ್ರಕಾರ "ರಾಯನಿಗೆ ಓರ್ಮಸಿನ ನಾಲ್ಕು ಸಾವಿರ ಕುದುರೆಗಳು, ನೂರು ಆನೆಗಳು ನಾನೂರು ಭಾರಿ ಫಿರಂಗಿಗಳೂ, ಇವನ್ನು ಹೊರುವ ಒಂಬೈನೂರು ಗಾಡಿಗಳೂ, ಅನೇಕ ಗುಡಾರ, ಡೇರೆಗಳು ಸಿಕ್ಕಿದವು. ಇವುಗಳಲ್ಲದೆ ಸಿಕ್ಕಿದ ಸಣ್ಣ ಪುಟ್ಟ ಕುದುರೆಗಳು. ಎತ್ತು-ಕತ್ತೆಗಳು, ಹೆಣ್ಣು-ಗಂಡುಗಳು, ಮಕ್ಕಳು-ಮರಿಗಳು ಎಷ್ಟೋ."[೧೯] ಯಾವುದೇ ಒಂದು ಯುದ್ಧದಲ್ಲಿ ಸೋತ ಸೇನೆಯ ಯುದ್ಧ ಸಾಮಗ್ರಿಗಳು ವಿಜಯಿಯ ವಶವಾಗುವುದು ಅಂದಿನ ನ್ಯಾಯಯುತ ಕ್ರಮ ಆಗಿದ್ದಿತು. ಈ ಕೊಳ್ಳೆಯ ಸಮಯದಲ್ಲಿ ಸೆರೆಸಿಕ್ಕ ಹೆಂಗಸರು, ಮಕ್ಕಳನ್ನು ಬಿಟ್ಟುಬಿಡುವಂತೆ ರಾಯ ಆಜ್ಞಾಪಿಸಿದುದಾಗಿ ನ್ಯೂನಿಜ್ ಹೇಳುತ್ತಾನೆ. ಆದರೆ ಯುದ್ಧ ಸಾಮಗ್ರಿಗಳನ್ನು ಹಿಂತಿರುಗಿ ಕೊಡುವುದಿಲ್ಲ. ಇದೇ ವೇಳೆಯಲ್ಲಿ ನಡೆದ ರಾಯಚೂರು ಕೋಟೆಕಾಳಗದ ಬಳಿಕ ನಗರದೊಳಗೆ ಕಾಲಿಟ್ಟ ಸೇನೆ ನಗರದ ಆಸ್ತಿ-

ಪಾಸ್ತಿಗಳನ್ನು ಲೂಟಿಮಾಡಲು ಯತ್ನಿಸಿತು. ಆದರೆ ಈ ವಿಷಯ ರಾಯನ ಗಮನಕ್ಕೆ ಬಂದಾಗ ಅದನ್ನು ತಡೆದನು. ಅಲ್ಲದೆ ಕೊಳ್ಳೆ ಹೊಡೆದ ಸಾಮಾನುಗಳನ್ನು ಅವರವರಿಗೆ ಹಿಂದಿರುಗಿ ಕೊಡುವಂತೆ ಆಜ್ಞೆಮಾಡಿ, ಆ ಕೆಲಸ ಮಾಡಿದವರನ್ನು ಕರೆಸಿ ಛೀಮಾರಿ ಹಾಕಿದ ಸಂಗತಿ ನ್ಯೂನಿಜ್‌ನಿಂದ ತಿಳಿದುಬರುತ್ತದೆ[೨೦]. ಇದರಿಂದ ಯುದ್ಧಕೊಳ್ಳೆ ಮತ್ತು ಲೂಟಿ ಬೇರೆ ಬೇರೆಯಾಗಿವೆ. ಯುದ್ಧಕೊಳ್ಳೆಯು ನ್ಯಾಯಯುತವೂ, ನಗರ ಲೂಟಿಯು ಅನ್ಯಾಯ ಯುತವೂ ಆಗಿದ್ದುದನ್ನು ಕೃಷ್ಣದೇವರಾಯ ಅನುಸರಿಸಿದ ನೀತಿಯಿಂದ ವ್ಯಕ್ತವಾಗುತ್ತದೆ. ಯುದ್ಧಕೊಳ್ಳೆಯು ರಾಮರಾಯನ ಅವಧಿಯಲ್ಲೂ ಮುಂದುವರಿದಿತ್ತು.

ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವೆ ನಡೆದ ಅನೇಕ ಯುದ್ಧಗಳಲ್ಲಿ ಕೊಲೆ-ಸುಲಿಗ, ಲೂಟಿ-ಧಾಳಿ ಹಾಗೂ ಹಿಂಸಾಕೃತ್ಯಗಳು ಸಾಮಾನ್ಯವಾಗಿ ನಡೆಯುತ್ತಿದ್ದರೂ, ಕೆಲ ಅರಸರು ಒಪ್ಪಂದಗಳ ಮೂಲಕ ಅವುಗಳನ್ನು ತಡಗಟ್ಟುವಲ್ಲಿ ಪ್ರಯತ್ನಿಸಿದ್ದರು. ಕೃಷ್ಣದೇವರಾಯ ಹಿಂದಿನಿಂದ ಬಂದಂತಹ ಯುದ್ಧನೀತಿಗಳನ್ನು ತನ್ನ ಅವಧಿಯಲ್ಲಿ ಅನುಷ್ಠಾನಗೊಳಿಸುವಲ್ಲಿ ಪ್ರಯತ್ನ ನಡೆಸಿದ್ದುದಂತೂ ನೈಜನೀಯ.

ವಿಜಯನಗರ ಕಾಲಘಟ್ಟದಲ್ಲಿ ನಡೆದ ಹಲವಾರು ಯುದ್ಧಗಳು ಧರ್ಮಯುದ್ಧಗಳಾಗಿರದೆ ಕೂಟಯುದ್ಧ ಗಳಾಗಿದ್ದವು. ಇದರಿಂದ ಪ್ರಾಚೀನ ಯುದ್ಧನೀತಿಗಳು ಹೆಚ್ಚಾಗಿ ಬಳಕೆಗೊಳ್ಳಲಿಲ್ಲವೆಂದೇ ಹೇಳಬಹುದು. ಆದರೂ ಯುದ್ಧದ ಆರಂಭಿಕ ಸೂಚನೆ ತಿಳಿಸುವ, ಯುದ್ಧಭೂಮಿ ನಿಗದಿಪಡಿಸುವ ವಿಷಯಗಳನ್ನು ರಾಯಭಾರಿಗಳು ಅಥವಾ ದೂತರ ಮೂಲಕ ತಿಳಿಸುತ್ತಿದ್ದುದನ್ನು ಕಾಣಬಹುದು. ಹಾಗೆಯೇ ಶರಣಾದವರಿಗೆ ರಕ್ಷಣೆ ನೀಡುವ, ಹಿಂಸಾಕೃತ್ಯಗಳನ್ನು ತಡೆಯುವ, ಯುದ್ಧಕೊಳ್ಳೆ ಮತ್ತು ಲೂಟಿಗಳನ್ನು ತಡೆಯುವ ಪ್ರಯತ್ನಗಳು ನಡೆದಿರುವುದು ಸಮಾಧಾನಕರ ಅಂಶ.

೬.೨ ಯುದ್ಧ ಪರಿಣಾಮಗಳು

ಯುದ್ಧ ನೀತಿಗಳಂತೆಯೇ ಯುದ್ಧದ ಫಲಿತಾಂಶ ಮತ್ತು ಪರಿಣಾಮಗಳು ಮುಖ್ಯವಾಗಿವೆ. ಯುದ್ಧಗಳು ಘಟಿಸಿದ ಬಳಿಕ ಅವು ನೀಡುವ ಫಲಿತಾಂಶಗಳು ಚರಿತ್ರೆಯಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ಉಂಟುಮಾಡಿದ ಉದಾಹರಣೆಗಳಿವೆ. ಶಾಂತಿದೂತನೆಂದೇ ಪ್ರಸಿದ್ಧಿಯಾದ ಮೌರ್ಯ ಚಕ್ರವರ್ತಿ ಅಶೋಕ ತನ್ನ ಜೀವನದಲ್ಲಿ ನಡೆದ ಅತ್ಯಂತ ಧಾರುಣ ಘಟನೆ ಕಳಿಂಗ ಯುದ್ಧದ ಬಳಿಕ ಯುದ್ಧವನ್ನು ಸಂಪೂರ್ಣವಾಗಿ ತ್ಯಜಿಸಿ ಶಾಂತಿಯನ್ನು ಬಯಸಿದ. ಅಲ್ಲದೆ ಇತರರಿಗೂ ಶಾಂತಿಯಿಂದ ಬಾಳುವಂತೆ ಮಾರ್ಗದರ್ಶನ ಮಾಡಿದುದನ್ನು ಅವನ ಹಲವು ಶಾಸನಗಳಿಂದ ತಿಳಿಯುತ್ತೇವೆ. ಕ್ರಿ.ಶ.೧೫೨೬ರಲ್ಲಿ ಬಾಬರನು ಕೈಗೊಂಡ ಹೇಮುವಿನ ವಿರುದ್ಧದ ಯುದ್ಧ ವಿಜಯವು ಭಾರತದಲ್ಲಿ ಮುಸ್ಲಿಂ ಪ್ರಭುತ್ವವು ಪರಿಣಾಮಕಾರಿಯಾಗಿ ಬೆಳೆಯುವಲ್ಲಿ ಕಾರಣವಾಯಿತು. ಈ ಹಿಂದೆ ಬಾಬರ್ ಎಷ್ಟೋ ಬಾರಿ ಭಾರತದ ವಾಯುವ್ಯ ಪ್ರಾಂತ್ಯದಲ್ಲಿ ಯುದ್ಧಗಳನ್ನು ಕೈಗೊಂಡಿದ್ದರೂ ಅವುಗಳಲ್ಲಿ

ಸಫಲನಾಗಿರಲಿಲ್ಲ. ಚರಿತ್ರೆಯಲ್ಲಿ ಇಂತಹ ಅನೇಕ ಯುದ್ಧಗಳು ಯುದ್ಧಾನಂತರ ಮಹತ್ವದ ಪರಿಣಾಮ ಬೀರಿರುವುದನ್ನು ಕಾಣಬಹುದು. ವಿಜಯನಗರದಲ್ಲೂ ಕೆಲವು ಯುದ್ಧಗಳು ಸಾಮ್ರಾಜ್ಯದ ಬೆಳವಣಿಗೆಗೂ ಹಾಗೂ ಅದನ್ನು ಅವನತಿಯುತ್ತ ಕೊಂಡೊಯ್ಯುವಲ್ಲಿಯೂ ಕಾರಣವಾಗಿವೆ. ಅಂತಹ ಯುದ್ಧಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಫೆರಿಸ್ತಾ ಹೇಳುವ ಮಾಹಿತಿಯಂತೆ, ಅರಸರು ರಾಜ್ಯದ ಸುಂದರ ಯುವತಿಯರನ್ನು ತನ್ನ ಆಸ್ಥಾನಕ್ಕೆ ಕರೆಸಿಕೊಂಡು ತನ್ನ ರಾಣಿಯರಾಗಿ ಮಾಡಿಕೊಳ್ಳುತ್ತಿದ್ದರು. ಅದರನ್ವಯ ಒಂದನೆಯ ದೇವರಾಯನು ಮುದಗಲ್ಲು ರೈತನೊರ್ವನ ಮಗಳ ಸೌಂದರ್ಯಕ್ಕೆ ಮಾರು ಹೋಗಿ ಅವಳನ್ನು ಪಡೆಯಲು ಪ್ರಯತ್ನಿಸಿದಾಗ ಕೊನೆಗೆ ಬಹಮನಿ ಮತ್ತು ವಿಜಯನಗರಕ್ಕೆ ಮುದಗಲ್ಲಿನ ಬಳಿ ಯುದ್ಧವಾಯಿತು. ಈ ಯುದ್ಧದಲ್ಲಿ ಸೋತ ಒಂದನೆಯ ದೇವರಾಯ ಶಾಂತಿಗಾಗಿ ಯಾಚಿಸಿದನು. ಆಗ ಕೆಲವು ಅಪಮಾನಕರ ಕರಾರುಗಳಿಗೆ ಅವನು ಒಪ್ಪಬೇಕಾಯಿತು. ಅದರಂತೆ ದೇವರಾಯ ತನ್ನ ಮಗಳನ್ನು ಸುಲ್ತಾನನಿಗೆ ಕೊಟ್ಟು ಮದುವೆ ಮಾಡಲು, ಅಪಾರ ಸಂಪತ್ತನ್ನು ಪರಿಹಾರವಾಗಿ ನೀಡಲು ಮತ್ತು ಬಂಕಾಪುರ ಕೋಟೆಯನ್ನು ಶಾಶ್ವತವಾಗಿ ಬಿಟ್ಟುಕೊಡಲು ಒಪ್ಪಿಕೊಂಡನು. ಫೆರಿಸ್ತಾ ಈ ಘಟನೆಯ ಬಗೆಗೆ, ''ಕರ್ನಾಟಕದ ರಾಯರು ತಮ್ಮ ಜಾತಿಯ ವ್ಯಕ್ತಿಗಳನ್ನು ಬಿಟ್ಟು ಬೇರೆಯವರಿಗೆ ಮದುವೆ ಮಾಡಿಕೊಟ್ಟಿರದಿದ್ದರೂ ದೇವರಾಯ ಅನಿವಾರ್ಯವಾಗಿ ಈಡೇರಿಸಬೇಕಾಯಿತು'' ಎಂದಿದ್ದಾನೆ.[೨೧] ಈ ವೈವಾಹಿಕ ಸಂಬಂಧವು ಎರಡೂ ರಾಜ್ಯಗಳಲ್ಲಿ ತಾತ್ಕಾಲಿಕ ಶಾಂತಿ ಸ್ಥಾಪಿಸಿದ್ದರೂ ಅದು ವಿಜಯನಗರ ಅರಸರಲ್ಲಿ ದ್ವೇಷ ಹೆಚ್ಚಾಗಲು ಕಾರಣವಾಯಿತು.

ಒರಿಸ್ಸಾ ಗಜಪತಿಯೊಂದಿಗೆ ನಡೆದ ಕದನದ ಪರಿಣಾವ ಬೇರೊಂದು ರೀತಿಯದು. ಆರಂಭದಿಂದಲೂ ವಿಜಯನಗರಕ್ಕೆ ಕಿರುಕುಳ ಕೊಡುತ್ತಿದ್ದ ರಾಜ್ಯಗಳಲ್ಲಿ ಒರಿಸ್ಸಾವೂ ಒಂದು. ಇದು ವಿಜಯನಗರದ ಪ್ರಾಂತ್ಯಗಳ ಮೇಲೆ ಆಗಾಗ್ಗೆ ಯುದ್ಧ ಕೈಗೊಳ್ಳುತ್ತಿತ್ತು. ಒರಿಸ್ಸಾದ ಗಜಪತಿಯು ಕೈಗೊಳ್ಳುವ ಯುದ್ಧಗಳನ್ನು ಎರಡನೆಯ ದೇವರಾಯ ಮತ್ತು ಸಾಳ್ವ ನರಸಿಂಹರು ಎದುರಿಸುತ್ತಲೇ ಬಂದರು. ಇದು ಕೃಷ್ಣದೇವರಾಯನ ಕಾಲದಲ್ಲೂ ಮುಂದುವರಿದಿತ್ತು. ಆದರೆ ಕೃಷ್ಣದೇವರಾಯನು ಬಲಿಷ್ಠ ಸೇನೆಯಿಂದ ಗಜಪತಿಗೆ ತಕ್ಕಪಾಠ ಕಲಿಸಿ ಅವನ ಎಲ್ಲ ಕೋಟೆಗಳನ್ನು ಸೋಲಿಸಿ ತನ್ನ ವಶಪಡಿಸಿಕೊಂಡನು. ಈ ಕೋಟೆಗಳಲ್ಲಿದ್ದ ಗಜಪತಿಯ ಪತ್ನಿ-ಪುತ್ರ-ಮಂತ್ರಿಗಳಾದಿಯಾಗಿ ಎಲ್ಲರನ್ನು ಸೆರೆ ಹಿಡಿದನು. ಸೆರೆಹಿಡಿದವರನ್ನು ರಾಜಧಾನಿಗೆ ಕರೆತಂದು ಗಜಪತಿಗೆ ಸಾಳುವ ತಿಮ್ಮರಸನ ಮೂಲಕ ಷರತ್ತು ಹಾಕಿಸಿದ. ಅದೆಂದರೆ ಗಜಪತಿಯು ತನ್ನ ಮಗಳನ್ನು ಕೃಷ್ಣದೇವರಾಯನಿಗೆ ವಿವಾಹ ಮಾಡಿಕೊಡಬೇಕೆಂಬುದು. ಗಜಪತಿಯು ಈ ಷರತ್ತಿಗೆ ಒಪ್ಪಿ ತನ್ನ ಮಗಳನ್ನು ರಾಯನಿಗೆ ಧಾರೆಯೆರೆದು ಕೊಟ್ಟು ತನ್ನ ಹೆಂಡತಿ ಹಾಗೂ ಮಂತ್ರಿಗಳು ಮತ್ತು ರಾಜ್ಯವನ್ನು ಉಳಿಸಿಕೊಂಡನು. ಇದರಿಂದ ತೃಪ್ತಿಗೊಂಡ

ಕೃಷ್ಣದೇವರಾಯ ತನ್ನ ಮಾವನಿಗೆ ಅವನ ರಾಜ್ಯವನ್ನಲ್ಲದೆ ಕೃಷ್ಣಾನದಿಯ ಉತ್ತರದ ಪ್ರದೇಶವನ್ನು ನೀಡಿ ಅದರ ಆಡಳಿತ ನೋಡಿಕೊಳ್ಳುವಂತೆ ಸಲಹೆ ಮಾಡಿದನು. ಕಳಿಂಗ ದಂಡೆಯಾತ್ರೆಯು ವೈವಾಹಿಕ ಸಂಬಂಧದಿಂದ ಮುಕ್ತಾಯಗೊಂಡಿತು. ಅಲ್ಲದೆ ಈ ವೈವಾಹಿಕ ಸಂಬಂಧವು ವಿಜಯನಗರ ಅವನತಿಯಾಗುವವರೆಗೆ ಎರಡೂ ರಾಜ್ಯಗಳ ಮಧ್ಯೆ ಶಾಂತಿ-ಸೌಹಾರ್ದತೆಗಳನ್ನು ಬೆಳೆಸಿತು.

ಕಳಿಂಗ ದಂಡೆಯಾತ್ರೆಯು ವಿಜಯನಗರ-ಒರಿಸ್ಸಾಗಳಲ್ಲಿ ಶಾಂತಿ ಮೂಡಿಸಿ ಸಾಮ್ರಾಜ್ಯ ಬೆಳವಣಿಗೆಗೆ ಸಹಾಯಕಾರಿಯಾದರೆ ರಾಯಚೂರು ದಂಡೆಯಾತ್ರೆಯು ಇದಕ್ಕೆ ತದ್ವಿರುದ್ಧವಾದುದಾಗಿತ್ತು. ರಾಯಚೂರು ದಂಡೆಯಾತ್ರೆಯಲ್ಲಿ ಜಯ ವಿಜಯನಗರದ್ದೇ ಆದರೂ, ಅದು ಭವಿಷ್ಯದಲ್ಲಿ ವಿನಾಶಕಾರಿ ಪರಿಣಾಮ ಬೀರಿತೆನ್ನಬಹುದು. ಕೃಷ್ಣದೇವರಾಯ ತನ್ನ ಅವಧಿಯಲ್ಲಿ ಅನುಸರಿಸಿದ ಸಾಮ್ರಾಜ್ಯ ವಿಸ್ತರಣಾ ನೀತಿಯು ಇಡೀ ದಖನ್ನನ್ನೇ ಆಕ್ರಮಿಸುವಂತಿತ್ತು. ಕೃಷ್ಣದೇವರಾಯನು ಕೈಗೊಳ್ಳುವ ಯುದ್ಧಗಳಲ್ಲಿ ಜಯವು ಕಟ್ಟಿಟ್ಟ ಬುತ್ತಿಯಾಗಿದ್ದಿತು. ಅದರಂತೆ ೧೫೨೦ರಲ್ಲಿ ಗೊಬ್ಬೂರು ಯುದ್ಧ ಮತ್ತು ರಾಯಚೂರು ಕೋಟೆ ಕಾಳಗಗಳಲ್ಲಿ ಬಿಜಾಪುರದ ಇಸ್ಮಾಯಿಲ್ ಆದಿಲ್‌ಖಾನನ್ನು ಸಂಪೂರ್ಣವಾಗಿ ಹತ್ತಿಕ್ಕಲಾಯಿತು. ಈ ಯುದ್ಧಗಳು ಇತರ ಷಾಹಿ ಸುಲ್ತಾನರಲ್ಲೂ ಘಾಸಿಯನ್ನು ಉಂಟು ಮಾಡಿದ್ದವು. ಬೀದರ್, ಬಿರಾರ್, ಗೋಲ್ಕೊಂಡ ಮತ್ತು ಅಹಮ್ಮದ ನಗರಗಳ ಸುಲ್ತಾನರೆಲ್ಲ ಸೇರಿ ತಮ್ಮ ಕಡೆಯಿಂದ ದೂತರ ಮೂಲಕ ಪತ್ರವೊಂದನ್ನು ವಿಜಯನಗರಕ್ಕೆ ಕಳುಹಿಸಿದರು. ಅದರಲ್ಲಿ ''ರಾಜನು ಯಾದುಲ್‌ಖಾನನನ್ನು ಸೋಲಿಸಿದುದೇ ಸಾಕೆಂತಲೂ, ಮುಂದುವರಿಯಬಾರದೆಂತಲೂ, ಯಾದುಲ್ ಖಾನನಿಂದ ಪಡೆದುದನ್ನು ಅವನಿಗೆ ಹಿಂದಿರುಗಿ ಕೊಡಬೇಕೆಂತಲೂ, ಹಾಗೆ ಮಾಡಿದರೆ ತಾವೆಲ್ಲ ರಾಜನು ಹೇಳಿದಂತೆ ಕೇಳುವರೆಂತಲೂ, ಹಾಗೆ ಮಾಡದೆ ಹೋದರೆ ಅನಿವಾರ್ಯವಾಗಿ ತಾವು ಯಾದುಲ್ ಖಾನನನ್ನು ಸೇರಿಕೊಂಡು ಯುದ್ಧ ಮಾಡಿ ಅವನದನ್ನೆಲ್ಲ ಹಿಂದಿರುಗಿ ಪಡೆಯಬೇಕಾಗುತ್ತದೆ''[೨೨] ಎಂದಿತ್ತು. ಇದರಿಂದ ರಾಯಚೂರು ಯುದ್ಧದಲ್ಲಿ ಬಿಜಾಪುರದ ಸುಲ್ತಾನನಿಗೆ ಆದ ಸೋಲು ಇತರ ಷಾಹಿ ಸುಲ್ತಾನರಲ್ಲಿ ಎಷ್ಟೊಂದು ಪರಿಣಾಮ ಬೀರಿದ್ದಿತೆಂಬುದು ವ್ಯಕ್ತವಾಗುತ್ತದೆ. ಫೆರಿಸ್ತಾನು ಇಸ್ಮಾಯಿಲ್ ಆದಿಲ್‌ಖಾನನ ರಾಯಚೂರು ಯುದ್ಧದ ಸೋಲು ಇತರರ ಷಾಹಿ ಸುಲ್ತಾನರೊಂದಿಗಿನ ವೈವಾಹಿಕ ಸಂಬಂಧಗಳನ್ನು ಬೆಳೆಸಲು ಕಾರಣವಾಯಿತೆಂದು ಹೇಳಿದ್ದಾನೆ.[೨೩] ಈ ಯುದ್ಧದ ಪರಿಣಾಮವಾಗಿ ಷಾಹಿ ಸುಲ್ತಾನರು ಕೃಷ್ಣದೇವರಾಯನ ಕಾಲದಲ್ಲಿ ಹೋರಾಡಲು ಸಾಧ್ಯವಾಗದೇ ಹೋದರೂ ರಾಮರಾಯನ ಅವಧಿಯಲ್ಲಿ ವಿಜಯನಗರವನ್ನು ವಶಪಡಿಸಿಕೊಳ್ಳುವಲ್ಲಿ ಸಫಲರಾದರು. ರಾಯಚೂರು ಯುದ್ಧವು ಸುಲ್ತಾನರಲ್ಲಿ ವಿಜಯ ನಗರದ ವಿರುದ್ಧ ಮತ್ಸರ-ದ್ವೇಷಗಳು ಹೆಚ್ಚಾಗಲು ಕಾರಣವಾಯಿತು.

ಸದಾಶಿವರಾಯನ ರಾಜಪ್ರತಿನಿಧಿಯಾಗಿ ಸ್ವತಂತ್ರ ಆಳ್ವಿಕೆ ನಡೆಸಿದ ರಾಮರಾಯನು ಷಾಹಿ ಸುಲ್ತಾನರಲ್ಲಿ ಅನುಸರಿಸಿದ ನೀತಿಯು ಗಮನಿಸುವಂಥದು. ರಾಮರಾಯ ಸುಲ್ತಾನರ ರಾಜಕೀಯ ಒಳಜಗಳಗಳಲ್ಲಿ

ಕೈಹಾಕಿದ್ದುದು; ಒಬ್ಬ ಸುಲ್ತಾನನನ್ನು ಬೆಂಬಲಿಸಿ, ಇನ್ನೊಬ್ಬನನ್ನು ಹತ್ತಿಕ್ಕುವ ತಂತ್ರವಾದ ಒಂಡೆದು ಆಳುವ ನೀತಿಯನ್ನು ಬಳಸಿ ಸೈನ್ಯದ ಕುಮ್ಮಕ್ಕು ನೀಡಿದುದನ್ನು ಕಾಣುತ್ತೇವೆ.

ರಾಮರಾಯನು ಸುಲ್ತಾನರ ಯುದ್ಧಗಳಲ್ಲಿ ತನ್ನ ಸೈನ್ಯದ ಬೆಂಬಲ ನೀಡಿದ ವಿವರ ಹೀಗಿದೆ: ಕ್ರಿ.ಶ.೧೫೪೮ರಲ್ಲಿ ನಡೆದ ಕಲ್ಯಾಣ ಯುದ್ಧದಲ್ಲಿ ವಿಜಯನಗರವು ಅಹಮ್ಮದನಗರಕ್ಕೆ ಸೈನ್ಯದ ನೆರವು ನೀಡಿ ವಿಜಾಪುರ ಮತ್ತು ಬೀದರ್‌ಗಳನ್ನು ಎದುರಿಸಿದರೆ, ಗುಲ್ಬರ್ಗಾ ಯುದ್ಧದಲ್ಲಿ ವಿಜಾಪುರದೊಂದಿಗೆ ಕೈಜೋಡಿಸಿ ಅಹಮ್ಮದನಗರ ಮತ್ತು ಗೋಲ್ಕೊಂಡವನ್ನು ಎದುರು ಹಾಕಿಕೊಂಡಿತು. ೧೫೫೭-೫೮ರಲ್ಲಿ ನಡೆದ ಅಹಮ್ಮದನಗರ ಯುದ್ಧದಲ್ಲಿ ಅಹಮ್ಮದನಗರ ಸುಲ್ತಾನನನ್ನು ವಿಜಾಪುರ ಮತ್ತು ಗೋಲ್ಕೊಂಡಗಳೊಂದಿಗೆ ವಿಜಯನಗರವು ಎದುರಿಸಿ ಜಯ ಸಾಧಿಸಿತು. ೧೫೫೮ರಲ್ಲಿ ನಡೆದ ಎರಡನೆಯ ಕಲ್ಯಾಣ ಯುದ್ಧದಲ್ಲಿ ವಿಜಾಪುರ ಸುಲ್ತಾನನಿಗೆ ಸೈನ್ಯ ಸಹಾಯ ನೀಡಿ ಗೋಲ್ಕೊಂಡ ಮತ್ತು ಅಹಮ್ಮದನಗರಗಳನ್ನೂ, ೧೫೬೨ರಲ್ಲಿ ನಡೆದ ಎರಡನೆಯ ಅಹಮ್ಮದನಗರ ಯುದ್ಧದಲ್ಲಿ ಗೋಲ್ಕೊಂಡಕ್ಕೆ ಬೆಂಬಲ ನೀಡಿ ಅಹಮ್ಮದನಗರ ಮತ್ತು ವಿಜಾಪುರ ಸುಲ್ತಾನರನ್ನು ಹತ್ತಿಕ್ಕುವಂತೆ ರಾಮರಾಯ ಕಾರ್ಯತಂತ್ರ ರೂಪಿಸಿದ್ದನು. ಹೀಗೆ ಅವನು ಯಾವುದೇ ರಾಜ್ಯಕ್ಕೆ ಶಾಶ್ವತವಾದ ಸೈನಿಕ ಸಹಾಯ ನೀಡದೆ ಎಲ್ಲರಲ್ಲೂ ವಿಜಯನಗರದ ವಿರುದ್ಧ ಮತ್ಸರ-ದ್ವೇಷಗಳು ಬೆಳೆಯುವಂತೆ ಮಾಡಿದ್ದನು. ಈ ಬಗೆಯ ರಾಮರಾಯನ ನೀತಿಯು ಷಾಹಿ ಸುಲ್ತಾನರನ್ನು ಒಂದುಗೂಡಿಸುವಲ್ಲಿ ಪ್ರೇರೇಪಿಸಿತು. ರಾಮರಾಯನ ನೀತಿ ಮತ್ತು ಈ ಹಿಂದಿನ ಯುದ್ಧಗಳ ಪರಿಣಾಮವೇ ೧೫೬೫ರ ರಕ್ಕಸಗಿ-ತಂಗಡಗಿ ನಿರ್ಣಯಕ ಯುದ್ಧ.

ರಕ್ಕಸಗಿ-ತಂಗಡಗಿ ಯುದ್ಧವು ಭಾರತದ ಚರಿತ್ರೆಯಲ್ಲಿ ನಿರ್ಣಾಯಕ ಯುದ್ಧವೆಂದು ಕರೆಸಿಕೊಂಡಿದೆ. ಈ ಯುದ್ಧದ ಪರಿಣಾಮದಿಂದ ದಕ್ಷಿಣ ಭಾರತದ ಮಹಾ ಸಾಮ್ರಾಜ್ಯವೊಂದರ ಕಣ್ಮರೆಯಾಯಿತು. ೨೩೦ ವರ್ಷಗಳ ಸುದೀರ್ಘಕಾಲದ ಆಳ್ವಿಕೆಯನ್ನು ಕೊನೆಗಾಣಿಸಿದ ಘೋರ ಹಾಗು ಭಯಾನಕ ಯುದ್ಧವಿದು. ಇದರಿಂದ ವಿಜಯನಗರ ರಾಜಧಾನಿಯು ಸಂಪೂರ್ಣ ನಾಶವಾಯಿತು. ಯುದ್ಧದ ದಿನ ಜನವಸತಿ-ಸಂಪತ್ತು-ಸಮದ್ಧಿಗಳಿಂದ ತುಂಬಿ ತುಳುಕುತ್ತಿದ್ದ ಒಂದು ಸುಂದರ ನಗರ ಯುದ್ಧ ನಡೆದ ಕೆಲವೇ ದಿನಗಳಲ್ಲಿ ನಿರ್ಜನ ಪ್ರದೇಶವಾಗಿ ಮಾರ್ಪಟ್ಟಿತು. ಅದು ಮುಂದೆಂದೂ ತನ್ನ ಭೂತಕಾಲಕ್ಕೆ ಮರಳಲು ಸಾಧ್ಯವಾಗದಂತಹ ಸ್ಥಿತಿಯನ್ನು ತಲುಪಿದ್ದಿತು. ಈ ಹಿನ್ನೆಲೆಯಲ್ಲಿಯೇ ರಕ್ಕಸಗಿ-ತಂಗಡಗಿ ಯುದ್ಧವನ್ನು ನಿರ್ಣಾಯಕ ಯುದ್ಧವೆಂದಿರುವುದು. ಈ ಯುದ್ಧದಿಂದ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿದ್ದ ಪೋರ್ಚುಗೀಸರಿಗೂ ಆಘಾತವಾಯಿತು. ತಮ್ಮ ವಾಣಿಜ್ಯ ವ್ಯವಹಾರದ ಕೇಂದ್ರವಾಗಿದ್ದ ವಿಜಯನಗರದ ಪತನದೊಂದಿಗೆ ಅದರ ಬೆನ್ನಲುಬೂ ಮುರಿದಿದ್ದುದನ್ನು ಸೀಜರ್ ಫ್ರೆಡರಿಕ್ ತನ್ನ ವರದಿಯಲ್ಲಿ ದಾಖಲಿಸಿದ್ದಾನೆ.

ಹೀಗೆ ವಿಜಯನಗರದ ಚರಿತ್ರೆಯಲ್ಲಿ ಯುದ್ಧಗಳು ನೀಡಿದ ಫಲಿತಾಂಶಗಳು ಸಾಮ್ರಾಜ್ಯಕ್ಕೆ ಸಹಕಾರಿಯಾದ ಮತ್ತು ವಿನಾಶಕಾರಿಯಾದ ಪರಿಣಾಮಗಳನ್ನು ಉಂಟುಮಾಡಿದ್ದುದು ಆಯಾಯ ಕಾಲಘಟ್ಟದಲ್ಲಾದ ಯುದ್ಧಗಳಿಂದ ತಿಳಿದುಬರುತ್ತದೆ.

ಟಿಪ್ಪಣಿಗಳು

೧. ಪ್ರ.ಕಂ.ಇಂ., ಸಂ-೧, ಪು. ೩೫; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೨೯೪

೨. The art of war in Ancient India, P.273

೩. ಅದೇ, ಪು.೨೭೪; ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ, ಪು.೧೬೨-೩; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೭೦; ಕರ್ನಾಟಕದ ವೀರಗಲ್ಲುಗಳು, ಪು.೧೬೬; ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪು.೭೨

೪. The Art of war in Ancient India, P.280

೫. ರಾಮನಾಥ ಚರಿತ. ೧೮-೧೬೭,೧೬೮

೬. ಪ್ರಸ್ತುತ ಐನೆಯ ಅಧ್ಯಾಯದ 'ಬಿರುದಾವಳಿಗಳು' ನೋಡಿ

೭. E.C., Vol-V, Bl.175

೮. ಅದೇ, Bl.148

೯. ಶೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು.೫೫

೧೦. ಮ.ಹೋ.ಮ.ವಿ., ನ್ಯೂನಿಜ್, ಪು. ೩೩೮-೯

೧೧. ಅದೇ, ನ್ಯೂನಿಜ್, ಪು.೩೫೮

೧೨. ರಾಮನಾಥಚರಿತ, ೧೫-೧೨೧

೧೩. ಅದೇ, ೧೦-೬೩

೧೪. ಪ್ರ.ಕಂ.ಇಂ., ಸಂ-೨, ಪು.೪೦೨

೧೫. ಮ.ಹೋ.ಮ.ವಿ., ಪು.೩೪-೩೮

೧೬. ಅದೇ, ಪು.೩೯

೧೭. ಅದೇ, ಪು.೨೦೮

೧೮. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೪೦೧

೧೯. ಅದೇ

೨೦. ಅದೇ, ಪು.೪೦೩

೨೧. ಮ.ಹೋ.ಮ.ವಿ., ಪು.೬೪

೨೨. ಪ್ರ.ಕಂ.ಇಂ., ಸಂ-೨, ನ್ಯೂನಿಜ್, ಪು.೪೦೪

೨೩. ಮ.ಹೋ.ಮ.ವಿ., ಪು.

ಅಧ್ಯಾಯ ೭

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ವಿಜಯನಗರ ಕಾಲದ ಸೈನ್ಯ, ಅದರ ಆಡಳಿತ, ಯುದ್ಧ, ಅದರ ಬಗೆಗಳು, ಯುದ್ಧ ಕಾಲದಲ್ಲಿ ಕೈಗೊಳ್ಳುತ್ತಿದ್ದ ಸೈನಿಕ ಸಿದ್ಧತೆ, ಆಚರಣೆ-ಸಂಪ್ರದಾಯಗಳು, ಸೇನಾಶಿಬಿರ, ವ್ಯೂಹರಚನೆ, ಹೋರಾಟದ ಬಗೆ, ಯುದ್ಧದ ಬಳಿಕ ಶತ್ರುಗಳನ್ನು ಮತ್ತು ಸೈನಿಕರನ್ನು ಕಾಣುತ್ತಿದ್ದ ರೀತಿ-ಇವೇ ಮುಂತಾದವು ಗಳನ್ನು ಅಭ್ಯಸಿಸುವುದು ಮುಖ್ಯವಾಗಿದ್ದರೂ, ಅಂದಿನ 'ಯುದ್ಧ' ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿದ್ದ ಯುದ್ಧನೀತಿ ಮತ್ತು ಪರಿಣಾಮಗಳನ್ನು ಅರಿಯುವುದೂ ಅಧ್ಯಯನದ ಉದ್ದೇಶವಾಗಿದೆ.

ಕ್ರಿಸ್ತಶಕ ೧೪ನೆಯ ಶತಮಾನದ ಮಹಮ್ಮದೀಯರ ಧಾಳಿ ಮತ್ತು ದಕ್ಷಿಣ ಭಾರತದಲ್ಲಿ ಉಂಟಾಗಿದ್ದ ಅರಾಜಕತೆಯ ನೆಲಗಟ್ಟಿನ ಮೇಲೆ ಸ್ಥಾಪನೆಯಾದ ವಿಜಯನಗರವು ಆಳ್ವಿಕೆಯ ಅವಧಿಯುದ್ದಕ್ಕೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಶಕ್ತಿಮೀರಿ ಪ್ರಯತ್ನಿಸಿದ್ದಿತು. ೨೩೦ ವರ್ಷಗಳ ಸುದೀರ್ಘ ಆಳ್ವಿಕೆಯನ್ನು ಅದು ನೆರೆ-ಹೊರೆಯ ರಾಜ್ಯಗಳೊಂದಿಗೆ ಯುದ್ಧ, ಧಾಳಿ, ಆಕ್ರಮಣ ಮತ್ತು ಸಂಘರ್ಷಗಳಲ್ಲಿ ಕಳೆದುದು ಅಂದು ಕೈಗೊಂಡ ಯುದ್ಧಗಳ ಸರಮಾಲೆಯಿಂದ ವ್ಯಕ್ತಗೊಳ್ಳುತ್ತದೆ.

ಸೈನ್ಯವ್ಯವಸ್ಥೆಯು ನಿಯಮ, ಕಟ್ಟಳೆ, ಶಿಸ್ತು, ತರಬೇತುಗಳಿಂದ ಸಜ್ಜುಗೊಂಡ ವ್ಯವಸ್ಥಿತ ಆಡಳಿತ ಘಟಕ. ಸೈನ್ಯವು ರಾಜ್ಯವ್ಯವಸ್ಥೆಯ ಸಪ್ತಾಂಗಗಳಲ್ಲಿ ಸ್ಥಾನ ಪಡೆಯಲು ಅದರ ಮಹತ್ವ ಮತ್ತು ಅನಿವಾರ್ಯತೆಗಳು ಕಾರಣವೆಂಬುದಂತೂ ಸ್ಪಷ್ಟ. ಇದು ವಿಜಯನಗರ ಅವಧಿಯಲ್ಲಿ 'ಕಂದಾಚಾರ' ವಿಭಾಗವಾಗಿ ಕಾರ್ಯನಿರ್ವಹಿಸಿದ್ದಿತು.

ಸೈನ್ಯ ಮತ್ತು ಯುದ್ಧಗಳು ಪ್ರಾಕೃತಿಕ ಪರಿಸರ, ಸಮಕಾಲೀನ ರಾಜಕೀಯ ಸ್ಪರ್ಧೆ ಹಾಗೂ ಬದಲಾಗುವ ಯುದ್ಧ ತಂತ್ರಗಳಿಗೆ ಅನುಗುಣವಾಗಿ ಮಾರ್ಪಾಟುಗೊಳ್ಳುತ್ತಿದ್ದವು. ಅಂತೆಯೇ ವಿಜಯನಗರವು ಬೃಹತ್ ಗಾತ್ರದ ಸೈನ್ಯವನ್ನು ಕಟ್ಟುವಲ್ಲಿ ಕಾರಣವಾದುದು ನೆರೆಯ ಬಹಮನಿ ಸುಲ್ತಾನರ ಪ್ರಬಲ ಸ್ಪರ್ಧೆಯೆನ್ನಬಹುದು.

ಸೈನ್ಯವು ಯುದ್ಧ ಸಮಯದಲ್ಲಿ ಪಾಲಿಸಬೇಕಾದ ನೀತಿ-ನಿಯಮಗಳು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದುದು ನೈಜನೀಯ. ಅಂದಿನ ನೀತಿಗಳು ಸಾರುವುದು ನ್ಯಾಯಯುತ ಅಥವಾ ಧರ್ಮಯುದ್ಧಗಳನ್ನು. ಅಲ್ಲದೆ ವೀರತ್ವದ ಸಂಕೇತಗಳಾಗಿಯೂ ಅವು ರೂಪುಗೊಂಡಿದ್ದವು. ಆದರೆ ವಿಜಯನಗರವು ಬಹಮನಿ ಮತ್ತಿತರ ರಾಜ್ಯಗಳೊಂದಿಗೆ ಕೈಗೊಂಡ ಹೆಚ್ಚು ಯುದ್ಧಗಳು ಆಕ್ರಮಣಕಾರಿ ಅಥವಾ ಕೂಟಯುದ್ಧಗಳಾಗಿದ್ದವು. ಅಲ್ಲಿ ಧರ್ಮಯುದ್ಧದ ಕ್ರಮಗಳಿಗೆ ಸ್ಥಾನವಿರಲಿಲ್ಲ. ಹಾಗಿದ್ದೂ ಕೃಷ್ಣದೇವರಾಯ ಮತ್ತಿತರ ಕೆಲವು ಅರಸರು ಯುದ್ಧಗಳಲ್ಲಿ ನ್ಯಾಯಯುತ ಕ್ರಮಗಳನ್ನು ಯುದ್ಧ ಸಮಯ ಹಾಗೂ ಯುದ್ಧಾನಂತರ ಅನುಸರಿಸಿದ್ದುದು ಕಾಣಬರುತ್ತದೆ.

ವಿಜಯನಗರವು ಬೃಹತ್‌ಗಾತ್ರದ ಸೈನ್ಯವನ್ನು ಹೊಂದಿದ್ದುದು ವಿವಿಧ ಆಕರಗಳಿಂದ ದೃಢಪಡುವ ಸಂಗತಿ. ಈ ಪ್ರಮಾಣದ ಸೈನ್ಯವನ್ನೂ ಹೊಂದಲು ಸಾಧ್ಯವಾದುದು ಅವರು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತಂದ ವಿಕೇಂದ್ರೀಕೃತ ಪದ್ಧತಿಯಿಂದ ಎನ್ನುವುದಂತೂ ಖಚಿತ.

ವಿಜಯನಗರ ಅವಧಿಯಲ್ಲಿ ಬೆಳವಣಿಗೆ ಹೊಂದಿದ ಅಮರನಾಯಕ ಅಥವಾ ನಾಯಂಕರ ವ್ಯವಸ್ಥೆಯು ಬೃಹತ್ ಸಂಖ್ಯೆಯ ಸೈನ್ಯವನ್ನು ಪೋಷಿಸುವ, ಸಂಘಟಿಸುವ ಮತ್ತು ಹೋರಾಟಕ್ಕೆ ಸಜ್ಜುಗೊಳಿಸುವ ಕಾರ್ಯಗಳಲ್ಲಿ ಮಹತ್ವದ ಪಾತ್ರವಹಿಸಿದ್ದಿತು. ಈ ವ್ಯವಸ್ಥೆಯಿಂದ ಕೇಂದ್ರಕ್ಕೆ ಸೈನ್ಯ ಸಂಪತ್ತಿನ ಜೊತೆಗೆ ಧನಸಂಪತ್ತೂ ಹರಿದು ಬಂದುದು ಸಾಮ್ರಾಜ್ಯವನ್ನು ಸದೃಢಗೊಳಿಸಿ ವಿಸ್ತರಿಸಲು ಸಾಧ್ಯವಾಯಿತು.

ಸೇನಾ ವಿಭಾಗಗಳಲ್ಲಿ ಒಂದಾದ ಅಶ್ವದಳವು ಈ ಅವಧಿಯಲ್ಲಿ ಹೆಚ್ಚಿನ ಪ್ರಾಶ್ಯಸ್ತ್ಯ ಪಡೆದಿದ್ದಿತು. ಕರ್ನಾಟಕದಲ್ಲಿ ಹಿಂದೆಂದೂ ಹೊಂದಿರಲಾರದಷ್ಟು ಸಂಖ್ಯೆಯ ಅಶ್ವಪಡೆಯನ್ನು ವಿಜಯನಗರವು ಹೊಂದಿತ್ತು. ಅಶ್ವದಳವು ಸೈನ್ಯ ಹಾಗೂ ಯುದ್ಧಗಳಲ್ಲಿ ಶೀಘ್ರ ಚಾಲನೆ, ಫಲಿತಾಂಶ ಮತ್ತು ಪರಿಣಾಮಗಳನ್ನು ನೀಡುತ್ತಿದ್ದುದು ಇದಕ್ಕೆ ಕಾರಣವಾಗಿದ್ದಿತು. ಆದುದರಿಂದ ಯುದ್ಧಾಶ್ವಗಳನ್ನು ಅರೇಬಿಯ, ಪರ್ಶಿಯಾ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳುವಲ್ಲಿ ವಿಜಯನಗರ ಮತ್ತು ಬಹಮನಿ ರಾಜ್ಯಗಳೆರಡು ಕೊನೆಯವರೆಗೂ ಪೈಪೋಟಿ ನಡೆಸಿದ್ದವು.

ವಿಜಯನಗರದ ಅವಧಿಯ ಪರಿಣಾಮಕಾರಿ ಬೆಳವಣಿಗೆಯೆಂದರೆ ವಿನೂತನ ಶಸ್ತ್ರಾಸ್ತ್ರಗಳ ಬಳಕೆ. ಕ್ರಿಸ್ತಪೂರ್ವ ಕಾಲದಿಂದ ಕ್ರಿ.ಶ.೧೪ನೆಯ ಶತಮಾನದವರೆಗಿನ ಅವಧಿಯು ಸಾಂಪ್ರಾದಾಯಿಕತೆ ರೂಢಿಸಿಕೊಂಡಿದ್ದುದನ್ನು ಕಾಣಬಹುದು. ಇದಕ್ಕೆ ಅಂದು ಬಳಸಿದ ಕತ್ತಿ-ಗುರಾಣಿ, ಬಿಲ್ಲು-ಬಾಣ, ಈಟಿ-ಕಠಾರಿಗಳಂತಹ ಆಯುಧಗಳನ್ನು ಹೆಸರಿಸಬಹುದು. ಈ ಮೇಲಿನ ಅವಧಿಯನ್ನು ಆಯುಧಗಳಲ್ಲಿ ಬದಲಾವಣೆ ಕಾಣದ ತಟಸ್ಥ ಕಾಲವೆಂದು ಗುರುತಿಸಬಹುದು. ಆದರೆ ವಿಜಯನಗರವು ಮಹಮ್ಮದೀಯರಿಂದ ಅರಿತು, ಪಾಶ್ಚಾತ್ಯರಿಂದ ನವೀಕರಣಗೊಳಿಸಿದ ಸಿಡಿಮದ್ದಿನ ಉಪಕರಣಗಳನ್ನು ಕಂಡುಕೊಂಡಿದ್ದಿತು.

ಸಿಡಿಮದ್ದಿನ ಉಪಕರಣಗಳಾದ ಬಂದೂಕು ಮತ್ತು ಫಿರಂಗಿಗಳ ಬಳಕೆಯು ಸೈನ್ಯ ಮತ್ತು ಯುದ್ಧಗಳಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ಉಂಟು ಮಾಡಿದವು. ಇವು ಪರಂಪರಾಗತವಾಗಿ ಬಂದಿದ್ದ ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳಿಗೆ ಕಾಲಾಳುಗಳೆಂಬ ನ್ಯಾಯಯುತ ಹೋರಾಟವನ್ನು ಹಿಂದೆ ಸರಿಯುವಂತೆ ಮಾಡಿದವು. ವಿಜಯನಗರಪೂರ್ವ ಕಾಲದಲ್ಲಿ ಕತ್ತಿ-ಗುರಾಣಿ, ಈಟಿ, ಕಠಾರಿಗಳಂತಹ ಆಯುಧಗಳು ಪರಸ್ಪರ ಎರಡು ಸೈನ್ಯಗಳು ಎದುರಾಗಿ ನಿಂತು ಹೋರಾಡುವ ಮುಖಾಮುಖಿ ಯುದ್ಧಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಫಿರಂಗಿ, ಬಂದೂಕುಗಳು ಒಂದೆರಡು ಫರ್ಲಾಂಗುಗಳ ದೂರವನ್ನು ಕ್ರಮಿಸಿ ಇಡೀ ಶತ್ರು ಸೇನೆಯನ್ನು ಧ್ವಂಸ ಮಾಡುವ ಸಾಮರ್ಥ್ಯ ಹೊಂದಿದ್ದುದರಿಂದ ಹಿಂದಿನ ಮುಖಾಮುಖಿ, ನ್ಯಾಯಯುತ ಅಥವಾ ಧರ್ಮಯುದ್ಧಗಳು ಕಣ್ಮರೆಯಾಗಲು ಕಾರಣವಾದವು. ಇವುಗಳಿಂದ ಮುಖಾಮುಖಿ ಯುದ್ಧದ ಬದಲಿಗೆ ಅಂತರ ಯುದ್ಧಗಳು ಚಾಲನೆಗೆ ಬಂದುದು ಈ ಅವಧಿಯ ವಿನೂತನ ಯುದ್ಧ ವಿಶೇಷವಾಗಿದೆ.

ವಿಜಯನಗರದಲ್ಲಿ ಸಿಡಿಮದ್ದು ಬಳಕೆಗೊಂಡ ಬಳಿಕ ಸೈನ್ಯದಲ್ಲಿ ಫಿರಂಗಿದಳಕ್ಕೆ ಮಹತ್ತರ ಸ್ಥಾನ ದೊರೆಯಿತು. ಪ್ರಾಚೀನ ಕಾಲದಲ್ಲಿ ಚತುರಂಗಬಲದ ಅಂಗವಾದ ರಥದಳವು ಎಂದೋ ಕಣ್ಮರೆಯಾಗಿದ್ದುದು ಆಕರಗಳಿಂದ ದೃಢಗೊಳ್ಳುತ್ತದೆ. ಸಿಡಿಮದ್ದು ಬಳಕೆಗೊಂಡ ಮೇಲೆ ರಥದಳದ ಸ್ಥಾನವನ್ನು ಫಿರಂಗಿದಳವು ಅಲಂಕರಿಸಿತು. ಮೂಲದಲ್ಲಿದ್ದ ಚತುರಂಗ ಬಲವು ಫಿರಂಗಿ ಪಡೆಯಿಂದ ಪುನಃ ಅಸ್ತಿತ್ವಕ್ಕೆ ಬಂದುದನ್ನು ವಿಜಯನಗರ ಅವಧಿಯಲ್ಲಿ ಕಾಣಬಹುದು.

ವಿಜಯನಗರ ಅರಸರು ಕೈಗೊಂಡ ಯುದ್ಧಗಳಲ್ಲಿ ಬಯಲು ಯುದ್ಧಗಳಿಗಿಂತ ಹೆಚ್ಚಾಗಿ ಕೋಟೆ ಕಾಳಗಗಳು ನಡೆದಿವೆ. ಇದು ಕಾವ್ಯಗಳಿಂದ ದೃಢಗೊಳ್ಳುವ ಸಂಗತಿ. ಕೋಟೆಯನ್ನು ನಿರ್ಮಿಸುವುದು ಹಿಂದಿನಿಂದಲೂ ಬಂದ ಪದ್ಧತಿಯಾಗಿದ್ದರೂ, ವಿಜಯನಗರ ಅವಧಿಯಲ್ಲಿ ಅವುಗಳ ನಿರ್ಮಾಣ ಕಾಲಕ್ರಮೇಣ ಹೆಚ್ಚಾದುದನ್ನು ಕಾಣುತ್ತೇವೆ. ಇದು ವಿಜಯನಗರೋತ್ತರ ಕಾಲದಲ್ಲಿ ರಾಜ್ಯರಕ್ಷಣೆಗೆ ಅನಿವಾರ್ಯ ಅಂಗವಾಗಿ ಪರಿಣಮಿಸಿತು. ಇದಕ್ಕೆ ಫಿರಂಗಿಗಳ ಬಳಕೆಯೂ ಕಾರಣವೆನ್ನಬಹುದು. ಫಿರಂಗಿಗಳಿಂದ ರಾಜ್ಯ ರಕ್ಷಣೆ ಮಾಡಬೇಕಾದ

ಅನಿವಾರ್ಯತೆಯು ಕೋಟೆಗಳನ್ನು ಹೆಚ್ಚು ಹೆಚ್ಚಾಗಿ ನಿರ್ಮಿಸುವಂತೆ ಮಾಡಿತು. ಆದುದರಿಂದ ವಿಜಯನಗರ ಅರಸರು ಮತ್ತು ಅವರ ಮಾಂಡಲಿಕರು, ಸಾಮಂತರು ಫಿರಂಗಿ ಗುಂಡುಗಳ ಹೊಡೆತಕ್ಕೆ ಜಗ್ಗದಂತಹ ಭದ್ರಕೋಟೆಗಳನ್ನು ಕಟ್ಟಿರುವುದು ಕರ್ನಾಟಕ ಮತ್ತು ನೆರೆಯ ರಾಜ್ಯಗಳಲ್ಲಿ ಕಾಣಬರುತ್ತದೆ.

ಹಿಂಸೆಯು ಹಿಂಸೆಯನ್ನು ಪೋಷಿಸುವಂತೆ, ಯುದ್ಧವು ಯುದ್ಧವನ್ನು ಪೋಷಿಸುವುದೆಂಬ ತತ್ವಕ್ಕೆ ವಿಜಯನಗರ ಮತ್ತು ಬಹಮನಿಗಳ ನಡುವೆ ನಡೆದ ನಿರಂತರ ಕದನಗಳು ಬದ್ಧವಾಗಿರುವುದು ಗಮನಿಸಬೇಕಾದ ಅಂಶ. ಈ ಎರಡೂ ಮನೆತನಗಳ ನಡುವೆ ನಡೆದ ಯುದ್ಧಗಳ ಸರಮಾಲೆಯು ಈ ಸಂಗತಿಯನ್ನು ಪುಷ್ಟಿಗೊಳಿಸುತ್ತದೆ.

'ಯುದ್ಧ'ವು ಒಂದೆಡೆ ಅರಸ ಅಥವಾ ಆಳುವ ವರ್ಗಕ್ಕೆ ಪ್ರತಿಷ್ಠೆ, ಯೋಧರಲ್ಲಿ ಕೆಚ್ಚು, ಸಮಾಜದಲ್ಲಿ ರಾಷ್ಟ್ರೀಯ ಭಾವನೆಗಳನ್ನು ಬೆಳೆಸಿದರೆ, ಇನ್ನೊಂದೆಡೆ ಭಯ, ಆತಂಕ, ಅವಹೇಳನ, ಸಾವು-ನೋವು, ಆರ್ಥಿಕ ಹಾನಿ, ಮತ್ಸರ-ಪ್ರತೀಕಾರಗಳು ಹಾಗೂ ವಿನಾಶದ ಸಂಕೇತವಾಗಿ ಪ್ರತಿನಿಧಿಸುತ್ತದೆ. ಇವು ವಿಜಯನಗರ ಕೈಗೊಂಡ ಯುದ್ಧಗಳಿಂದ ತಿಳಿದುಬರುವ ಸಂಗತಿಗಳಾದರೂ ಪ್ರಸ್ತುತ ಸಮಾಜವು ಇವುಗಳಿಂದ ಹೊರತಾಗಿಲ್ಲ ಎಂಬುದಂತೂ ಸತ್ಯ.

ಸಮರಚೇತನವು ಯುದ್ಧದ ಬಹುಮುಖ್ಯ ಕಾರಣಗಳಲ್ಲೊಂದು. ಯುದ್ಧಕ್ಕೆ ಸಮಾಜವನ್ನು ಪ್ರೇರೇಪಿಸುವುದು ಆಡಳಿತದ ಒಂದು ತಂತ್ರವೇ ಸರಿ. ಅಂತೆಯೇ ಸೈನಿಕರು, ಸೇನಾಮುಖಂಡರಲ್ಲಿ ಹೋರಾಟದ ಕೆಚ್ಚನ್ನು ತುಂಬಲು ಅನೇಕ ಬಗೆಯ ಧಾರ್ಮಿಕ ನಂಬುಗೆ ಮತ್ತು ಆಚರಣೆಗಳು, ಸಂಪ್ರದಾಯಗಳು, ಲೌಕಿಕ ಮತ್ತು ಅಲೌಕಿಕ ಕಲ್ಪನೆಗಳನ್ನು ಬಿತ್ತುತ್ತಿದ್ದುದನ್ನು ಕಾಣಬಹುದು. ಇವುಗಳಲ್ಲಿ ಧನ, ಆಸ್ತಿ, ವೀರತ್ವದ ಆಸೆ-ಆಮಿಷಗಳನ್ನು ಸಮಾಜದಲ್ಲಿ ವ್ಯವಸ್ಥಿತವಾಗಿ ರೂಪುಗೊಳಿಸಿದ್ದುದು ವಿಜಯನಗರದಲ್ಲಿ ಕಾಣಬರುವ ಸಂಗತಿಯಾಗಿದೆ.

ಯುದ್ಧಗಳಲ್ಲದೆ ಪರಸ್ಪರ ನೆರೆಯ ರಾಜ್ಯಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದೂ ಒಂದು ತಂತ್ರವೇ. ಅರಸು ಮನೆತನಗಳ ಬಂಧುತ್ವವನ್ನು ವೃದ್ಧಿಗೊಳಿಸಿ ರಾಜ್ಯವಿಸ್ತರಿಸಲು, ಆ ಮೂಲಕ ತಮ್ಮ ಶಕ್ತಿಯನ್ನು ಬಲಗೊಳಿಸಲು ಬಳಸಿದ ವಿಧಾನಗಳಲ್ಲಿ ವೈವಾಹಿಕ ಸಂಬಂಧಗಳೂ ಮುಖ್ಯವಾಗಿವೆ. ವಿಜಯನಗರದ ಕೃಷ್ಣದೇವರಾಯ ಒರಿಸ್ಸಾದೊಂದಿಗೆ ಬೆಳೆಸಿದ ವೈವಾಹಿಕ ಸಂಬಂಧವು ಎರಡೂ ರಾಜ್ಯಗಳಲ್ಲಿ ಶಾಂತಿ ಬೆಸೆಯಲು ಮತ್ತು ಮೈತ್ರಿಯುತ ಸಂಬಂಧವು ಕಡೆಯವರೆಗೂ ಮುಂದುವರಿಯಲು ಸಹಕಾರಿಯಾಯಿತೆನ್ನಬಹುದು. ಅಂತೆಯೇ ರಕ್ಕಸಗಿ-ತಂಗಡಗಿ ಯುದ್ಧಕ್ಕೆ ಮುನ್ನ ಷಾಹಿಸುಲ್ತಾನರು ತಮ್ಮ ಹಿಂದಿನ ದ್ವೇಷಗಳನ್ನು ಮರೆತು ವಿಜಯನಗರದ ವಿರುದ್ಧ ಒಂದುಗೂಡುವಲ್ಲಿ ಬಳಸಿಕೊಂಡ ತಂತ್ರ ವೈವಾಹಿಕ ಸಂಬಂಧವೆಂಬುದು ಗಮನಾರ್ಹ ಸಂಗತಿ.

ವಿಜಯನಗರ ಅರಸರು ಆಡಳಿತದಲ್ಲಿ ಅನುಸರಿಸಿದ್ದ ಅಮರನಾಯಕ ಪದ್ಧತಿಯಲ್ಲಿ ಅನುಕೂಲಗಳಂತೆ ಅನಾನುಕೂಲಗಳೂ ಇದ್ದವು. ಪ್ರಾಂತ್ಯಗಳಾಗಿದ್ದ ಈ ಅಮರಂಗಳು ತುಂಡು ರಾಜ್ಯಗಳಾಗಿದ್ದು, ಇವುಗಳಿಗೆ ನೇಮಕವಾದ ಅಧಿಕಾರಿಗಳು ಸಂಪೂರ್ಣ ಸ್ವತಂತ್ರರಾಗಿದ್ದರು. ಕೇಂದ್ರವು ಇವರ ಮೇಲೆ ನಿಯಂತ್ರಣ ಸಾಧಿಸಿದ್ದುದು ಯುದ್ಧ ಸಮಯದಲ್ಲಿ ಸೈನ್ಯದ ನೆರವು ಹಾಗೂ ಆದಾಯದ ಪಾಲನ್ನು ಪಡೆಯುವುದಾಗಿತ್ತು. ಇದನ್ನು ಹೊರತು ಪಡಿಸಿದರೆ ಯಾವುದೇ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಅರಸರು ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಇದರಿಂದ ಆಯಾಯ ಪ್ರದೇಶದ ಕಂದಾಯ ನಿಗದಿ ಮತ್ತು ವಸೂಲಾತಿ ಅಮರನಾಯಕರಿಗೇ ಸೇರಿದ್ದಿತು. ವಿಜಯನಗರ ಕೈಗೊಳ್ಳುತ್ತಿದ್ದ ನಿರಂತರ ಯುದ್ಧಗಳಿಗೆ ಹಣವನ್ನು ಒದಗಿಸುವುದು ಅಮರನಾಯಕರಿಗೆ ಅನಿವಾರ್ಯವಾಗಿತ್ತು. ಶಾಸನಗಳಲ್ಲಿ ವ್ಯಕ್ತಗೊಳ್ಳುವಂತೆ ವಿಜಯನಗರದ ಅನೇಕ ಪ್ರದೇಶಗಳಲ್ಲಿ ಅಮರನಾಯಕರು ವಿಧಿಸಿದ್ದ ತೆರಿಗೆಗಳನ್ನು ಕಟ್ಟಲಾಗದೇ ರೈತರು ರಾಜ್ಯವನ್ನೇ ಬಿಟ್ಟು ಹೋಗಿದ್ದರು. ಕೇಂದ್ರವು ಜನಸಾಮಾನ್ಯರ ಕಡೆಗೆ ಹೆಚ್ಚು ಗಮನಹರಿಸಲಿಲ್ಲ ಎನ್ನುವುದಕ್ಕೆ ಈ ಅಂಶವು ಸಾಕ್ಷ್ಯಗಳಾಗಿವೆ.

ಸೈನ್ಯದ ವೆಚ್ಚಕ್ಕೆ ಸಂಬಂಧಿಸಿದಂತೆ ರಾಜ್ಯಾದಾಯದ ಅರ್ಧದಷ್ಟು ಹಣವನ್ನು ಸೈನ್ಯ ನಿರ್ವಹಣೆಗಾಗಿ ಮೀಸಲಿಡಬೇಕೆಂದು ಆಮುಕ್ತಮಾಲ್ಯದ ಮತ್ತಿತ್ತರ ಗ್ರಂಥಗಳಿಂದ ತಿಳಿದುಬರುತ್ತದೆ. ಆದರೆ ವಿಜಯನಗರ ಮತ್ತು ಬಹುಮನಿ ಸುಲ್ತಾನರು ಅರ್ಧಕ್ಕಿಂತ ಹೆಚ್ಚು ಹಣವನ್ನು ಸೈನ್ಯ ಮತ್ತು ಯುದ್ಧಗಳಿಗೆ ವ್ಯಯಿಸಿರುವುದನ್ನು ಅವರು ಕೈಗೊಂಡ ಯುದ್ಧಗಳು ಮತ್ತು ಜನರ ಮೇಲೆ ವಿಧಿಸಿದ ತೆರಿಗೆಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಅರಸರಿಗೆ ರಾಜ್ಯದ ಅಭಿವೃದ್ಧಿಗಿಂತ ಸೈನ್ಯದ ನಿರ್ವಹಣೆಯೇ ಮುಖ್ಯವಾಗಿದ್ದುದು ತಿಳಿದುಬರುತ್ತದೆ. ಇಂದಿನ ಭಾರತ, ಪಾಕಿಸ್ತಾನ ಮತ್ತಿತರ ಆಧುನಿಕ ದೇಶಗಳು ಕೂಡ ಇದರಿಂದ ಹೊರತಾಗಿಲ್ಲ.

ಅನುಬಂಧ

ಪ್ರಮುಖ ಯುದ್ಧಗಳು

ಪ್ರಮುಖ ಕೋಟೆಗಳು

ಸೈನಿಕ ಪದಕೋಶ

ಗ್ರಂಥಸೂಚಿ

ಛಾಯಾಚಿತ್ರಗಳು

ಪ್ರಮುಖ ಯುದ್ಧಗಳು

ಸಂಖ್ಯೆ ಕಾಲ	ಯುದ್ಧ/ಸ್ಥಳ	ಅರಸರು/ಮನೆತನ	ವಿಜಯ
೧. ೧೩೫೧	ಮೊದಲ ಬಹಮನಿಯುದ್ದ	ಹರಿಹರ x ಅಲ್ಲಾವುದ್ದೀನ್	---
೨. ೧೩೫೮-೫೯	ವಾರಂಗಲ್ ಯುದ್ಧ	ಬುಕ್ಕರಾಯ x ಮಹಮದ್‌ಶಹ	---
೩. ೧೩೬೬	ಸಿರುಗುಪ್ಪ ಕದನ	ಬುಕ್ಕರಾಯ x ಮಹಮದ್‌ಶಹ	ಬಹಮನಿ
೪. ೧೩೬೬-೬೮	ರಾಯಚೂರು/ಮುದಗಲ್ಲು	ಬುಕ್ಕರಾಯ x ಮಹಮದ್‌ಶಹ	ವಿಜಯನಗರ
೫. ೧೩೬೮-೭೧	ಮಧುರೆ ದಂಡೆಯಾತ್ರೆ	ಕುಮಾರಕಂಪಣ x ಮಧುರೆ ಸುಲ್ತಾನ	ವಿಜಯನಗರ
೬. ೧೩೭೫-೭೬	ರಾಯಚೂರು/ಮುದಗಲ್ಲು	ಬುಕ್ಕರಾಯ x ಮುಜಾಹಿದ್‌ಶಹ	---
೭. ೧೩೭೭-೭೮	ಆದೋನಿ ಯುದ್ಧ	೨ನೆಯ ಹರಿಹರ x ತಾಜುದ್ದೀನ್‌ಫಿರೋಜ್	---
೮. ೧೩೮೫	ಶ್ರೀಲಂಕಾ ದಂಡೆಯಾತ್ರೆ	೨ನೆಯ ವಿರುಪಾಕ್ಷ x ಭುವನೈಕ ಬಾಹು	ವಿಜಯನಗರ
೯. ೧೩೯೮	ರಾಯಚೂರು/ಮುದಗಲ್ಲು	೨ನೆಯ ಹರಿಹರ x ತಾಜುದ್ದೀನ್‌ಫಿರೋಜ್	ಬಹುಮನಿ
೧೦. ೧೪೦೬-೭	ರಾಯಚೂರು/ಮುದಗಲ್ಲು	೧ನೆಯ ದೇವರಾಯ x ತಾಜುದ್ದೀನ್‌ಫಿರೋಜ್	ಬಹಮನಿ
೧೧. ೧೪೧೭-೧೯	ಪನಗಲ್ ಯುದ್ಧ	೧ನೆಯ ದೇವರಾಯxತಾಜುದ್ದೀನ್‌ಫಿರೋಜ್	ವಿಜಯನಗರ
೧೨. ೧೪೨೨-೨೩	ರಾಯಚೂರು/ಮುದಗಲ್ಲು	೨ನೆಯ ದೇವರಾಯ x ಶಹಾಬುದ್ದೀನ್‌ಅಹಮದ್	ಬಹಮನಿ
೧೩. ೧೪೨೪-೨೭	ರಾಜಮಹೇಂದ್ರಿ ಯುದ್ಧ	೨ನೆಯ ದೇವರಾಯ x ಗಜಪತಿ+ವೇಲಮರು	ವಿಜಯನಗರ
೧೪. ೧೪೩೬	ರಾಯಚೂರು/ಮುದಗಲ್ಲು	೨ನೆಯ ದೇವರಾಯ x ಅಲ್ಲಾವುದ್ದೀನ್‌ಅಹಮದ್	ಬಹಮನಿ
೧೫. ೧೪೪೩	ಶ್ರೀಲಂಕಾ ದಂಡೆಯಾತ್ರೆ	ಲಕ್ಕಣ್ಣ ದಂಡೇಶ x ೬ನೆಯ ಪರಾಕ್ರಮಬಾಹು	ವಿಜಯನಗರ
೧೬. ೧೪೪೩	ರಾಯಚೂರು/ಮುದಗಲ್ಲು	೨ನೆಯ ದೇವರಾಯ x ಅಲ್ಲಾವುದ್ದೀನ್‌ಅಹಮದ್	ವಿಜಯನಗರ
೧೭. ೧೪೮೧	ಗೋವಾ ಯುದ್ಧ	ಸಾಳ್ವನರಸಿಂಹ x ೩ನೆಯ ಮಹಮದ್	ಬಹಮನಿ
೧೮. ೧೪೮೨	ಉದಯಗಿರಿ	ಸಾಳ್ವನರಸಿಂಹ x ಗಜಪತಿ	ವಿಜಯನಗರ
೧೯. ೧೪೯೩	ಆದಿಲ್‌ಶಾಹಿ ಯುದ್ಧ	ಸಾಳ್ವನರಸಿಂಹ x ಯೂಸೂಫ ಆದಿಲ್‌ಖಾನ್	ಬಹಮನಿ

೨೦. ೧೪೯೩	ಮಾನ್ವಿಯುದ್ಧ	ನರಸನಾಯಕ x ಯೂಸೂಫ ಆದಿಲ್‌ಖಾನ್	ಬಿಜಾಪುರ
೨೧. ೧೫೦೬	ಬಹಮನಿ ಕೊನೆಯ ಯುದ್ಧ	ವೀರನರಸಿಂಹ x ಮಹಮದ್ ಶಹ	ಬಹಮನಿ
೨೨. ೧೫೧೦	ರಾಯಚೂರು/ಮುದಗಲ್ಲು	ಕೃಷ್ಣದೇವರಾಯ x ಇಸ್ಮಾಯಿಲ್ ಆದಿಲ್‌ಖಾನ್	ವಿಜಯನಗರ
೨೩. ೧೫೧೨	ಕೃಷ್ಣಾನದಿ ದಂಡೆ ಯುದ್ಧ	ಕೃಷ್ಣದೇವರಾಯ x ಬಿಜಾಪುರ + ಅಹಮದ್‌ನಗರ	ವಿಜಯನಗರ
೨೪. ೧೫೧೨	ಪನಗಲ್ ಯುದ್ಧ	ಕೃಷ್ಣದೇವರಾಯ x ಕುತುಬ್‌ಶಹ(ಬೀದರ್)	ವಿಜಯನಗರ
೨೫. ೧೫೧೩-೧೬	ಕಳಿಂಗ ದಂಡೆಯಾತ್ರೆ	ಕೃಷ್ಣದೇವರಾಯ x ಒರಿಸ್ಸಾದ ಗಜಪತಿ	ವಿಜಯನಗರ
೨೬. ೧೫೧೪-೧೫	ಜಮಖಂಡಿ ಯುದ್ಧ	ಕೃಷ್ಣದೇವರಾಯ x ನಿಜಾಂಶಹ(ಅಹಮದ್‌ನಗರ)	ವಿಜಯನಗರ
೨೭. ೧೫೧೫	ಮೇದೂರು ಯುದ್ಧ	ಕೃಷ್ಣದೇವರಾಯ x ನಿಜಾಂಶಹ	ವಿಜಯನಗರ
೨೮. ೧೫೧೮	ಕೇತವರಂ ಯುದ್ಧ	ಕೃಷ್ಣದೇವರಾಯ x ಕೇತವರ ಪಾಳೆಯಗಾರ	ವಿಜಯನಗರ
೨೯. ೧೫೨೦	ಗೊಬ್ಬೂರು ಯುದ್ಧ	ಕೃಷ್ಣದೇವರಾಯ x ಇಸ್ಮಾಯಿಲ್ ಆದಿಲ್‌ಖಾನ್	ವಿಜಯನಗರ
೩೦. ೧೫೨೦	ರಾಯಚೂರು ಯುದ್ಧ	ಕೃಷ್ಣದೇವರಾಯ x ಇಸ್ಮಾಯಿಲ್ ಆದಿಲ್‌ಖಾನ್	ವಿಜಯನಗರ
೩೧. ೧೫೨೧	ಗುಲ್ಬರ್ಗಾ ಯುದ್ಧ	ಕೃಷ್ಣದೇವರಾಯ x ಇಸ್ಮಾಯಿಲ್ ಅದಿಲ್‌ಖಾನ್	ವಿಜಯನಗರ
೩೨. ೧೫೩೦-೩೧	ರಾಯಚೂರು/ಮುದಗಲ್ಲು	ಅಚ್ಯುತರಾಯ x ಇಸ್ಮಾಯಿಲ್ ಆದಿಲ್‌ಖಾನ್	ಬಿಜಾಪುರ
೩೩. ೧೫೩೬	ಕೊಂಡವೀಡು	ಅಚ್ಯುತರಾಯ x ಕುತುಬ್‌ಶಹ	ಗೋಲ್ಕೊಂಡ
೩೪. ೧೫೪೮	ಕಲ್ಯಾಣ ಯುದ್ಧ	ವಿಜಯನಗರ + ಅಹಮದ್‌ನಗರ x ಬಿಜಾಪುರ + ಬೀದರ್	ವಿಜಯನಗರ
೩೫. ೧೫೫೧	ರಾಯಚೂರು/ ಮುದಗಲ್ಲು	ರಾಮರಾಯ x ಇಸ್ಮಾಯಿಲ್ ಆದಿಲ್‌ಶಹ	ವಿಜಯನಗರ
೩೬. ೧೫೫೩	ಬಿಜಾಪುರ ಯುದ್ಧ	ರಾಮರಾಯ x ಇಸ್ಮಾಯಿಲ್ ಆದಿಲ್‌ಶಹ	ವಿಜಯನಗರ

೩೭. ೧೫೫೫	ಗುಲ್ಬರ್ಗಾ	ವಿಜಯನಗರ + ಬಿಜಾಪುರ x ಅಹಮದ್‌ನಗರ + ಗೋಲ್ಕೊಂಡ	ವಿಜಯನಗರ
೩೮. ೧೫೫೭-೫೮	ಅಹಮದ್‌ನಗರ ಯುದ್ಧ	ವಿಜಯನಗರ + ಗೋಲ್ಕೊಂಡ x ಅಹಮದ್‌ನಗರ	ವಿಜಯನಗರ
೩೯. ೧೫೫೮	ಕಲ್ಯಾಣ ಯುದ್ಧ	ವಿಜಯನಗರ + ಬಿಜಾಪುರ x ಅಹಮದ್‌ನಗರ + ಗೋಲ್ಕೊಂಡ	ವಿಜಯನಗರ
೪೦. ೧೫೬೨	ಅಹಮದ್‌ನಗರ ಯುದ್ಧ	ವಿಜಯನಗರ + ಗೋಲ್ಕೊಂಡ x ಬಿಜಾಪುರ + ಅಹ್ಮದನಗರ	ವಿಜಯನಗರ
೪೧. ೧೫೬೫	ರಕ್ಕಸಗಿ-ತಂಗಡಗಿ ಯುದ್ಧ	ವಿಜಯನಗರ x ಷಾಹಿಸುಲ್ತಾನರು	ಷಾಹಿರಾಜ್ಯಗಳಿಗೆ ಜಯ

ಪ್ರಮುಖ ಕೋಟೆಗಳು

ಕರ್ನಾಟಕ

ವಿಜಯನಗರ

ಆನೆಗೊಂದಿ

ಶ್ರೀರಂಗಪಟ್ಟಣ

ಕೆಳದಿ

ಬೆಂಗಳೂರು

ಮಂಗಳೂರು

ಬಾರಕೂರು

ಮಾಗಡಿ

ಸಾವನದುರ್ಗ

ಮುದಗಲ್ಲು

ಉಮ್ಮತ್ತೂರು

ಬೆಳಗಾವಿ

ಭಟ್ಕಳ

ಜೀರ್ಣೋದ್ಧಾರಗೊಂಡ ಕೋಟೆಗಳು

ರಾಯಚೂರು

ದೇವದುರ್ಗ

ಕೊಪ್ಪಳ

ಕುಮ್ಮಟದುರ್ಗ

ಚಿತ್ರದುರ್ಗ

ಬಾದಾಮಿ

ಉಚ್ಚಂಗಿದುರ್ಗ

ಆಂಧ್ರಪ್ರದೇಶ

ಪೆನುಕೊಂಡ

ಅನಂತಪುರ

ರಾಯದುರ್ಗ

ಗುತ್ತಿ

ಬೆಲ್ಲಮಕೊಂಡ

ಧರಣಿಕೋಟೆ

ದೇವರಕೊಂಡ

ನಾಗಾರ್ಜುನಕೊಂಡ
ಕೊಂಡವೀಡು
ಪನಗಲ್
ಗಂಡಿಕೋಟೆ
ಕರ್ನೂಲು
ನಂದ್ಯಾಲ
ಆದವಾನಿ
ಕಂದಕೂರು
ವಿನುಕೊಂಡ
ಅದ್ದಂಕಿ
ನೆಲ್ಲೂರು
ಉದಯಗಿರಿ
ವೆಂಕಟಗಿರಿ
ರಾಯಮಹೇಂದ್ರಿ
ವಿಜಯನಗರಂ
ಚಂದ್ರಗಿರಿ
ಕೊಂಡಪಲ್ಲಿ
ಕೇತವರ
ಬೆಜವಾಡ
ಜಲ್ಲಿಪಲ್ಲಿ
ಅರುವಪಲ್ಲಿ
ಕಂಬಮ್ಮೆಟ್ಟು
ಕನಕಗಿರಿ
ತಂಗೇಡ
ಶಂಕರಗಿರಿ
ಕಪ್ಪಲವಾಯಿ
ಉರ್ಲಕೊಂಡ

ತಮಿಳುನಾಡು

ತಂಜಾವೂರು
ವೆಲ್ಲೂರು
ಮಧುರೆ
ಶ್ರೀರಂಗಂ

ಸೈನಿಕ ಪದಕೋಶ

ಅಂದಳ- ಪಲ್ಲಕ್ಕಿ

ಅಂಬುಗಂಡಿ- ಬಾಣ, ಬಂದೂಕುಗಳನ್ನು ಪ್ರಯೋಗಿಸಲು ಮಾಡಿದ ಕೋಟೆಯ ಗೋಡೆಯಲ್ಲಿ ರಚಿಸಲಾದ ರಂಧ್ರ

ಅಗಸೆ- ಊರ ಹೆಬ್ಬಾಗಿಲು

ಅಗಳು- ಕೋಟೆಯ ಸುತ್ತಲೂ ಅಗೆದ ತಗ್ಗು, ಕಂದಕ

ಅಟ್ಟಣೆ- ಮಂಚಿಕೆ

ಅಡ್ಡಣ- ಗುರಾಣಿ

ಅಣಕ- ನಗಾರಿ, ಭೇರಿ

ಅರಿ- ಶತ್ರು

ಆಳ್ವೇರಿ- ಕೋಟೆಯ ಗೋಡೆ

ಉಂಬಳಿ- ರಾಜಮಾನ್ಯ ಭೂಮಿ

ಊಳಿಗ- ಸೇವೆ

ಕತ್ತಿಯ ಪರಜು- ಕತ್ತಿಯ ಹಿಡಿ, ಮೊನೆ

ಕಬ್ಬಿಲ- ಬೇಡ, ಬೆಸ್ತ

ಕೇತು- ಧ್ವಜ

ಕೈವಾರಿ- ಭಟ್ಟಂಗಿ, ಹೊಗಳುಭಟ್ಟ

ಕೊಂತ- ಭರ್ಜಿ, ಉದ್ದವಾದ ಮರದ ತುಂಡು

ಕೊತ್ತಳ- ಬುರುಜು

ಕೊಳವಿ- ಕೋವಿ

ಕೋವಿ- ಗುಂಡು ಹಾರಿಸುವ ಸಣ್ಣ ತುಪಾಕಿ, ಬಂದೂಕು

ಖಂಡೆಯ- ಕತ್ತಿ

ಖೇಡಯ- ಗುರಾಣಿ

ಗುಂಡು ಕೋವಿ- ಕೋವಿ, ತುಬಾಕಿ

ಗುರಿವಾನಸ- ಸೇವಕರ ಮುಖ್ಯಸ್ಥ

ಚತುರಂಗ- ಕುದುರೆ, ಆನೆ, ರಥ ಮತ್ತು ಕಾಲಾಳು ಪಡೆಗಳು

ಚತುರೋಪಾಯ- ಸಾಮ, ದಾನ, ಭೇದ, ದಂಡವೆಂಬ ನಾಲ್ಕು ಉಪಾಯಗಳು

ಚಮ್ಮಟಿಗೆ- ಆಯುಧ, ಚರ್ಮದ ಪಟ್ಟಿಕೆ

ಜಬರಜಂಗಿ- ಒಂದು ಬಗೆಯ ಫಿರಂಗಿ

ಜಂಗಿ- ಯುದ್ಧ, ಕದನ

ಜೆಂಟೈಲರು- ಹಿಂದೂಗಳು, ಭಾರತೀಯರು

ಜೈತ್ರಯಾತ್ರೆ- ವಿಜಯಕ್ಕೆ ಹೊರಟ ಸೈನ್ಯದ ಯಾತ್ರೆ

ಠಾಣ್ಯ- ಸೈನ್ಯದ ಶಿಬಿರ, ಪಾಳೆಯ

ಠೌಳಿ- ಶಿರಸ್ತ್ರಾಣ

ಡೇರೆ- ಶಿಬಿರ, ಗುಡಾರ, ಬಿಡಾರ

ತುಂಡೀರ ದೇಶ- ಆಂಧ್ರ-ತಮಿಳುನಾಡುಗಳ ಪ್ರದೇಶ

ತುಕಡಿ- ಸೇನಾದಳ, ಪಡೆ, ಭಾಗ

ತುರುಷ್ಕ- ಯವನ, ಮುಸಲ್ಮಾನ

ತೆನೆ- ಕೋಟೆಯ ಮೇಲ್ಭಾಗದ ತೆನೆಯಾಕಾರದ ರಚನೆ

ತೇಜಿ- ಕುದುರೆ

ಥಟ್ಟು- ಸೇನಾ ವಿಭಾಗ

ದಂಡು- ಸೇನೆ, ತುಕಡಿ

ದಸಿ- ಶೂಲ

ದಿಡ್ಡಿ- ಸಣ್ಣ ಬಾಗಿಲು

ನಿಚಯ- ರಾಶಿ

ನಿಯೋಗಿ- ಪ್ರತಿನಿಧಿ

ಪಟ- ಧ್ವಜ

ಪಾಯಕ- ಕಾಲಾಳು, ಪದಾತಿ

ಪಾರುಪತ್ಯ- ಮೇಲ್ವಿಚಾರಣೆ, ಯಜಮಾನಿಕೆ

ಪಾಳೆಯ- ಶಿಬಿರ, ಬೀಡು

ಫಲಕ- ಗುರಾಣಿ, ಹರಿಗೆ

ಫಿರಂಗಿ- ಗುಂಡು ಹಾರಿಸುವ ಬೃಹತ್ ಗಾತ್ರದ ತುಪಾಕಿ

ಬತ್ತೀಸಾಯುಧ- ಮೂವತ್ತೆರಡು ಆಯುಧಗಳು

ಬಿಂಡಿವಾಳ- ದೊಣ್ಣೆ, ಉದ್ದದ ಗುದಿಗೆ, ಆಯುಧ

ಬೇಹದ- ಬೇಹುಗಾರ, ಗುಪ್ತಾಚಾರ ವಿಭಾಗದವ

ಬೇಹುಗಾರ- ಗೂಢಚಾರ

ಬೊಂಬುಳಿ- ಒಂದು ಬಗೆಯ ವಾದ್ಯ

ಮನ್ನೆಯರು- ಮಾನ್ಯರು, ಸಾಮಂತರು, ಮಾಂಡಲಿಕರು

ಮರೆವುಯಿಲು- ಮೋಸದ ಯುದ್ಧ

ಮಾರ್ಬಲ- ಪಡೆ, ಸೈನ್ಯ

ಮಾಸಾಳು- ವೀರ, ಪರಾಕ್ರಮಿ

ಮುಕ್ಕೋಲು- ತ್ರಿದಂಡ

ಮುಗಿಲಟ್ಟಣೆ- ಮಂಚಿಕೆ

ಮುದ್ಗರ- ಉಕ್ಕಿನ ಗದೆ

ಮುಸುಂಡಿ- ಮೂರು ಮೊನೆಯುಳ್ಳ ಆಯುಧ

ಮೂರರು- ಮುಸಲ್ಮಾನರು, ತುರುಷ್ಕರು

ಮ್ಲೇಚ್ಛರು- ಹಿಂದೂಗಳಲ್ಲದವರು ಮುಸಲ್ಮಾನರು

ಮೊಗರಂಭ- ಮುಖವಾಡ

ರಣದುಂದುಭಿ- ರಣವಾದ್ಯ

ರಾಯಸ- ರಾಜನಿಂದ ಹೊರಡಿಸಲಾದ ಪತ್ರ, ಆಜ್ಞೆ

ರಾಯಸಿಗ- ರಾಯಸದ ಅಧಿಕಾರಿ

ರಾಯಸದವರು- ಲಿಪಿಕಾರರು, ಬರೆಯುವವರು

ಲಗ್ಗೆ- ದಾಳಿ

ಲಾಳವಿಂಡಿಗ- ಅಗುಳಿ

ಲೆಂಕ- ಸೇವಕ

ಲೌಡಿ- ಕಬ್ಬಿಣದ ಗದೆ

ವಂಕಿ- ಒಂದು ಬಗೆಯ ಕತ್ತಿ

ವಜೀರ- ಮಂತ್ರಿ

ವೈಯ್ಯಾಳಿ- ಕುದುರೆಯ ಸವಾರಿ, ವಿಹಾರ

ಶತಘ್ನಿ- ತೋಪು, ಸುಮಾರು ನೂರು ಜನರನ್ನು ಕೊಲ್ಲುವ ಒಂದು ಬಗೆಯ ಆಯುಧ

ಸಂವರಣೆ- ಪೂರ್ವಸಿದ್ಧತೆ

ಸಬಳ- ಈಟಿ, ದೊಣ್ಣೆ

ಸರಗೋವಿ- ಒಂದು ಪ್ರಕಾರದ ಕೋವಿ

ಸರಿಗೆ- ಸಲಾಕೆ, ತ್ರಿಶೂಲ

ಸಿಡಿತಲೆ- ಒಂದು ಪ್ರಕಾರದ ಬಲಿ

ಸೆಜ್ಜೆ- ಹಾಸುಗೆ

ಹರಿಗೆ- ಗುರಾಣಿ

ಹಲಗೆ- ಗುರಾಣಿ

ಹುಯಿಲು- ಕದನ, ಯುದ್ಧ, ಕಾಳಗ

ಹುಲಿಮೊಗ- ಕೋಟೆಯ ಬಾಗಿಲು

ಹೂಡೆಯ- ಕೊತ್ತಳ

ಗ್ರಂಥ ಸೂಚಿ

ಪ್ರಾಥಮಿಕ ಆಕರ-ಕನ್ನಡ

ಎಪಿಗ್ರಾಫಿಯ ಕರ್ನಾಟಕ: ಎಂಟು ಸಂಪುಟಗಳು

ಕಲಬುರ್ಗಿ,ಎಂ.ಎಂ.(ಸಂ.): *ಕರ್ನಾಟಕದ ಕೈಫಿಯತ್ತುಗಳು,* ಹಂಪಿ, ಕನ್ನಡ ವಿಶ್ವವಿದ್ಯಾಲಯ,೧೯೯೪

ಕುಶಾಲಪ್ಪಗೌಡ,ಕೆ.(ಅನು): *ಗಂಗಾದೇವಿಯ ಮಧುರಾವಿಜಯಂ ಅಥವಾ ವೀರಕಂಪಣರಾಯ ಚರಿತಂ,* ಪೆರಾಜೆ: ಜಯಗೌರೀ ಪ್ರಕಾಶನ

ಕೃಷ್ಣಭಟ್ಟ,ಕೆ.(ಅನು): *ಕೌಟಲ್ಯನ ಅರ್ಥಶಾಸ್ತ್ರ,* ಧಾರವಾಡ, ಸಮಾಜ ಪುಸ್ತಕಾಲಯ, ೧೯೭೨

ಗೋಪಾಲ್ ಬಿ.ಆರ್. ಮತ್ತು ಇತರರು(ಸಂ.) : *ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೪,* ಹಂಪಿ, ೨೦೦೦

ತೊರವೆ ನರಹರಿ: *ತೊರವೆ ರಾಮಾಯಣ,* ಭಾಗ-೧ ಮತ್ತು ೨, ಮೈಸೂರು ವಿಶ್ವವಿದ್ಯಾನಿಲಯ, ೧೯೫೬-೫೯

ದೇವರಕೊಂಡಾರೆಡ್ಡಿ ಮತ್ತು ಇತರರು(ಸಂ.): *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧,೨* ಮತ್ತು *೩* ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೮, ೧೯೯೯, ೨೦೦೦

ದೇವೀರಪ್ಪ,ಎಚ್.(ಸಂ.): *ರಾಮನಾಥ ಚರಿತ, ಸಂಪುಟ ೨* ಮತ್ತು *೩,* ಮೈಸೂರು ವಿಶ್ವವಿದ್ಯಾನಿಲಯ, ೧೯೯೪

ದೇವೀರಪ್ಪ,ಎಚ್. ಮತ್ತು ಪದ್ಮನಾಭ ಶರ್ಮ, ಎಂ.ಸಿ.(ಸಂ.): *ಅನಂತನಾಥ ಪುರಾಣ* (ಜನ್ನಕವಿ), ಮೈಸೂರು ವಿಶ್ವವಿದ್ಯಾನಿಲಯ, ೧೯೭೨

ನಾಗೇಗೌಡ,ಎಚ್.ಎಲ್.: *ಪ್ರವಾಸಿ ಕಂಡ ಇಂಡಿಯಾ, ಸಂಪುಟ ೧* ಮತ್ತು *೨,* ಮೈಸೂರು ವಿಶ್ವವಿದ್ಯಾನಿಲಯ, ೧೯೬೪-೬೬

ನಿರುಪಮಾ: *ಆಮುಕ್ತಮಾಲ್ಯದ (ಶ್ರೀ ಕೃಷ್ಣದೇವರಾಯ),* ಬೆಂಗಳೂರು, ಶ್ರೀ ಪ್ರಕಾಶನ, ೧೯೭೯

ಬಸಪ್ಪ,ಎಸ್.(ಸಂ.): *ಶಿವತತ್ವ ಚಿಂತಾಮಣಿ (ಲಕ್ಕಣ್ಣ ದಂಡೇಶ),* ಮೈಸೂರು ವಿಶ್ವವಿದ್ಯಾನಿಲಯ, ೧೯೭೦

ಬಸವರಾಜ ಭೂಪಾಲ *ಶಿವತತ್ತ್ವರತ್ನಾಕರ* ಸಂ.ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಸಂ. ೧ ಮತ್ತು ೨, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೯

ಭೀಮಕವಿ: *ಬಸವ ಪುರಾಣ,* ಧಾರವಾಡ, ಲಿಂಗಾಯಿತ ಅಭಿವೃದ್ಧಿ ಸಂಸ್ಥೆ, ೧೯೬೯

ಮಂಗರಸ: *ಸಮ್ಯಕ್ತ್ವ ಕೌಮುದಿ,* ಬೆಳಗಾವಿ, ೧೯೨೩

ಮಂಜುನಾಥನ್, ಜಿ.ಜಿ.(ಸಂ.): *ಅಶ್ವಶಾಸ್ತ್ರ(ಅಭಿನವ ಚಂದ್ರ),* ಮೈಸೂರು ವಿಶ್ವವಿದ್ಯಾನಿಲಯ, ೧೯೮೭

ಮಂಜುನಾಥನ್, ಜಿ.ಜಿ.(ಸಂ.): *ಸನತ್ಕುಮಾರ ಚರಿತೆ(ತೆರಕಣಾಂಬಿ ಬೊಮ್ಮರಸ),* ಮೈಸೂರು ವಿಶ್ವವಿದ್ಯಾನಿಲಯ, ೧೯೭೦

ಮಲ್ಲಿಕಾರ್ಜುನ: *ಸೂಕ್ತಸುಧಾರ್ಣವಂ,* (ಸಂ.ಅನಂತರಂಗಾಚಾರ್ಯ ಎನ್.) ಮೈಸೂರು, ೧೯೪೭

ಮಹಮ್ಮದ್ ಇಬ್ರಾಹಿಂ ಜುಬೇರಿ: *ಬುಸಾತಿನ ಸಲಾತೀನ* (ಅನು: ಕೃಷ್ಣಕೊಲ್ಹಾರ ಕುಲಕರ್ಣಿ), ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೯

ವಿರೂಪಾಕ್ಷ ಪಂಡಿತ: *ಚೆನ್ನಬಸವ ಪುರಾಣ*, ಧಾರವಾಡ, ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ೧೯೩೪

ಶಾಮಶಾಸ್ತ್ರಿ,ಆರ್.(ಸಂ.): *ಕಂಠೀರವ ನರಸರಾಜ ವಿಜಯ(ಗೋವಿಂದ ವೈದ್ಯ)*, ಮೈಸೂರು, ೧೯೨೬

ಶಾಮಶಾಸ್ತ್ರಿ,ಆರ್.(ಸಂ.): *ಕೆಳದಿ ನೃಪವಿಜಯಂ (ಲಿಂಗಣ್ಣಕವಿ)*, ಮೈಸೂರು ವಿಶ್ವವಿದ್ಯಾನಿಲಯ, ೧೯೭೩

ಸೀತಾರಾಮಯ್ಯ,ಎಂ.ವಿ.(ಸಂ.): *ಶ್ರೀ ಕೃಷ್ಣದೇವರಾಯನ ದಿನಚರಿ*, ಬೆಂಗಳೂರು, ಬಿ.ಎಂ.ಶ್ರೀ ಪ್ರತಿಷ್ಠಾನ, ೧೯೮೩

ಸೀತಾರಾಮಯ್ಯ,ಎಂ.ವಿ.(ಸಂ.): *ಕವಿರಾಜಮಾರ್ಗಂ*, ಮೈಸೂರು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ೧೯೭೫

ಹಿರೇಮಠ,ಆರ್.ಸಿ.(ಸಂ.): *ಮೋಹನ ತರಂಗಿಣಿ (ಕನಕದಾಸರು)* ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೩

ಪೂರಕ ಆಕರ-ಕನ್ನಡ

ಅನಂತಕೃಷ್ಣಶರ್ಮ (ರಾಳ್ಳಪಲ್ಲಿ): *ಸಾಹಿತ್ಯ ಮತ್ತು ಜೀವನ ಕಲೆ*, ಮೈಸೂರು, ಕಾವ್ಯಾಲಯ, ೧೯೭೧

ಕರ್ನಾಟಕ ಚರಿತ್ರೆ: ಏಳು ಸಂಪುಟಗಳು, ಹಂಪಿ, ಕನ್ನಡ ವಿಶ್ವವಿದ್ಯಾಲಯ ೧೯೯೫-೧೯೯೭

ಕಾಮತ್, ಸೂರ್ಯನಾಥ ಯು.: *ವಿಜಯನಗರ ಸಾಮ್ರಾಜ್ಯ*, ಬೆಂಗಳೂರು, ಪ್ರಕಾಶ ಸಾಹಿತ್ಯ, ೧೯೯೧

ಕೃಷ್ಣಮೂರ್ತಿ ಪಿ.ವಿ., ವಸಂತಲಕ್ಷ್ಮಿ ಕೆ. (ಸಂ.): *ಸೂರ್ಯಕೀರ್ತಿ*, ಬೆಂಗಳೂರು, ಡಾ.ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ, ೨೦೦೦

ಕೃಷ್ಣರಾವ್, ಎಂ.ವಿ. ಮತ್ತು ಕೇಶವಭಟ್ಟ,ಎಂ. : *ಕರ್ನಾಟಕದ ಇತಿಹಾಸ ದರ್ಶನ*, ಬೆಂಗಳೂರು, ಕರ್ನಾಟಕ ಸಹಕಾರಿ ಪ್ರಕಾಶನ, ೧೯೭೦

ಕೃಷ್ಣಶರ್ಮ(ಬೆಟಗೇರಿ): *ಕರ್ನಾಟಕ ಜನಜೀವನ*, ಬೆಂಗಳೂರು, ವಿಶ್ವ ಕನ್ನಡ ಸಮ್ಮೇಳನ, ೧೯೮೩

ಕೋಡದ,ಎಸ್.ಬಿ.: *ವಿಜಯನಗರದ ನಿರ್ಣಾಯಕ ಯುದ್ಧ*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ೧೯೬೦

ಕೋಡದ,ಎಸ್.ಬಿ.: *ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ-ಮುಸ್ಲಿಂ ಬಾಂಧವ್ಯ*, ಕೋಡದ ಪ್ರಕಾಶನ, ೧೯೬೬

ಗಣೇಶ್, ಕೆ.ಆರ್.: *ಆಂಧ್ರಪ್ರದೇಶದ ಕನ್ನಡ ಶಾಸನಗಳು*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೯೭

ಚನ್ನಬಸಪ್ಪ, ಎಸ್. ಪಾಟೀಲ: *ಕರ್ನಾಟಕದ ಕೋಟೆಗಳು*, ಸಂ. ೧, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೦

ಚಿದಾನಂದ ಮೂರ್ತಿ,ಎಂ.: *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು ವಿಶ್ವವಿದ್ಯಾಲಯ, ೧೯೬೬

ಚಿದಾನಂದ ಮೂರ್ತಿ,ಎಂ.: *ಹೊಸತು ಹೊಸತು*, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೩

ಜೋಶಿ, ಜಿ.ಜಿ.: *ಕೌಟಿಲ್ಯನ ರಾಜ್ಯಪದ್ಧತಿಯ ಸಮೀಕ್ಷೆ*, ಬೆಳಗಾವಿ, ಶರತ್ ಪ್ರಕಾಶನ, ೧೯೯೧

ದೀಕ್ಷಿತ್, ಜಿ.ಎಸ್ ಮತ್ತು ಇತರರು: *ಶ್ರೀ ಕೃಷ್ಣದೇವರಾಯ-ಜೀವನ ಸಾಧನೆಗಳು*, ಮೈಸೂರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ೧೯೯೭

ನರಸಿಂಹಮೂರ್ತಿ,ಎ.ವಿ.: *ಕರ್ನಾಟಕ ಶಾಸನ ಸಂಪತ್ತು*, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೮೩

ಪರಮಶಿವಮೂರ್ತಿ,ಡಿ.ವಿ.: *ಕನ್ನಡ ಶಾಸನಶಿಲ್ಪ*, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೯

ಫಿಲಿಯೋಜಾ(ವಸುಂಧರಾ): *ವಿಜಯನಗರ ಸಾಮ್ರಾಜ್ಯ ಸ್ಥಾಪನೆ*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೮೦

ಫಿಲಿಯೋಜಾ(ವಸುಂಧರಾ) : *ಅಳಿದುಳಿದ ಹಂಪೆ*, ಬೆಂಗಳೂರು, ಮಾನಸೋಲ್ಲಾಸ ಪ್ರಕಾಶನ, ೧೯೮೨

ಬಸವರಾಜ ಕಲ್ಲುಡಿ: *ಮಹಾಸತಿ ಆಚರಣೆ: ಒಂದು ಅಧ್ಯಯನ*, ಬೆಂಗಳೂರು ವಿಶ್ವವಿದ್ಯಾಲಯ, ೧೯೮೫

ಬಸವರಾಜ ಮಲಶೆಟ್ಟಿ (ಸಂ.) : *ಎನಗಿಂತ ಕಿರಿಯರಿಲ್ಲ*, ಕೊಪ್ಪಳ, ೧೯೯೯

ಭೂಸನೂರಮಠ, ಸಂ.ಶಿ.(ಸಂ): *ವಿಜಯ ಕಲ್ಯಾಣ, ಹಂಪೆ*, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ೧೯೮೮

ಮಹದೇವಯ್ಯ, ಎಂ.ಪಿ.: *ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯ ಕೆಲವು ಅಂಶಗಳು*, ಮೈಸೂರು ವಿಶ್ವವಿದ್ಯಾನಿಲಯ, ೧೯೯೪

ರಡ್ಡೆಪ್ಪ ಪಂಪಣ್ಣ: *ರಾಯಚೂರು ಕೋಟೆಯ ಇತಿಹಾಸ*, (ಎಂ.ಫಿಲ್. ಪ್ರೌಢ ಪ್ರಬಂಧ) ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೫

ರಾಜಶೇಖರ, ಎಸ್.: *ವಿಜಯನಗರ ಕಾಲದ ಘಟನಾವಳಿ ಸೂಚಿ*, ಧಾರವಾಡ, ಸುಜಾತ ಪಬ್ಲಿಕೇಶನ್ಸ್

ರಾಮರಾವ್, ಜೆ.ಎನ್.: *ವಿದೇಶಿಯರು ಕಂಡ ವಿಜಯನಗರ*, ಬೆಂಗಳೂರು, ಐ.ಬಿ.ಎಚ್., ಪ್ರಕಾಶನ

ರಾಮಚಂದ್ರಪ್ಪ(ಬರಗೂರು),(ಪ್ರ.ಸಂ.): *ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ*, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

ರಾಮೇಗೌಡ: *ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು*, ಮೈಸೂರು, ಚಿತ್ರಕೂಟ, ೧೯೯೨

ರಾವ್, ಎಸ್.ಆರ್. : *ಲೋಥಲ್ ಮತ್ತು ಸಿಂಧೂ ನಾಗರೀಕತೆ* (ಅನು: ಗುರುರಾಜಾಚಾರ್) ಧಾರವಾಡ, ೧೯೯೪

ವರದರಾಜ ರಾವ್ ಜೆ.: *ಕುಮಾರರಾಮನ ಸಾಂಗತ್ಯಗಳು*, ಮೈಸೂರು, ೧೯೬೬

ವಿರಕ್ತಮಠ, ಶಿವಾನಂದ: *ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೮

ವಿಲ್ ಮತ್ತು ಏರಿಯಲ್ ಡುರಾಂಟ್ : *ಇತಿಹಾಸದ ಪಾಠಗಳು*(ಅನು:ಭಗವಾನ್), ಮೈಸೂರು, ನಭಶ್ರೀ ಪ್ರಕಾಶನ, ೧೯೭೮

ವೆಂಕಟರತ್ನಂ,ಎ.ವಿ.: *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ*, ಮೈಸೂರು ವಿಶ್ವವಿದ್ಯಾನಿಲಯ, ೧೯೭೪

ವೆಂಕಟರಾಮಪ್ಪ, ಕೆ.: *ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ*, ಮೈಸೂರು ವಿಶ್ವವಿದ್ಯಾನಿಲಯ, ೧೯೭೪

ವೆಂಕಟಾಚಲಶಾಸ್ತ್ರಿ, ಟಿ.ವಿ.(ಸಂ.): *ಕನ್ನಡ ಸಾಹಿತ್ಯ ಚರಿತ್ರೆ, ಸಂ.೫*, ಮೈಸೂರು ವಿಶ್ವವಿದ್ಯಾನಿಲಯ, ೧೯೮೧

ಶರ್ಮಾ, ತಿ.ತಾ.: *ಚಾರಿತ್ರಿಕ ದಾಖಲೆಗಳು*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೧

ಶ್ರೀಕಂಠಯ್ಯ,ಕೆ.: *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯದಲ್ಲಿ ಜನಜೀವನ ಚಿತ್ರ*, ಮೈಸೂರು, ಗೀತಾ ಬುಕ್ ಹೌಸ್,೧೯೮೨

ಶ್ರೀಕಂಠಯ್ಯ, ಕೆ. : *ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು*, ಮೈಸೂರು ವಿಶ್ವವಿದ್ಯಾನಿಲಯ, ೧೯೮೩

ಶ್ರೀಧರ ಎಚ್.ಜಿ.: *ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಚಿತ್ರಗಳು*, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೦

ಶೇರೆ, ಬಿ.ಎಸ್. : *ಕರ್ನಾಟಕದಲ್ಲಿ ಸತಿಪದ್ಧತಿ*, ಬೆಳಗಾವಿ, ವೀರಶೈವ ಅಧ್ಯಯನ ಅಕಾಡೆಮಿ, ೧೯೯೧

ಶೇಷಾಶಾಸ್ತ್ರಿ, ಆರ್. : *ಕರ್ನಾಟಕದ ವೀರಗಲ್ಲುಗಳು*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ೧೯೮೨

ಸಿವೆಲ್, ರಾಬರ್ಟ್: *ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ*, (ಅನು: ಸದಾನಂದ ಕನವಳ್ಳಿ), ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೨

ಸುಬ್ರಮಣಿಯನ್, ಎನ್. : *ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ* (ಅನು: ನಿರಂಜನ), ಮೈಸೂರು ವಿಶ್ವವಿದ್ಯಾನಿಲಯ, ೧೯೭೬

ಸೋಮಶೇಖರ, ಎಸ್.ವೈ.: *ಹಂಪೆಯ ಬಜಾರುಗಳು*, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೭

ಹೀರೇಮಠ, ಬಿ.ಆರ್.: *ಶಾಸನಗಳಲ್ಲಿ ಕರ್ನಾಟಕದ ವರ್ತಕರು*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ೧೯೮೦

ಪತ್ರಿಕೆಗಳು ಮತ್ತು ಇತರೆ

ಇತಿಹಾಸದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಿಜಯನಗರ ಅಧ್ಯಯನ ಸಂಪುಗಳು, ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ,ಮೈಸೂರು

ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

Qnarterly Journal of the mythic society, Bangalore

ORIGINAL SOURCES

Annual Reports on Indian Epigraphy

Annual Reports on South Indian Epigraphy

Annual Reports of the Mysore Archaclolgical Department

Ayyangar, Krishnaswamy, S.(Ed.) : *Sources of Vijayanagar History,* Delhi, Gian Publishing House, 1986

Epigraphia Carnatica

Epigraphia Indica

Nilakanta Sastri, K.A.& Venkata Ramanayya, N.: *Further sources of Vijayanagar History,* Madras, 1946

Panchamuki, R.S.(Ed.) : *Karnataka Inscriptions, 5 Vols.,* Dharwar

Rangarajan, L.N.(Ed): *The Arthasastra(Kautilaya),* New Delhi, Penguin Books, 1967

Shama Sastri (Ed), : *Abhilashitartha Chintamani,* Mysore, 1920

Sukra Charya : *Nitisara* (Trans: B.K.Sarkar), 1919

South Indian inscriptions

Tirumalai Tirupati Devastanam Inscriptions, 5 Vols.,

Vasudevan C.S. (Ed): Kannada Inscriptions of Andhra Pradesh, Hampi, Kannada University, 2000

Vijayanagar Inscriptions, 4 Vols., (Ed. B.R.Gopal)

Vijayaraghawa Charya (Ed) : *Inscriptions of Krishanadevaraya's Time*

Vijayaraghawa Charya (Ed) : *Inscriptions of Achyutadevaraya's Time*

REPORTS

Dallapiccola, Anna Libera : *Vijayanagar-City and Empire,* Stutgart, 1985

Devaraj, D.V. & Patil, C.S.(Ed.) : *In Vijayanagar : Progress of Research,* 1983 to 88, Mysore, Directorate of Archaeology and Museums

Friz, John & George Michell : *City of Victory,* New Yark

Michell, George : *Vijayanagar : Architectural inventory of the urban core,* Vol-I, Mysore, Directorate of Archaeology Museums

Mysore Archaeological Reports

Nagaraja Rao, M.S.(Ed.) : *In Vijayanagar : Progress of Research,* Mysore Directorate of Archaeology and Museums, 1979-83

Narasimhaiah, B. : *Metropolis Vijayanagara,* Delhi, Book India Publishing House, 1992

The Indian Antiquary

SECONDARY SOURCES

Andrzejewski, S : *Military Organization and Society,* London, R & K Poul Ltd, 1954

Ayyangar, S.K. : *South India and Her Muhammadan Invaders,* Oxford, 1921

Basavaraju, K.R. (Ed.) : *The Vijayanagara Urbanity,* Hospet, N.S.U.P., 1978

Brian Ferguson R.(Ed): *Warfare, Culture and Environment,* Orlando, Academic Press, 1984

Briggs, J. : *History of the rise of the Mohamedan Power of India, 4Vols.,* Calcutta, 1908-10

Chakravarthi, P.C. : *The Art of war in Ancient India,* Delhi, Oriental Publishing House, 1972

Chandhuri, J.N.: *Arms Aims and Aspects,* Bombay, Manktalas, 1966

Chitnis : *Keladi polity,* Dharwar, Karnataka University, 1974

Clausewitz : *The art of war*

Desai, P.B. & others : *History of Karnataka,* Dharwar, Karnataka Unviersity, 1970

Dikshitar, V.R.R. : *War in Ancient India,* Madras, 1939

Fortescue, J.W. : *History of the Army,* London, Macmillan and Co., 1966

Geiger, W. : *Army and war in Medieval Ceylon,* Indian Historical Quarterly, 1938

Govind Tryanbak Date : *The Art of war in Ancient India,* Bombay, Oxford University Press, 1929

Gururajachar, S. : *Some Aspects of Economic and Social life in Karnataka,* Mysore University, 1974

Hayavadana Rao, C. : *Mysore Gazetteer. Vol-II, Part-iii,* New Edition

Henderson : *Science of war*

Heras, H. : *Aravidu Dynasty of Vijayanagar,* Madras, 1927

Heras, H. : *South India under the Vijaynagar Empire, Vol-I,* New Delhi : Cosmo Publications, 1980

Jagannadha Swami, P. : *Warfare in Ancient India,* Madras, G.A.Natesan & Co.,

Joshi, S.K. : *Defence Architecture in Early Karnataka,* Delhi, Sundeep Prakashan, 1985

Kambargimath, S.S. : *A study of the Battle of Talikote,* Q.J.M.S Vol.LX, Nos.1-4, Bangalore, December, 1969

Kar, H.C. : *Military History of India,* Calcutta, 1980

Karmarkar, D.P. : *A Cultural History of Karnataka,* Dharwar, Karnataka Vidya Vardhka Sanga, 1974

Karmarkar, D.P. (Ed.) : *Vijayanagar Sexcentuary Commemoration Voume,* Dharwar, 1936

Kingsley Mortin : *War History and Culutre,* Bombay, Asia Publishing house

Longhurst, A.H. : *Hampi Ruins,* New Delhi, A.E.S., 1990

Mahalingam, T.V. : *Administration and Social life under Vijayanagar, 2 parts,* Madras University, 1969-76

Mahalingam, T.V. : *South Indian Polity,* Madras, University of Madras, 1967

Majumdhar, B.K. : *The Military System in Ancient India,* Calcutta, F.K.L.M. Pvt. Ltd., 1960

Mugali, R.S. : *Heritage of Karnataka,* Bangalore, 1946

Muthanna, I.M. : *Karnataka (History, Administration & Culture),* Bangalore, 1977

Nanjundappa, K.S. : *Industries and Commerce in Karnataka during the Vijayanagar period* (Ph.d. Thesis) University of Mysore, Dept of History

Nilakanta Sastri, K.A. : *A History of South India,* Madras, A.E.S., 1966

Nilakanta Sastri, K.A.: *A History of South India,* Madras, Oxford Unviersity Press, 1975

Panth, G.N. : *Indian Arms and Armour,* New Delhi, Army Educational Stores, 1978

Pillay, K.K.: *South India and Srilanka,* University of Madras, 1975

Rajasekhara, S. : *Masterpieces of Vijayanagar Art,* Bombay, Taraporevala, 1985

Ramachandra Murthy, N.S.: *Forts of Andra Pradesh,* Delhi, Bharatiya Kala Prakashan, 1996

Rama Sharma, M.H. : *The History of Vijayanagar Empire Vol.I* (Ed. M.H.Gopal), Bombay, Popular Prakashan, 1978

Sadhu, G.S. : *The Indian Cavalry, Vol-I,* New Delhi,. Vision Books, 1981

Saletore, B.A.: *Social and Political Life in the Vijayanagar Empire, Vol-I & II,* Madras, B.G.Poul & Co., 1934

Saletore, R.N. : *Vijayanagar Art,* Delhi, Sundeep Prakhashan, 1982

Saraswathi Nanaiah, N.: *Position of Women During Vijayanagar,* Mysore, Sarswathi Publications, 1992

Sarkar, J.N. : The Art of War in Medieval India, New Delhi, M.M.Publishers Pvt. Ltd., 1984

Sarkar, J.S. : *Military History of India, Calcutta,* 1960

Settar, s. : *Hampi,* Bangalore, Kalayatra, 1990

Settar, S.: *Inviting Death,* Dharwar, 1986

Settar, S.(Ed),: *Memorial Stones,* Dharwar, 1982

Sewell, Robert : *Forgotton Empire,* Delhi National Book Trust, 1962

Sherwani, H.K. and Joshi, P.M.(Eds.) : *History of Medieval Deccan, Vol.2,* Hyderabad, 1974

Shivanna, K.S.: *The Agrarian System of Karnataka,* Mysore Univeristy, 1983

Shivrammurthy, C.: *Vijayanagar Paintings,* New Delhi, 1985

Stein, Burton : *Vijayanagar,* The New Cambridge History of India, 1991

Stein, Burton : *Peasant State and Society in Medieval South India,* 1980

Suganda Sarma V.: *History Aniquities of Raichur Fort Delhi,* Bharatiya Kala Prakashan, 1998

Studies in Karnataka History and Culture Vol-II, Mysore, Bharathi Prakashan, 1987

Surendra Manjeswar : *Studies in the Military History of Karnataka,* UnPublished Thesis, Dharwar, Karnataka University, 1990

Surendranath Sen : *The Military System of the Marathas,* Madras, Orient Longmans, 1958

Suryanarain Row, B. : *The Never to be Forgotten Empire,* New Delhi, A.E.S., 1993

Talwar, H.T. : *Arms and Armoury of the Mysore Palace,* Mysore, Directorate of Arch. & Museums,1994

Venkata Ramanayya, N. : *Kampili and Vijayanagar,* Madras, 1929

Venkata Ramanayya, N. *Studies in the History of the Third dynasty of Vijayanagara,* Madras, 1935

Venkataratnam, A.V. : *Local Government in the Vijayanagar Empire,* Mysore University, 1972

Wilium Irvine, *The Army of Indiain Mughals,* New Delhi Eurasia Publishing House, 1962

Encyclopedias & Dictionaries

The New Encyclopedia Britanica

International Encyclopedia of the Social Sciences


Webstar's Third New International Dictionary

The Encyclopedia of Religion

Merit Students Encyclopedia

ಛಾಯಾಚಿತ್ರಗಳು







೧. ಸೈನ್ಯ, ಯುದ್ಧ, ಬೇಟೆ ಮೊದಲಾದ ಚಿತ್ರಣಗಳಿರುವ ಮಹಾನವಮಿ ದಿಬ್ಬ, ಹಂಪಿ



೨. [illegible]



೩. ಕತ್ತಿ-ಗುರಾಣಿಗಳನ್ನು ಹಿಡಿದು ಹೊರಟ ಕಾಲ್ಬಳ, ಮಹಾನವಮಿ ದಿಬ್ಬ




ಕತ್ತಿ-ಗುರಾಣಿಗಳನ್ನು ಹಿಡಿದು [illegible]







೧. ಕಟಿಗಳನ್ನು ಹಿಡಿದು ಹೋರಾಡುತ್ತಿರುವ ಮಹಿಳಾ ಯೋಧರು, ಹಜಾರ ರಾಮಚಂದ್ರ [illegible]



[illegible]







೭. ಕತ್ತಿ-ಗುರಾಣಿ ಹಾಗೂ ಬಾಕುಗಳನ್ನು ಹೊಂದಿದ ವೀರರು. ಹೂಲಿಕೆರೆ- [illegible] ([illegible])



[illegible]







೯ ಪರಿಚಾರಕದೊಂದಿಗೆ ಯುದ್ಧಕ್ಕೆ ಕುದುರೆ ಸವಾರಿಯಲ್ಲಿ ಹೊರಟ ವೀರ, ಕೆಂಚನಗುಡ್ಡ - ಸಿರುಗುಪ್ಪ ತಾಲೂಕು



೧೦. ಕವಚ ಧರಿಸಿರುವ ಕುಮಾರ, ಕೆಂಚನಗುಡ್ಡ- ಸಿರುಗುಪ್ಪ (ತಾ)



88. [illegible]



[illegible]



೧೧. ವ್ಯಾಪಾರಕ್ಕೆಂದು ಕುದುರೆ ಒಡಿದು ಹೊರಟ ವರ್ತಕ, ಹಜಾರ ರಾಮಚಂದ್ರ, [illegible]





೧೩. ಬಿಲ್ಲು-ಬಾಣಗಳನ್ನು ಹಿಡಿದು ಯುದ್ಧಕ್ಕೆ ಹೊರಟ ಕಾಲ್ದಳ, ಹಜಾರ ರಾಮಚಂದ್ರ, ದೇವಾಲಯ



[illegible]. ಈಟಿಗಳನ್ನು ಹಿಡಿದು [illegible] ಹಜಾರ ರಾಮಚಂದ್ರ, ದೇವಾಲಯ



೧೫. ಯುದ್ಧಕ್ಕೆ ಹೊರಟ ಅಶ್ವಾರೋಹಿ ಮತ್ತು ಕಾಲಾಳುಗಳು, ಮಹಾನವಮಿ ದಿಬ್ಬ



೧೬. ಒಂಟೆ ಮತ್ತು ಕುದುರೆ ಸವಾರಿಗಳು, ಬೇಟೆಗಾರರು. ಮಹಾನವಮಿ ದಿಬ್ಬ







೧೭. ಬಂದೂಕನ್ನು ಹಿಡಿದು ನಿಂತ ಯೋಧ, ಕ.ವಿ.ವಿ.ಆವರಣ



[illegible]















೨೧. ತೆನೆಗಳು ಮತ್ತು ಫಿರಂಗಿ ಕಿಂಡಿಗಳಿರುವ ಕೋಟೆಯ ತೆನೆಗಳು. ಮುದಗಲ್ಲು. [illegible]




[illegible]




[illegible] ಕೊಂದ ಹಗೆಯೊಂದಿಗೆ ಹೋರಾಡುತ್ತಿರುವ [illegible]



[illegible]



೨೩. ತಂದೆಯನ್ನು ಕೊಂದ ಹಗೆಯೊಂದಿಗೆ ಹೋರಾಡುತ್ತಿರುವ ಹರಿಯಕ್ಕ, ವಸ್ತುಸಂಗ್ರಹಾಲಯ, ಶಿವಮೊಗ್ಗ



೨೪. [illegible] ವಸ್ತು ಸಂಗ್ರಹಾಲಯ, [illegible]